ಸೋಮವಾರ, ಮೇ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 120 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪ್ರಜಾವಾಣಿ ಕನ್ನಡ ಸಿರಿ ಸಮ್ಮಾನ 9

‘ಮೈತ್ರಿ ಸರ್ಕಾರ ಬಂದರೆ ನಾಯಕರಿಗಷ್ಟೇ ಲಾಭ’ 10

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಘಟನೆ
ಮಳೆ: ಹಳ್ಳದಲ್ಲಿ ಕೊಚ್ಚಿ ಹೋದ ತಾಯಿ, ಮಕ್ಕಳು 4

ಕಾರ್ಮಿಕ ದಿನದ ಶುಭಾಶಯಗಳು





ಪ್ರಚಾರ ಅಬ್ಬರ: ಬೈಗುಳವೇ ಜೋಗುಳ

ವಿವಿಧ ಪಕ್ಷಗಳ ರಾಷ್ಟ್ರೀಯ ನಾಯಕರಲ್ಲಿ ಹಲವರು ರಾಜ್ಯದಲ್ಲಿಯೇ ಬೀಡು ಬಿಟ್ಟು ಮತಬೇಟೆಯಲ್ಲಿ ತೊಡಗಿದ್ದಾರೆ. ಬಿಜೆಪಿ ಪ್ರಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರಮುಖ ಆಕರ್ಷಣೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮನ್ನು ‘ವಿಷದ ಹಾವು’ ಎಂದಿದ್ದನ್ನು ಎಲ್ಲ ಸಭೆಗಳಲ್ಲಿಯೂ ಮೋದಿ ಪ್ರಸ್ತಾಪಿಸುತ್ತಿದ್ದಾರೆ. ಖರ್ಗೆ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ

ಪ್ರಜಾವಾಣಿ ವಾರ್ತೆ

ಹಾಸನ/ಕೋಲಾರ/ ರಾಮನಗರ: ರಾಜ್ಯ ವಿಧಾನಸಭೆ ಚುನಾವಣೆಗೆ ಬಿಜೆಪಿ ಪರವಾಗಿ ಪ್ರಚಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ರಾಜ್ಯದ ವಿವಿಧೆಡೆ ನಡೆದ ಸಾರ್ವಜನಿಕ ಸಭೆ ಮತ್ತು ರ‍್ಯಾಲಿಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ವಿರುದ್ಧ ಹರಿಹಾಯ್ದರು. ಎಲ್ಲೆಡೆ ಭಾಷಣಗಳಲ್ಲಿ ತಮ್ಮ ಮಾತನ್ನು ವಿರೋಧ ಪಕ್ಷಗಳನ್ನು ಜರೆಯಲು ಮೀಸಲಿಟ್ಟರು.

ತಮ್ಮನ್ನು ‘ವಿಷದ ಹಾವು’ ಎಂದು ಕರೆದಿದ್ದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಮೋದಿ ತಿರುಗೇಟು ನೀಡಿದರು.

‘ಕಾಂಗ್ರೆಸ್ ನಾಯಕರು ನನ್ನನ್ನು ವಿಷದ ಹಾವು ಎನ್ನುತ್ತಾರೆ. ಆದರೆ ಹಾವು ಯಾವಾಗಲೂ ಶಿವನ ಕೊರಳಲ್ಲಿ ಇರುತ್ತದೆ. ನನಗೆ ಜನತಾ ಜನಾರ್ದನರೇ ಈಶ್ವರ ಸ್ವರೂಪಿಗಳು. ಹೀಗಾಗಿ, ಈ ಟೀಕೆಯನ್ನು ಸ್ವಾಗತಿಸುತ್ತೇನೆ’ ಎಂದರು.


4ನೇ ಪುಟ ನೋಡಿ

> ‘ಭ್ರಷ್ಟಾಚಾರ ವಿರುದ್ಧದ ನನ್ನ ಹೋರಾಟ ಸಹಿಸಿಕೊಳ್ಳಲು ಕಾಂಗ್ರೆಸ್‌ನವರಿಗೆ ಸಾಧ್ಯವಾಗುತ್ತಿಲ್ಲ. ಇದರಿಂದ ನನ್ನ ಮೇಲೆ ಪದೇಪದೇ ಪ್ರಹಾರ ಮಾಡುತ್ತಿದ್ದಾರೆ. ಹಾವಿಗೆ ಹೋಲಿಸುತ್ತಿದ್ದಾರೆ. ಈ ಬಗ್ಗೆ ನನಗೆ ಯಾವುದೇ ಬೇಸರವಿಲ್ಲ
> **ನರೇಂದ್ರ ಮೋದಿ,** ಪ್ರಧಾನಿ

> ಸಾರ್ವಜನಿಕ ಜೀವನದಲ್ಲಿದ್ದಾಗ ಟೀಕೆಗಳು ಸಹಜ. ಅವುಗಳನ್ನು ಎದುರಿಸಬೇಕು. ಬಯ್ಯುತ್ತಿದ್ದಾರೆ ಎಂದು ಹೇಳುತ್ತ ಕೂಡುವುದಲ್ಲ, ಜನರ ಸಮಸ್ಯೆಗಳನ್ನು ಆಲಿಸಿರಿ
> **ಪ್ರಿಯಾಂಕಾ ಗಾಂಧಿ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ


> ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಮಾಡುವ ವಿಚಾರವು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯ ಭಾಗವಾಗಿರಲಿದೆ
> **ಡಿ.ಕೆ. ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

ಬೈಗುಳ ಅಲ್ಲ, ಹಣದುಬ್ಬರದ ಲೆಕ್ಕ ಹೇಳಿ: ಖರ್ಗೆ



(ಶಿವಮೊಗ್ಗ ವರದಿ): ‘ವಿರೋಧಿಗಳು ತಮಗೆ ಬೈದಿರುವ ಲೆಕ್ಕ ಹೇಳುವ ನೆಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪದೇಪದೇ ಡಾ.ಬಿ.ಆರ್. ಅಂಬೇಡ್ಕರ್ ಹೆಸರು ಎಳೆದು ತರುತ್ತಿದ್ದಾರೆ. ಇದರ ಹಿಂದೆ ಪರಿಶಿಷ್ಟರ ಅನುಕಂಪ ಗಿಟ್ಟಿಸಿ ಮತ ಸೆಳೆಯುವ ಹುನ್ನಾರ ಅಡಗಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು. ‘ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ಹಣದುಬ್ಬರ ನಿಯಂತ್ರಣಕ್ಕೆ ಏನು ಮಾಡಿದ್ದೀರಿ ಎಂಬುದನ್ನು ಮೊದಲು ಹೇಳಿ. ವಿರೋಧಿಗಳು ಎಷ್ಟು ಬಾರಿ ಬಯ್ದರು ಎಂಬ ಲೆಕ್ಕವನ್ನು ನಂತರ ಹೇಳಿ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತರಾಟೆಗೆ ತೆಗೆದುಕೊಂಡರು.

‘ಬೈಗುಳಕ್ಕೆ ಹೆದರಬೇಡಿ, ಧೈರ್ಯ ತಂದುಕೊಳ್ಳಿ’



(ಬಾಗಲಕೋಟೆ ವರದಿ): ‘ಪ್ರಧಾನಿ ಮೋದಿ ಅವರೇ ಬೈಗುಳಗಳಿಗೆ ಹೆದರಬೇಡಿ. ದೇಶಕ್ಕಾಗಿ ಬೈಗುಳ ತಿನ್ನುವುದಷ್ಟೇ ಅಲ್ಲ, ಗುಂಡೇಟು ತಿನ್ನಲು ಸಹ ಸಿದ್ಧ ಎಂದಿರುವ ನನ್ನ ಅಣ್ಣನನ್ನು ನೋಡಿ, ಧೈರ್ಯ ತಂದುಕೊಳ್ಳಿ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಲೇವಡಿ ಮಾಡಿದರು. ಜಮಖಂಡಿ ಮತ್ತು ಖಾನಾಪುರದಲ್ಲಿ ನಡೆದ ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಸಭೆಯಲ್ಲಿ ಭಾನುವಾರ ಅವರು ಮಾತನಾಡಿದರು.

4ನೇ ಪುಟ ನೋಡಿ

ಖರ್ಗೆ ಪುತ್ರನ ಠೇವಣಿ ಕಳೆಯಿರಿ: ಯೋಗಿ

(ಕಲಬುರಗಿ ವರದಿ): ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಪಮಾನ ಮಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರನ ಠೇವಣಿ ಕಳೆಯಿರಿ’ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಕರೆ ನೀಡಿದರು.



ಚಿತ್ತಾಪುರ ಕ್ಷೇತ್ರದ ವಾಡಿ ಪಟ್ಟಣದ ಹೊರವಲಯದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಪರ ಮತಯಾಚಿಸಿ ಅವರು ಮಾತನಾಡಿದರು.

4ನೇ ಪುಟ ನೋಡಿ

ಸುಡಾನ್: 229 ಮಂದಿ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘರ್ಷ ಪೀಡಿತ ಸುಡಾನ್‌ನಿಂದ ರಕ್ಷಿಸಲಾದ ಕರ್ನಾಟಕದ 125 ಮಂದಿಯೂ ಸೇರಿದಂತೆ ದೇಶದ 229 ಜನರು ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಭಾನುವಾರ ಬಂದಿಳಿದಿದ್ದಾರೆ.

‘229 ಮಂದಿಯನ್ನು ಹೊತ್ತ ವಿಮಾನವು ಭಾನುವಾರ ಬೆಳಿಗ್ಗೆ 11 ಗಂಟೆಗೆ ಕೆಐಎಗೆ ಬಂದಿಳಿದಿದೆ. ಈ ಪೈಕಿ ಹಳದಿ ಜ್ವರದ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಹೊಂದಿರದ 29 ಜನರನ್ನು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾಸದಲ್ಲಿ (ಕ್ವಾರಂಟೈನ್) ಇರಿಸಲಾಗಿದೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಸುಡಾನ್‌ನ ಸಂಘರ್ಷಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಭಾರತೀಯರನ್ನು ರಕ್ಷಿಸಿ, ದೇಶಕ್ಕೆ ಕರೆತರುವುದಕ್ಕಾಗಿ ಕೇಂದ್ರ ಸರ್ಕಾರವು ಏಪ್ರಿಲ್ 24ರಿಂದ ‘ಆಪರೇಷನ್ ಕಾವೇರಿ’ ಕಾರ್ಯಾಚರಣೆ ಆರಂಭಿಸಿತ್ತು. ಏ. 27ರಿಂದ ನಾಲ್ಕು ವಿಮಾನಗಳು ಸುಡಾನ್‌ನಿಂದ ಮುಂಬೈ, ಬೆಂಗಳೂರು ಮತ್ತು ದೆಹಲಿಗೆ ಬಂದಿಳಿದಿವೆ. ಒಟ್ಟು 255 ಕನ್ನಡಿಗರು ರಾಜ್ಯಕ್ಕೆ ವಾಪಸಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಮಾಹಿತಿ ನೀಡಿದ್ದಾರೆ.

ಇನ್ನೊಂದು ಸುದ್ದಿ 4

ಪ್ರಿಯ ಓದುಗರೇ,

‘ಪ್ರಜಾವಾಣಿ’ಯ ಮುಖಬೆಲೆಯನ್ನು ಇಂದಿನಿಂದ ಜಾರಿಗೆ ಬರುವಂತೆ ₹7ಕ್ಕೆ (ವಾರದ ಎಲ್ಲಾ ದಿನ) ಏರಿಕೆ ಮಾಡಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಪತ್ರಿಕೋದ್ಯಮವು ಹಾದುಬಂದ ಸಂಕಷ್ಟಗಳನ್ನೆಲ್ಲ ನೀವೊಮ್ಮೆ ಗಣನೆಗೆ ತೆಗೆದುಕೊಂಡರೆ ಇದೇನು ನಿಮಗೆ ದೊಡ್ಡ ಹೊರೆ ಎನಿಸುವುದಿಲ್ಲ ಎಂಬ ಭಾವನೆ ನಮ್ಮದಾಗಿದೆ. ಪತ್ರಿಕೆ ಮುದ್ರಣಕ್ಕೆ ಬೇಕಾದ ಮುಖ್ಯ ಕಚ್ಚಾವಸ್ತುವಾದ ಮುದ್ರಣ ಕಾಗದದ ದರ ಇತ್ತೀಚಿನ ದಿನಗಳಲ್ಲಿ ಶೇ 50ರಷ್ಟು ಹೆಚ್ಚಾಗಿದೆ ಎಂಬುದೊಂದು ಮಾಹಿತಿಯೇ ಸಾಕು, ಈ ಉದ್ಯಮ ಸದ್ಯ ಎಂತಹ ಸವಾಲನ್ನು ಎದುರಿಸುತ್ತಿದೆ ಎನ್ನುವುದು ನಿಮ್ಮ ಅರಿವಿಗೂ ಬಂದೀತು.

ಕೋವಿಡ್‌ನ ಕಡು ಕಷ್ಟದ ದಿನಗಳಲ್ಲೇ ನಾವು ‘ಪ್ರಜಾವಾಣಿ’ಯ ಹೊಸ ಆ್ಯಪ್ ಅನ್ನು ಬಿಡುಗಡೆ ಮಾಡಿದ್ದೇವೆ. ನಿಮ್ಮ ಕೈಬೆರಳ ತುದಿಯಲ್ಲಿ ಅಂದದ ಇ-ಪೇಪರ್ ಸಿಗುವಂತೆ ನಾವು ನೋಡಿಕೊಂಡಿದ್ದು ಕೂಡ ಇದೇ ದಿನಗಳಲ್ಲಿ. ಪ್ರಜಾವಾಣಿ ವೆಬ್‌ಸೈಟ್ ಅನ್ನು ಮತ್ತಷ್ಟು ಓದುಗಸ್ನೇಹಿ ಮಾಡಿದ್ದೇವೆ. ಅಲ್ಲದೆ, ಹತ್ತು ಹಲವು ಹೊಸ ಪ್ರಯೋಗಗಳನ್ನು ನಾವು ಮಾಡಿರುವುದು ಮತ್ತು ಅದರಿಂದ ಪತ್ರಿಕೆಯಲ್ಲಿ ಬದಲಾವಣೆಗಳು ಆಗಿರುವುದು ಈ ದಿನಗಳಲ್ಲಿ ನಿಮ್ಮ ಅನುಭವಕ್ಕೂ ಬಂದಿರಲಿಕ್ಕೆ ಸಾಕು.

ಓದುಗರನ್ನು ಕೇಂದ್ರವಾಗಿಟ್ಟುಕೊಂಡು ನಾವು ಮಾಡಿರುವ ಮತ್ತು ಮಾಡುತ್ತಿರುವ ಬದಲಾವಣೆಗಳು ಹಾಗೂ ತರುತ್ತಿರುವ ಸುಧಾರಣೆಗಳ ದೃಷ್ಟಿಯಿಂದ ಈ ದರ ಹೆಚ್ಚಳ ಅನಿವಾರ್ಯ ಆಗಿರುವುದನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕು. ಇದು ನಮ್ಮ ಪ್ರೀತಿಪೂರ್ವಕ ಆಗ್ರಹ ಮತ್ತು ವಿನಮ್ರವಾದ ವಿನಂತಿ.

ಪತ್ರಿಕೋದ್ಯಮದ ಇಂದಿನ ಸಂದರ್ಭದಲ್ಲಿ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದರ ಮಹತ್ವ ಎಂಥದೆಂಬುದನ್ನು ನೀವು ಚೆನ್ನಾಗಿ ಬಲ್ಲಿರಿ. ಸಾಮಾಜಿಕ ಪರಿವರ್ತನೆ ತರುವಲ್ಲಿ ಹಾಗೂ ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ನಿಮ್ಮ ‘ಪ್ರಜಾವಾಣಿ’ ಯಥಾಪ್ರಕಾರ ತನ್ನ ವಿಶ್ವಾಸಾರ್ಹತೆಗೆ ತಕ್ಕಂತೆ ಕೆಲಸ ಮಾಡಲಿದೆ. ಉತ್ತಮ ಪತ್ರಿಕೋದ್ಯಮವು ಯಾವಾಗಲೂ ಉತ್ತಮ ಮೌಲ್ಯಕ್ಕೆ ಯೋಗ್ಯವಾಗಿದೆ ಎಂಬುದನ್ನು ರಾಜ್ಯದ ಜನ ಅರ್ಥಮಾಡಿಕೊಳ್ಳಬಲ್ಲರು ಎಂದೂ ನಂಬಿದ್ದೇವೆ.

ಪತ್ರಿಕೋದ್ಯಮವನ್ನು ಇನ್ನಷ್ಟು ಮತ್ತಷ್ಟು ಉತ್ತಮಗೊಳಿಸಲು ಮತ್ತು ನೀವು ನಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ನ್ಯಾಯ ಒದಗಿಸಲು ನಾವು ಎಂದಿನಂತೆ ಸಂಪೂರ್ಣ ಬದ್ಧರಾಗಿದ್ದೇವೆ.



ಪ್ರೀತಿಯಿಂದ
ಕಾರ್ಯನಿರ್ವಾಹಕ ಸಂಪಾದಕ

ವಿಷಾನಿಲ ಸೋರಿಕೆ 11 ಮಂದಿ ಸಾವು

ಲುಧಿಯಾನ (ಪಂಜಾಬ್) (ಪಿಟಿಐ): ಇಲ್ಲಿನ ಜನನಿಬಿಡ ಪ್ರದೇಶವಾದ ಗಿಯಾಸ್ಪುರದಲ್ಲಿ ವಿಷಾನಿಲ ಸೋರಿಕೆಯಿಂದ ಐವರು ಮಹಿಳೆಯರು, ಮೂವರು ಮಕ್ಕಳು ಸೇರಿದಂತೆ ಒಟ್ಟು 11 ಮಂದಿ ಭಾನುವಾರ ಮೃತಪಟ್ಟಿದ್ದಾರೆ.

ತೀವ್ರ ಅಸ್ವಸ್ಥಗೊಂಡಿರುವ ನಾಲ್ವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಅಲ್ಲಿನ ಜನರ ಸ್ಥಳಾಂತರಕ್ಕೆ ಜಿಲ್ಲಾಡಳಿತ ಮುಂದಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್), ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನಗರ ಸ್ಥಳೀಯ ಆಡಳಿತ, ಪಂಜಾಬ್‌ನ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದಾರೆ.

ಇಡೀ ಪ್ರದೇಶದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ಅಗ್ನಿಶಾಮಕ ಮತ್ತು ಆಂಬುಲೆನ್ಸ್ ಸಿಬ್ಬಂದಿ ಸ್ಥಳದಲ್ಲಿಯೇ ಬೀಡುಬಿಟ್ಟಿದ್ದಾರೆ.

5ನೇ ಪುಟ ನೋಡಿ

ಸಾತ್ವಿಕ್–ಚಿರಾಗ್ ಐತಿಹಾಸಿಕ ಸಾಧನೆ

ದುಬೈ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ. ಇದರೊಂದಿಗೆ 58 ವರ್ಷಗಳ ಬಳಿಕ ದೇಶಕ್ಕೆ ಚಿನ್ನದ ಪದಕ ಒಲಿದಿದೆ.

ಇಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 16–21, 21–17, 21–19ರಿಂದ ಮಲೇಷ್ಯಾದ ಆಂಗ್ ಯೆವ್ ಸಿನ್– ತಿಯೊ ಎಯಿ ಅವರನ್ನು ಮಣಿಸಿತು.

ಏಷ್ಯಾ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತಕ್ಕೆ ಒಲಿದ ಮೊದಲ ಚಿನ್ನವಿದು. 1971ರಲ್ಲಿ ಭಾರತದ ದೀಪು ಘೋಷ್– ರಮಣ್ ಘೋಷ್ ಕಂಚು ಜಯಿಸಿದ್ದರು. 1965ರಲ್ಲಿ ದಿನೇಶ್ ಖನ್ನಾ ಅವರು ಥಾಯ್ಲೆಂಡ್‌ನ ಸಂಗೊಬ್ ರತ್ತನುಸೊರ್ನ್ ಅವರನ್ನು ಸೋಲಿಸಿ ಸಿಂಗಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಲಖನೌನಲ್ಲಿ ಆ ಟೂರ್ನಿ ನಡೆದಿತ್ತು.

ಈ ಋತುವಿನಲ್ಲಿ ಸಾತ್ವಿಕ್–ಚಿರಾಗ್ ಗೆದ್ದ ಎರಡನೇ ಪ್ರಶಸ್ತಿ ಇದು. ಮಾರ್ಚ್‌ನಲ್ಲಿ ನಡೆದ ಸ್ವಿಸ್ ಓಪನ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು. ಭಾರತದ ಜೋಡಿ 2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಹಾಗೂ ಐದು ಬಿಡಬ್ಲ್ಯುಎಫ್ ವಿಶ್ವ ಟೂರ್‌ಗಳಲ್ಲಿ ಪ್ರಶಸ್ತಿ ಜಯಿಸಿದೆ.

‘ಏಷ್ಯಾ ಚಾಂಪಿಯನ್‌ಷಿಪ್ ನಡೆದ ಪ್ರತಿ ಸಂದರ್ಭದಲ್ಲಿ ಟಿವಿ ಮುಂದೆ ಕುಳಿತು ನಮ್ಮ ಆಟಗಾರರು ಪ್ರಶಸ್ತಿ ಗೆಲ್ಲುವುದನ್ನು ನಿರೀಕ್ಷಿಸುತ್ತಿದ್ದೆ. ಸಾತ್ವಿಕ್ ಹಾಗೂ ಚಿರಾಗ್ ಈ ಸಾಧನೆ ಮಾಡಿ ನನ್ನ ನಿರೀಕ್ಷೆಯನ್ನು ಸಾಕಾರಗೊಳಿಸಿದರು. ಭಾರತದ ಬ್ಯಾಡ್ಮಿಂಟನ್‌ನ ವಿಶೇಷ ಕ್ಷಣ ಇದು’ ಎಂದು ಭಾರತದ ಮಾಜಿ ಆಟಗಾರ ದಿನೇಶ್ ಖನ್ನಾ ಹೇಳಿದ್ದಾರೆ.

ಇನ್ನಷ್ಟು ಸುದ್ದಿ 13



ಚಿನ್ನದ ಪದಕದೊಂದಿಗೆ ಸಂಭ್ರಮಿಸಿದ ಚಿರಾಗ್ ಶೆಟ್ಟಿ (ಎಡ) ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ – ಪಿಟಿಐ ಚಿತ್ರ

‘ಮನದ ಮಾತು’ 100ನೇ ಸಂಚಿಕೆ ಪ್ರಸಾರ

ಜನ ಸಂಪರ್ಕದ ಸೇತುವೆ: ಮೋದಿ

ನವದೆಹಲಿ (ಪಿಟಿಐ): ‘ಮನದ ಮಾತು ಮಾಸಿಕ ಬಾನುಲಿ ಭಾಷಣ ಕಾರ್ಯಕ್ರಮವು ದೇಶ ಹಾಗೂ ದೇಶವಾಸಿಗಳ ಸಕಾರಾತ್ಮಕ ಚಿಂತನೆಗಳನ್ನು ಸಂಭ್ರಮಿಸುವ ಹಬ್ಬ. ಇದು ಜನರೊಂದಿಗೆ ಸಂಪರ್ಕ ಸಾಧಿಸಲು ಸೇತುವೆಯಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

ಆಕಾಶವಾಣಿ ಮೂಲಕ ಪ್ರಸಾರವಾಗುವ ‘ಮನದ ಮಾತು’ ಕಾರ್ಯಕ್ರಮ ಭಾನುವಾರ 100ನೇ ಕಂತನ್ನು ಪೂರೈಸಿತು. ಈ ವಿಶೇಷ ಸಂದರ್ಭದಲ್ಲಿ, ಕಾರ್ಯಕ್ರಮದ ಸಂಚಿಕೆಗಳು ಸಾಗಿ ಬಂದ ದಾರಿಯನ್ನು ಮೋದಿ ಅವರು ನೆನಪಿಸಿಕೊಂಡರು.

‘ಮನ್ ಕಿ ಬಾತ್‌ನ 100ನೇ ಸಂಚಿಕೆ ಬಿತ್ತರವಾಗುತ್ತಿರುವ ಸಂದರ್ಭದಲ್ಲಿ ಕೇಳುಗರು ನನಗೆ ಸಾವಿರಾರು ಪತ್ರಗಳನ್ನು ಕಳುಹಿಸಿದ್ದಾರೆ. ಅವರ ಈ ಅಭಿಮಾನದಿಂದ ನನ್ನ ಹೃದಯ ತುಂಬಿ ಬಂದಿದೆ’ ಎಂದು ಹೇಳಿದರು.



> ಮನದ ಮಾತು ನನ್ನ ಪಾಲಿಗೆ ವ್ರತ. ದೇವರ ಪೂಜೆ ನಂತರ ಜನರು ಪ್ರಸಾದ ಸ್ವೀಕರಿಸುವಂತೆ ಜನರಲ್ಲಿ ನಾನು ಕಾಣುವ ದೇವರ ಪ್ರಸಾದ ರೂಪವೇ ಈ ಕಾರ್ಯಕ್ರಮ
> **ನರೇಂದ್ರ ಮೋದಿ,** ಪ್ರಧಾನಿ

‘ಈ ಕಾರ್ಯಕ್ರಮ ದೇಶದ ಕೋಟ್ಯಂತರ ಜನರ ಭಾವನೆಗಳ ಅಭಿವ್ಯಕ್ತಿ. ಅವರ ಮನದ ಮಾತುಗಳ ಪ್ರತಿಫಲನ. ಪ್ರತಿ ತಿಂಗಳು ಪ್ರಸಾರವಾಗುತ್ತಿರುವ ಈ ಕಾರ್ಯಕ್ರಮಕ್ಕೆ ರಾಜಕೀಯ ಸೋಂಕು ಇಲ್ಲ. ಹೊಸದನ್ನು ಕಲಿಯಲು ಇದು ಮಾಧ್ಯಮವಾಗಿದೆ. ಅಷ್ಟೇ ಅಲ್ಲ, ಇದು ನನಗೆ ನಂಬಿಕೆ ಹಾಗೂ ಆಧ್ಯಾತ್ಮಿಕ ಪಯಣವೂ ಆಗಿದೆ’ ಎಂದರು.

‘2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ, ಆಕಾಶವಾಣಿಯಲ್ಲಿ ಪ್ರಸಾರ ಗಮನಿಸಿದೆ. ಅಲ್ಲಿ ಶೂನ್ಯಸ್ಥಿತಿ ನಿರ್ಮಾಣವಾಗಿದೆ ಎಂದು ಭಾಸವಾಯಿತು. ಜನರೊಂದಿಗೆ ಸಂವಹನ ನಡೆಸಲು, ಅವರ ಭಾವನೆಗಳನ್ನು ವ್ಯಕ್ತಪಡಿಸಲು ಇದೇ ಸೂಕ್ತ ಮಾಧ್ಯಮ ಎಂದು ಭಾವಿಸಿ ಮನದ ಮಾತು ಕಾರ್ಯಕ್ರಮ ಆರಂಭಿಸಿದೆ’ ಎಂದರು.

‘ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಜನರೊಂದಿಗೆ ಪರಿಣಾಮಕಾರಿಯಾಗಿ ಸಂಪರ್ಕ ಸಾಧಿಸುವುದು ಹೇಗೆ ಎಂಬ ಸವಾಲಿಗೆ ಇದು ಪರಿಹಾರ ಒದಗಿಸಿತು. ನಾನು ಜನರಿಂದ ದೂರವಾಗಿಲ್ಲ ಎಂಬುದನ್ನು ಕೂಡ ಈ ಕಾರ್ಯಕ್ರಮ ಖಾತ್ರಿಪಡಿಸಿತು’ ಎಂದು ಮೋದಿ ಹೇಳಿದರು.

‘2014ರ ಅಕ್ಟೋಬರ್ 3ರಂದು ವಿಜಯದಶಮಿ ದಿನ ಮನದ ಮಾತು ಪ್ರಸಾರ ಆರಂಭವಾಯಿತು. ಅಂದಿನಿಂದ ಈ ಕಾರ್ಯಕ್ರಮ ಮಾತುಕತೆಯಾಗಿ ಉಳಿಯದೇ ದೇಶದ ಜನರ ಒಳ್ಳೆತನ ಹಾಗೂ ಉತ್ತಮ ಆಲೋಚನೆಗಳ ವಿಶಿಷ್ಟ ಹಬ್ಬವೇ ಆಗಿದೆ’ ಎಂದು ಬಣ್ಣಿಸಿದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ





ಮಂಗಳೂರು ಕಾಲೇಜಿನಲ್ಲಿ ಓದುತ್ತಿದ್ದ ಬಳ್ಳಾರಿ ಯುವತಿ • ಪಿಎಸ್‌ಐ ಮನೆಯಲ್ಲಿ ಉಳಿದುಕೊಂಡಿದ್ದ ಆಯಿಶಾ

ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿನ್ನಿ ಮಿಲ್ ಬಳಿಯ ಪೊಲೀಸ್ ಕ್ವಾರ್ಟರ್ಸ್ ಕಟ್ಟಡದ 7ನೇ ಮಹಡಿಯಿಂದ ಬಿದ್ದು ಬಿ.ಆರ್. ಆಯಿಶಾ (20) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಸಂಬಂಧ ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಳ್ಳಾರಿ ಜಿಲ್ಲೆಯ ಆಯಿಶಾ, ಮಂಗಳೂರಿನ ಕಾಲೇಜೊಂದರಲ್ಲಿ ಬಿ.ಎಸ್ಸಿ ವ್ಯಾಸಂಗ ಮಾಡುತ್ತಿದ್ದರು. ಸ್ನೇಹಿತರಾಗಿದ್ದ ಪಿಎಸ್‌ಐ ಭೀಮೇಶ್ ನಾಯಕ್ ಅವರ ಮನೆಗೆ ಏಪ್ರಿಲ್ 24ರಂದು ಬಂದು ಉಳಿದುಕೊಂಡಿದ್ದರು. ಕ್ವಾರ್ಟರ್ಸ್ ಕಟ್ಟಡದಿಂದ ಬಿದ್ದು ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಇದು ಆತ್ಮಹತ್ಯೆಯೋ ಅಥವಾ ಯಾರಾದರೂ ತಳ್ಳಿ ಕೊಲೆ ಮಾಡಿದ್ದಾರೆಯೋ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸರು ಹೇಳಿದರು.

'ಸುಳ್ಳು ದೂರಿನಿಂದ ಪಶ್ಚಾತಾಪ'

'ಭೀಮೇಶ್ ನಾಯಕ್ ನನ್ನ ಆಪ್ತ ಸ್ನೇಹಿತ. ತುಂಬಾ ಸೂಕ್ಷ್ಮ ಹಾಗೂ ಮುಗ್ಧ ವ್ಯಕ್ತಿ. ಇವರ ವಿರುದ್ಧ ಸುಳ್ಳು ದೂರು ನೀಡಿದೆ. ನನ್ನಿಂದಾಗಿ ಅವರ ಕುಟುಂಬಕ್ಕೆ ತೊಂದರೆ ಆಯಿತು. ಇದಕ್ಕಾಗಿ ತುಂಬಾ ಪಶ್ಚಾತ್ತಾಪಪಡುತ್ತಿದ್ದೇನೆ' ಎಂದು ಆಯಿಶಾ ಮರಣಪತ್ರದಲ್ಲಿ ಬರೆದಿದ್ದಾರೆಂದು ಗೊತ್ತಾಗಿದೆ.

'ಸ್ನೇಹಿತನಿಗೆ ಅನ್ಯಾಯ ಮಾಡಿದೆ ಎಂದು ಕೊರಗುತ್ತಿದ್ದೇನೆ. ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಯಾರೂ ಕಾರಣವಲ್ಲ. ಭೀಮೇಶ್ ನಾಯಕ್ ಅವರಿಗೂ ನನ್ನ ಆತ್ಮಹತ್ಯೆಗೂ ಯಾವುದೇ ಸಂಬಂಧವಿಲ್ಲ' ಎಂದೂ ಉಲ್ಲೇಖಿಸಿರುವುದಾಗಿ ಮೂಲಗಳು ತಿಳಿಸಿವೆ. ಆದರೆ, ಮರಣಪತ್ರದ ಬಗ್ಗೆಯೂ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಕೈ ಮೇಲೆ ಪಿಎಸ್‌ಐ ಹೆಸರು'

'ಆಯಿಶಾ ಕೈ ಮೇಲೆ ಪಿಎಸ್‌ಐ ಭೀಮೇಶ್ ನಾಯಕ್ ಹೆಸರು ಹಾಗೂ ಮೊಬೈಲ್ ನಂಬರ್ ಬರೆಯಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ. ಪ್ರಕರಣದಲ್ಲಿ ಪಿಎಸ್‌ಐ ಪಾತ್ರವಿರುವ ಸಂಶಯವಿದೆ. ಹೀಗಾಗಿ, ಸಂಬಂಧಿಕರು ನೀಡುವ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಆಯಿಶಾ ಬರೆದಿದ್ದಾರೆ ಎನ್ನಲಾದ ಮರಣಪತ್ರ ಸಿಕ್ಕಿದೆ. ಅದರಲ್ಲಿರುವ ಸಂಗತಿಗಳನ್ನು ಪರಿಶೀಲಿಸಲಾಗುತ್ತಿದೆ. ಮರಣಪತ್ರವನ್ನು ಕೈ ಬರಹ ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕಿದೆ' ಎಂದು ತಿಳಿಸಿದರು.

ಪೋಕ್ಸೊ ದೂರು ನೀಡಿದ್ದ ಆಯಿಶಾ: 'ರಾಯಚೂರಿನ ಭೀಮೇಶ್ ನಾಯಕ್, ಸಿಐಡಿಯಲ್ಲಿ ಪಿಎಸ್‌ಐ ಆಗಿದ್ದಾರೆ. ಹಲವು ವರ್ಷಗಳ ಹಿಂದೆಯೇ ಅವರಿಗೆ ಆಯಿಶಾ ಪರಿಚಯವಾಗಿತ್ತು. ಸಲುಗೆಯೂ ಬೆಳೆದಿತ್ತು ಎನ್ನಲಾಗಿದೆ. ಭೀಮೇಶ್ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿದ್ದ ಆಯಿಶಾ, ಎರಡು ವರ್ಷಗಳ ಹಿಂದೆ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಭೀಮೇಶ್ ಅವರನ್ನು ಬಂಧಿಸಿದ್ದರು. ಕೆಲ ತಿಂಗಳು ಜೈಲಿನಲ್ಲಿದ್ದ ಭೀಮೇಶ್, ಪ್ರಕರಣವನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನಂತರ, ಪ್ರಕರಣವನ್ನು ನ್ಯಾಯಾಲಯ ರದ್ದು ಮಾಡಿರುವುದು ಗೊತ್ತಾಗಿದೆ. ಇದಾದ ಬಳಿಕ ಭೀಮೇಶ್ ಪುನಃ ಕರ್ತವ್ಯಕ್ಕೆ ಹಾಜರಾಗಿದ್ದರು. ಪೊಲೀಸ್ ವಸತಿ ಸಮುಚ್ಚಯದ ಮನೆಯಲ್ಲಿ ಒಂಟಿಯಾಗಿ ವಾಸವಿದ್ದರು' ಎಂದು ತಿಳಿಸಿದರು.

ಸಲುಗೆ ಮುಂದುವರಿಸಿದ್ದ ಆಯಿಶಾ: 'ಪ್ರಕರಣ ರದ್ದಾದ ನಂತರವೂ ಭೀಮೇಶ್ ಜೊತೆ ಆಯಿಶಾ ಮಾತನಾಡಲಾರಂಭಿಸಿದ್ದರು. ಪುನಃ ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ಇಬ್ಬರೂ ಹಲವೆಡೆ ಸುತ್ತಾಡುತ್ತಿದ್ದರು. ಆಯಿಶಾ ಆಗಾಗ ಬೆಂಗಳೂರಿಗೆ ಬಂದು ಪಿಎಸ್‌ಐ ಜೊತೆ ಉಳಿದುಕೊಳ್ಳುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಏಪ್ರಿಲ್ 24ರಂದು ಬೆಂಗಳೂರಿಗೆ ಬಂದಿದ್ದ ಆಯಿಶಾ, ಪಿಎಸ್‌ಐ ಮನೆಯಲ್ಲಿದ್ದರು. ಅಕ್ಕ-ಪಕ್ಕದ ನಿವಾಸಿಗಳಿಗೂ ವಿಷಯ ಗೊತ್ತಿತ್ತು. ಯಾರೋ ಸಂಬಂಧಿಕರು ಇರಬಹುದೆಂದು ಸುಮ್ಮನಾಗಿದ್ದರು. ಆಯಿಶಾ ಮೃತಪಟ್ಟ ಬಳಿಕವೇ, ಅವರಿಬ್ಬರ ಬಗ್ಗೆ ಸ್ಥಳೀಯರಿಗೆ ಗೊತ್ತಾಗಿದೆ' ಎಂದು ತಿಳಿಸಿದರು.

'ಸಾವಿನ ಬಗ್ಗೆ ಪಿಎಸ್‌ಐ ಭೀಮೇಶ್ ಮೇಲೂ ಅನುಮಾನವಿದ್ದು, ಅವರನ್ನೂ ವಿಚಾರಣೆ ನಡೆಸಲಾಗುವುದು. ಸ್ಥಳೀಯರಿಂದ ಈಗಾಗಲೇ ಹೇಳಿಕೆ ಪಡೆಯಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಬಿ.ಇ ವಿದ್ಯಾರ್ಥಿ ಕೊಲೆ: ಬಂಧನ

ಬೆಂಗಳೂರು: ಬಾಗಲೂರು ಠಾಣೆ ವ್ಯಾಪ್ತಿಯ ಕಾಲೇಜೊಂದರ ಬಿ.ಇ ವಿದ್ಯಾರ್ಥಿ ಭಾಸ್ಕರ್ ಜೆಟ್ಟಿ (25) ಕೊಲೆ ಪ್ರಕರಣ ಸಂಬಂಧ ಆರೋಪಿ ಎನ್.ಎ. ಭರತೇಶ್ (20) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಚನ್ನಸಂದ್ರ ಬಿ. ಬ್ಲಾಕ್‌ನ ನಿವಾಸಿ ಭರತೇಶ್, ಕಾಲೇಜಿನಲ್ಲಿ ಬಿ.ಇ 2ನೇ ವರ್ಷದಲ್ಲಿ ಓದುತ್ತಿದ್ದ. ಕಾಲೇಜು ಉತ್ಸವದಲ್ಲಿ ಬಿ.ಇ 4ನೇ ವರ್ಷದ ವಿದ್ಯಾರ್ಥಿ ಭಾಸ್ಕರ್ ಅವರನ್ನು ಕೊಂದಿದ್ದ. ಕೃತ್ಯದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಭರತೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 28ರಂದು ರಾತ್ರಿ ಕಾಲೇಜು ಉತ್ಸವದಲ್ಲಿ ನೃತ್ಯ ಮಾಡುವ ವಿಚಾರಕ್ಕೆ ವಿದ್ಯಾರ್ಥಿಗಳ ಎರಡು ಗುಂಪಿನ ನಡುವೆ ಗಲಾಟೆ ಶುರುವಾಗಿತ್ತು. ಇದೇ ಸಂದರ್ಭದಲ್ಲಿಯೇ ಆರೋಪಿ ಭರತೇಶ್, ಚಾಕುವಿನಿಂದ ಇರಿದು ಭಾಸ್ಕರ್ ಅವರನ್ನು ಕೊಂದಿದ್ದ. ಶರತ್‌ಕುಮಾರ್ ಎಂಬುವರ ಮೇಲೂ ಹಲ್ಲೆ ಮಾಡಿದ್ದ' ಎಂದರು.

'ವಿದ್ಯಾರ್ಥಿಗಳ ಗುಂಪಿನಲ್ಲಿ ಕೊಲೆ ಆಗಿತ್ತು. ಆರಂಭದಲ್ಲಿ ಕೊಲೆಗಾರ ಯಾರು ಎಂಬುದು ಗೊತ್ತಾಗಿರಲಿಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಹಾಗೂ ಇತರೆ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ಪತ್ತೆ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ: ವಿದ್ಯಾರ್ಥಿನಿ ಸಾವು

ಬೆಂಗಳೂರು: ಜೆ.ಪಿ. ನಗರದ 3ನೇ ಹಂತದಲ್ಲಿ ಭಾನುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ದ್ವಿತೀಯ ಪಿಯು ವಿದ್ಯಾರ್ಥಿನಿ ಅನಹಿತಾ ಪಾಲ್ (17) ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದ ಅನಹಿತಾ, ಪೋಷಕರ ಜೊತೆ ಡೇರಿ ವೃತ್ತ ಬಳಿಯ ಭವಾನಿ ಬಡಾವಣೆಯಲ್ಲಿ ವಾಸವಿದ್ದರು. ಅವರ ತಂದೆ, ಖಾಸಗಿ ಕಂಪನಿ ಉದ್ಯೋಗಿ. ತಾಯಿ, ಶಿಕ್ಷಕಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಅನಹಿತಾ ಅವರು ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ತೆರಳುತ್ತಿದ್ದರು. ಜೆ.ಪಿ. ನಗರದ 3ನೇ ಹಂತದ 8ನೇ ಮುಖ್ಯರಸ್ತೆಯಲ್ಲಿ ಅತೀ ವೇಗವಾಗಿ ಹೊರಟಿದ್ದ ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ರಸ್ತೆಯಲ್ಲಿ ಉರುಳಿಬಿದ್ದಿದ್ದ ಅನಹಿತಾ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ' ಎಂದು ಹೇಳಿದರು. 'ಅಪಘಾತಕ್ಕೆ ಕಾರಣವಾದ ಆರೋಪದಡಿ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಚಾಲಕನನ್ನು ಬಂಧಿಸಿ, ಕಾರು ಜಪ್ತಿ ಮಾಡಲಾಗಿದೆ' ಎಂದರು.

ಹರಿಹರ: ಸಿಡಿಲು ಬಡಿದು ಗ್ರಾಸಿಂ ಇಂಡಸ್ಟ್ರೀಸ್‌ನಲ್ಲಿ ಅಗ್ನಿ ಅನಾಹುತ

ಪ್ರಜಾವಾಣಿ ವಾರ್ತೆ

ಹರಿಹರ: ಸಮೀಪದ ಕುಮಾರಪಟ್ಟಣಂ ಬಳಿ ಇರುವ ಗ್ರಾಸಿಂ ಇಂಡಸ್ಟ್ರೀಸ್‌ನ ಗ್ರಾಸಲೀನ್ ಕಂಪನಿಯ ಸ್ಪಿನ್ನಿಂಗ್ ವಿಭಾಗದಲ್ಲಿ ಭಾನುವಾರ ರಾತ್ರಿ ಸಿಡಿಲು ಬಡಿದು ಅಗ್ನಿ ಅನಾಹುತ ಸಂಭವಿಸಿದೆ.

ಬಟ್ಟೆ ತಯಾರಿಕೆಯ ನೂಲು, ಫೈಬರ್ ಡಕ್ ಹಾಗೂ ಯಂತ್ರೋಪಕರಣಗಳು ಸುಟ್ಟು ಭಸ್ಮವಾಗಿವೆ. ಬೆಂಕಿ ಕಟ್ಟಡವನ್ನು ವ್ಯಾಪಿಸಿದೆ.


ಹತ್ತಿ ಉರಿಯುತ್ತಿರುವ ಬೆಂಕಿ ನಿಯಂತ್ರಿಸಲು ಹರಿಹರ, ದಾವಣಗೆರೆ, ರಾಣೇಬೆನ್ನೂರು ಮತ್ತು ಹಾವೇರಿಯಿಂದ ಅಗ್ನಿಶಾಮಕ ದಳದ 8, ಕಾರ್ಖಾನೆಯ 2 ವಾಹನಗಳನ್ನು ಬಳಸಿಕೊಳ್ಳಲಾಗಿದೆ. 30ಕ್ಕೂ ಅಧಿಕ ಸಿಬ್ಬಂದಿ ಸತತವಾಗಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಬೆಂಕಿಯು ತ್ವರಿತಗತಿಯಲ್ಲಿ ಕಾರ್ಖಾನೆಯ ಸ್ಪಿನ್ನಿಂಗ್ ವಿಭಾಗಕ್ಕೆ ವ್ಯಾಪಿಸಿದ್ದು, ಆಕಾಶದೆತ್ತರಕ್ಕೆ ಹೊಗೆ ಆವರಿಸಿತ್ತು. ಸಿಬ್ಬಂದಿಯು ಬೆಂಕಿಯನ್ನು ಹತೋಟಿಗೆ ತರಲು ಶ್ರಮಿಸುತ್ತಿದ್ದಾರೆ. ಬೆಂಕಿಯಿಂದ ಕಾರ್ಖಾನೆಯಲ್ಲಿನ ವಸ್ತುಗಳಿಗೆ ಉಂಟಾಗಿರುವ ಹಾನಿಯ ಪ್ರಮಾಣ ಇನ್ನೂ ತಿಳಿದುಬಂದಿಲ್ಲ' ಎಂದು ಕಾರ್ಖಾನೆ ಮೂಲಗಳು ತಿಳಿಸಿವೆ.

'₹ 25 ಲಕ್ಷದಿಂದ ₹ 30 ಲಕ್ಷದಷ್ಟು ಮೌಲ್ಯದ ನೂಲು ಸುಟ್ಟು ಹೋಗಿರಬಹುದು ಎಂದು ಅಂದಾಜಿಸಲಾಗಿದೆ' ಎಂದು ದಾವಣಗೆರೆಯ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪುಟ್ಟಸ್ವಾಮಿ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



ಹರಿಹರ ಸಮೀಪದ ಕುಮಾರ ಪಟ್ಟಣಂ ಬಳಿಯಿರುವ ಗ್ರಾಸಿಂ ಇಂಡಸ್ಟ್ರೀಸ್‌ನ ಗ್ರಾಸಲೀನ್ ಕಂಪನಿಯ ಸ್ಪಿನ್ನಿಂಗ್ ವಿಭಾಗದಲ್ಲಿ ಭಾನುವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಶ್ರಮಿಸಿದರು



ಕಾರ್ಯಕ್ರಮದಲ್ಲಿ ಜೋಗಿ ಅವರು ನಾಲ್ಕು ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಎಚ್.ಎಸ್. ಸತ್ಯನಾರಾಯಣ, ಶ್ರೀಧರ ಬಳಗಾರ, ಎ.ಎನ್. ನಾಗರಾಜ್ ಮತ್ತು ಚಿಂತಾಮಣಿ ಕೊಡ್ಲೆಕೆರೆ ಇದ್ದಾರೆ. ಪ್ರಜಾವಾಣಿ ಚಿತ್ರ

'ಪುಸ್ತಕ–ಮನುಷ್ಯನ ಸಂಬಂಧ ಕ್ಷೀಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕ ಮತ್ತು ಮನುಷ್ಯನ ಸಂಬಂಧ ಕ್ಷೀಣಿಸುತ್ತಿದೆ ಎಂಬ ಮಾತು ಇತ್ತೀಚೆಗೆ ನಿಜವಾಗುತ್ತಿದೆ. ಕತೆ, ಕಾದಂಬರಿಗಳನ್ನು ಬರೆಯುವಂತಹ ಲೇಖಕರ ಸಮೂಹವಿದ್ದರೂ ಓದುವವರು ಕಡಿಮೆ' ಎಂದು ಲೇಖಕ ಜೋಗಿ (ಗಿರೀಶ್ ರಾವ್ ಹತ್ವಾರ್) ಬೇಸರ ವ್ಯಕ್ತಪಡಿಸಿದರು.

ಬುಕ್ ಬ್ರಹ್ಮದ ಸಹಯೋಗದಲ್ಲಿ ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀಧರ ಬಳಗಾರ ಅವರ 'ವಿಸರ್ಗ' ಕಾದಂಬರಿ, 'ಮಾಲತಿ ಮಾತಾಡಿದಳು' ಕಥೆಗಳು, ಚಿಂತಾಮಣಿ ಕೊಡ್ಲೆಕೆರೆ ಅವರ 'ಭರತದ ಮಧ್ಯಾಹ್ನ' ಕಥೆಗಳು, ಎ.ಎನ್. ನಾಗರಾಜ್ ಅವರ 'ಆನಂದದ ಹುಡುಕಾಟದಲ್ಲಿ' ಅನುಭವ ಕಥನ ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ನಾಲ್ಕು ಕೃತಿಗಳೂ ವಿಭಿನ್ನತೆಯಿಂದ ಕೂಡಿವೆ. 'ವಿಸರ್ಗ' ಕೃತಿಯಲ್ಲಿ ಬರುವ ಕೆಲವು ಅಂಶಗಳು ಈ ಆಧುನಿಕ ಯುಗದಲ್ಲಿ ನಡೆಯಲು ಸಾಧ್ಯವೇ ಎಂಬ ಪ್ರಶ್ನೆ ಮೂಡಿಸುತ್ತದೆ' ಎಂದರು.

ಲೇಖಕ ಎಚ್.ಎಸ್. ಸತ್ಯನಾರಾಯಣ, 'ವಿಸರ್ಗ ಕಾದಂಬರಿ, ಭರತದ ಮಧ್ಯಾಹ್ನ ಕಥಾಸಂಕಲನ ವಿಭಿನ್ನ ಕಥಾಹಂದರವನ್ನು ಹೊಂದಿವೆ. ವಿಸರ್ಗ ಕಾದಂಬರಿಯಲ್ಲಿ ಬರುವ ಮೂರು ತಲೆಮಾರುಗಳ ಜೀವನದಲ್ಲಿನ ಕೆಲವೊಂದು ಸನ್ನಿವೇಶಗಳು ನಮ್ಮನ್ನು ಕಲ್ಪನಾ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಈ ಕಾದಂಬರಿಯಲ್ಲಿ ಬರುವ ಪ್ರತಿ ಪಾತ್ರಗಳು ಒಂದೊಂದು ವಿಭಿನ್ನ ಕಥೆಗಳನ್ನು ತಿಳಿಸುತ್ತವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಕರ್ತ ದೇವು ಪತ್ತಾರ, 'ಆನಂದ ಹುಡುಕಾಟದಲ್ಲಿ ಕೃತಿಯಲ್ಲಿ ಒಟ್ಟು 8 ಅಧ್ಯಾಯಗಳಿವೆ. ಇದೊಂದು ಅನುಭವ ಕಥನವಾಗಿದೆ. ಬಾಲ್ಯದಿಂದ ಜೀವನದ ಪ್ರತಿಯೊಂದು ಭಾಗಗಳನ್ನು ಅಚ್ಚುಕಟ್ಟಾಗಿ ತಿಳಿಸಲಾಗಿದೆ. ಕತೆಗಳಿಗಿಂತ ಸೊಗಸಾದ ಅನುಭವ ಘಟನೆಗಳನ್ನು ಇಲ್ಲಿ ದಾಖಲಿಸಲಾಗಿದೆ' ಎಂದು ಕೃತಿಯ ಬಗ್ಗೆ ವಿವರಿಸಿದರು.



ಬೆಂಗಳೂರು ಉತ್ತರ ತಾಲ್ಲೂಕಿನ ಗೋಪಾಲಪುರ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಆಡಳಿತ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಗೋಪಾಲಪುರ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಮೂರನೇ ಬಾರಿಗೆ ಅಧ್ಯಕ್ಷರಾಗಿ ವಿ.ರಾಮಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಜಿ.ಕೆಂಪರಾಜು ಆಯ್ಕೆಯಾದರು.

ಜಿ.ಎನ್. ರಾಜಗೋಪಾಲ್, ಗೋಪಾಲಕೃಷ್ಣ, ಮಹದೇವಯ್ಯ, ರಾಮಾಂಜನೇಯ, ಜಯಮ್ಮ, ಭಾಗ್ಯಮ್ಮ, ಜಯಲಕ್ಷ್ಮಿ, ನಾಗರತ್ನಮ್ಮ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬೈಲಮೂರ್ತಿ ಜಿ., ಸಿಬ್ಬಂದಿ ಮನೋಜ್ ಆರ್.ಬಿ., ಪುಟ್ಟಹುಚ್ಚಮ್ಮ ಅವರು ಪದಾಧಿಕಾರಿಗಳನ್ನು ಅಭಿನಂದಿಸಿದರು.

ಯುಲು ವಿನ್: ಬುಕಿಂಗ್ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಲು ಇಂಡಿಯಾ ಕಂಪನಿಯು ದೇಶದ ಮಾರುಕಟ್ಟೆಗೆ 'ವಿನ್' ಎಂಬ ಎಲೆಕ್ಟ್ರಿಕ್ ದ್ವಿಚಕ್ರವಾಹನ ಬಿಡುಗಡೆ ಮಾಡಿದೆ. ಸೀಮಿತ ಅವಧಿಗೆ ಇದರ ಪರಿಚಯಾತ್ಮಕ ಬೆಲೆ ₹ 55,555 ಇದೆ. ಆ ಬಳಿಕ ಬೆಲೆಯು ₹59,999 ಆಗಲಿದೆ ಎಂದು ಕಂಪನಿ ಹೇಳಿದೆ.

ಸದ್ಯ ಬೆಂಗಳೂರಿನಲ್ಲಿ ಮಾತ್ರವೇ ಲಭ್ಯವಿದ್ದು, ಶೀಘ್ರವೇ ಬೇರೆ ನಗರಗಳಲ್ಲಿಯೂ ಲಭ್ಯವಾಗಲಿದೆ. ಟೆಸ್ಟ್ ಡ್ರೈವ್ ಅವಕಾಶವನ್ನೂ ಕಂಪನಿ ನೀಡಿದ್ದು ಜಾಲತಾಣದ ಮೂಲಕ ಆ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು ಎಂದು ತಿಳಿಸಿದೆ.



ಯುಲು ವಿನ್

ಯುಲು ಆ್ಯಪ್ ಅಥವಾ ಜಾಲತಾಣದ ಮೂಲಕ ₹ 999 ಪಾವತಿಸಿ ಬುಕಿಂಗ್ ಮಾಡಬಹುದು. ಮೇ ತಿಂಗಳ ಮಧ್ಯಭಾಗದಿಂದ ವಿತರಣೆ ಆರಂಭ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಬಜಾಜ್ ಆಟೊ ಲಿಮಿಟೆಡ್‌ನ ಅಂಗಸಂಸ್ಥೆಯಾಗಿರುವ ಸಿಟಿಎಲ್, ಯುಲು ವಾಹನವನ್ನು ತಯಾರಿಸುತ್ತಿದೆ.

ಚಿತ್ರಾವಳಿ



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಅಭಿಷೇಕ್ ರಘುರಾಮ್ ಅವರು ಭಾನುವಾರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಪ್ರಸ್ತುತ ಪಡಿಸಿದರು



ವಾಸವಿ ಜಯಂತಿ ಪ್ರಯುಕ್ತ ಮಲ್ಲೇಶ್ವರದ ಆರ್ಯವೈಶ್ಯ ಸಂಘವು ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶೇಷ ಪೂಜೆಯಲ್ಲಿ ಭಕ್ತಾದಿಗಳು ದೇವಿಗೆ ಆರತಿ ಬೆಳಗಿದರು. – ಪ್ರಜಾವಾಣಿ ಚಿತ್ರ

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಲ್ಯಾಬ್ ಟೆಕ್ನಿಷಿಯನ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿ ಮೆಟ್ರೊ ನಿಲ್ದಾಣ ಬಳಿ ಶನಿವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಲ್ಯಾಬ್ ಟೆಕ್ನಿಷಿಯನ್ ಆಕಾಶ್ (27) ಎಂಬುವವರು ಮೃತಪಟ್ಟಿದ್ದಾರೆ.

'ತೀರ್ಥಹಳ್ಳಿಯ ಆಕಾಶ್, ಕೆ.ಆರ್. ಪುರದ ಅಯ್ಯಪ್ಪನಗರದಲ್ಲಿ ವಾಸವಿದ್ದರು. ಸಹೋದ್ಯೋಗಿ ಪ್ರಸನ್ನ ನಾಯಕ್ (23) ಜೊತೆ ಶನಿವಾರ ತಡರಾತ್ರಿ ಬೈಕ್‌ನಲ್ಲಿ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಮಹದೇವಪುರ ಸಂಚಾರ ಪೊಲೀಸರು ಹೇಳಿದರು.

'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಆಕಾಶ್ ಹಾಗೂ ಪ್ರಸನ್ನ ಅವರಿಗೆ ಶನಿವಾರ ರಜೆ ಇತ್ತು. ಹೀಗಾಗಿ, ಇಬ್ಬರೂ ರಾತ್ರಿ ಊಟಕ್ಕೆ ಹೊರಗಡೆ ಬಂದಿದ್ದರು. ಊಟ ಮುಗಿಸಿ ವಾಪಸು ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದರು. ಪ್ರಸನ್ನ, ಬೈಕ್ ಚಲಾಯಿಸುತ್ತಿದ್ದರು. ಆಕಾಶ್, ಹಿಂಬದಿಯಲ್ಲಿ ಕುಳಿತಿದ್ದರು. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ.'

'ಪ್ರಸನ್ನ ಅತೀ ವೇಗವಾಗಿ ಬೈಕ್ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಆಕಾಶ್ ಮೃತಪಟ್ಟಿದ್ದಾರೆ. ಪ್ರಸನ್ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಹೇಳಿದರು.





ನಗರದಲ್ಲಿ ಇಂದು

'ಸರ್ ಎಂ. ವಿಶ್ವೇಶ್ವರಯ್ಯ ಆ್ಯನ್ ಇನ್‌ಸ್ಪೈರಿಂಗ್ ಲೈಫ್' ಪುಸ್ತಕ ಬಿಡುಗಡೆ: ಡಿ.ವಿ. ಸದಾನಂದಗೌಡ, ಆಯೋಜನೆ: ಸರ್ ಎಂ. ವಿಶ್ವೇಶ್ವರಯ್ಯ ಮೆಮೊರಿಯಲ್ ಫೌಂಡೇಷನ್, ಸ್ಥಳ: ಶ್ರೀಕೃಷ್ಣದೇವರಾಯ ಎಜುಕೇಷನಲ್ ಟ್ರಸ್ಟ್, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಳಿಗ್ಗೆ 10

'ಕಾಯಕ ದಿನಾಚರಣೆ', 'ಬಸವ ಜಯಂತಿ' ಸಮಾರಂಭ: ಉದ್ಘಾಟನೆ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಎಸ್. ಶಾಂತರಾಜು, ಸಿಂ.ರಾ. ಹೊನ್ನಲಿಂಗಯ್ಯ, ಸಿದ್ಧಲಿಂಗಯ್ಯ, ಪುರುಷೋತ್ತಮ್, ಸಂಗಮೇಶ ಗೌಡಪ್ಪ, ಮನೋಹರ್, ದಯಾನಂದ ಪಾಟೀಲ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕನ್ನಲ್ಲಿ ವೀರಶೈವ ನಿತ್ಯಾನ್ನದಾಸೋಹ ಸೇವಾ ಸಮಿತಿ, ಸ್ಥಳ: ಕನ್ನಲ್ಲಿ ಬಸವೇಶ್ವರ ಪುತ್ಥಳಿ ಬಳಿ, ಕನ್ನಲ್ಲಿ ಗ್ರಾಮ, ಮಾಗಡಿ ರಸ್ತೆ, ಬೆಳಿಗ್ಗೆ 10.30

'ಕಾರ್ಮಿಕ ದಿನಾಚರಣೆ' ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಮಂಜುನಾಥ ರೆಡ್ಡಿ, ಅಧ್ಯಕ್ಷತೆ: ಎಂ. ಗಂಗಾಧರ್, ಭರತನಾಟ್ಯ ಪ್ರದರ್ಶನ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಗಾಯನ: ಶೋಭ ಫೌಂಡೇಷನ್ ತಂಡ, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಾಡಪ್ರಭು ಕೆಂಪೇಗೌಡ ಭವನ, ತಾವರೆಕೆರೆ, ಬೆಳಿಗ್ಗೆ 11.30

'ವಿಶ್ವ ನೃತ್ಯ' ದಿನಾಚರಣೆಯ ಕಾರ್ಯಕ್ರಮದ ಉದ್ಘಾಟನೆ: ಅತಿಥಿಗಳು: ಎಂ.ಆರ್.ವಿ. ಪ್ರಸಾದ್, ವೈಜಯಂತಿ ಕಾಶಿ, ನಿವೇದಿತಾ, ರೊ. ಉದಯಭಾಸ್ಕರ್, 'ರಾಮಾಯಣ' ಏಕವ್ಯಕ್ತಿ ಪ್ರದರ್ಶನ: ಎ.ವಿ. ಸತ್ಯನಾರಾಯಣ, ಕಥಕ್: ಕಾವ್ಯಶ್ರೀ ನಾಗರಾಜ್, ಕುಚಿಪುಡಿ: ನೇಹಾ ಶ್ರೀನಿವಾಸ್, ಒಡಿಸ್ಸಿ: ಕರಿಷ್ಮಾ ಅಹೋಜಾ, ನೃತ್ಯ ಪ್ರದರ್ಶನ: ಕಾವ್ಯಾ ಚಂದ್ರಶೇಖರ್, ಸುಮಾ ಕಾಂತಿ, ಶಶಿಲೇಖಾ ನಾಯರ್, ಭಾವನಾ ಗಣೇಶ್, ಮಂದಸ್ಮಿತಾ, ಶೋಭಾ ಶಶಿಕುಮಾರ್, ಶೃತಿ ಮೂರ್ತಿ, ಸುಧಾ ನಾಗರಾಜ್, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ರೋಟರಿ 3190 ಜಿಲ್ಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

'ವಿಶ್ವ ನೃತ್ಯ' ದಿನಾಚರಣೆಯ ಕಾರ್ಯಕ್ರಮದ ಉದ್ಘಾಟನೆ: ಅತಿಥಿಗಳು: ಎಂ.ಆರ್. ವಿ. ಪ್ರಸಾದ್, ವೈಜಯಂತಿ ಕಾಶಿ, ನಿವೇದಿತಾ, ರೊ. ಉದಯಭಾಸ್ಕರ್, 'ರಾಮಾಯಣ' ಏಕವ್ಯಕ್ತಿ ಪ್ರದರ್ಶನ: ಎ.ವಿ. ಸತ್ಯನಾರಾಯಣ, ಕಥಕ್: ಕಾವ್ಯಶ್ರೀ ನಾಗರಾಜ್, ಕುಚಿಪುಡಿ: ನೇಹಾ ಶ್ರೀನಿವಾಸ್, ಒಡಿಸ್ಸಿ: ಕರಿಷ್ಮಾ ಅಹೋಜಾ, ನೃತ್ಯ ಪ್ರದರ್ಶನ: ಕಾವ್ಯಾ ಚಂದ್ರಶೇಖರ್, ಸುಮಾ ಕಾಂತಿ, ಶಶಿಲೇಖಾ ನಾಯರ್, ಭಾವನಾ ಗಣೇಶ್, ಮಂದಸ್ಮಿತಾ, ಶೋಭಾ ಶಶಿಕುಮಾರ್, ಶೃತಿ ಮೂರ್ತಿ, ಸುಧಾ ನಾಗರಾಜ್, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ರೋಟರಿ 3190 ಜಿಲ್ಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ



ಎ.ವಿ. ಸತ್ಯನಾರಾಯಣ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಭೂಮಿಕಾ ವಿ., ಅತಿಥಿಗಳು: ಮಹೇಶ ಜೋಶಿ, ಪ್ರಿಯಾಶ್ರೀ ರಾವ್, ಮಾಲಿನಿ ರವಿಶಂಕರ್, ಆಯೋಜನೆ: ಲಾಸ್ಯವರ್ಧನ ಟ್ರಸ್ಟ್, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 5.30

ರವೀಂದ್ರನಾಥ್ ಟ್ಯಾಗೋರ್ ಅವರ ಕಥೆಗಳಾಧಾರಿತ ಏಕವ್ಯಕ್ತಿ ರಂಗಪ್ರಯೋಗ 'ಅವಳ ಕಾಗದ' ಪ್ರದರ್ಶನ: ಅಹಲ್ಯಾ ಬಲ್ಲಾಳ್, ನಿರ್ದೇಶನ: ಶ್ರೀಪಾದ್ ಭಟ್, ಬೆಳಕು: ಶ್ರೀನಿವಾಸ್ ಜಿ. ಕಪ್ಪಣ್ಣ, ರಂಗರೂಪ: ಸುಧಾ ಆಡುಕಳ, ವಿನ್ಯಾಸ: ಶ್ವೇತಾ ಹಾಸನ, ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ ಅಂಗಳ, ಐಟಿಐ ಕಾಲೊನಿ, ಜೆ.ಪಿ. ನಗರ, ಸಂಜೆ 4 ಮತ್ತು ಸಂಜೆ 6.30

'ಜವಾಬ್ದಾರಿಯುತ ಪೌರತ್ವ' ಕುರಿತು ಸಂವಾದ: ಅತಿಥಿಗಳು: ಎನ್.ಸಿ. ಶೈನಾ, ಟಿ.ವಿ. ಮೋಹನದಾಸ್ ಪೈ, ಅನಿಲ್ ಶೆಟ್ಟಿ, ಶ್ರೀಕಾಂತ್ ವಿಶ್ವನಾಥನ್, ಆಯೋಜನೆ: ಗೇಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ವೆಲ್‌ಫೇರ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಸ್ಥಳ: ದೊಮ್ಮಲೂರು ಕ್ಲಬ್, ದೊಮ್ಮಲೂರು 2ನೇ ಹಂತ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇಮೇಲ್‌ಗೆ ಕಳುಹಿಸಿ

nagaradalli_indu@prajavani.co.in

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**96060 38256**) ಸಹ ಮಾಡಬಹುದು.

‘ಪಾದಚಾರಿ ಮಾರ್ಗದಲ್ಲಿರುವ ಕಲ್ಲು ತೆರವುಗೊಳಿಸಿ’



ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಲ್ಲುಗಳನ್ನು ಹಾಕಿರುವುದು.

ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಲ್ಲುಗಳಿಂದ ಓಡಾಟಕ್ಕೆ ತೊಂದರೆಯಾಗಿದೆ. ಈ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಎರಡು ಬದಿಯಲ್ಲಿ ಕಲ್ಲುಗಳನ್ನು ಹಾಕಿರುವುದರಿಂದ ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಮುಖ್ಯರಸ್ತೆಯಲ್ಲಿ ಸಾಗುವ ಪರಿಸ್ಥಿತಿ ಎದುರಾಗಿದೆ. ಪ್ರತಿನಿತ್ಯ ರಸ್ತೆಯಲ್ಲಿ ನೂರಾರು ವಾಹನಗಳ ಸಂಚರಿಸುತ್ತಿದ್ದು, ಸಾರ್ವಜನಿಕರು ರಸ್ತೆಯ ದಾಟುವಾಗ ಅಪಾಯ ಸಂಭವಿಸುವ ಭೀತಿ ಶುರುವಾಗಿದೆ. ಆದ್ದರಿಂದ, ಬಿಬಿಎಂಪಿ ಸಿಬ್ಬಂದಿ ಈ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಲ್ಲುಗಳನ್ನು ತೆರವುಗೊಳಿಸಿ, ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಮಂಜುನಾಥ್ ಪುರೋಹಿತ್, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗ ದುರಸ್ತಿ ಮಾಡಿ’



ಕೇಬಲ್ ಅಳವಡಿಸಲು ಟ್ರಿನಿಟಿ ವೃತ್ತದಲ್ಲಿರುವ ಪಾದಚಾರಿ ಮಾರ್ಗವನ್ನು ಅಗೆದಿರುವುದು.

ಹಳೆ ಮದ್ರಾಸ್ ಮುಖ್ಯರಸ್ತೆ ಟ್ರಿನಿಟಿ ವೃತ್ತದ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹಾಳಾಗಿದೆ. ಇದರಿಂದ ಪಾದಚಾರಿಗಳು ಸಾಗುವುದೇ ಕಷ್ಟವಾಗಿದೆ. ಕೇಬಲ್ ಅಳವಡಿಸುವ ಸಲುವಾಗಿ ಕೆಲ ದಿನಗಳ ಹಿಂದೆ ಪಾದಚಾರಿ ಮಾರ್ಗದಲ್ಲಿ ಗುಂಡಿ ಅಗೆಯಲಾಗಿದೆ, ಬಳಿಕ ಆ ಜಾಗವನ್ನು ದುರಸ್ತಿಗೊಳಿಸಿಲ್ಲ. ಈ ವೃತ್ತದಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ಹಾಗೂ ಬೆಸ್ಕಾಂ ಸಿಬ್ಬಂದಿ ತುರ್ತಾಗಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು.

ವೆಂಕಟೇಶನ್, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗ ಸರಿಪಡಿಸಿ’



ಮೆಜೆಸ್ಟಿಕ್ ಹತ್ತಿರದ ಬಿವಿಕೆ ಅಯ್ಯಂಗಾರ್ ರಸ್ತೆಯ ಪಾದಚಾರಿ ಮಾರ್ಗದ ದುಸ್ಥಿತಿ.

ನಗರದ ಮೆಜೆಸ್ಟಿಕ್‌ಗೆ ಹೊಂದಿಕೊಂಡಿರುವ ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಇದಕ್ಕೆ ಅಳವಡಿಸಿದ್ದ ಹಾಸುಗಲ್ಲುಗಳು ಕಿತ್ತು ಹೋಗಿದ್ದು ಸಾರ್ವಜನಿಕರ ಸಂಚಾರಕ್ಕೆ ಅನನುಕೂಲವಾಗಿದೆ. ಈ ಭಾಗದಲ್ಲಿ ಪ್ರತಿನಿತ್ಯ ಸಾವಿರಾರು ಜನ ಸಂಚರಿಸುತ್ತಾರೆ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಜನ ಭೀತಿಯಲ್ಲಿ ಮುಖ್ಯರಸ್ತೆಯಲ್ಲಿ ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ



ತಾವರೆಕೆರೆ ಮುಖ್ಯರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದಿರುವುದು.

‘ತಾವರೆಕೆರೆ: ರಸ್ತೆ ಗುಂಡಿ ಮುಚ್ಚಿ’

ತಾವರೆಕೆರೆ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆಯ ಮಧ್ಯದಲ್ಲಿಯೇ ದೊಡ್ಡದಾದ ಗುಂಡಿ ಬಿದ್ದಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಗುಂಡಿಗಳಿರುವುದರಿಂದ ಸಂಚಾರ ದಟ್ಟಣೆಯಾಗುತ್ತಿದ್ದು, ಸಾರ್ವಜನಿಕರ ಸಂಚಾರಕ್ಕೆ ಅನನುಕೂಲವಾಗಿದೆ. ವಾಹನ ಸವಾರರು ಪರದಾಡುವ ಪರಿಸ್ಥಿತಿ ಎದುರಾಗಿದೆ. ಗುಂಡಿಗಳಿಂದಾಗಿ ನಿತ್ಯ ಒಂದಿಲ್ಲೊಂದು ಅಪಘಾತ ಸಂಭವಿಸಿ, ನಾಗರಿಕರು ತೊಂದರೆ ಅನುಭವಿಸುತ್ತಿದ್ದಾರೆ. ಇಲ್ಲಿನ ದೂಳು ಸಹ ಜನರ ಆರೋಗ್ಯವನ್ನು ಹಾಳು ಮಾಡುತ್ತಿದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.

ಶೇಖರ್, ನವೀನ್, ವಾಹನ ಸವಾರರು

ಎಸ್‌.ಜಿ. ಪಾಳ್ಯದ ರಾಜಕಾಲುವೆಯಲ್ಲಿ ತುಂಬಿಕೊಂಡಿರುವ ಪ್ಲಾಸ್ಟಿಕ್ ತ್ಯಾಜ್ಯ



‘ರಾಜಕಾಲುವೆ ಸ್ವಚ್ಛಗೊಳಿಸಿ’

ತಾವರೆಕೆರೆ ಮುಖ್ಯರಸ್ತೆಯ ಬೃಂದಾವನ ನಗರದ ಎಸ್‌.ಜಿ. ಪಾಳ್ಯದಲ್ಲಿರುವ ರಾಜಕಾಲುವೆಯಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಕಟ್ಟಡ ತ್ಯಾಜ್ಯ ಸೇರಿ ವಿವಿಧ ಬಗೆಯ ಅನುಪಯುಕ್ತ ವಸ್ತುಗಳನ್ನು ಸುರಿಯಲಾಗುತ್ತಿದೆ. ಇದರಿಂದ, ಕಾಲುವೆಯಲ್ಲಿ ಕಟ್ಟಿಕೊಂಡು ನೀರು ಸರಾಗವಾಗಿ ಹರಿಯುತ್ತಿಲ್ಲ. ದುರ್ವಾಸನೆ ಬೀರುತ್ತಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿ ಶುರುವಾಗಿದೆ. ಮಳೆಗಾಲ ಪ್ರಾರಂಭವಾಗುವ ಮುನ್ನ ರಾಜಕಾಲುವೆಯ ಹೂಳು ಮತ್ತು ತ್ಯಾಜ್ಯವನ್ನು ತೆಗೆಸಿ, ಸ್ವಚ್ಛಗೊಳಿಸಬೇಕು. ಇಲ್ಲದಿದ್ದರೆ ಮತ್ತೆ ಪ್ರವಾಹದ ಭೀತಿ ಶುರುವಾಗುತ್ತದೆ.

ಶ್ರೀನಾಥ್, ಸ್ಥಳೀಯ ನಿವಾಸಿ

ಪರಮಾಣು ಶಕ್ತಿ ಆಯೋಗದ ಅಧ್ಯಕ್ಷರಾಗಿ ಎ.ಕೆ ಮೊಹಂತಿ ನೇಮಕ

ನವದೆಹಲಿ (ಪಿಟಿಐ): ಖ್ಯಾತ ಭೌತ ವಿಜ್ಞಾನಿ ಮತ್ತು ಬಾಬಾ ಪರಮಾಣು ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ನಿರ್ದೇಶಕ ಅಜಿತ್ ಕುಮಾರ್ ಮೊಹಂತಿ ಅವರನ್ನು ಪರಮಾಣು ಶಕ್ತಿ ಆಯೋಗದ ಮುಖ್ಯಸ್ಥ ಮತ್ತು ಪರಮಾಣು ಶಕ್ತಿ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಕೆ.ಎನ್. ವ್ಯಾಸ್ ಅವರಿಂದ ತೆರವಾದ ಸ್ಥಾನವನ್ನು ಮೊಹಂತಿ ಅವರು ತುಂಬಿದ್ದಾರೆ.

ಮೊಹಂತಿ ಅವರು 66 ವರ್ಷ ಪೂರ್ಣಗೊಳ್ಳುವವರೆಗೆ ಅಂದರೆ 2025ರ ಅ. 10ರವರೆಗೆ ಅಥವಾ ಮುಂದಿನ ಆದೇಶದವರೆಗೆ ಅಧಿಕಾರದಲ್ಲಿ ಇರಲಿದ್ದಾರೆ ಎಂದು ಸರ್ಕಾರ ಶನಿವಾರ ತಿಳಿಸಿದೆ.

ವಿಚಾರವಾದಿಗಳ ಹತ್ಯೆ: ತನಿಖೆಯ ಲೋಪ ತೋರಿಸುವ ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರೊ.ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್ ಸೇರಿ ನಾಲ್ವರು ವಿಚಾರವಾದಿಗಳ ಹತ್ಯೆಗಳ ತನಿಖೆಯಲ್ಲಿನ ಗಂಭೀರ ಲೋಪಗಳನ್ನು ಎತ್ತಿ ತೋರಿಸುವ, ಡಾ. ಅಮಿತ್ ಥಡಾನಿ ರಚನೆಯ ‘ದಿ ರ‍್ಯಾಷನಲಿಸ್ಟ್ ಮರ್ಡರ್ಸ್: ಡೈರಿ ಆಫ್ ರುಯಿನ್ಡ್ ಇನ್ವೆಸ್ಟಿಗೇಷನ್’ (ವಿಚಾರವಾದಿಗಳ ಹತ್ಯೆಗಳು) ಕೃತಿಯನ್ನು ಶನಿವಾರ ಇಲ್ಲಿ ಬಿಡುಗಡೆ ಮಾಡಲಾಗಿದೆ.

ಕನ್ನಡದ ಲೇಖಕ, ವಿಚಾರವಾದಿ ಪ್ರೊ.ಎಂ.ಎಂ. ಕಲಬುರ್ಗಿ, ಡಾ.ನರೇಂದ್ರ ದಾಭೋಲ್ಕರ್, ಕಮ್ಯುನಿಸ್ಟ್ ನಾಯಕ ಗೋವಿಂದ ಪನ್ಸಾರೆ, ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆಗಳ ತನಿಖೆಯ ಲೋಪಗಳ ಬಗ್ಗೆ ಈ ಕೃತಿ ಹಲವು ಪ್ರಶ್ನೆಗಳನ್ನು ಎತ್ತಿದೆ.

‘ಆರೋಪಿಗಳ ವಿಚಾರಣೆಗಳನ್ನು ವಿಳಂಬಗೊಳಿಸಲು ತನಿಖಾ ಸಂಸ್ಥೆಗಳು ಯತ್ನಿಸಿವೆ. ಈ ವಿಷಯದ ಬಗ್ಗೆ ಬೆಳಕು ಚೆಲ್ಲಲು ವಿವಿಧ ಸರ್ಕಾರಿ ಏಜೆನ್ಸಿಗಳ ವರದಿಗಳು, ಪತ್ರಿಕೆಗಳ ಲೇಖನಗಳು, ಹತ್ತಾರು ಸಾವಿರ ಪುಟಗಳ ಚಾರ್ಜ್‌ ಶೀಟ್‌ಗಳನ್ನು ರಾಶಿ ಹಾಕಿಟ್ಟಿರುವೆ. ಈ ಹತ್ಯೆ ಪ್ರಕರಣಗಳು ಪರಸ್ಪರ ನಂಟು ಹೊಂದಿವೆ ಎಂದು ತನಿಖಾ ಸಂಸ್ಥೆಗಳು ತರಾತುರಿಯಲ್ಲಿ ಬಿಂಬಿಸಿ, ತನಿಖೆಗಳನ್ನೂ ತೀರಾ ದುರ್ಬಲಗೊಳಿಸಿ ಕೊನೆಗೊಳಿಸಿವೆ’ ಎಂದು ಡಾ.ಥಡಾನಿ ಹೇಳಿದ್ದಾರೆ.

ಕೊಲ್ಲೂರು: ಅಷ್ಟಬಂಧ ಬ್ರಹ್ಮಕಲಶ ಪ್ರಾರಂಭ

ಕುಂದಾಪುರ: ಕೊಲ್ಲೂರು ಮೂಕಾಂಬಿಕೆಯ ಸನ್ನಿಧಿಯಲ್ಲಿ ಅಷ್ಟ ಬಂಧ ಬ್ರಹ್ಮಕಲಶೋತ್ಸವದ ಧಾರ್ಮಿಕ ಕಾರ್ಯಕ್ರಮಗಳಿಗೆ ಭಾನುವಾರ ಚಾಲನೆ ನೀಡಲಾಯಿತು.

ವಿಜಯಜ್ಯೋತಿ ಪಿಯು ಕಾಲೇಜು ವಿದ್ಯಾರ್ಥಿನಿಯರ ಸಾಧನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರಿನ ವಿಜಯ ಜ್ಯೋತಿ ಸಂಯುಕ್ತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕೋಮಲ್ ಪ್ರಜಾಪತಿ ವಾಣಿಜ್ಯ ವಿಭಾಗದಲ್ಲಿ ಶೇ 97 ಅಂಕ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಎಲ್. ಪ್ರೀತಿ ಶೇ 96.5, ವಾಣಿಜ್ಯ ವಿಭಾಗದಲ್ಲಿ ಮೋನಿಷಾ ಡಿ.ಎಂ. ಶೇ 95.83 ಹಾಗೂ ಚೈತ್ರಾ ಎಸ್. ಶೇ 95 ಅಂಕ ಗಳಿಸಿದ್ದಾರೆ ಎಂದು ಪ್ರಾಂಶುಪಾಲ ಎಸ್. ಮಧು ಕುಮಾರ್ ತಿಳಿಸಿದರು.



ಕೋಮಲ್ ಪ್ರಜಾಪತಿ



ಎಲ್. ಪ್ರೀತಿ



ಮೋನಿಷಾ ಡಿ.ಎಂ.



ಚೈತ್ರಾ ಎಸ್

ಬಸವನಗುಡಿ, ಶಾಂತಿನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳ ಸಂದರ್ಶನ

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಆದಿತ್ಯ ಕೆ.ಎ. , ಸಂತೋಷ್ ಜಿಗಳಿಕೊಪ್ಪ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.



ರವಿ ಸುಬ್ರಮಣ್ಯ (ಬಿಜೆಪಿ)

‘ಯಾರೂ ಹಿಂದೆ ಸರಿದಿಲ್ಲ’


● **ಯಾವ ಕಾರಣಕ್ಕೆ ನಿಮಗೆ ಮತದಾರರು ಬೆಂಬಲ ನೀಡಬೇಕು?**
ಹಿಂದಿನ ಚುನಾವಣೆಗಿಂತ ಈ ಬಾರಿ ಬೆಂಬಲ ಹೆಚ್ಚಾಗಿದೆ. ಕ್ಷೇತ್ರದ ಎಲ್ಲ ರಸ್ತೆಗಳೂ ಅಭಿವೃದ್ಧಿಯಾಗಿವೆ. ಯುಜಿಡಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ರಾಜಕಾಲುವೆ ದುರಸ್ತಿಯಲ್ಲಿ ಕ್ಷೇತ್ರ ಮೊದಲ ಸಾಲಿನಲ್ಲಿದೆ. ಬಾಕಿ ಕಾಮಗಾರಿಗಳಿಗೂ ಟೆಂಡರ್ ನಡೆದಿದ್ದು ಪ್ರಗತಿಯಲ್ಲಿವೆ.

● **ಕ್ಷೇತ್ರದ ಮುಖಂಡರ ಮೌನವು ನಿಮಗೆ ಹಿನ್ನಡೆ ತರುವುದೇ?**
ಕೇಂದ್ರದ ಮಾಜಿ ಸಚಿವ ದಿವಂಗತ ಅನಂತಕುಮಾರ್ ಅವರ ಪತ್ನಿ ತೇಜಸ್ವಿನಿ ಅವರು ಟಿಕೆಟ್ ಕೇಳಿದ್ದರು ಎಂಬುದು ಸತ್ಯ. ಸಂಸತ್ ಚುನಾವಣೆಯಲ್ಲೂ ಟಿಕೆಟ್ ನಿರೀಕ್ಷಿಸಿದ್ದರು. ಕಟ್ಟೆ ಸತ್ಯನಾರಾಯಣ್ ಸಹ ಟಿಕೆಟ್ ನಿರೀಕ್ಷೆಯಲ್ಲಿದ್ದರು. ಆದರೆ, ಪಕ್ಷ ತೀರ್ಮಾನಿಸಿ ನನಗೆ ಮತ್ತೆ ಅವಕಾಶ ಕಲ್ಪಿಸಿದೆ. ಕ್ಷೇತ್ರದಲ್ಲಿ ಯಾವುದೇ ಬಂಡಾಯ ಇಲ್ಲ. ಸತ್ಯನಾರಾಯಣ ಸಹ ನಾಮಪತ್ರ ಸಲ್ಲಿಕೆ ವೇಳೆ ಬಂದಿದ್ದರು. ಅವರೇ ಸೂಚಕರು. ಪಕ್ಷದ ಯಾರೊಬ್ಬರೂ ಹಿಂದೆ ಸರಿದಿಲ್ಲ.

● **ಕ್ಷೇತ್ರದಲ್ಲಿ ಬಾಕಿಯಿರುವ ಕೆಲಸಗಳು?**
ಮೂಲಸೌಕರ್ಯದ ಕೆಲಸಗಳು ಬಹುತೇಕ ಪೂರ್ಣಗೊಂಡಿವೆ. ಹೆರಿಟೇಜ್ ಕಾರಿಡಾರ್ ನಿರ್ಮಿಸುವ ಆಲೋಚನೆಯಿದೆ. ಆರೋಗ್ಯ ಕ್ಷೇತ್ರಕ್ಕೆ ಮತ್ತಷ್ಟು ಆದ್ಯತೆ ನೀಡುತ್ತೇನೆ.

● **ಚುನಾವಣೆ ಸಮೀಪಿಸಿದಾಗ ಕಾಮಗಾರಿ ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳು ಆರೋಪಿಸುತ್ತಿದ್ದಾರೆ ಅಲ್ಲವೇ?**
ಕೋವಿಡ್–19 ಕಾರಣಕ್ಕೆ ಕಾಮಗಾರಿ ನಡೆಸಲು ಆಗಿರಲಿಲ್ಲ. ಬೆಂಗಳೂರು ಮಾತ್ರವಲ್ಲ, ಇಡೀ ರಾಜ್ಯದ ಯಾವ ಕ್ಷೇತ್ರಗಳಲ್ಲೂ ಆ ಸಂದರ್ಭದಲ್ಲಿ ಕೆಲಸಗಳು ನಡೆದಿಲ್ಲ. ಕಾಂಗ್ರೆಸ್, ಜೆಡಿಎಸ್ ಶಾಸಕರಿರುವ ಕ್ಷೇತ್ರದಲ್ಲೂ ಈಗಲೇ ಕೆಲಸಗಳು ನಡೆಯುತ್ತಿರುವುದು. ವಿರೋಧಿಗಳಿಗೆ ಆರೋಪ ಮಾಡಲು ಬೇರೆ ವಿಷಯಗಳಿಲ್ಲ.

● **ನಿಮ್ಮ ಎದುರಾಳಿ ಯಾರು?**
ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಹೋರಾಟವಿದೆ.



ಯು.ಬಿ.ವೆಂಕಟೇಶ್ (ಕಾಂಗ್ರೆಸ್)

‘ಅವರದ್ದು ಭರವಸೆ; ನಮ್ಮದು ಅಭಿವೃದ್ಧಿ’

● **ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆ ಹೇಗಿದೆ?**
ಕ್ಷೇತ್ರದ ಮತದಾರರು ಈ ಬಾರಿ ಬದಲಾವಣೆ ಬಯಸಿದ್ದಾರೆ. ಎರಡೂವರೆ ವರ್ಷದಿಂದ ಜನರ ಕಷ್ಟಕ್ಕೆ ನೆರವಾಗುತ್ತಿದ್ದೇನೆ. ಕ್ಷೇತ್ರದಲ್ಲಿರುವ ಸಹಕಾರ ಸಂಘಗಳಲ್ಲಿ ಠೇವಣಿದಾರರಿಗೆ ಅನ್ಯಾಯವಾಗಿತ್ತು. ಠೇವಣಿದಾರರಿಗೆ ನ್ಯಾಯ ಕಲ್ಪಿಸಲು ಹೋರಾಟ ನಡೆಸುತ್ತಿದ್ದೇನೆ. ಜನರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದಾರೆ.

● **ಯಾವ ಕಾರಣಕ್ಕೆ ನಿಮ್ಮನ್ನು ಮತದಾರರು ಬೆಂಬಲಿಸಬೇಕು?**
ಕೋವಿಡ್ ಆರಂಭದಲ್ಲಿಯೇ ಕ್ಷೇತ್ರದ 78 ಮಂದಿ ಪ್ರಾಣ ಕಳೆದುಕೊಂಡಿದ್ದರು. ಆ ಕುಟುಂಬಗಳಿಗೆ ಸರ್ಕಾರದಿಂದ ಬರುವ ನೆರವು ಕೊಡಿಸಿದ್ದೇನೆ. ಸುಂಕೇನಹಳ್ಳಿ, ಶ್ರೀನಗರ, ಕತ್ತರಿಗುಪ್ಪೆ ಶಾಲೆಗಳನ್ನು ವಿದ್ಯಾದೇಗುಲ ಸ್ವಚ್ಛತಾ ಅಭಿಯಾನದ ಅಡಿ ಅಭಿವೃದ್ಧಿ ಪಡಿಸಿದ್ದೇನೆ. ಜನರು ಅಧಿಕಾರ ಕೊಟ್ಟರೆ ಮತ್ತಷ್ಟು ಕೆಲಸ ಮಾಡುವೆ. ಅವರದ್ದು (ಬಿಜೆಪಿ) ಬರೀ ಭರವಸೆ. ನಮ್ಮದು (ಕಾಂಗ್ರೆಸ್) ಅಭಿವೃದ್ಧಿ.

● **ಕ್ಷೇತ್ರದಲ್ಲಿ ಕೆಲಸಗಳು ನಡೆದಿವೆಯೇ?**
ಹಾಲಿ ಶಾಸಕರು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಲ್ಲ. ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರೂ ಸೇರಿದಂತೆ ಪ್ರಜ್ಞಾವಂತರೇ ವಾಸಿಸುವ ಕ್ಷೇತ್ರ ಇದು. ಅಸಾಮಾನ್ಯ ಸಾಧನೆ ಮಾಡಿದ ಸಾಧಕರ ತವರೂರಿದು. ಇಂದಿಗೂ ಹಲವು ಕೊರತೆ ಎದುರಿಸುತ್ತಿದೆ.

● **ನೀವು ಗೆದ್ದರೆ ಏನು ಮಾಡುತ್ತೀರಿ?**
ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡುತ್ತೇನೆ. ಉತ್ತಮ ಆಸ್ಪತ್ರೆ, ಉದ್ಯಾನ, ಆಟದ ಮೈದಾನ ನಿರ್ಮಾಣ ಮಾಡುತ್ತೇನೆ. ರಾಜೀವ್ ಗಾಂಧಿ ಕ್ರೀಡಾಂಗಣದ ದುರಸ್ತಿ ಸೇರಿದಂತೆ ಸಾಕಷ್ಟು ಯೋಜನೆಗಳು ನನ್ನ ಮನಸ್ಸಿನಲ್ಲಿವೆ.

● **ನಿಮ್ಮ ಎದುರಾಳಿ ಯಾರು?**
ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ಇದೆ.




ಎನ್.ಎ. ಹ್ಯಾರಿಸ್ (ಕಾಂಗ್ರೆಸ್)

‘ಧರ್ಮ–ಜಾತಿ ಭೇದವಿಲ್ಲದೇ ಜನರಿಗಾಗಿ ದುಡಿಯುತ್ತಿದ್ದೇನೆ’

● **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು?**
ಕ್ಷೇತ್ರ ಹಾಗೂ ಜನರಿಗಾಗಿ ದುಡಿಯುತ್ತಿದ್ದೇನೆ. ಜನರ ಎಲ್ಲ ಸಮಸ್ಯೆಗಳಿಗೂ ತ್ವರಿತವಾಗಿ ಸ್ಪಂದಿಸುತ್ತಿದ್ದೇನೆ. ಶಾಂತಿ ಬಯಸುವ ಜನರಿರುವ ನನ್ನ ಕ್ಷೇತ್ರದಲ್ಲಿ ಧರ್ಮ–ಜಾತಿ ಭೇದವಿಲ್ಲದೇ ಕೆಲಸ ಮಾಡುತ್ತಿದ್ದೇನೆ. ಟೆಂಡರ್ ಶ್ಯೂರ್ ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಡಿ ಸುಸಜ್ಜಿತ ರಸ್ತೆ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರು ಪೂರೈಕೆ, ಸರ್ಕಾರಿ ಶಾಲೆ–ಕಾಲೇಜು ಕಟ್ಟಡ, ಸಮುದಾಯ ಭವನಗಳ ನಿರ್ಮಾಣ ಹಾಗೂ ಸಕಲ ಮೂಲ ಸೌಕರ್ಯ ಕಲ್ಪಿಸಲು ಒತ್ತು ನೀಡಿದ್ದೇನೆ. ಕ್ಷೇತ್ರದ ಜನರಿಗೆ ಸರ್ಕಾರಿ ಸೇವೆಗಳು ಹಾಗೂ ಅಧಿಕಾರಿಗಳು ಒಂದೇ ಕಡೆ ಸಿಗಬೇಕೆಂಬ ಉದ್ದೇಶದಿಂದ ಆಸ್ಟಿನ್‌ಟೌನ್‌ನಲ್ಲಿ ‘ಶಾಂತಿನಗರ ಒನ್’ ಬಹುಮಹಡಿ ಕಟ್ಟಡ ನಿರ್ಮಿಸಲು ತಯಾರಿ ನಡೆಸುತ್ತಿದ್ದೇನೆ. ಮತ್ತೊಮ್ಮೆ ಅವಕಾಶ ಸಿಕ್ಕರೆ, ಮಾದರಿ ಕ್ಷೇತ್ರ ಮಾಡಲು ಶ್ರಮಿಸುವೆ

● **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**
ಬಹಳ ಚೆನ್ನಾಗಿದೆ. 15 ವರ್ಷ ಶಾಸಕನಾಗಿ ಜನರ ಜೊತೆಗೆ ಕೆಲಸ ಮಾಡಿದ್ದೇನೆ. ಹೀಗಾಗಿ, ಜನರೆಲ್ಲರೂ ನನ್ನ ಜೊತೆಗಿದ್ದಾರೆ. ಜನರ ಪ್ರತಿಯೊಂದು ಸಮಸ್ಯೆಗಳು ಗೊತ್ತಿರುವುದರಿಂದ, ಅವರೆಲ್ಲರ ಆಶೀರ್ವಾದ ನನ್ನ ಮೇಲಿದೆ.

● **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**
ಬಿಜೆಪಿ ಅಭ್ಯರ್ಥಿಯೇ ಪ್ರತಿಸ್ಪರ್ಧಿ. ಆದರೆ, ಜನರಿಗೆ ಅಭ್ಯರ್ಥಿಗಳ ಬಗ್ಗೆ ಗೊತ್ತಿದೆ. ಶಾಂತಿನಗರದ ಜನ, ಶಾಂತಿಪ್ರಿಯರು. ಅಶಾಂತಿ ವಾತಾವರಣಕ್ಕೆ ಆಸ್ಪದ ನೀಡುವುದಿಲ್ಲ. ನಾನು ಮಾಡಿರುವ ಕೆಲಸ ನೋಡಿರುವ ಜನ, ನನ್ನ ಗೆಲುವು ಬಯಸುತ್ತಿದ್ದಾರೆ.






ಕೆ. ಶಿವಕುಮಾರ್ (ಬಿಜೆಪಿ)

‘ಜನರ ಸಮಸ್ಯೆಗಳ ಅರಿವು ನನಗಿದೆ’

● **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು?**
ಜನರ ಸೇವೆಗೆಂದು ಜೀವನ ಮುಡಿಪಾಗಿಟ್ಟಿದ್ದೇನೆ. 10 ವರ್ಷ ಕಾರ್ಪೊರೇಟರ್ ಆಗಿ ಜನರ ಸೇವೆ ಮಾಡಿದ್ದೇನೆ. ಕ್ಷೇತ್ರದ ಜನರ ಸಮಸ್ಯೆಗಳು ಯಾವುವು ಎಂಬುದು ನನಗೆ ಗೊತ್ತಿದೆ. ಸದ್ಯದ ಶಾಸಕ, ತಮ್ಮ ಕಾರ್ಯಕರ್ತರನ್ನಷ್ಟೇ ಅಭಿವೃದ್ಧಿಪಡಿಸಿದ್ದಾರೆ. ಕ್ಷೇತ್ರದ ಜನರ ಸಮಸ್ಯೆ ಈಡೇರಿಸಿಲ್ಲ. ವಸತಿ ವಂಚಿತರಿಗೆ ಹಕ್ಕು ಪತ್ರ ವಿತರಿಸಿಲ್ಲ. ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಸರ್ಕಾರಿ ಶಾಲೆ, ಆಸ್ಪತ್ರೆ, ರಸ್ತೆ, ಉದ್ಯಾನಗಳ ಅಭಿವೃದ್ಧಿ ಶೂನ್ಯ. ಜನರೊಂದಿಗೆ ನಿತ್ಯವೂ ಸಂಪರ್ಕದಲ್ಲಿರುವ ನಾನು, ಅವರ ಸಮಸ್ಯೆಗಳನ್ನು ತ್ವರಿತವಾಗಿ ಈಡೇರಿಸಲು ಬದ್ಧ.

● **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**
ಚೆನ್ನಾಗಿದೆ. ಬಿಜೆಪಿ ಕೆಲಸಗಳನ್ನು ಮೆಚ್ಚಿ ಕ್ಷೇತ್ರದ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷದ ಹಲವು ಕಾರ್ಯಕರ್ತರು ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಕ್ಷೇತ್ರದ ಜನರು, ನನಗೆ ಆಶೀರ್ವಾದ ಮಾಡುತ್ತಾರೆಂಬ ನಂಬಿಕೆ ಇದೆ.

● **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**
ಕಾಂಗ್ರೆಸ್ ಅಭ್ಯರ್ಥಿ. ಕ್ಷೇತ್ರದ ಜನ ಈ ಬಾರಿ ಬದಲಾವಣೆ ಬಯಸಿದ್ದಾರೆ. ಶೇ 100ರಷ್ಟು ಗೆಲುವು ನನ್ನದು.



ಅರಮನೆ ಶಂಕರ್ (ಜೆಡಿಎಸ್)

‘ಜೆಡಿಎಸ್‌ಗೆ ಪೂರಕ ವಾತಾವರಣ’

● **ಕ್ಷೇತ್ರದಲ್ಲಿ ಜೆಡಿಎಸ್‌ನ ಸ್ಥಿತಿ ಹೇಗಿದೆ?**
ಕಾರ್ಯಕರ್ತರ ಪಡೆಯೇ ಕ್ಷೇತ್ರದಲ್ಲಿದೆ. ಹಿಂದಿನ ಚುನಾವಣೆಗಳಲ್ಲಿ ಚುನಾವಣೆ ಸಮೀಪದಲ್ಲಿ ಅಭ್ಯರ್ಥಿಯ ಹೆಸರು ಪ್ರಕಟಿಸಲಾಗುತ್ತಿತ್ತು. ಇದು ಹಿನ್ನಡೆಗೆ ಕಾರಣವಾಗುತ್ತಿತ್ತು. ಈ ಬಾರಿ ವರಿಷ್ಠರ ಸೂಚನೆಯಂತೆ 6 ತಿಂಗಳ ಹಿಂದಿನಿಂದಲೇ ಕೆಲಸ ಮಾಡುತ್ತಿದ್ದೇನೆ.

● **ಜನರಿಗೆ ಅಗತ್ಯವಿರುವ ಕೆಲಸಗಳು ನಡೆದಿವೆಯೇ?**
15 ವರ್ಷಗಳ ಹಿಂದೆ ಕ್ಷೇತ್ರವು ಹೇಗಿತ್ತೋ ಈಗಲೂ ಹಾಗೆಯೇ ಇದೆ. ಆರು ವಾರ್ಡ್‌ಗಳ ಪೈಕಿ, ಐದು ವಾರ್ಡ್‌ಗಳಲ್ಲಿ ಕೆಲಸಗಳು ನಡೆದಿಲ್ಲ. ಶ್ರೀನಗರ, ಕತ್ತರಿಗುಪ್ಪೆ, ಹನುಮಂತನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಬಾಧಿಸುತ್ತಿದೆ. ಇಷ್ಟು ವರ್ಷ ಸುಮ್ಮನಿದ್ದ ಹಾಲಿ ಶಾಸಕರು ಎರಡು ತಿಂಗಳಿಂದ ಈಚೆಗೆ ಯಾವ ಕಾರಣದಿಂದ ಕಾಮಗಾರಿ ನಡೆಸುತ್ತಿದ್ದಾರೆ? ಇಷ್ಟು ದಿನ ಏಕೆ ಸುಮ್ಮನಿದ್ದರು?

● **ನಿಮ್ಮನ್ನು ಮತದಾರರು ಏಕೆ ಬೆಂಬಲಿಸಬೇಕು?**
ನಾನು ಕಷ್ಟ ಪರಿಹರಿಸುತ್ತೇನೆ ಎಂಬ ನಂಬಿಕೆಯಿಂದ ಬೆಂಬಲ ನೀಡುತ್ತಿದ್ದಾರೆ. ಜೆಡಿಎಸ್‌ಗೆ ಪೂರಕ ವಾತಾವರಣ ಇದೆ.

● **ಕ್ಷೇತ್ರದ ಜನರಿಗೆ ನಿಮ್ಮ ಭರವಸೆಗಳು?**
ಉತ್ತಮ ಕೆಲಸ ಮಾಡಿದವರನ್ನು ಪಕ್ಷಾತೀತವಾಗಿ ಸ್ಮರಿಸಬೇಕು. ಎಚ್.ಡಿ.ದೇವೇಗೌಡ ಅವರು ನಮಗೆ ಆ ಗುಣ ಕಲಿಸಿದ್ದಾರೆ. ದಿವಂಗತ ಅನಂತಕುಮಾರ್ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿದ್ದರು. ಅವರ ಪತ್ನಿ ತೇಜಸ್ವಿನಿ ಅದಮ್ಯ ಚೇತನ ಸಂಸ್ಥೆ ಕಟ್ಟಿ ಬಡವರಿಗೆ ನೆರವಾಗುತ್ತಿದ್ದಾರೆ. ಅನಂತಕುಮಾರ್ ಅವರಿಂದಾಗಿ ಬೆಳೆದವರೇ ಇಂದು ಅವರನ್ನು ನೆನಪು ಸಹ ಮಾಡಿಕೊಳ್ಳುತ್ತಿಲ್ಲ. ನಾನು ಗೆದ್ದರೆ ಅನಂತಕುಮಾರ್ ಅವರ 15 ಅಡಿ ಎತ್ತರದ ಪುತ್ಥಳಿ ನಿರ್ಮಿಸುತ್ತೇನೆ. ರಸ್ತೆಯೊಂದಕ್ಕೆ ಅವರ ಹೆಸರು ನಾಮಕರಣ ಮಾಡುತ್ತೇನೆ.

● **ನಿಮ್ಮ ಎದುರಾಳಿಗಳು ಯಾರು?**
ಕಣದಲ್ಲಿರುವ 11 ಅಭ್ಯರ್ಥಿಗಳೂ ನನ್ನ ಎದುರಾಳಿಗಳೇ. ಯಾರನ್ನೂ ಕಡೆಗಣಿಸುತ್ತಿಲ್ಲ.




ಎಚ್. ಮಂಜುನಾಥ್ (ಜೆಡಿಎಸ್)

‘ಬದಲಾವಣೆ ಬಯಸುತ್ತಿರುವ ಜನ’

● **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು?**
ಬಡವರ ಪರವಿರುವ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಜನರಿಗೆ ಹೆಚ್ಚಿನ ಒಲವಿದೆ. ರೈತರ ಸಾಲ ಮನ್ನಾ, ಬೆಂಗಳೂರಿಗೆ ಕುಡಿಯುವ ನೀರು, ಮೇಲ್ಸೇತುವೆಗಳ ನಿರ್ಮಾಣ, ಪಿಂಚಣಿ ವ್ಯವಸ್ಥೆ ಹಾಗೂ ಹಲವು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ್ದು ನಮ್ಮ ಜೆಡಿಎಸ್. ಶಾಂತಿನಗರ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಕನಸು ಕಂಡಿದ್ದೇನೆ. ವರ್ಷಕ್ಕೆ 5 ಅಡುಗೆ ಅನಿಲ ಸಿಲಿಂಡರ್, ಗರ್ಭಿಣಿಯರಿಗೆ ₹6 ಸಾವಿರ ಭತ್ಯೆ, ರೈತ ಯುವಕರನ್ನು ಮದುವೆಯಾಗುವವರಿಗೆ ₹ 2 ಲಕ್ಷ ಪ್ರೋತ್ಸಾಹ ಧನ, ಹಿರಿಯ ನಾಗರಿಕರಿಗೆ ₹ 5 ಸಾವಿರ ಪಿಂಚಣಿ ಹಾಗೂ ಇತರೆ ಮೂಲ ಸೌಕರ್ಯ ಕಲ್ಪಿಸಲು ಜೆಡಿಎಸ್ ಪಣ ತೊಟ್ಟಿದೆ.

● **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**
ಮನೆ ಮನೆಗೆ ಹೋಗಿ ಪ್ರಚಾರ ಮಾಡುತ್ತಿದ್ದೇವೆ. ಜನರಿಂದ ಅದ್ಭುತ ಬೆಂಬಲ ಸಿಗುತ್ತಿದೆ. ಕುಮಾರಸ್ವಾಮಿ ಅವರ ಅಭಿವೃದ್ಧಿ ಕೆಲಸಗಳನ್ನು ಜನರು ಹೊಗಳುತ್ತಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳನ್ನು ಈ ಬಾರಿ ಸೋಲಿಸಿ, ಜೆಡಿಎಸ್ ಬೆಂಬಲಿಸುವುದಾಗಿ ಹೇಳುತ್ತಿದ್ದಾರೆ

● **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**
ಬಿಜೆಪಿ ಅಭ್ಯರ್ಥಿಯೇ ಪ್ರತಿಸ್ಪರ್ಧಿ. ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕ, 15 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಕ್ಷೇತ್ರದಲ್ಲಿ ಡ್ರಗ್ಸ್ ಹಾಗೂ ಅಕ್ರಮ ಚಟುವಟಿಕೆಗಳ ಹಾವಳಿ ಹೆಚ್ಚಿದೆ. ಈ ಬಗ್ಗೆ ಜನರಲ್ಲಿ ಆಕ್ರೋಶವಿದೆ. ನನ್ನ ಗೆಲುವು ಖಚಿತ.



ಹಕ್ಕು ಚಲಾಯಿಸುವಂತೆ ಜಾಗೃತಿ ನಡಿಗೆ ಸೇರಿ ವಿವಿಧ ರೀತಿಯ ಅಭಿಯಾನ

ಮತದಾನ ಹೆಚ್ಚಳಕ್ಕೆ ಸಂಘ–ಸಂಸ್ಥೆಗಳ ಕಸರತ್ತು

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಸರ್ಕಾರೇತರ ಸಂಘ–ಸಂಸ್ಥೆಗಳು ಸಹ ಸ್ವಯಂ ಪ್ರೇರಿತವಾಗಿ ಜಾಗೃತಿ ಅಭಿಯಾನಗಳನ್ನು ನಡೆಸುತ್ತಿದ್ದು, ಮತದಾನದ ಮಹತ್ವ ತಿಳಿಸಲು ಕರಪತ್ರ ಹಂಚಿಕೆ, ವಾಕಥಾನ್, ಸೈಕಲ್ ಜಾಥಾ, ಬೀದಿ ನಾಟಕ ಸೇರಿ ವಿವಿಧ ಪ್ರಯತ್ನಗಳನ್ನು ಮಾಡುತ್ತಿವೆ.

ವಿಧಾನಸಭೆ ಚುನಾವಣೆಗೆ ಮೇ 10ರಂದು ಮತದಾನ ನಡೆಯಲಿದೆ. ಸಂಘ–ಸಂಸ್ಥೆಗಳು ಉದ್ಯಾನ ಸೇರಿ ನಗರದ ಪ್ರಮುಖ ಸ್ಥಳಗಳಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುತ್ತಿವೆ.

ಮನೆ ಮನೆಗೆ ತೆರಳಿ ಕರಪತ್ರಗಳನ್ನೂ ಹಂಚಲಾಗುತ್ತಿದೆ. ಅದೇ ರೀತಿ, ಚುನಾವಣೆಯ ಮಹತ್ವವನ್ನೂ ಸಾರಲಾಗುತ್ತಿದೆ. ವಾರಾಂತ್ಯಗಳಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿಯೂ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಇನ್ನೊಂದೆಡೆ ಬಿಬಿಎಂಪಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೇರಿ ವಿವಿಧ ಸರ್ಕಾರಿ ಇಲಾಖೆ ಹಾಗೂ ಸಂಸ್ಥೆಗಳು ಮತದಾನ ಜಾಗೃತಿ ಜಾಥಾ ನಡೆಸುತ್ತಿವೆ.

ನಗರದಲ್ಲಿ 28 ವಿಧಾನಸಭಾ ಕ್ಷೇತ್ರಗಳಿದ್ದು, ಮತದಾರರ ಸಂಖ್ಯೆ 97.13 ಲಕ್ಷಕ್ಕೆ ತಲುಪಿದೆ. ಇವರಲ್ಲಿ ಯುವಜನರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಹಲವರು ಉದ್ಯೋಗ ಸಂಬಂಧ ವಲಸೆ ಬಂದು, ಇಲ್ಲಿ ನೆಲೆಸಿದವರಾಗಿದ್ದಾರೆ.

ಈಗಾಗಲೇ ಕೆಲ ಐಟಿ–ಬಿಟಿ ಕಂಪನಿಗಳು ಮತದಾನ ನಡೆಯುವ ದಿನದಂದು ರಜೆ ಘೋಷಿಸಿವೆ. ಇನ್ನೂ ಕೆಲ ಕಂಪನಿಗಳು ಮನೆಯಿಂದಲೇ ಕಾರ್ಯನಿರ್ವಹಿಸುವ ಅವಕಾಶ ನೀಡಿವೆ.

2008, 2013 ಹಾಗೂ 2018ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಕಡಿಮೆ ಪ್ರಮಾಣದಲ್ಲಿ ಮತದಾನ ನಡೆದಿದೆ. ಇದಕ್ಕೆ ಮತದಾನದ ಬಗ್ಗೆ ಜಾಗೃತಿ ಕೊರತೆಯೇ ಪ್ರಮುಖ ಕಾರಣ ಎನ್ನಲಾಗಿದೆ.

ಮನೆಗೆ ತೆರಳಿ ಮನವಿ: ಶೇಷಾದ್ರಿಪುರಂ ತೆರಿಗೆದಾರರ ಸಂಘವು ಮತದಾನದ ಜಾಗೃತಿ ಸಾರುವ ಕರ ಪತ್ರಗಳನ್ನು ಮನೆ ಮನೆಗೆ ಹಂಚುತ್ತಿದೆ. ಬಿ.ಪ್ಯಾಕ್ ಸಂಸ್ಥೆಯು ಎಲ್ಲಾ ಕ್ಷೇತ್ರಗಳಲ್ಲಿ ಜಾಗೃತಿ ಯಾತ್ರೆ ಹಮ್ಮಿಕೊಂಡಿದೆ. ಸಂಚಾರಿ ವಾಹನದ ಮೂಲಕ ‘ನನ್ನ ಮತ ಮಾರಾಟಕ್ಕಿಲ್ಲ’ ಎಂಬ ಸಂದೇಶವನ್ನು ಸಾರಲಾಗುತ್ತಿದೆ.

ರಾಷ್ಟ್ರೋತ್ಥಾನ ಯೋಗ ಕೇಂದ್ರ, ಲೆಕ್ಕ ಪರಿಶೋಧಕರ ಸಂಘ, ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಸೇರಿ ವಿವಿಧ ಸಂಘ–ಸಂಸ್ಥೆಗಳು ಅರಿವು ಮೂಡಿಸುತ್ತಿವೆ.

ಆರ್.ವಿ. ಕಾಲೇಜು, ಪಿಇಎಸ್ ಸೇರಿ ವಿವಿಧ ಕಾಲೇಜುಗಳಲ್ಲಿಯೂ ವಿದ್ಯಾರ್ಥಿಗಳಿಗೆ ಮತದಾನದ ಮಹತ್ವ ತಿಳಿಸಲಾಗುತ್ತಿದೆ.



ಬಿ.ಪ್ಯಾಕ್ ಸಂಸ್ಥೆ ಸಂಚಾರಿ ವಾಹನದ ಮೂಲಕ ನಗರದ ಎಚ್‌.ಎಸ್‌.ಆರ್‌. ಲೇಔಟ್‌ನಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿತು.

ಬೆಂಗಳೂರಿನಲ್ಲಿ ಶೇ 50ರಷ್ಟು ಮತದಾನವಾಗುತ್ತಿದೆ. ನನ್ನ ಮತದಿಂದ ಏನಾಗುತ್ತದೆ ಎಂಬ ಅಸಡ್ಡೆ ಇದಕ್ಕೆ ಕಾರಣ. ಮತದಾನ ಹೆಚ್ಚಳಕ್ಕೆ ಅಪಾರ್ಟ್‌ಮೆಂಟ್ ಸಮುಚ್ಚಯ ಸೇರಿ ವಿವಿಧೆಡೆ ಜಾಗೃತಿ ಮೂಡಿಸುತ್ತಿದ್ದೇವೆ
ರಾಘವೇಂದ್ರ ಎಚ್.ಎಸ್., ಬಿ.ಪ್ಯಾಕ್ ಕಾರ್ಯಕ್ರಮ ಸಂಯೋಜಕ

ಈ ಹಿಂದಿನ ಚುನಾವಣೆಗಳಲ್ಲಿ ಬೆಂಗಳೂರಿನಲ್ಲಿ ಕಡಿಮೆ ಪ್ರಮಾಣದಲ್ಲಿ ಮತದಾನ ಆಗಿರುವುದು ಬೇಸರದ ಸಂಗತಿ. ಈ ಬಾರಿ ಹೆಚ್ಚಿನ ಮತದಾನ ನಡೆಯಬೇಕು. ಈ ಸಂಬಂಧ ಜಾಗೃತಿ ಮೂಡಿಸಲಾಗುತ್ತಿದೆ.
ಪಿ.ಸಿ.ರಾವ್, ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ

ಅಂಕಿ-ಅಂಶಗಳು

97.13 ಲಕ್ಷ
ಬೆಂಗಳೂರಿನ ಒಟ್ಟು ಮತದಾರರು

8,615
ಬೆಂಗಳೂರಿನ ಒಟ್ಟು ಮತಗಟ್ಟೆಗಳು

55.12 %
2018ರ ಮತದಾನ ಪ್ರಮಾಣ

ಜಾಲತಾಣಗಳಲ್ಲಿ ಜಾಗೃತಿ

ಸಂಘ–ಸಂಸ್ಥೆಗಳು ತಮ್ಮ ಅಧಿಕೃತ ಪೋರ್ಟಲ್, ಸಾಮಾಜಿಕ ಜಾಲ ತಾಣಗಳಲ್ಲಿಯೂ ಮತ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಆರೋಗ್ಯ, ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ ಸೇರಿ ವಿವಿಧ ಸರ್ಕಾರಿ ಇಲಾಖೆಗಳ ಅಧಿಕೃತ ಪೋರ್ಟಲ್‌ಗಳಲ್ಲಿಯೂ ಮತದಾನದ ಬಗ್ಗೆ ಜಾಗೃತಿ ಪುಟಗಳು ತೆರೆದುಕೊಳ್ಳಲಿವೆ. ಅವುಗಳ ಮೇಲೆ ಕ್ಲಿಕ್ಕಿಸಿದಾಗ ಕರ್ನಾಟಕ ಚುನಾವಣಾ ಆಯೋಗದ ಪೋರ್ಟಲ್ ತೆರೆದುಕೊಳ್ಳಲಿದ್ದು, ಮತದಾನಕ್ಕೆ ಸಂಬಂಧಿಸಿದ ಮಾಹಿತಿಗಳು ದೊರೆಯಲಿವೆ. ಬಿಎಂಟಿಸಿ ಸಹ ಟಿಕೆಟ್‌ಗಳಲ್ಲಿ ‘ತಪ್ಪದೆ ಮತದಾನ ಮಾಡಿ’ ಎಂದು ಮನವಿ ಮಾಡಿಕೊಂಡಿದೆ.


ಮತ ಜಾಗೃತಿ...
ಗ್ರೀನ್‌ಪೀಸ್ ಇಂಡಿಯಾ ಸಂಘಟನೆ ವತಿಯಿಂದ ಮತದಾನ ಅರಿವು ಮೂಡಿಸಲು ಬೆಂಗಳೂರು ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಬೀದಿನಾಟಕ ಪ್ರದರ್ಶನ ನಡೆಯಿತು
ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಸಾಧಾರಣ ಮಳೆ

ಬೆಂಗಳೂರು: ನಗರದಲ್ಲಿ ಭಾನುವಾರ ತಡರಾತ್ರಿ ಸಾಧಾರಣ ಮಳೆಯಾಯಿತು.

ಬೆಳಿಗ್ಗೆಯಿಂದ ಮೋಡ - ಬಿಸಿಲು ವಾತಾವರಣವಿತ್ತು. ಶಾಂತಿನಗರ, ಸಂಪಂಗಿರಾಮನಗರ, ಮೆಜೆಸ್ಟಿಕ್, ಮಲ್ಲೇಶ್ವರ, ರಾಜಾಜಿನಗರ, ಬಸವನಗುಡಿ, ವಿಜಯನಗರ, ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಕೆಂಗೇರಿ, ಜಯನಗರ ಮುಂತಾದ ಪ್ರದೇಶಗಳಲ್ಲಿ ಮಳೆಯಾಯಿತು. ಸೋಮವಾರವೂ ಮಳೆ ಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ವಿಂಟೇಜ್’ ವಾಹನದಲ್ಲಿ ಮತದಾನದ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಪ್ರಯುಕ್ತ ನಗರದ ವಿವಿಧೆಡೆ ಭಾನುವಾರ ಸಂಚರಿಸಿದ ವಿಂಟೇಜ್ ಕಾರು ಹಾಗೂ ಬೈಕ್‌ಗಳು, ಸಾರ್ವಜನಿಕರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಿದವು.

ಜಿಲ್ಲಾ ಚುನಾವಣಾಧಿಕಾರಿ ಕಚೇರಿ, ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಸ್ವೀಪ್ ಸಮಿತಿ ನಗರದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಜಾಗೃತಿ ರ್‍ಯಾಲಿ ನಡೆಸಿತು. ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ರಜನೀಶ್ ಗೋಯಲ್, ಶಾಲಿನಿ ರಜನೀಶ್, ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ರ್‍ಯಾಲಿಗೆ ಚಾಲನೆ ನೀಡಿದರು.

ಕಾರುಗಳ ಗ್ಲಾಸ್ ಮೇಲೆ ಮತದಾನ ಜಾಗೃತಿ ಸಂದೇಶಗಳನ್ನು, ಬ್ಯಾನರ್‌ಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಮಾರ್ಗದುದ್ದಕ್ಕೂ ಚಾಲಕರು ಕೈ ಬೀಸುತ್ತಾ ಸಾಗಿದರು. ಸಾಲಾಗಿ ಸಾಗಿದ ಕಾರುಗಳು ಸಾರ್ವಜನಿಕರ ಗಮನ ಸೆಳೆದವು.

ವಿಧಾನಸೌಧದ ಮುಂಭಾಗದಿಂದ ಕಾಫಿ ಬೋರ್ಡ್, ಮಿನ್ಸ್ಕ ಸ್ಕ್ವೇರ್, ಚಿನ್ನಸ್ವಾಮಿ ಕ್ರೀಡಾಂಗಣ, ಅನಿಲ್ ಕುಂಬ್ಳೆ ವೃತ್ತ, ಎಂ.ಜಿ. ರಸ್ತೆ, ಟ್ರಿನಿಟಿ ವೃತ್ತಕ್ಕೆ ಸಾಗಿ, ಎಂ.ಜಿ. ರಸ್ತೆಯ ಮೂಲಕ ಕಸ್ತೂರಬಾ ರಸ್ತೆ, ಕಂಠೀರವ ಕ್ರೀಡಾಂಗಣಕ್ಕೆ ತಲುಪಿತು.



ಜಕ್ಕೂರಿನಲ್ಲಿ ನಡೆದ 'ನಮ್ಮ ನಡೆ ಮತಗಟ್ಟೆಯ ಕಡೆ' ಜಾಗೃತಿ ಜಾಥಾದಲ್ಲಿ ಪಾಲ್ಗೊಂಡಿದ್ದ ಕಲಾ ತಂಡ

‘ನಮ್ಮ ನಡೆ ಮತಗಟ್ಟೆಯ ಕಡೆ’ ಜಾಗೃತಿ ಜಾಥಾಕ್ಕೆ ನಗರದಲ್ಲಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವತ್ರಿಕ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತದಾರರಲ್ಲಿ ಮತಗಟ್ಟೆ ಕುರಿತು ಜಾಗೃತಿ ಮೂಡಿಸಲು ನಗರದಾದ್ಯಂತ ಹಮ್ಮಿಕೊಂಡಿರುವ ‘ನಮ್ಮ ನಡೆ ಮತಗಟ್ಟೆಯ ಕಡೆ’ ಜಾಗೃತಿ ಜಾಥಾಕ್ಕೆ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಹಾಗೂ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಚಾಲನೆ ನೀಡಿದರು.

ಜಕ್ಕೂರು ಬಡಾವಣೆಯಲ್ಲಿ ಜಾಥಾಗೆ ಚಾಲನೆ ನೀಡಲಾಯಿತು. ಜಕ್ಕೂರು ಬಡಾವಣೆಯ ನ್ಯೂ ಕೃಷ್ಣ ಸಾಗರ ಫುಡ್‌ಕೋರ್ಟ್ ನಿಂದ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಶ್ರೀ ರಾಮ ವಿದ್ಯಾಲಯ, ಜಕ್ಕೂರು ವೃತ್ತದ ಮೂಲಕ ಸಾಗಿ ಜಕ್ಕೂರಿನ ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆಯ ಮತಗಟ್ಟೆಯವರೆಗೆ ಸಾಗಿತು. ಮತಗಟ್ಟೆಯ ಆವರಣದಲ್ಲಿ ‘ಪ್ರಜಾಪ್ರಭುತ್ವದ ಹಬ್ಬ - ಮೇ 10ರಂದು ಮತದಾನ’ ಎಂಬ ಧ್ಯೇಯ ಒಳಗೊಂಡಿರುವ ಬಾವುಟ ಹಾರಿಸಲಾಯಿತು.

ಪಾಲಿಕೆಯ ಅಧಿಕಾರಿ/ಸಿಬ್ಬಂದಿ ವರ್ಗ, ನಾಗರಿಕರು, ಸೈಕಲ್, ದ್ವಿಚಕ್ರ, ಆಟೋ ಟಿಪ್ಪರ್, ಕಾಲ್ನಡಿಗೆ ಮೂಲಕ ನಡೆದ ಜಾಥಾದಲ್ಲಿ ಭಾಗವಹಿಸಿದ್ದರು. ಎಲ್.ಇ.ಡಿ ಪರದೆಯುಳ್ಳ ವಾಹನದಲ್ಲಿ ಚುನಾವಣಾ ಗೀತೆ ಬಳಸಿಕೊಂಡು, ರಸ್ತೆಯುದ್ದಕ್ಕೂ ಭಿತ್ತಿಪತ್ರಗಳನ್ನು ಪ್ರದರ್ಶಿಸುತ್ತಾ, ಘೋಷಣೆಗಳನ್ನು ಕೂಗಲಾಯಿತು.

ನಗರದಾದ್ಯಂತ ವಾರ್ಡ್‌ವಾರು ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ, ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ಮತಗಟ್ಟೆಗಳ ವ್ಯಾಪ್ತಿಯಲ್ಲಿ ಜಾತಾ ನಡೆಸಲಾಗುತ್ತದೆ. ಮತದಾರರಿಗೆ ಮೂಲಭೂತ ಸೌಕರ್ಯಗಳ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಲಾಗುತ್ತದೆ.

ಸೌಲಭ್ಯಗಳ ಪರಿಶೀಲನೆ: ಜಕ್ಕೂರಿನ ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ 7 ಮತಗಟ್ಟೆಗಳಿದ್ದು, ಕನಿಷ್ಠ ಸೌಲಭ್ಯಗಳಿರುವುದನ್ನು ಜಿಲ್ಲಾ ಚುನಾವಣಾಧಿಕಾರಿ ಪರಿಶೀಲಿಸಿದರು.


ವಿಂಟೇಜ್ ಕಾರುಗಳಲ್ಲಿ ಸಾಗಿದ ಅಧಿಕಾರಿಗಳು ಮತದಾನದ ಬಗ್ಗೆ ಭಾನುವಾರ ಜಾಗೃತಿ ಮೂಡಿಸಿದರು – ಪ್ರಜಾವಾಣಿ ಚಿತ್ರ

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ವಿ.ಎಸ್. ಸುಬ್ರಹ್ಮಣ್ಯ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಕೆ. ಗೋಪಾಲಯ್ಯ (ಬಿಜೆಪಿ)

‘ನನಗೆ ಎದುರಾಳಿಗಳೇ ಇಲ್ಲ’

● ನೀವು ಏನು ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

2008ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದೆ. ಆದರೆ, ಜನರಿಂದ ದೂರ ಸರಿಯಲಿಲ್ಲ. 2013ರಿಂದ ಒಂದು ಉಪ ಚುನಾವಣೆಯೂ ಸೇರಿ ಮೂರು ಬಾರಿ ಗೆದ್ದಿದ್ದೇನೆ. ಮಹಾಲಕ್ಷ್ಮಿ ಬಡಾವಣೆಯ ಕ್ಷೇತ್ರದ ಶಾಲೆಗಳು, ಸರ್ಕಾರಿ ಆಸ್ಪತ್ರೆಗಳು, ಉದ್ಯಾನಗಳು ಸಂಪೂರ್ಣ ಬದಲಾಗಿವೆ. ಬಡವರ ಮಕ್ಕಳಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಅವಕಾಶ ಸೃಜಿಸಿದ್ದೇನೆ. ಕೋವಿಡ್‌ನ ಅವಧಿಯಲ್ಲಿ ನೆರವು ಕೇಳಿಬಂದ ಒಬ್ಬರನ್ನೂ ಬರಿಗೈಲಿ ಕಳುಹಿಸಿಲ್ಲ. ಯಾವ ಸಮಸ್ಯೆ ಇದ್ದರೂ ಪರಿಹರಿಸುತ್ತೇನೆ ಎಂಬುದಕ್ಕಾಗಿಯೇ ಜನರು ನನಗೆ ಮತ ನೀಡಬೇಕು.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೆ?


270 ಮತಗಟ್ಟೆಗಳಲ್ಲೂ ನನಗೆ ಜನಬೆಂಬಲ ಇದೆ. ಕ್ಷೇತ್ರಕ್ಕೆ ಹಿಂದೆಂದೂ ಸಿಗದಷ್ಟು ಅನುದಾನ ತಂದಿದ್ದೇನೆ. ಕೆಲಸ ಮಾಡುವಾಗ ಪಕ್ಷ ನೋಡಿಲ್ಲ. ಹಿರಿಯರು, ಕಿರಿಯರು ಎಲ್ಲರೂ ನನ್ನ ಬೆಂಬಲಕ್ಕೆ ಇದ್ದಾರೆ. ನೀನು ಪ್ರಚಾರಕ್ಕೆ ಬರುವುದು ಬೇಡ, ನಾವೇ ಮತ ಹಾಕುತ್ತೇವೆ. ಬಯಸುವವರೆಗೂ ಈ ಕ್ಷೇತ್ರದ ಶಾಸಕನಾಗಿರು ಎಂದು ಜನರು ಹೇಳುತ್ತಿದ್ದಾರೆ. ಗೆಲ್ಲುತ್ತೇನೆ ಎನ್ನಲು ಇನ್ನೇನು ಬೇಕು?

● ನಿಮ್ಮ ನಿಜವಾದ ಎದುರಾಳಿ ಯಾರು?

ವಾಸ್ತವಿಕವಾಗಿ ನನಗೆ ಕ್ಷೇತ್ರದಲ್ಲಿ ಎದುರಾಳಿಗಳೇ ಇಲ್ಲ. ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

● ಪಕ್ಷಾಂತರ ಮಾಡಿದ್ದು ಅಡ್ಡಿಯಾಗುವುದಿಲ್ಲವೆ?

ನಾನು ಪಕ್ಷಾಂತರ ಮಾಡಿಲ್ಲ. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಬಳಿಕ ಬಿಜೆಪಿ ಸೇರಿದೆ. ಗೆದ್ದು ಸಚಿವನಾಗಿ ಜನರ ಕೆಲಸ ಮಾಡಿದೆ. ಅದನ್ನು ಜನರು ಆಗಲೇ ಬೆಂಬಲಿಸಿದ್ದಾರೆ.



ಕೆ.ಸಿ. ರಾಜಣ್ಣ (ಜೆಡಿಎಸ್)

‘ಆಕಾಶ ಕೆಳಗಿಳಿಸುವ ಭರವಸೆ ನೀಡಲಾರೆ’

● ನೀವು ಏನು ಮಾಡುತ್ತೀರಿ ಎಂಬುದಕ್ಕಾಗಿ ಜನರು ನಿಮಗೆ ಮತ ನೀಡಬೇಕು?


ನಾನು ಈ ಕ್ಷೇತ್ರದ ಸ್ಥಳೀಯ ವ್ಯಕ್ತಿ. 1982ರಿಂದಲೂ ಸಾರ್ವಜನಿಕ ಜೀವನದಲ್ಲಿ ಇದ್ದೇನೆ. ಜನರ ನಡುವಿನಲ್ಲೇ ಇರುವವನು. ಅವರ ನಡುವೆಯೇ ಇದ್ದು ಕೆಲಸ ಮಾಡುತ್ತೇನೆ. ಗೆದ್ದರೆ ಆಕಾಶ ಕೆಳಕ್ಕೆ ಇಳಿಸುತ್ತೇನೆ ಎಂಬಂತಹ ಭರವಸೆಗಳನ್ನು ನೀಡಲಾರೆ.

● ಈ ಚುನಾವಣೆಯಲ್ಲಿ ನೀವು ಗೆಲ್ಲುತ್ತೀರಿ ಎಂಬ ವಿಶ್ವಾಸ ಮೂಡಿಸುವಷ್ಟು ಜನ ಬೆಂಬಲ ಇರುವುದಕ್ಕೆ ಸಾಕ್ಷ್ಯವೇನು?

ನಾನು ರಾಜ್ಯದ ಖಜಾನೆ ಲೂಟಿ ಮಾಡಿದ ಪಕ್ಷದ ಅಭ್ಯರ್ಥಿ ಅಲ್ಲ. ವೈಯಕ್ತಿಕವಾಗಿಯೂ ಆ ಕೆಲಸ ಮಾಡಿಲ್ಲ. ಜೆಡಿಎಸ್‌ನ ಪರಮೋಚ್ಚ ನಾಯಕರಾದ ಎಚ್‌.ಡಿ. ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರ ಬೆಂಬಲ ನನಗಿದೆ. ನಾನು ಗೆಲ್ಲುತ್ತೇನೆ ಎಂದು ಭಾವಿಸಲು ಅದೇ ಸಾಕು. ಇನ್ನೂ ಜನರನ್ನು ಸಂಪೂರ್ಣವಾಗಿ ತಲುಪಿಲ್ಲ. ಆದರೂ, ಜನರೇ ಬದಲಾವಣೆಯ ನಿರ್ಧಾರ ಮಾಡಿರುವುದು ಗಮನಕ್ಕೆ ಬರುತ್ತಿದೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ಕೆ. ಗೋಪಾಲಯ್ಯ ನನ್ನ ನೇರ ಎದುರಾಳಿ. ಆತ ನನ್ನ ಸಹೋದರ ಸಂಬಂಧಿ. ವಯಸ್ಸಿನಲ್ಲಿ ನಾನು ಅಣ್ಣ, ಗೋಪಾಲಯ್ಯ ತಮ್ಮ. ಅಣ್ಣ– ತಮ್ಮನ ಮಧ್ಯದಲ್ಲೇ ಈ ಚುನಾವಣೆಯ ಸ್ಪರ್ಧೆ ಇದೆ.



ಶಾಂತಲಾ ದಾಮ್ಲೆ (ಆಮ್ ಆದ್ಮಿ ಪಕ್ಷ)

‘ಜನರು ಆಪ್ ಮಾದರಿ ಬಯಸಿದ್ದಾರೆ’



● ನೀವು ಯಾವ ಕೆಲಸಗಳನ್ನು ಮಾಡುತ್ತೀರಿ ಎಂಬುದಕ್ಕೆ ಜನರು ಮತ ನೀಡಬೇಕು?

ದೆಹಲಿ ಮತ್ತು ಪಂಜಾಬ್ ರಾಜ್ಯಗಳಲ್ಲಿ ಆಮ್ ಆದ್ಮಿ ಪಕ್ಷವು ಭ್ರಷ್ಟಾಚಾರರಹಿತ ಆಡಳಿತ ನೀಡುತ್ತಿದೆ. ಅಂತಹ ಆಡಳಿತ ಇಲ್ಲಿಯೂ ಬೇಕಿದೆ. ಐದು ವರ್ಷಗಳ ಅವಧಿಯಲ್ಲಿ ಪ್ರತಿ ಪ್ರಜೆಗೆ ₹ 5 ಲಕ್ಷ ಉಳಿತಾಯ ಮಾಡುವುದು ನಮ್ಮ ಗುರಿ. ಬೆಲೆ ಏರಿಕೆ, ಭ್ರಷ್ಟಾಚಾರ ತಡೆಗೆ ನಮ್ಮ ಪಕ್ಷವನ್ನು ಜನರು ಬೆಂಬಲಿಸುತ್ತಾರೆ. ಮಹಿಳೆಯೊಬ್ಬರು ಇಂತಹ ಜನಪರ ಆಡಳಿತದ ಭರವಸೆಯೊಂದಿಗೆ ಬಂದಿದ್ದಾರೆ ಎಂಬುದನ್ನು ಜನರು ಒಪ್ಪುತ್ತಾರೆ.

● ಚುನಾವಣೆಯಲ್ಲಿ ಗೆಲುವು ಸಾಧಿಸುವಷ್ಟು ಬೆಂಬಲ ನಿಮಗಿರುವುದಕ್ಕೆ ಪುರಾವೆಗಳೇನು?

2008ರ ಚುನಾವಣೆಯಲ್ಲಿ ಬಸವನಗುಡಿ ಕ್ಷೇತ್ರದಲ್ಲಿ ಲೋಕಸತ್ತಾ ಪಕ್ಷದಿಂದ ಸ್ಪರ್ಧಿಸಿದ್ದೆ. ಈ ಚುನಾವಣೆಯಲ್ಲಿ ಮಹಾಲಕ್ಷ್ಮಿ ಬಡಾವಣೆ ಕ್ಷೇತ್ರದಿಂದ ಸ್ಪರ್ಧಿಸಲು ಹಿಂದೆಯೇ ನಿರ್ಧರಿಸಿದ್ದೆ. ಒಂದೂವರೆ ವರ್ಷದಿಂದ ಚುನಾವಣಾ ತಯಾರಿ ನಡೆಸಿದ್ದೆ. ಏಳು ಬಾರಿ ಮತದಾರರನ್ನು ಭೇಟಿಮಾಡಿದ್ದೇವೆ. ವೈಯಕ್ತಿಕವಾಗಿ ಮೂರು ಬಾರಿ ಭೇಟಿ ಮಾಡಿದ್ದೇನೆ. ಪ್ರಚಾರಕ್ಕೆ ಹೋದರೆ ಮಹಿಳೆಯರು ತಾವಾಗಿಯೇ ರಸ್ತೆಗೆ ಬಂದು ಬೆಂಬಲ ನೀಡುತ್ತಿದ್ದಾರೆ.

● ಕ್ಷೇತ್ರದಲ್ಲಿ ನಿಮ್ಮ ನಿಜವಾದ ಎದುರಾಳಿ ಯಾರು?

ಬಿಜೆಪಿ ಅಭ್ಯರ್ಥಿ ಕೆ. ಗೋಪಾಲಯ್ಯ ಅವರೇ ನನ್ನ ನೇರ ಎದುರಾಳಿ.



ಕೇಶವಮೂರ್ತಿ ಎಸ್. (ಕಾಂಗ್ರೆಸ್)

‘ದಬ್ಬಾಳಿಕೆ ತಡೆಗೆ ಬೆಂಬಲಿಸುತ್ತಾರೆ’

● ನೀವು ಏನು ಮಾಡುತ್ತೀರಿ ಎಂದು ಜನರು ನಿಮಗೆ ಮತ ಹಾಕಬೇಕು?

ನಾನು ಎರಡು ಬಾರಿ ಮಹಾನಗರ ಪಾಲಿಕೆ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಜನರ ನಡುವೆ ಇರುವ ವ್ಯಕ್ತಿ. ನನ್ನ ಕಾರ್ಯವೈಖರಿಯನ್ನು ಜನರು ನೋಡಿದ್ದಾರೆ. ಈಗಿರುವ ಶಾಸಕರು ಜನರ ಬಳಿ ಬರುವುದಿಲ್ಲ. ಜನರೇ ಅವರ ಮನೆ ಬಾಗಿಲಿಗೆ ಹೋಗಬೇಕು. ಕ್ಷೇತ್ರದಲ್ಲಿ ಜನರ ತೆರಿಗೆ ಹಣದ ಲೂಟಿ ನಡೆಯುತ್ತಿದೆ. ಜನರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಹತ್ತು ವರ್ಷಗಳಿಂದ ಕ್ಷೇತ್ರದಲ್ಲಿ ಬೀಡುಬಿಟ್ಟಿರುವ ಕೆಲವು ಅಧಿಕಾರಿಗಳು ಜನರ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಕೆಲವರ ಜೇಬು ತುಂಬಿಸಲು ಯೋಜನೆಗಳಾಗುತ್ತಿವೆ. ಅದೆಲ್ಲವನ್ನೂ ತಡೆಯಲು ಜನರು ನನಗೆ ಮತ ಹಾಕಬೇಕು.

● ಚುನಾವಣೆಯಲ್ಲಿ ಗೆಲುವು ಸಾಧಿಸುವಷ್ಟು ಜನ ಬೆಂಬಲ ನಿಮಗಿರುವುದಕ್ಕೆ ಏನು ಆಧಾರ?

ಆರಂಭದಲ್ಲಿ ನಾನು ಕೂಡ ಜನರ ಬೆಂಬಲ ನಿರೀಕ್ಷಿಸಿರಲಿಲ್ಲ. ಆದರೆ, ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದ ನಂತರವೇ ಜನರು ಕ್ಷೇತ್ರದಲ್ಲಿ ಬದಲಾವಣೆ ಬಯಸುತ್ತಿರುವುದು ತಿಳಿಯಿತು. ಹಾಲಿ ಶಾಸಕರು ಆರ್ಥಿಕವಾಗಿ ಬಲಿಷ್ಠವಾಗಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದ ‘ಗ್ಯಾರಂಟಿ’ಗಳ ಮೇಲೆ ಜನರು ವಿಶ್ವಾಸ ಇರಿಸಿದ್ದಾರೆ. ಪಕ್ಷದ ಪರ ಪ್ರಚಾರಕ್ಕೆ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದೇ ನನಗಿರುವ ಜನ ಬೆಂಬಲಕ್ಕೆ ಸಾಕ್ಷಿ. ಅಹಂ ಇಲ್ಲದೆ ಜನರ ನಡುವೆ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಗುಣವೇ ನನ್ನ ಶಕ್ತಿ.

● ನಿಮ್ಮ ನಿಜವಾದ ಎದುರಾಳಿ ಯಾರು?

ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ಕೆ. ಗೋಪಾಲಯ್ಯ ಅವರೇ ನನ್ನ ನೇರ ಎದುರಾಳಿ.





ಯಲಹಂಕ ಕ್ಷೇತ್ರದ ಬಹುಜನ ಸಮಾಜ ಪಕ್ಷದ ಅಭ್ಯರ್ಥಿ ಸಂದೀಪ್ ಮಾರಸಂದ್ರ ಮುನಿಯಪ್ಪ ಪರ ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಚುನಾವಣಾ ಪ್ರಚಾರದ ಕರಪತ್ರ ಬಿಡುಗಡೆಗೊಳಿಸಿದರು

‘ಅಭಿವೃದ್ಧಿಗೆ ಗಮನಹರಿಸದ ಪಕ್ಷಗಳು’

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಪರಸ್ಪರ ಆರೋಪ ಮಾಡುತ್ತ, ಜನರದಿಕ್ಕು ತಪ್ಪಿಸುವ ಮೂಲಕ ಕಾಲಹರಣ ಮಾಡುತ್ತಿದ್ದಾರೆ. ಆದರೆ, ರಾಜ್ಯದ ಅಭಿವೃದ್ಧಿಯ ಕಡೆಗೆ ಗಮನಹರಿಸುತ್ತಿಲ್ಲ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಆರೋಪಿಸಿದರು.

ಯಲಹಂಕ ಕ್ಷೇತ್ರದ ಬಹುಜನ ಸಮಾಜ ಪಕ್ಷದ ಅಭ್ಯರ್ಥಿ ಸಂದೀಪ್ ಮಾರಸಂದ್ರ ಮುನಿಯಪ್ಪ ಪರ ಚುನಾವಣಾ ಪ್ರಚಾರದ ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 25 ಲಕ್ಷ ಎಕರೆ ಭೂಮಿಗೆ ಹಕ್ಕುಪತ್ರ ನೀಡಬೇಕಾಗಿದ್ದು, ಈ ಸಂಬಂಧ ಕಳೆದ 30 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಇದುವರೆಗೂ ಹಕ್ಕುಪತ್ರ ನೀಡಿಲ್ಲ. ಇದರಲ್ಲಿ ಎಲ್ಲ ಜಾತಿಯ ಫಲಾನುಭವಿಗಳಿದ್ದು, ರಾಜ್ಯದಲ್ಲಿ ಯಾವುದೇ ಸರ್ಕಾರವು ಅಧಿಕಾರಕ್ಕೆ ಬಂದರೂ ಹಕ್ಕುಪತ್ರ ನೀಡುವ ಬಗ್ಗೆ ಗಮನಹರಿಸಿಲ್ಲ ಎಂದು ದೂರಿದರು. ಮುಖಂಡರಾದ ಶ್ರೀಧರ್, ಮಂಜುನಾಥ್, ನಟರಾಜ್, ಸುಜಿತ್, ಬಿಳಿಜಾಜಿ ಕೃಷ್ಣ, ಮಾರಸಂದ್ರ ಪ್ರಕಾಶ್ ಇದ್ದರು.

ಇನ್ನಾದರೂ ಜನರ ಮಾತು ಕೇಳುತ್ತೀರಾ ಪ್ರಧಾನಿ ಮೋದಿಗೆ ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂರು ಮನ್ ಕಿ ಬಾತ್ ಕಾರ್ಯಕ್ರಮ ಮುಗಿಸಿದ್ದಕ್ಕೆ ಅಭಿನಂದನೆಗಳು. ಇನ್ನಾದರೂ ದೇಶದ ಜನಸಾಮಾನ್ಯರ ಮಾತು ಕೇಳುತ್ತೀರಾ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಭಾನುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದ್ದರೂ ದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ ₹ 102ಕ್ಕೆ ತಲುಪಿರುವುದು ಏಕೆ? ‘ನಾ ಖಾವೂಂಗಾ, ನಾ ಖಾನೆ ದೂಂಗಾ’ ಎಂದು ನೀವು ಹೇಳಿದ್ದರೂ, ನಿಮ್ಮ ಪಕ್ಷದ ಸಚಿವರು ಕಮಿಷನ್ ಹಣ ತಿಂದು ಜೈಲಿಗೆ ಹೋಗುತ್ತಿರುವುದೇಕೆ? ಸರ್ಕಾರಿ ಕಾಮಗಾರಿಗಳಲ್ಲಿ ಶೇಕಡ 40 ರಷ್ಟು ಕಮಿಷನ್ ಬೇಡಿಕೆ ಕುರಿತು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಪತ್ರ ಬರೆದರೂ ಉತ್ತರಿಸುವ ಧೈರ್ಯ ತೋರಿಲ್ಲ ಏಕೆ’ ಎಂದು ಕೇಳಿದ್ದಾರೆ.

‘ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ₹ 1 ಲಕ್ಷದವರೆಗಿನ ಕೃಷಿ ಸಾಲವನ್ನು ಮನ್ನಾ ಮಾಡುವ ಭರವಸೆಯನ್ನು ಏಕೆ ಈಡೇರಿಸಿಲ್ಲ? ತೆರಿಗೆ ಪಾಲು ಹಂಚಿಕೆಯಲ್ಲಿ ಏಕೆ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗುತ್ತಿದೆ? ಕೇಂದ್ರ ಹಣಕಾಸು ಆಯೋಗದ ಅನುದಾನದಲ್ಲೂ ರಾಜ್ಯದ ಪಾಲು ಕಡಿತಗೊಳಿಸಿದ್ದು ಏಕೆ? ಪಿಎಸ್‌ಐ ನೇಮಕಾತಿ ಹಗರಣದ ಕುರಿತು ನೀವು ಮೌನ ವಹಿಸಿರುವುದೇಕೆ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಪುಲಕೇಶಿ ನಗರದಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ರೋಡ್ ಶೋ

ಮತದಾರರ ಮನ ಗೆಲ್ಲಲು ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಮನಗೆಲ್ಲಲು ವಿವಿಧ ಪಕ್ಷಗಳ ಹಾಗೂ ಪಕ್ಷೇತರ ಅಭ್ಯರ್ಥಿಗಳು ರೋಡ್ ಶೋ, ಮನೆ ಮನೆ ಪ್ರಚಾರ, ಬಹಿರಂಗಸಭೆಯ ಮೊರೆ ಹೋಗಿದ್ದಾರೆ. ವಿವಿಧ ರಾಜ್ಯಗಳ ರಾಜಕೀಯ ನಾಯಕರು ನಗರಕ್ಕೆ ಬಂದಿದ್ದು ಅವರ ನೇತೃತ್ವದಲ್ಲಿ ಪ್ರಚಾರವು ರಂಗೇರಿದೆ.

ಪುಲಕೇಶಿನಗರದಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಸಿಂಗ್ ಮಾನ್ ಅವರು ಭಾನುವಾರ ಸಂಜೆ ಆಮ್ ಆದ್ಮಿ ಪಕ್ಷದ ಪರ ಬೃಹತ್ ರೋಡ್ ಶೋ ನಡೆಸಿದರು.

ಭಗವಂತ್ ಸಿಂಗ್ ಮಾನ್ ಮಾತನಾಡಿ, ‘ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಮತದಾರರು ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಬೇಕಾದ ಪರಿಸ್ಥಿತಿ ಇದೆ. ಶೂನ್ಯ ಕಮಿಷನ್ ಸರ್ಕಾರ ಬಂದಲ್ಲಿ ಮಾತ್ರ ಮುಂದಿನ ಪೀಳಿಗೆಯ ಭವಿಷ್ಯ ಉಜ್ವಲವಾಗಲಿದೆ’ ಎಂದು ಪ್ರತಿಪಾದಿಸಿದರು.

‘ರಾಜ್ಯವು ಅಭಿವೃದ್ಧಿ ಪಥದ ಕಡೆಗೆ ಸಾಗಬೇಕೆಂದರೆ ಎಎಪಿ ಪಕ್ಷವನ್ನು ಬೆಂಬಲಿಸಬೇಕಾದ್ದು ಅನಿವಾರ್ಯ’ ಎಂದು ಹೇಳಿದರು. ಪುಲಕೇಶಿನಗರದ ಪಕ್ಷದ ಅಭ್ಯರ್ಥಿ ಸುರೇಶ್ ರಾಥೋಡ್ ಹಾಜರಿದ್ದರು.

ಕಾಂಗ್ರೆಸ್‌ನಿಂದ ಪ್ರಚಾರ: ಮಲ್ಲೇಶ್ವರದಲ್ಲಿ ಕಾಂಗ್ರೆಸ್‌ನಿಂದ ಬೃಹತ್ ರೋಡ್ ಶೋ ನಡೆಯಿತು. ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಪರ ಮಾಜಿ ಸಚಿವ ಎಂ.ಆರ್.ಸೀತಾರಾಂ ರೋಡ್ ಶೋ ಮೂಲಕ ಮತಯಾಚಿಸಿದರು.

ಅಶೋಕ್ ನಗರ, ರಾಮಯ್ಯ ರಸ್ತೆ, ಮತ್ತಿಕೆರೆ, ತ್ರಿವೇಣಿ ರಸ್ತೆ, ಯಶವಂತಪುರ ವೃತ್ತ, ಸುಬ್ರಮಣ್ಯನಗರ, ಮಿಲ್ಕ್ ಕಾಲೊನಿ, ಗಾಯಿತ್ರಿನಗರ ಮೂಲಕ ಬೃಹತ್ ರೋಡ್ ಶೋ ಸಾಗಿತು.

ಎಂ .ಆರ್.ಸೀತಾರಾಂ ಮಾತನಾಡಿ, ‘ಕಾಂಗ್ರೆಸ್ ಬಡವರ, ದೀನದಲಿತರ ಪರ ಹೋರಾಟ ಮಾಡುವ ಪಕ್ಷ. ಈ ಬಾರಿ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬರಲಿದ್ದು, ಮಲ್ಲೇಶ್ವರದಲ್ಲೂ ನಮ್ಮ ಅಭ್ಯರ್ಥಿ ಜಯ ಗಳಿಸಲಿದ್ದಾರೆ’ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯದ ಜನರ ಹಿತರಕ್ಷಣೆ ಮತ್ತು ಒಳಿತಿಗಾಗಿ 5 ಮಹತ್ವದ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇದ್ದು, ಬಿಜೆಪಿ ಜನವಿರೋಧಿ ಆಡಳಿತಕ್ಕೆ ಜನರು ರೋಸಿ ಹೋಗಿದ್ದಾರೆ ಎಂದು ಹೇಳಿದರು.

ಪತಿ ಪರ ಪತ್ನಿ ಪ್ರಚಾರ: ನಗರದ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಗೋಪಾಲಯ್ಯ ಪರವಾಗಿ ಅವರ ಪತ್ನಿ, ಮಾಜಿ ಉಪ ಮೇಯರ್ ಹೇಮಲತಾ ಗೋಪಾಲಯ್ಯ ರಾಜಾಜಿನಗರದ 1ನೇ ಹಂತದಲ್ಲಿ ಮತಯಾಚನೆ ಮಾಡಿದರು.

ಹೇಮಲತಾ ಗೋಪಾಲಯ್ಯ ಮಾತನಾಡಿ, ‘ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಗೋಪಾಲಯ್ಯ ಅವರು ಕ್ಷೇತ್ರದ ಮೇಲೆ ತುಂಬಾ ಪ್ರೀತಿ, ವಿಶ್ವಾಸ ಇಟ್ಟುಕೊಂಡಿದ್ದಾರೆ. ರಸ್ತೆ ಡಾಂಬರೀಕರಣ, ಒಳಚರಂಡಿ ವ್ಯವಸ್ಥೆ, ಉದ್ಯಾನ ಅಭಿವೃದ್ಧಿ, ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಶಾಲಾ ಕಟ್ಟಡಗಳ ನಿರ್ಮಾಣ, ಹೆರಿಗೆ ಆಸ್ಪತ್ರೆ, ಡಯಾಲಿಸಿಸ್ ಸೆಂಟರ್, ಕೋವಿಡ್ ವೇಳೆ ಉಚಿತ ಆಹಾರದ ಕಿಟ್ ಔಷಧದ ಕಿಟ್‌ಗಳನ್ನು ಮನೆ ಮನೆಗೆ ತಲುಪಿಸುವಂತಹ ಉತ್ತಮ ಕೆಲಸ ಮಾಡಿದ್ದಾರೆ’ ಎಂದರು.

ಮುಖಂಡರಾದ ವೆಂಕಟೇಶ್ ಮೂರ್ತಿ, ಗಂಗಹನುಮಯ್ಯ, ನಾಗರತ್ನ ಲೋಕೇಶ್ ಇದ್ದರು.





ಗೋವಿಂದರಾಜ ನಗರದ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಕೃಷ್ಣ ಅವರ ಪರವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರು ರೋಡ್ ಶೋ ನಡೆಸಿದರು (ಎಡಚಿತ್ರ) ಪುಲಕೇಶಿನಗರದ ಎಎಪಿ ಅಭ್ಯರ್ಥಿ ಸುರೇಶ್ ರಾಥೋಡ್ ಅವರ ಪರ ರೋಡ್ ಶೋ ನಡೆಸಿದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಸಿಂಗ್ ಮಾನ್ ಅವರು ಟ್ಯಾನರಿ ರಸ್ತೆಯಲ್ಲಿ ಮಹಿಳೆಯರು ಬೆಳಗಿದ ಆರತಿಗೆ ನಮಸ್ಕರಿಸಿದರು –ಪ್ರಜಾವಾಣಿ ಚಿತ್ರ

‘ಅಧಿಕಾರಕ್ಕೆ ಬಂದ ತಕ್ಷಣವೇ ಯೋಜನೆ ಜಾರಿ’

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಕೇಶವಮೂರ್ತಿ ಪರವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರೋಡ್ ಶೋ ನಡೆಸಿದರು.

ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜ್‌ಕುಮಾರ್, ಎಂ.ಶಿವರಾಜು, ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಚ್.ಎಸ್.ಮಂಜುನಾಥಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸುಧೀಂದ್ರ, ಪರಿಸರ ರಾಮಕೃಷ್ಣ, ನಟರಾಜ್ ಅವರೂ ಇದ್ದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘ಕಾಂಗ್ರೆಸ್ ನಾಡಿನ ಜನರ ಒಳಿತಿಗಾಗಿ ಐದು ಪ್ರಮುಖ ಯೋಜನೆಗಳನ್ನು ಘೋಷಣೆ ಮಾಡಿದೆ. 200 ಯುನಿಟ್ ವಿದ್ಯುತ್ ಉಚಿತ, ಮನೆಯ ಗೃಹಿಣಿಗೆ ₹ 2 ಸಾವಿರ ಸಹಾಯಧನ, ಪ್ರತಿ ವ್ಯಕ್ತಿಗೆ 10 ಕೆ.ಜಿ ಅಕ್ಕಿ, ನಿರುದ್ಯೋಗ ಭತ್ಯೆ, ಸರ್ಕಾರಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ... ಎಂಬ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಕಾಂಗ್ರೆಸ್ ಅಧಿಕಾರ ಬಂದ ತಕ್ಷಣವೇ ಈ ಯೋಜನೆ ಜಾರಿಗೆ ತರಲಾಗುವುದು’ ಎಂದರು.

ಅಭ್ಯರ್ಥಿ ಎಸ್.ಕೇಶವಮೂರ್ತಿ ಮಾತನಾಡಿ, ‘ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆ ಇದೆ. ಮತದಾರರು ಹೊಸ ಮುಖ ಮತ್ತು ಅಭಿವೃದ್ಧಿ ಕೆಲಸ ಮಾಡುವ ಹುಮ್ಮಸ್ಸಿರುವ ನನಗೆ ಬೆಂಬಲ ನೀಡುವ ವಿಶ್ವಾಸವಿದೆ’ ಎಂದರು.

ಕಾಮಾಕ್ಷಿಪಾಳ್ಯದ ಆಂಜನೇಯ ದೇವಸ್ಥಾನದ ಬಳಿಯಿಂದ ರೋಡ್ ಶೋ ಆರಂಭವಾಗಿ ಈಶ್ವರ ದೇವಸ್ಥಾನ ರಸ್ತೆ, ಕಾಮಾಕ್ಷಿಪಾಳ್ಯ ಮುಖ್ಯರಸ್ತೆ ,ಕುವೆಂಪು ಉದ್ಯಾನ, 8ನೇ ಮುಖ್ಯರಸ್ತೆ, ಶಂಕರಮಠ ಸಿಗ್ನಲ್, ಗರುಡ ಪ್ರತಿಮೆ, ಗೆಳೆಯರ ಬಳಗ, ಆದಿತ್ಯ ಹೋಟೆಲ್, ಕುರುಬರಹಳ್ಳಿ ವೃತ್ತ, ಥಾಮಸ್ ಬಿಲ್ಡಿಂಗ್, ಸತ್ಯನಾರಾಯಣ ಕಲ್ಯಾಣ ಮಂಟಪ, ಜೈಮಾರುತಿ ನಗರದ ಬಳಿ ಮುಕ್ತಾಯವಾಯಿತು.



ನಗರದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಪರವಾಗಿ ಮಾಜಿ ಸಚಿವ ಎಂ.ಆರ್.ಸೀತಾರಾಂ ಅವರು ಅಶ್ವಥ್‌ನಗರ ವೃತ್ತದಲ್ಲಿ ಮತಯಾಚನೆ ಮಾಡಿದರು –ಪ್ರಜಾವಾಣಿ ಚಿತ್ರ

ಚಿತ್ರಾವಳಿ



ಚಿಂತಕರ ವೇದಿಕೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಮಾತನಾಡಿದರು –ಪ್ರಜಾವಾಣಿ ಚಿತ್ರ



ಪುಲಕೇಶಿನಗರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಅಖಂಡ ಶ್ರೀನಿವಾಸ ಮೂರ್ತಿ ಅವರು ಟ್ಯಾನರಿ ರಸ್ತೆಯಲ್ಲಿ ಬೆಂಬಲಿಗರೊಂದಿಗೆ ಮತಯಾಚಿಸಿದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಏ.30ರವರೆಗೆ 2,264 ಮಂದಿಯಿಂದ ಮತ ಚಲಾವಣೆ

ಮತದಾನಕ್ಕೆ ಮುನ್ನ 33 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಿಂದ ಮತದಾನ ಮಾಡಲು ನೋಂದಾಯಿಸಿಕೊಂಡವರಲ್ಲಿ 33 ಮಂದಿ ಮತದಾನ ಮಾಡುವ ವೇಳೆಗೆ ಮೃತಪಟ್ಟಿದ್ದಾರೆ.


80 ವರ್ಷಕ್ಕಿಂತ ಮೇಲ್ಪಟ್ಟ 9,152 ಮತದಾರರು ಮನೆಯಿಂದ ಮತ ಚಲಾಯಿಸಲು ನೋಂದಣಿ ಮಾಡಿಸಿಕೊಂಡಿದ್ದು, ಏ.30ರವರೆಗೆ 2,264 ಮಂದಿ ಮತ ಚಲಾಯಿಸಿದ್ದಾರೆ. 119 ಅಂಗವಿಕಲರಲ್ಲಿ 18 ಮಂದಿ ಮತ ದಾನ ಮಾಡಿದ್ದಾರೆ. ಮನೆಯಿಂದ ಮತ ದಾನ ಮಾಡಲು ನೋಂದಾಯಿಸಿಕೊಂಡವರಲ್ಲಿ 33 ಮಂದಿ ಮರಣ ಹೊಂದಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

ವಿಧಾನಸಭೆ ಚುನಾವಣೆಗೆ ಅಂಚೆ ಮತದಾನ ಮಾಡಲು 661 ಮತದಾರರು ನೋಂದಾಯಿಸಿಕೊಂಡಿದ್ದು, ಮೇ 2ರಿಂದ 4ರವರೆಗೆ ಮತ ಚಲಾಯಿಸಬಹುದು.

ಕೇಂದ್ರ ಚುನಾವಣೆ ಆಯೋಗದ ನಿರ್ದೇಶನದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲೂ ಅಂಚೆ ಮತದಾನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಮೇ 2ರಿಂದ ಮೂರು ದಿನ ಬೆಳಿಗ್ಗೆ 9ರಿಂದ ಸಂಜೆ 5ರೊಳಗೆ ಅಂಚೆ ಮತಚೀಟಿಯಲ್ಲಿ ಮತದಾನ ಮಾಡಬಹುದು ಎಂದು ಬಿಬಿಎಂಪಿ ತಿಳಿಸಿದೆ.

12 ವಿವಿಧ ಇಲಾಖೆಗಳ ಅವಶ್ಯಕ ಸೇವೆಗಳಲ್ಲಿ ನಿರತಾಗಿ ಗೈರಾಗುವ ಮತದಾರರಿಗೆ ಅಂಚೆ ಮೂಲಕ ಮತ ಚಲಾಯಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಬೆಂಗಳೂರು ಕೇಂದ್ರ ಚುನಾವಣೆ ಜಿಲ್ಲೆ ವ್ಯಾಪ್ತಿಯಲ್ಲಿ 71, ಉತ್ತರದಲ್ಲಿ 120, ದಕ್ಷಿಣದಲ್ಲಿ 168, ನಗರದಲ್ಲಿ 302 ಮಂದಿ ಸೇರಿದಂತೆ 661 ಮಂದಿ ನೋಂದಾಯಿಸಿಕೊಂಡಿದ್ದು, ಆಯಾ ವಿಧಾನಸಭೆ ಕ್ಷೇತ್ರದಲ್ಲಿ ಮತ ಚಲಾಯಿಸಲಿದ್ದಾರೆ.

ರಾಜ್ಯದ 20,049 ಮಂದಿಯಿಂದ ಮನೆಯಲ್ಲಿ ಮತದಾನ



ಬೆಂಗಳೂರು: ಎರಡನೇ ದಿನವಾದ ಭಾನುವಾರ ರಾಜ್ಯದ ವಿವಿಧ ಜಿಲ್ಲೆಗಳ 20,049 ಮತದಾರರು ಮನೆಗಳಿಂದಲೇ ಮತ ಚಲಾವಣೆ ಮಾಡಿದ್ದಾರೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲ ಮತದಾರರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಶನಿವಾರ ಆರಂಭವಾಗಿರುವ ಈ ಪ್ರಕ್ರಿಯೆ ಮೇ 6ರವರೆಗೂ ನಡೆಯಲಿದೆ.

80,250 ಹಿರಿಯ ಮತದಾರರು ಮತ್ತು 19,279 ಅಂಗವಿಕಲರು ಸೇರಿದಂತೆ ಒಟ್ಟು 99,529 ಮಂದಿ ಮನೆಯಿಂದ ಮತದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದರು. ಶನಿವಾರ 33,036 ಮಂದಿ ಮನೆಯಿಂದಲೇ ಹಕ್ಕು ಚಲಾಯಿಸಿದ್ದರು. ಎರಡೇ ದಿನಗಳಲ್ಲಿ 53,085 ಮಂದಿ ಮನೆಯಿಂದಲೇ ಮತದಾನ ಮಾಡಿದ್ದಾರೆ. ನೋಂದಾಯಿಸಿಕೊಂಡವರಲ್ಲಿ 46,444 ಮಂದಿಯ ಮತದಾನ ಬಾಕಿ ಇದೆ.

₹ 2.65 ಕೋಟಿ ಮೌಲ್ಯದ ಸ್ವತ್ತುಗಳ ವಶ

ಚುನಾವಣಾ ಅಕ್ರಮ ತಡೆ ಕಾರ್ಯಾಚರಣೆಗಳಲ್ಲಿ ಶನಿವಾರ ಒಟ್ಟು ₹2.65 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊ ಳ್ಳಲಾಗಿದೆ. ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಒಟ್ಟು ₹305.43 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಮಾಹಿತಿ ನೀಡಿದ್ದಾರೆ.

‘ಕಾಂಗ್ರೆಸ್– ಜೆಡಿಎಸ್ ಒಳ ಒಪ್ಪಂದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಮತ್ತು ಕಾಂಗ್ರೆಸ್ ಒಳ ಒಪ್ಪಂದ ಮಾಡಿಕೊಂಡಿದ್ದು, ಇದಕ್ಕೆ ಸಾಕ್ಷಿ ಎಂಬಂತೆ ವಿಜಯಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿ ಜೆಡಿಎಸ್ ಅಭ್ಯರ್ಥಿ ತಟಸ್ಥರಾಗಿದ್ದಾರೆ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಮತ್ತು ಜೆಡಿಎಸ್ ಒಂದೇ ನಾಣ್ಯದ ಎರಡು ಮುಖಗಳು ಎಂಬುದು ಇದರಿಂದ ಸಾಬೀತಾಗಿದೆ ಎಂದಿದ್ದಾರೆ.

ವಿಜಯಪುರ ನಗರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಬಂದೇನವಾಜ್ ಮಹಾಬರಿ ಅವರು ಕಾಂಗ್ರೆಸ್‌ನ ಅಬ್ದುಲ್ ಹಮೀದ್ ಅವರಿಗೆ ಬೆಂಬಲ ವ್ಯಕ್ತಪಡಿಸಿ ಕಣದಿಂದ ಹಿಂದಕ್ಕೆ ಸರಿದಿದ್ದಾರೆ.

‘ನ್ಯಾಯಾಧೀಶರ ಅನುಮತಿ ಇಲ್ಲದೇ ಬೇರೆ ಸಂಸ್ಥೆಗಳಿಂದ ಮರುತನಿಖೆ ನಡೆಸುವಂತಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಬಂಧಪಟ್ಟ ನ್ಯಾಯಾಧೀಶರ ಅನುಮತಿ ಅಥವಾ ಅನುಮೋದನೆ ಇಲ್ಲದೇ ಯಾವುದೇ ಅಪರಾಧ ಕುರಿತು ಬೇರೆಬೇರೆ ಸಂಸ್ಥೆ ಗಳಿಂದ ಮರುತನಿಖೆ ನಡೆಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ಈ ತೀರ್ಪು ನೀಡಿದೆ. ಉತ್ತರ ಪ್ರದೇಶದ ಬಡೌತ್‌ನಲ್ಲಿ 2014ರಲ್ಲಿ ಸತ್ಯವೀರ್ ಅಲಿಯಾಸ್ ಕಲ್ಲು ಎಂಬುವವರ ಹತ್ಯೆ ನಡೆದಿತ್ತು. ಹತ್ಯೆ ಕುರಿತು ಮರುತನಿಖೆ ನಡೆಸುವಂತೆ ಕೋರಿ ಪ್ರಕರಣದ ಆರೋಪಿಯೊಬ್ಬರ ತಾಯಿ ಗೃಹ ಇಲಾಖೆಗೆ ಪತ್ರ ಬರೆದಿದ್ದರು. ಈ ಪತ್ರದ ಆಧಾರದಲ್ಲಿ, ಹತ್ಯೆ ಕುರಿತು ಮರುತನಿಖೆ ನಡೆಸುವಂತೆ ಸಿಬಿ–ಸಿಐಡಿಗೆ ನಿರ್ದೇಶಿಸಿ ಇಲಾಖೆಯ ಕಾರ್ಯದರ್ಶಿ 2019ರ ಫೆ.13ರಂದು ಆದೇಶ ಹೊರಡಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಉತ್ತರ ಪ್ರದೇಶ ಗೃಹ ಇಲಾಖೆ ಕಾರ್ಯದರ್ಶಿ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿತು.

‘ಗೃಹ ಇಲಾಖೆ ಕಾರ್ಯದರ್ಶಿ ಆ ಇಲಾಖೆಯ ಮುಖ್ಯಸ್ಥ. ಪ್ರಕರಣ ಕುರಿತು ಬೇರೆ ಸಂಸ್ಥೆಯಿಂದ ತನಿಖೆಗೆ ಆದೇಶಿಸುವ ಅಧಿಕಾರ ಕಾರ್ಯದರ್ಶಿಗೆ ಇದೆ’ ಎಂಬ ಆರೋಪಿಯ ವಾದವನ್ನು ನ್ಯಾಯಪೀಠ ತಳ್ಳಿಹಾಕಿತು.

ಯಾದಗಿರಿ, ಬಳ್ಳಾರಿ ಜಿಲ್ಲೆಯಲ್ಲಿ ಭತ್ತದ ಫಸಲು ಹಾನಿ • ಕೊಚ್ಚಿಹೋದ ತಾಯಿ, ಇಬ್ಬರು ಮಕ್ಕಳು

ಬಿಸಿಲ ಝಳ ತಗ್ಗಿಸಿದ ಬಿರುಗಾಳಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ/ಚಿತ್ರದುರ್ಗ: ಕಲ್ಯಾಣಕರ್ನಾಟಕದ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಹಾಗೂ ಧಾರವಾಡ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ವಿವಿಧೆಡೆ ಭಾನುವಾರ ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ. ಬೀದರ್ ಜಿಲ್ಲೆಯಲ್ಲಿ ಹಳ್ಳದಲ್ಲಿ ತಾಯಿ ಹಾಗೂ ಇಬ್ಬರು ಮಕ್ಕಳು ಕೊಚ್ಚಿಹೋಗಿದ್ದಾರೆ.

ಯಾದಗಿರಿ, ಬೀದರ್ ಜಿಲ್ಲೆಯಲ್ಲಿ ಒಟ್ಟು 5 ಜಾನುವಾರು ಸಿಡಿಲು ಬಡಿದು ಮೃತಪಟ್ಟಿವೆ. ಯಾದಗಿರಿ ಜಿಲ್ಲೆಯ ಹುಣಸಗಿ, ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕುಗಳಲ್ಲಿ ರಾಶಿ ಹಾಕಿದ್ದ ಭತ್ತದ ಫಸಲು ಹಾನಿಯಾಗಿದೆ.

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಹೆಡಗಾಪುರ ಗ್ರಾಮದಲ್ಲಿ ಹಳ್ಳದಲ್ಲಿ ಸಿಲುಕಿದ ಸುನಂದಾ ಸಂಗಪ್ಪ (41), ಮಗ ಸುಮಿತ ಸಂಗಪ್ಪ (18), ಮಗಳು ಐಶ್ವರ್ಯ ಸಂಗಪ್ಪ (14) ನೀರಿನಲ್ಲಿ ಕೊಚ್ಚಿಹೋಗಿದ್ದಾರೆ. ಇವರ ಜತೆ ಇದ್ದ ತಂದೆ ಸಂಗಪ್ಪ ಈಜಾಡಿ ಬದುಕುಳಿದಿದ್ದಾರೆ. ಭಾನುವಾರ ಮಧ್ಯಾಹ್ನ ಹೊಲಕ್ಕೆ ಹೋಗಿದ್ದರು. ಸಂಜೆ ವಾಪಸು ಮನೆಗೆ ಹಳ್ಳ ದಾಟ ಬರುವಾಗ ಈ ಅವಘಡ ನಡೆದಿದೆ.

ಹುಮನಾಬಾದ್ ತಾಲ್ಲೂಕಿನಲ್ಲಿ ಸಿಡಿಲು ಬಡಿದು ಮೂರು ಎಮ್ಮೆಗಳು ಸಾವಿಗೀಡಾಗಿವೆ. ಬೀದರ್, ಕಮಲನಗರ, ಭಾಲ್ಕಿ, ಹುಮನಾಬಾದ್ ಹಾಗೂ ಚಿಟಗುಪ್ಪದಲ್ಲಿ ಅರ್ಧ ಗಂಟೆ ಮಳೆ ಅಬ್ಬರಿಸಿತು. ಚಿಟಗುಪ್ಪದಲ್ಲಿ ಮನೆ ಚಾವಣಿಯ ತಗಡುಗಳು ಹಾರಿಹೋಗಿವೆ. ಚಿಟಗುಪ್ಪಾ ಪ್ರಾಸ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಿತ್ತು.

ಯಾದಗಿರಿ ಜಿಲ್ಲೆಯ ಗೆದ್ದಲಮರಿ ಗ್ರಾಮದಲ್ಲಿ ಸಿಡಿಲು ಬಡಿದು ಹನುಮಪ್ಪ ಚಾವಣಿ ಎಂಬುವವರ ಆಕಳು ಮೃತಪಟ್ಟರೆ, ಕಕ್ಕೇರಾ ಪಟ್ಟಣದ ಸ್ವಾಮೀರದೊಡ್ಡಿಯಲ್ಲಿ ಎತ್ತು ಬಲಿಯಾಗಿದೆ.

ಖಟಕಚಿಂಚೋಳಿ ಹೋಬಳಿಯ ಮನೆ ಚಾವಣಿಯ ತಗಡು ಹಾರಿಹೋಗಿದ್ದರೆ, ದಾಡಗಿ ಗ್ರಾಮದಲ್ಲಿ ಬಿರುಗಾಳಿಗೆ ಶಾಲೆ ಆವರಣದಲ್ಲಿದ್ದ ಮರ ಉರುಳಿದೆ.

ಭತ್ತದ ಫಸಲು ಹಾನಿ: ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ಗ್ರಾಮಗಳಲ್ಲಿ ರಾಶಿ ಹಂತದಲ್ಲಿರುವ ಭತ್ತ ನೆಲಕ್ಕೆ ಬಿದ್ದಿದೆ. ವಜ್ಜಲ, ಚನ್ನೂರು, ಹುಣಸಗಿ, ಗೆದ್ದಲಮರಿ, ಮುದನೂರು, ಅರಕೇರಾ, ಅಗತೀರ್ಥ ಸೇರಿದಂತೆ ಇತರ ಗ್ರಾಮಗಳಲ್ಲಿ ರಾಶಿ ಮಾಡಿದ್ದ ಭತ್ತದ ಫಸಲು ನೀರು ನುಗ್ಗಿ ಹಾನಿಯಾಗಿದೆ.

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನಲ್ಲಿ ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ ವ್ಯಾಪ್ತಿಯ ರೈತರು ಭತ್ತ ಕಟಾವು ಮಾಡಿ ಒಣಹಾಕಿದ್ದ ಭತ್ತದ ರಾಶಿ ರಭಸದ ಮಳೆಗೆ ತೊಯ್ದಿದ್ದು ರೈತರು ಕಂಗಾಲಾಗಿದ್ದಾರೆ. ಕುರುಗೋಡಿನಲ್ಲಿ ಕೂಡ 2.7 ಸೆ.ಮೀ. ಮಳೆಯಾಗಿದ್ದು ಕಟಾವು ಮಾಡಿ ಒಣಹಾಕಿದ್ದ ಭತ್ತಕ್ಕೆ ಹಾನಿಯಾಗಿದೆ.

ಕಲಬುರಗಿ ನಗರದಲ್ಲಿ ಮಧ್ಯಾಹ್ನ ಹಾಗೂ ರಾತ್ರಿ ಬಿರುಸಿನ ಮಳೆಯಾಗಿದ್ದರಿಂದ ರಸ್ತೆಗಳಲ್ಲಿಯೂ ನೀರು ಹರಿದು ಸಂಚಾರ ಅಸ್ತವ್ಯಸ್ತವಾಯಿತು.

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ಬಳ್ಳಾರಿ ಜಿಲ್ಲೆ ಕಂಪ್ಲಿ, ಸಂಡೂರು, ಸಿರುಗುಪ್ಪ, ಕುರುಗೋಡುಗಳಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಬೆಳಿಗ್ಗೆ ಮಳೆಯಾಗಿದೆ. ಗುಳೇದಗುಡ್ಡದಲ್ಲಿ ಗುಡುಗು, ಆಲಿಕಲ್ಲು ಸಹಿತ ಮಳೆಯಾಯಿತು. ಪುರಸಭೆಯಿಂದ ಆವರಣದಲ್ಲಿದ್ದ ದೊಡ್ಡ ಮರ ಉರುಳಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಹಾಗೂ ಹೊಸದುರ್ಗ ತಾಲ್ಲೂಕಿನ ವಿವಿಧೆಡೆ ಶನಿವಾರ ರಾತ್ರಿ ಹಾಗೂ ಭಾನುವಾರ ಸುರಿದ ಮಳೆಗೆ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

ಹೊಳಲ್ಕೆರೆ ತಾಲ್ಲೂಕಿನ ಅವಿನಹಟ್ಟಿಯ ಲಕ್ಷ್ಮಿದೇವಿ ಅವರ ಮನೆಗೆ ನೀರು ನುಗ್ಗಿದ್ದು, ಬಾಣಂತಿ ಹಾಗೂ ಮಗು ಸಂಕಷ್ಟಕ್ಕೆ ಸಿಲುಕಿದ್ದರು. ಮನೆಯಲ್ಲಿದ್ದ ಧಾನ್ಯಗಳು ಹಾಗೂ ಅಗತ್ಯ ವಸ್ತುಗಳು ನೀರು ಪಾಲಾಗಿವೆ.

ಹೊಸದುರ್ಗ ತಾಲ್ಲೂಕಿನ ಹೊನ್ನೇನಹಳ್ಳಿಯ ಶಾಂತಮ್ಮ ಅವರ ಮನೆಯ ಗೋಡೆ ಕುಸಿದಿದೆ. ಹೊಸದುರ್ಗದಲ್ಲಿ 50 ಮಿ.ಮೀ, ಹೊಳಲ್ಕೆರೆಯಲ್ಲಿ 48 ಮಿ.ಮೀ ಮಳೆಯಾಗಿ ಸುರಿದಿರುವುದು ದಾಖಲಾಗಿದೆ.

ದಾವಣಗೆರೆ ಜಿಲ್ಲೆಯ ಹರಿಹರ, ಚನ್ನಗಿರಿ ತಾಲ್ಲೂಕುಗಳ ವಿವಿಧೆಡೆ ಭಾನುವಾರ ಸಂಜೆ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ಸುತ್ತಮುತ್ತ ಭಾನುವಾರ ಸಂಜೆ ಅರ್ಧ ತಾಸು ಗುಡುಗು ಸಹಿತ ಜೋರು ಮಳೆಯಾಗಿದೆ.



ಬೀದರ್ ಜಿಲ್ಲೆ ಚಿಟಗುಪ್ಪ ತಾಲ್ಲೂಕಿನ ಹೆಡಗಾಪುರ ಬಳಿ ಹಳ್ಳವು ತುಂಬಿ ಹರಿದಿದ್ದರಿಂದ ಭಾನುವಾರ ರಸ್ತೆ ಸಂಪರ್ಕ ಕಡಿತಗೊಂಡಿತ್ತು

ಎರಡು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಇನ್ನೂ ಎರಡು ದಿನ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಜತೆಗೆ, ಅಲ್ಲಲ್ಲಿ ಪ್ರತಿಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಕಲಬುರಗಿ, ರಾಯಚೂರು, ಯಾದಗಿರಿ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಚಿತ್ರದುರ್ಗ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಯ ಕೆಲವೆಡೆ ಸೋಮವಾರ ಹಾಗೂ ಮಂಗಳವಾರ ಭಾರಿ ಮಳೆಯಾಗಲಿದೆ ಎಂದು ಐಎಂಡಿ ಸೂಚನೆ ನೀಡಿದೆ.

ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆಯಲ್ಲಿ ಹಾಸನದ ಕೊಣನೂರಿನಲ್ಲಿ 8 ಸೆಂ.ಮೀ, ಯಾದಗಿರಿಯ ಕಕ್ಕೇರಿಯಲ್ಲಿ 7 ಸೆಂ.ಮೀ, ಚಿಕ್ಕಮಗಳೂರು ಜಿಲ್ಲೆಯ ಶಿವನಿ 6, ವಿಜಯಪುರದ ಆಲಮಟ್ಟಿ, ಚಿತ್ರದುರ್ಗದ ಹೊಸದುರ್ಗ, ತುಮಕೂರಿನ ಗುಬ್ಬಿ, ಮಂಡ್ಯದ ಶ್ರೀರಂಗಪಟ್ಟಣದಲ್ಲಿ ತಲಾ 5, ಕೊಪ್ಪಳದ ತಾವರಗೇರಾ, ರಾಯಚೂರಿನ ಸಿಂಧನೂರು- ಮುದಗಲ್, ಹಾಸನದ ಶ್ರವಣಬೆಳಗೊಳದಲ್ಲಿ ತಲಾ 4 ಸೆಂ.ಮೀ ಮಳೆ ಸುರಿದಿದೆ.



ದುಡಿಮೆಗಿಲ್ಲ ಬಿಡುವು

ಕಲಬುರಗಿಯ ಹೈಕೋರ್ಟ್ ಬಳಿ ಭಾನುವಾರ ಇಟ್ಟಿಗೆ ಭಟ್ಟಿಯಲ್ಲಿ ಕಾರ್ಮಿಕರು ತಳ್ಳುಗಾಡಿಯಲ್ಲಿ ಇಟ್ಟಿಗೆಯನ್ನು ತುಂಬಿಕೊಂಡು ಹೋಗುವ ದೃಶ್ಯ ಕ್ಯಾಮೆರಾದ ಕಣ್ಣಿಗೆ ಕಾಣಿಸಿದ್ದು ಹೀಗೆ –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಸುದ್ದಿ 2 ನಿಮಿಷ

ಏರ್ ಇಂಡಿಯಾ ಸಿಇಒಗೆ ಡಿಜಿಸಿಎ ಷೋಕಾಸ್ ನೋಟಿಸ್

ನವದೆಹಲಿ: ಪೈಲಟ್‌ವೊಬ್ಬರು ವಿಮಾನದ ಕಾಕ್‌ಪಿಟ್‌ಗೆ ತನ್ನ ಸ್ನೇಹಿತೆಯನ್ನು ಕರೆದುಕೊಂಡು ಭದ್ರತಾ ನಿಯಮ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಏರ್ ಇಂಡಿಯಾ ಸಂಸ್ಥೆಯ ಸಿಇಒ ಮತ್ತು ಭದ್ರತಾ ವಿಭಾಗದ ಮುಖ್ಯಸ್ಥರಿಗೆ ನಾಗರಿಕ ವಿಮಾನಯಾನ ಮಹಾ-ನಿರ್ದೇಶನಾಲಯವು (ಡಿಜಿಸಿಎ) ಷೋಕಾಸ್ ನೋಟಿಸ್ ನೀಡಿದೆ.

ಫೆಬ್ರುವರಿ 27ರಂದು ದುಬೈನಿಂದ ದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ಪೈಲಟ್‌ವೊಬ್ಬರು ತಮ್ಮ ಸ್ನೇಹಿತೆಯನ್ನು ಕಾಕ್‌ಪಿಟ್‌ಗೆ ಕರೆದುಕೊಂಡಿದ್ದರು. ಈ ಬಗ್ಗೆ ವಿಮಾನದ ಸಿಬ್ಬಂದಿ ಡಿಜಿಸಿಎಗೆ ದೂರು ಸಲ್ಲಿಸಿದ್ದರು.

ಆದರೆ, ಇಂತಹದ್ದೇನೂ ನಡೆದಿಲ್ಲ ಎಂದು ಏರ್ ಇಂಡಿಯಾ ಹೇಳಿತ್ತು. ಈ ಕುರಿತು ನಿರ್ದೇಶನಾಲಯವು ಏಪ್ರಿಲ್ 21ರಂದು ತನಿಖೆ ನಡೆಸಿತ್ತು. ಬಳಿಕ ಸಂಸ್ಥೆಯು ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು ಆಂತರಿಕ ತನಿಖೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿತ್ತು.

ಘಟನೆ ಬಗ್ಗೆ ಸಕಾಲಕ್ಕೆ ಮಾಹಿತಿ ನೀಡದ ಮುಚ್ಚಿಟ್ಟ ಆರೋಪದ ಮೇಲೆ ಏರ್ ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ಮತ್ತು ಭದ್ರತಾ ವಿಭಾಗದ ಮುಖ್ಯಸ್ಥ ಹೆನ್ರಿ ಡೊನೊಹೊ ಅವರಿಗೆ ಮಾರ್ಚ್ 3ರಂದೇ 'ಇ-ಮೇಲ್' ಮೂಲಕ ಷೋಕಾಸ್ ನೋಟಿಸ್ ನೀಡಲಾಗಿದೆ. ಈ ಬಗ್ಗೆ ಏರ್ ಇಂಡಿಯಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ತನಿಖೆ ಪೂರ್ಣಗೊಳ್ಳುವವರೆಗೆ ದುಬೈ-ದೆಹಲಿ ವಿಮಾನದ ಎಲ್ಲಾ ಸಿಬ್ಬಂದಿಯನ್ನು ಕೆಲಸದಿಂದ ಹೊರಗಿಡಲಾಗಿದೆ ಎಂದು ಡಿಜಿಸಿಎ ಏರ್ ಇಂಡಿಯಾಕ್ಕೆ ತಾಕೀತು ಮಾಡಿತ್ತು.



ಪೂಂಛ್ ದಾಳಿ: ವಿಚಾರಣೆಗಾಗಿ ಧಾರ್ಮಿಕ ಮುಖಂಡ ವಶಕ್ಕೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಸೇನೆಯ ವಾಹನದ ಮೇಲೆ ಈಚೆಗೆ ದಾಳಿ ನಡೆಸಿ ಐವರು ಯೋಧರ ಸಾವಿಗೆ ಕಾರಣರಾದ ದಾಳಿಕೋರರು ಇನ್ನೂ ಪೊಲೀಸರಿಗೆ ಸೆರೆ ಸಿಕ್ಕಿಲ್ಲ. ಇದರಿಂದ, ತನಿಖೆ ಸಲುವಾಗಿ ಧಾರ್ಮಿಕ ಮುಖಂಡರೊಬ್ಬರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಮರ್ಕಝ್- ಉಲ್- ಮಾರಿಫ್ ಮದ್ರಸಾದ ಮೌಲ್ವಿ ಮನ್ಜೂರ್ ಅವರಿಗೆ ದಾಳಿಕೋರರ ಜೊತೆ ಸಂಪರ್ಕವಿರುವ ಶಂಕೆ ಮೇಲೆ ಪೊಲೀಸರು ಅವರನ್ನು ಜಮ್ಮು ನಗರದಿಂದ ಬಂಧಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ. ಆದರೆ, ಈ ಬಂಧನದ ಕುರಿತು ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಮೂಲಗಳ ಪ್ರಕಾರ, ಪ್ರಕರಣದಲ್ಲಿ ಈಗಾಗಲೇ ಬಂಧನಕ್ಕೆ ಒಳಗಾದವರನ್ನು ತನಿಖೆಗೆ ಒಳಪಡಿಸಿದ ವೇಳೆ ಮೌಲ್ವಿ ಮನ್ಜೂರ್ ಅವರ ಹೆಸರು ಹೊರಬಿದ್ದಿದೆ. ಹೀಗಾಗಿ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಏಳು ಮಂದಿಯನ್ನು ಬಂಧಿಸಲಾಗಿದೆ. ವಶಕ್ಕೆ ತೆಗೆದುಕೊಳ್ಳಲಾದ ಉಳಿದವರನ್ನು ತನಿಖೆ ಬಳಿಕ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮನು ಬಳಿಗಾರ್ ಸೇರಿ ಆರು ಮಂದಿಗೆ 'ಕಸಾಪ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವಿವಿಧ ದತ್ತಿ ಪ್ರಶಸ್ತಿಗಳನ್ನು ಘೋಷಿಸಿದ್ದು, 'ಶತಮಾನೋತ್ಸವ ದತ್ತಿ ಪ್ರಶಸ್ತಿ'ಗೆ ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಸಾಧಕರನ್ನು ಆಯ್ಕೆ ಮಾಡಿದೆ. 'ಶತಮಾನೋತ್ಸವ ದತ್ತಿ ಪ್ರಶಸ್ತಿ' ₹ 50 ಸಾವಿರ ನಗದು ಒಳಗೊಂಡಿದೆ. ಕಸಾಪ ಸಿಬ್ಬಂದಿಗೆ ಮೀಸಲಿಟ್ಟಿರುವ 'ಎನ್.ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ'ಗೆ ಎಚ್. ಮಂಜುಳಾ, 'ವಿ.ಗೌರಮ್ಮ ಗಂಗಾಧರಯ್ಯ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿ'ಗೆ ಎನ್. ಕೃಷ್ಣಮೂರ್ತಿ, ಎ.ಅಮರನಾಥ್, ನಾ.ಚಕ್ರಪಾಣಿ ಹಾಗೂ ಕೆ.ರಾಮೇಗೌಡ ಆಯ್ಕೆಯಾಗಿದ್ದಾರೆ.

ಮೇ 5ರಂದು ನಡೆಯುವ ಪರಿಷತ್ತಿನ ಸಂಸ್ಥಾಪನಾ ದಿನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.




ಮನು ಬಳಿಗಾರ್



ಎನ್.ಕೃಷ್ಣಮೂರ್ತಿ



ಕೆ. ರಾಮೇಗೌಡ



ನಾ. ಚಕ್ರಪಾಣಿ



ಎ. ಅಮರನಾಥ್



ಮಂಜುಳಾ

ಸುಡಾನ್ ತಲುಪಿದ ರೆಡ್ ಕ್ರಾಸ್ ವಿಮಾನ

ಖಾರ್ಟೂಮ್ (ಎಎಫ್‌ಪಿ): ಸಂಘರ್ಷಪೀಡಿತ ಸುಡಾನ್‌ನಲ್ಲಿ ಆಸ್ಪತ್ರೆಗಳಿಗೆ ಬೇಕಾದ ಸಲಕರಣೆಗಳಿದ್ದ ರೆಡ್ ಕ್ರಾಸ್‌ನ ಮೊದಲ ವಿಮಾನವು ಭಾನುವಾರ ಇಲ್ಲಿಗೆ ಬಂದಿಳಿಯಿತು.

'ಸುಡಾನ್ ಆಸ್ಪತ್ರೆಗೆ ಅಗತ್ಯವಿರುವ ಸಲಕರಣೆಗಳು ಸೇರಿದಂತೆ ಎಂಟು ಟನ್ ವಸ್ತುಗಳನ್ನು ತಲುಪಿಸಲಾಯಿತು' ಎಂದು ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ ತಿಳಿಸಿದೆ.

ಸಂಘರ್ಷದಿಂದ ಈವರೆಗೆ 500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ, ಸಾವಿರಾರು ಜನರು ಗಾಯಗೊಂಡಿದ್ದಾರೆ. ಹತ್ತು ಸಾವಿರಕ್ಕೂ ಅಧಿಕ ಮಂದಿ ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ರಾಜಧಾನಿ ಖಾರ್ಟೂಮ್‌ನಲ್ಲಿ ಶೇ 16ರಷ್ಟು ಆಸ್ಪತ್ರೆಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ ನೀಡಿದೆ.



ಆಸ್ಪತ್ರೆಗಳಿಗೆ ಬೇಕಾದ ಸಲಕರಣೆಗಳಿದ್ದ ರೆಡ್ ಕ್ರಾಸ್‌ನ ಸಂಸ್ಥೆಯ ವಿಮಾನವು ಭಾನುವಾರ ಪೋರ್ಟ್ ಸುಡಾನ್‌ಗೆ ಬಂದಿಳಿಯಿತು –ಎಎಫ್‌ಪಿ ಚಿತ್ರ

ನೆಲಮಹಡಿಯಲ್ಲಿ ಆಶ್ರಯ: ಹಿಮಾಚಲ ನಿವಾಸಿ

ಹಮೀರ್‌ಪುರ್, ಹಿಮಾಚಲ ಪ್ರದೇಶ (ಪಿಟಿಐ): 'ನಿರಂತರವಾಗಿ ಬಾಂಬ್ ದಾಳಿ, ಗುಂಡಿನ ಶಬ್ದಗಳು ಕೇಳಿಬರುತ್ತಿದ್ದವು. ನಾವು ಏಳು ಮಂದಿ ಕಟ್ಟಡ ನೆಲಮಹಡಿಯ ಕೊಠಡಿಯಲ್ಲಿ ಅವಿತಿದ್ದೆವು. ಭಯ ಆವರಿಸಿತ್ತು' ಎಂದು ಸ್ಥಳೀಯ ನಿವಾಸಿ ದೀಪಕ್ ಅಗ್ನಿಹೋತ್ರಿ ಸುಡಾನ್‌ನಲ್ಲಿ ಕಳೆದ ದಿನಗಳನ್ನು ಸ್ಮರಿಸಿದರು.

ಆಪರೇಷನ್ ಕಾವೇರಿ ಅಂಗವಾಗಿ ಇಲ್ಲಿಗೆ ಬಂದಿಳಿದ 26 ವರ್ಷದ ದೀಪಕ್, 'ಭಾರತ ರಾಯಭಾರ ಕಚೇರಿ ಜೊತೆಗೆ ಸಂಪರ್ಕದಲ್ಲಿದ್ದೆವು. ಹೊರತೆರಳಲು ಅನುಮೋದನೆ ಸಿಕ್ಕ ಬಳಿಕ, ದೋಣಿಯಲ್ಲಿ ಜಿದ್ದಾಗೆ ತಲುಪಿದೆವು' ಎಂದರು. ಇವರು ಸುಡಾನ್‌ನ ಐ.ಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು.

'ಸಂಘರ್ಷ ಆರಂಭವಾದ ಮೊದಲಿಗೆ ನಾವು ನಮ್ಮ ವಸತಿ ಸಂಕೀರ್ಣದಲ್ಲಿಯೇ ಇದ್ದೆವು. ಪರಿಸ್ಥಿತಿ ಗಂಭೀರವಾದಂತೆ ಲಭ್ಯವಿದ್ದ ಅಗತ್ಯ ವಸ್ತುಗಳೊಂದಿಗೆ ನೆಲಮಹಡಿಯ ಕೊಠಡಿ ಸೇರಿಕೊಂಡೆವು. ಒಂದು ಹಂತದಲ್ಲಿ ನೀರು, ಅಡುಗೆ ಅನಿಲ, ಆಹಾರದ ಕೊರತೆಯಾಗಿ ಬದುಕುವುದೇ ಕಷ್ಟವಾಗಿತ್ತು' ಎಂದರು.

'ಸುಪ್ರೀಂ': ದೇಶದ್ರೋಹ ಕಾಯ್ದೆ ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ಇಂದು

ನವದೆಹಲಿ (ಪಿಟಿಐ): ವಸಾಹತುಶಾಹಿ ಅವಧಿಯ ದೇಶದ್ರೋಹ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಸೋಮವಾರ ನಡೆಸಲಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ನೇತೃತ್ವದ ನ್ಯಾಯಪೀಠವು ಈ ಅರ್ಜಿಗಳನ್ನು ವಿಚಾರಣಾ ಪಟ್ಟಿಗೆ ಸೇರಿಸಿದ್ದು, ಸುಪ್ರೀಂಕೋರ್ಟ್ ವೆಬ್‌ಸೈಟ್‌ನಲ್ಲಿ ಈ ಕುರಿತು ಪ್ರಕಟಿಸಲಾಗಿದೆ.



ಎಡಿಟರ್ಸ್ ಗಿಲ್ಡ್, ನಿವೃತ್ತ ಮೇಜರ್ ಜನರಲ್ ಎಸ್.ಜಿ. ವೊಂಬತ್ಕೆರೆ, ಕೇಂದ್ರದ ಮಾಜಿ ಸಚಿವ ಅರುಣ್ ಶೌರಿ, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಲ್ಲಿಸಿರುವುದು ಸೇರಿದಂತೆ ಒಟ್ಟು 16 ಅರ್ಜಿಗಳು ವಿಚಾರಣೆಗಾಗಿ ನ್ಯಾಯಪೀಠದ ಮುಂದಿವೆ.

ಕಾಯ್ದೆಯಲ್ಲಿನ ವಿವಾದಾಸ್ಪದ ನಿಬಂಧನೆಗಳ ಪರಿಷ್ಕರಣೆಗೆ ಸಂಬಂಧಿಸಿ ಕೈಗೊಂಡಿರುವ ಕ್ರಮಗಳ ಕುರಿತು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ವಿವರಿಸುವ ನಿರೀಕ್ಷೆ ಇದೆ.

ದೇಶದ್ರೋಹ ಕಾಯ್ದೆ ಬಳಸದಂತೆ ಹಾಗೂ ಕಾಯ್ದೆಯಡಿ ಎಫ್‌ಐಆರ್‌ಗಳನ್ನು ದಾಖಲಿಸದಂತೆ ನಿರ್ದೇಶನ ನೀಡಿ ಸುಪ್ರೀಂಕೋರ್ಟ್ ಕಳೆದ ವರ್ಷ ಅಕ್ಟೋಬರ್ 31ರಂದು ಆದೇಶಿಸಿತ್ತು. ಕಾಯ್ದೆ ಪರಿಷ್ಕರಣೆಗೆ ಹೆಚ್ಚುವರಿ ಕಾಲಾವಕಾಶವನ್ನು ನೀಡಿತ್ತು.

ಬಿಜೆಪಿ ವಿರುದ್ಧ ವಿಪಕ್ಷದ ಅಭ್ಯರ್ಥಿ: ಅಪಸ್ವರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ವಿರೋಧ ಪಕ್ಷಗಳ ವತಿಯಿಂದ ಒಬ್ಬ ಹುರಿಯಾಳನ್ನು ಮಾತ್ರ ಕಣಕ್ಕಿಳಿಸಬೇಕು ಎಂಬ ಜೆಡಿಯು ವರಿಷ್ಠ ನಿತೀಶ್ ಕುಮಾರ್ ಹಾಗೂ ಇತರ ಪಕ್ಷಗಳ ಪ್ರಸ್ತಾವಕ್ಕೆ ಸಿಪಿಎಂ ಸಹಮತ ವ್ಯಕ್ತಪಡಿಸಿಲ್ಲ.

ಶನಿವಾರ ಮುಕ್ತಾಯವಾದ ಸಿಪಿಎಂನ ಕೇಂದ್ರೀಯ ಸಮಿತಿಯ 3 ದಿನಗಳ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದೆ. ಪಕ್ಷವು ಭಾನುವಾರ ಪ್ರಕಟಣೆಯನ್ನು ಬಿಡುಗಡೆ ಮಾಡಿದ್ದು, ಸಭೆಯಲ್ಲಿ ಚರ್ಚೆಯಾದ ವಿಷಯಗಳ ಮಾಹಿತಿ ನೀಡಿದೆ.

'ಬಿಜೆಪಿಯನ್ನು ಸೋಲಿಸುವುದು ನಮ್ಮ ಮುಖ್ಯ ಗುರಿ. ಈ ಗುರಿ ಸಾಧನೆಗಾಗಿ ಜಾತ್ಯತೀತ ತತ್ವದಲ್ಲಿ ನಂಬಿಕೆ ಇರುವ ವಿಪಕ್ಷಗಳಿಗೆ ಸಹಕಾರ ನೀಡಲು ಹಾಗೂ ಅವುಗಳೊಂದಿಗೆ ಕೆಲಸ ಮಾಡಲು ಪಕ್ಷ ಸಿದ್ಧವಿದೆ' ಎಂದು ಸಿಪಿಎಂ ತಿಳಿಸಿದೆ.

'ಆಯಾ ರಾಜ್ಯಗಳಲ್ಲಿನ ಸನ್ನಿವೇಶಗಳನ್ನು ಅವಲೋಕಿಸಿದ ನಂತರ, ಬಿಜೆಪಿ ವಿರೋಧಿ ಮತಗಳು ಹೆಚ್ಚಿನ ಪ್ರಮಾಣದಲ್ಲಿ ಚಲಾವಣೆ ಆಗುವಂತೆ ಮಾಡಬೇಕು' ಎಂದು ಸಿಪಿಎಂ ಪ್ರತಿಪಾದಿಸಿದೆ. ಆ ಮೂಲಕ, ಬಿಜೆಪಿ ವಿರುದ್ಧ ವಿಪಕ್ಷಗಳ ಪಾಳೆಯದಿಂದ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು ಎಂಬ ಬಗ್ಗೆ ಒಪ್ಪಿಗೆ ಇಲ್ಲ ಎಂಬ ಸಂದೇಶವನ್ನು ರವಾನಿಸಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ನೀಟ್ ಪುಸ್ತಕ ಖರೀದಿಗೆ ನೆರವು ಬಳಕೆ



ಶೈಕ್ಷಣಿಕ ನೆರವು ನೀಡಿದ್ದು ಅನುಕೂಲವಾಗಿದೆ. ಶೃಂಗೇರಿಯ ಬಿಜಿಎಸ್ ಪಿಯು ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ.

ನೆರವಿನ ಹಣವನ್ನು 'ನೀಟ್' ಪರೀಕ್ಷೆ ಸಂಬಂಧಿತ ಪುಸ್ತಕಗಳನ್ನು ಖರೀದಿಸಲು ಬಳಸಿಕೊಂಡಿದ್ದೇನೆ. ಲೇಖನ ಸಾಮಗ್ರಿ ಖರೀದಿಸಿದ್ದೇನೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡುವುದರಿಂದ ಶೈಕ್ಷಣಿಕ ಸಾಧನೆಗೆ ಪ್ರೇರಣೆಯಾಗುತ್ತದೆ.

ಶಮಾ ಎಸ್. ಶೆಟ್ಟಿ, ಚಿಕ್ಕಮಗಳೂರು ಜಿಲ್ಲೆ

'ಶುಲ್ಕ ಭರಿಸಲು ನೆರವಾಯಿತು'



ಸ್ನೇಹಾ ಜೆ.

'ಪ್ರಜಾವಾಣಿ' ಪತ್ರಿಕೆಯ ವಿದ್ಯಾರ್ಥಿ ವೇತನ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಮಕ್ಕಳು ಶಿಕ್ಷಣ ಮುಂದುವರಿಸಲು ಸಹಕಾರಿಯಾಗಿದೆ.

ಸಕಾಲಕ್ಕೆ ದೊರೆತ ವಿದ್ಯಾರ್ಥಿ ವೇತನದಿಂದ ಕಾಲೇಜಿನ ಶುಲ್ಕ ಭರಿಸಲು ನೆರವಾಯಿತು. ಅಗತ್ಯ ಸಂದರ್ಭದಲ್ಲಿ ಸಿಕ್ಕ ಆರ್ಥಿಕ ನೆರವಿನಿಂದ ತುಂಬಾ ಖುಷಿಯಾಯಿತು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ್ದು ನನ್ನಂತೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದ ಪ್ರಯೋಜನ ಪಡೆದುಕೊಳ್ಳಬೇಕು. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ಮುಂದುವರಿಯಲಿ.

ಸ್ನೇಹಾ ಜೆ., ಪಡುಬಿದ್ರಿ.

ಗಡಚಿರೋಲಿ: ಗುಂಡಿನ ಚಕಮಕಿ– ಮೂವರು ನಕ್ಸಲರ ಹತ್ಯೆ

ಗಡಚಿರೋಲಿ, ಮಹಾರಾಷ್ಟ್ರ (ಪಿಟಿಐ): ಜಿಲ್ಲೆಯ ಕೇಳಮಾರಾ ಅರಣ್ಯದಲ್ಲಿ ಭಾನುವಾರ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ನಕ್ಸಲರನ್ನು ಪೊಲೀಸರು ಹೊಡೆದುರುಳಿಸಿದ್ದಾರೆ.

'ಹತ್ಯೆಯಾದ ನಕ್ಸಲರನ್ನು ಪೆರಿಮಿಲಿ ದಳಂನ ಕಮಾಂಡರ್ ಬಿಟ್ಲು ಮದವಿ, ವಾಸು ಹಾಗೂ ಆಹೇರಿ ದಳಂನ ಶ್ರೀಕಾಂತ ನರೋಟೆ ಎಂದು ಗುರುತಿಸಲಾಗಿದೆ' ಎಂದು ಗಡಚಿರೋಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೀಲೋತ್ಪಲ್ ಹೇಳಿದ್ದಾರೆ.

ತೆಲಂಗಾಣ: ಹೊಸ ಸಚಿವಾಲಯ ಕಟ್ಟಡ ಉದ್ಘಾಟನೆ

ಹೈದರಾಬಾದ್ (ಪಿಟಿಐ): ತೆಲಂಗಾಣ ರಾಜಧಾನಿ ಹೈದರಾಬಾದ್‌ನಲ್ಲಿ ನಿರ್ಮಿಸಲಾಗಿರುವ ನೂತನ ಸಚಿವಾಲಯ ಕಟ್ಟಡ 'ಡಾ.ಬಿ.ಆರ್. ಅಂಬೇಡ್ಕರ್ ತೆಲಂಗಾಣ ಸಚಿವಾಲಯ ಭವನ'ವನ್ನು ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಭಾನುವಾರ ಇಲ್ಲಿ ಉದ್ಘಾಟಿಸಿದರು.

265 ಅಡಿ ಎತ್ತರದ ಈ ಕಟ್ಟಡದ ನಿರ್ಮಾಣ ವಲಯದ ವಿಸ್ತೀರ್ಣ 10,51,676 ಚದರ ಅಡಿಗಳಾಗಿದೆ. ಸಚಿವಾಲಯ ಕಟ್ಟಡ ಒಳಗೊಂಡಿರುವ ಭೂಮಿಯು ಒಟ್ಟು ವಿಸ್ತೀರ್ಣ 28 ಎಕರೆಗಳಾಗಿದೆ.

ದೇಶದಲ್ಲಿಯೇ ಅತಿ ಎತ್ತರದ ಸಚಿವಾಲಯ ಕಟ್ಟಡ ಇದಾಗಿದೆ. ನಿಜಾಮಾಬಾದ್‌ನ ಕಾಕತೀಯ ಆಡಳಿತಾವಧಿಯ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದ ಗೋಪುರವನ್ನು ಹೋಲುವಂತೆ ಕಟ್ಟಡದ ಗೋಪುರಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸರ್ಕಾರ ಬಿಡುಗಡೆ ಮಾಡಿರುವ ಪ್ರಕಟಣೆ ತಿಳಿಸಿದೆ.

ಅಲ್ಪಸಂಖ್ಯಾತರ ಓಲೈಕೆಗಾಗಿ ಸಚಿವಾಲಯದ ಗೋಪುರಗಳನ್ನು ಇಸ್ಲಾಂ ಪರಂಪರೆಯಂತೆ ನಿರ್ಮಿಸಲಾಗಿದೆ. ಅವುಗಳನ್ನು ಕೆಡವಿ ಹೊಸದಾಗಿ ನಿರ್ಮಿಸಿದ ನಂತರ ಸಚಿವಾಲಯ ಪ್ರವೇಶಿಸುತ್ತೇನೆ ಎಂದು ಬಿಜೆಪಿಯ ತೆಲಂಗಾಣ ಘಟಕದ ಅಧ್ಯಕ್ಷ ಬಂಡಿ ಸಂಜಯ ಹೇಳಿದ್ದಾರೆ.

ಪ್ರಚಾರ ಅಬ್ಬರ: ಬೈಗುಳವೇ ಜೋಗುಳ

ಒಂದನೇ ಪುಟದಿಂದ...

ಕೋಲಾರದ ಕೆಂದಟ್ಟಿ ಗೇಟ್, ಹಾಸನದ ಬೇಲೂರಿನ ಜೆ. ಸೂರಾಪುರ ಮತ್ತು ಚನ್ನಪಟ್ಟಣದಲ್ಲಿ ನಡೆದ ಬಿಜೆಪಿ ಪ್ರಚಾರ ಸಮಾವೇಶಗಳಲ್ಲಿ ಮಾತನಾಡಿದ ಮೋದಿ ಅವರು ಕಾಂಗ್ರೆಸ್ ಮತ್ತು ಜೆಡಿಎಸ್ ಅನ್ನು ಟೀಕಿಸಿದರು. ಎರಡೂ ಪಕ್ಷಗಳು ಕುಟುಂಬ ರಾಜಕಾರಣ ಮಾಡುತ್ತವೆ, ಎರಡೂ ಪಕ್ಷಗಳಲ್ಲಿ ಹೈಕಮಾಂಡ್ ಸಂಸ್ಕೃತಿ ಇದೆ ಎಂದು ಮೋದಿ ಟೀಕಿಸಿದರು.

'ಜೆಡಿಎಸ್‌ಗೆ ನೀಡುವ ಪ್ರತಿ ಮತವೂ ಕಾಂಗ್ರೆಸ್‌ಗೆ ಹೋಗುತ್ತದೆ. ಕಾಂಗ್ರೆಸ್‌ಗೆ ಮತ ಹಾಕಿದರೆ, ರಾಜ್ಯವನ್ನು ರಿವರ್ಸ್ ಗೇರ್‌ನಲ್ಲಿ ಕೊಂಡೊಯ್ದಂತೆ. ಅಭಿವೃದ್ಧಿಗೆ ಬ್ರೇಕ್ ಹಾಕಿದಂತೆ. ರಾಜ್ಯದಲ್ಲಿ ದಶಕಗಳಿಂದ ನಡೆದುಕೊಂಡು ಬರುತ್ತಿರುವ ಅಪವಿತ್ರ ಮೈತ್ರಿ ರಾಜಕಾರಣವನ್ನು ನಿರ್ಮೂಲನೆ ಮಾಡಬೇಕು. ಜೆಡಿಎಸ್–ಕಾಂಗ್ರೆಸ್ ಎರಡೂ ಅಸ್ಥಿರತೆಯ ಪ್ರತೀಕ. ಯಾವ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆಯೋ ಅಲ್ಲಿ, ಪಕ್ಷದ ಆಂತರಿಕ ಕಚ್ಚಾಟವೇ ಪ್ರಧಾನವಾಗಿದೆ. ಇದರಿಂದ ಅಭಿವೃದ್ಧಿ ಸ್ಥಗಿತವಾಗಿದೆ. ಗ್ಯಾರಂಟಿಗಳು ನೆಲಕಚ್ಚಿವೆ' ಎಂದು ಲೇವಡಿ ಮಾಡಿದರು.

'ಕಾಂಗ್ರೆಸ್‌ನ ಬಿ ಟೀಂ ಜೆಡಿಎಸ್ ಕೂಡ ಅಧಿಕಾರದ ಕನಸು ಕಾಣುತ್ತಿದೆ. 18-20 ಸೀಟುಗಳನ್ನು ಪಡೆದು, ಅಧಿಕಾರದ ಭಾಗವಾಗಬೇಕು ಎಂಬ ಹವಣಿಕೆ ಹೊಂದಿದೆ. ಮೇಲ್ನೋಟಕ್ಕೆ ಪರಸ್ಪರ ವಿರೋಧಿಗಳು ಎಂದು ಬಿಂಬಿಸುತ್ತಿರುವ ಕಾಂಗ್ರೆಸ್–ಜೆಡಿಎಸ್ ವಾಸ್ತವದಲ್ಲಿ ಒಂದೇ ಆಗಿವೆ. ಕಾಂಗ್ರೆಸ್–ಜೆಡಿಎಸ್ ಮಧ್ಯೆ ಒಂದು ವಿಚಿತ್ರ ಸಾಮ್ಯ ಇದೆ. ಕಾಂಗ್ರೆಸ್ ಅಭ್ಯರ್ಥಿ, ಮುಖ್ಯಮಂತ್ರಿ ಸೇರಿದಂತೆ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ದೆಹಲಿಯ ಕುಟುಂಬವನ್ನು ಕೇಳಬೇಕಾಗುತ್ತದೆ. ಆ ಕುಟುಂಬದ ಎದುರು ಮಂಡಿಯೂರಿದವರೇ ಆ ಪಕ್ಷದಲ್ಲಿ ಉಳಿಯಬಹುದು. ಅದೇ ರೀತಿ ರಾಜ್ಯದಲ್ಲಿ ಇನ್ನೊಂದು ಪಕ್ಷವು, ಒಂದು ಪರಿವಾರದ ಪ್ರೈವೇಟ್ ಲಿಮಿಟೆಡ್ ಪಕ್ಷವಾಗಿದೆ' ಎಂದು ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

'ಶೇ 85 ಕಮಿಷನ್': 'ಅವರದ್ದೇ ಪಕ್ಷದ ಮಾಜಿ ಪ್ರಧಾನಿ (ರಾಜೀವ್ ಗಾಂಧಿ) ಫಲಾನುಭವಿಗಳಿಗೆ ಎಷ್ಟು ಹಣ ತಲುಪುತ್ತದೆ ಎಂಬುದನ್ನು ವಿವರಿಸಿದ್ದರು. ಕೇಂದ್ರದಿಂದ ₹1 ಬಿಡುಗಡೆಯಾದರೆ ಫಲಾನುಭವಿಗಳಿಗೆ ತಲುಪುವುದು 15 ಪೈಸೆ ಮಾತ್ರ ಎಂದಿದ್ದರು. ಇದರ ಅರ್ಥ ಶೇ 85 ಕಮಿಷನ್ ತಿನ್ನುವ ಸರ್ಕಾರವಿದ್ದರೆ ಅದು ಕಾಂಗ್ರೆಸ್ ಆಡಳಿತದ ಸರ್ಕಾರ. ಇಂಥ ಸರ್ಕಾರ ಮತ್ತೆ ಅಧಿಕಾರ ಹಿಡಿದರೆ ರಾಜ್ಯದ ಅಭಿವೃದ್ಧಿ ಸಾಧ್ಯವೇ' ಎಂದು ಅವರು ಪ್ರಶ್ನಿಸಿದರು.

ಕಾಂಗ್ರೆಸ್‌ನದ್ದು ಔಟ್‌ಡೇಟೆಡ್ (ವಾಯಿದೆ ಮುಗಿದ) ಗುಜರಿ ಎಂಜಿನ್. ಈ ಎಂಜಿನ್ ಇಟ್ಟುಕೊಂಡರೆ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ. ಕೇಂದ್ರದ ಎಂಜಿನ್‌ನಷ್ಟೇ ಸಾಮರ್ಥ್ಯದ ಎಂಜಿನ್ ಅನ್ನು ರಾಜ್ಯದಲ್ಲಿ ಸ್ಥಾಪಿಸಬೇಕಿದೆ. ಕರ್ನಾಟಕವನ್ನು ನಂಬರ್ ಒನ್ ರಾಜ್ಯ ಮಾಡುವುದು ಬಿಜೆಪಿ ಸಂಕಲ್ಪ. ಇದಕ್ಕಾಗಿ ರಾಜ್ಯದಲ್ಲಿ ಸ್ಥಿರ ಡಬಲ್ ಎಂಜಿನ್ ಸರ್ಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸಂತರ ನಾಡು, ಸಂಸ್ಕಾರದ ಭೂಮಿ ಎನಿಸಿರುವ ಕರ್ನಾಟಕದ ಜನರು ಮೇ 10ರಂದು ಕಾಂಗ್ರೆಸ್ ವಿರುದ್ಧವಾಗಿ ಮತ ನೀಡುವ ಮೂಲಕ ತಕ್ಕ ಉತ್ತರ ನೀಡಲಿದ್ದಾರೆ. ಈ ಬಾರಿ ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುವುದು ಕೇವಲ ಶಾಸಕರು ಮತ್ತು ಮುಖ್ಯಮಂತ್ರಿ ಆಯ್ಕೆ ಮಾಡುವುದಕ್ಕೆ ಅಲ್ಲ. ಕರ್ನಾಟಕವನ್ನು ಮುಂದಿನ 25 ವರ್ಷಗಳವರೆಗೆ ಅಭಿವೃದ್ಧಿ ಹೊಂದಿದ ರಾಜ್ಯವನ್ನು ನಿರ್ಮಿಸುವ ಸಂಕಲ್ಪ ಮಾಡುವ ಚುನಾವಣೆ ಎಂದು ಮೋದಿ ಹೇಳಿದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಿಂದ ಅಭಿವೃದ್ಧಿಗೆ ಬ್ರೇಕ್ ಬಿದ್ದಿತ್ತು. ಡಬಲ್ ಎಂಜಿನ್ ಸರ್ಕಾರ ಬಂದ ಮೇಲೆ ಅಭಿವೃದ್ಧಿ ವೇಗ ಪಡೆದಿದೆ. ಅದನ್ನು ಮುಂದುವರಿಸಲು ಮತ್ತೆ ಬಿಜೆಪಿಗೆ ಮತ ನೀಡಿ ಎಂದು ಪ್ರಧಾನಿ ಕೋರಿದರು. 'ಬಿಜೆಪಿ ಮಾತ್ರ ಜನಸಾಮಾನ್ಯರನ್ನೇ ತನ್ನ ಪರಿವಾರ ಎಂದು ಪರಿಗಣಿಸಿದೆ. ಅದಕ್ಕಾಗಿಯೇ ಜನರಿಗೆ ಉಚಿತ ವೈದ್ಯಕೀಯ ಸೌಲಭ್ಯ, ಉಚಿತ ಲಸಿಕೆ, ಮನೆ, ವಿದ್ಯುತ್, ನೀರು, ನೀರಾವರಿ ಸೌಲಭ್ಯ ಕಲ್ಪಿಸಿದೆ' ಎಂದು ತಿಳಿಸಿದರು.

ಚನ್ನಪಟ್ಟಣದಲ್ಲಿ ನಡೆದ ಸಮಾವೇಶದಲ್ಲಿ ಮಂಡ್ಯ ಸಂಸದೆ ಸುಮಲತಾ ಪಾಲ್ಗೊಂಡಿದ್ದರು. ರಾಮನಗರ ಹಾಗೂ ಮಂಡ್ಯ ಜಿಲ್ಲೆಗಳ 11 ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳು ವೇದಿಕೆಯಲ್ಲಿ ಇದ್ದರು.

ಖರ್ಗೆ ಪುತ್ರನ ಠೇವಣಿ ಕಳೆಯಿರಿ: ಯೋಗಿ ಆದಿತ್ಯನಾಥ

ಒಂದನೇ ಪುಟದಿಂದ...

'ಪ್ರಧಾನಿಗೆ ಅಪಮಾನ ಮಾಡುವುದು ದೇಶಕ್ಕೆ, 140 ಕೋಟಿ ಜನರಿಗೂ ಅಪಮಾನ ಮಾಡಿದಂತೆ. ಇಂತಹ ಅಪಮಾನ ಮಾಡಿದ ಪುತ್ರನ ಚುನಾವಣಾ ಠೇವಣಿ ಕಳೆಯಬೇಕು' ಎಂದು ಮನವಿ ಮಾಡಿದರು.

ಆಳಂದದಲ್ಲಿ ಪಕ್ಷದ ಅಭ್ಯರ್ಥಿ ಸುಭಾಷ್ ಗುತ್ತೇದಾರ ಪರ ಮಾತನಾಡಿದ ಯೋಗಿ ಆದಿತ್ಯನಾಥ, 'ಲಾಡ್ಲೆ ಮಶಾಕ್ ದರ್ಗಾದ ಆವರಣದಲ್ಲಿ ರಾಘವ ಚೈತನ್ಯ ದೇವಸ್ಥಾನವನ್ನು ನಿರ್ಮಿಸಲಾಗುವುದು' ಎಂದರು.

'ಬೈಗುಳಕ್ಕೆ ಹೆದರಬೇಡಿ, ಧೈರ್ಯ ತಂದುಕೊಳ್ಳಿ'

ಒಂದನೇ ಪುಟದಿಂದ...

'ಜನರ ಸಮಸ್ಯೆಗಳ ಪಟ್ಟಿ ಮಾಡಿ ಪರಿಹಾರ ನೀಡುವುದು ಬಿಟ್ಟು, ಯಾರು, ಯಾವಾಗ, ಏನೆಂದು ಬೈದರು ಎಂದು ಪಟ್ಟಿ ಮಾಡುತ್ತಿದ್ದೀರಿ. ನಮ್ಮ ಕುಟುಂಬದವರನ್ನು ಬೈದಿರುವುದನ್ನು ಬರೆದರೆ ಹಲವಾರು ಪುಸ್ತಕಗಳೇ ಆಗುತ್ತವೆ' ಎಂದು ವಾಗ್ದಾಳಿ ನಡೆಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಮಾಸಿಕ ಗೌರವಧನ ₹15 ಸಾವಿರಕ್ಕೆ ಹಾಗೂ ಮಿನಿ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರ ಗೌರವಧನ ₹10 ಸಾವಿರಕ್ಕೆ ಹೆಚ್ಚಿಸಲಾಗುವುದು. ಆಶಾ ಕಾರ್ಯಕರ್ತೆಯರ ಗೌರವಧನ ₹8 ಸಾವಿರಕ್ಕೆ ಹಾಗೂ ಬಿಸಿಯೂಟ ನೌಕರರ ಗೌರವಧನ ₹5 ಸಾವಿರಕ್ಕೆ ಹೆಚ್ಚಿಸಲಾಗುವುದು. ಅಂಗನವಾಡಿ ಕಾರ್ಯಕರ್ತೆಯರಿಗೆ ಪಿಂಚಣಿ ಸೌಲಭ್ಯವಿಲ್ಲ. ಅವರು ಸೇವಾ ನಿವೃತ್ತಿ ಹೊಂದಿದರೆ ಅಥವಾ ನಿಧನರಾದರೆ ₹3 ಲಕ್ಷ ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ₹2 ಲಕ್ಷ ನೀಡಲಾಗುವುದು' ಎಂದು ಪ್ರಿಯಾಂಕಾ ಭರವಸೆ ನೀಡಿದರು.

ಮನದ ಮಾತಿಗೆ ಬಿಜೆಪಿಯ ಭಾರಿ ಪ್ರಚಾರ

ದೇಶದ ಎಲ್ಲ ರಾಜಭವನಗಳಲ್ಲಿ ನೇರಪ್ರಸಾರ • ನಾಲ್ಕು ಲಕ್ಷ ಕಡೆಗಳಲ್ಲಿ ಪ್ರಸಾರ ಆಯೋಜನೆಗೆ ಸೂಚಿಸಿದ್ದ ಬಿಜೆಪಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಮಾಸಿಕ ಬಾನುಲಿ ಕಾರ್ಯಕ್ರಮ 'ಮನದ ಮಾತು'ವಿನ 100ನೇ ಕಂತನ್ನು ದೇಶದ ನಾಲ್ಕು ಲಕ್ಷ ಕಡೆಗಳಲ್ಲಿ ಪ್ರಸಾರ ಮಾಡಲು ಬಿಜೆಪಿ ಯೋಜನೆ ರೂಪಿಸಿತ್ತು. ಅಂತೆಯೇ ಭಾನುವಾರ ಈ ಸ್ಥಳಗಳಲ್ಲಿ ಕಾರ್ಯಕ್ರಮದ ನೇರಪ್ರಸಾರ ನಡೆದಿದೆ.

100ನೇ ಕಂತಿನ ನೇರಪ್ರಸಾರವನ್ನು 'ಐತಿಹಾಸಿಕ'ವಾಗಿಸಬೇಕು ಎಂಬುದು ಬಿಜೆಪಿಯ ಯೋಚನೆಯಾಗಿತ್ತು. ನೇರ-ಪ್ರಸಾರವನ್ನು ಸಂಘಟಿಸುವ ಜವಾಬ್ದಾರಿಯನ್ನು ಎಲ್ಲಾ ಬಿಜೆಪಿ ಶಾಸಕರಿಗೆ, ಸಂಸದರಿಗೆ ನೀಡಲಾಗಿತ್ತು. ಪ್ರತಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 100 ಸ್ಥಳಗಳಲ್ಲಿ ನೇರಪ್ರಸಾರ ಆಯೋಜಿಸಲು ಪಕ್ಷ ಸೂಚಿಸಿತ್ತು.

ಪಕ್ಷದ ಸೂಚನೆಯಂತೆ, ಬಿಜೆಪಿ ನಾಯಕರು, ಕೇಂದ್ರ ಸಚಿವರು 100ನೇ ಕಂತಿನ ಮೋದಿ ಅವರ ಭಾಷಣವನ್ನು ಕೇಳಿದರು. 'ಜನರೊಂದಿಗೆ ತೊಡಗಿಕೊಳ್ಳುವ ಸ್ಫೂರ್ತಿದಾಯಕ ಹೆಜ್ಜೆ' ಎಂದು ಎಲ್ಲ ಬಿಜೆಪಿ ನಾಯಕರು ಕಾರ್ಯಕ್ರಮವನ್ನು ಶ್ಲಾಘಿಸಿದರು.

ಉತ್ತರ ಪ್ರದೇಶದ 50 ಸಾವಿರಕ್ಕೂ ಹೆಚ್ಚು ಕಡೆಗಳಲ್ಲಿ, ಮುಂಬೈನ 5 ಸಾವಿರ ಕಡೆಗಳಲ್ಲಿ, ಜಮ್ಮು ಮತ್ತು ಕಾಶ್ಮೀರದ 5 ಸಾವಿರ ಕಡೆಗಳಲ್ಲಿ, ಮಧ್ಯಪ್ರದೇಶದ ಇಂದೋರ್‌ನಲ್ಲಿಯೇ ಒಂದು ಸಾವಿರ ಕಡೆಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರವನ್ನು ಆಯೋಜಿಸಲಾಗಿತ್ತು.

ಸಮಾಜದಲ್ಲಿ ಬದಲಾವಣೆ ತರಲು, ಪ್ರಜಾಪ್ರಭುತ್ವವನ್ನು ಶಕ್ತಿಯುತಗೊ-ಳಿಸಲು, ಜಗತ್ತಿನೊಂದಿಗೆ ಭಾರತವು ಸಂವಹಿಸುವ ನವ ಭಾರತ ನಿರ್ಮಾಣ, ಸಮಾಜದ ಉದ್ಧಾರಕ್ಕಾಗಿ... ಹೀಗೆ ವಿವಿಧ ಕಾರಣಗಳಿಗೆ 'ಮನದ ಮಾತು' ಕಾರ್ಯಕ್ರಮವು ಮುಖ್ಯವಾಗಿದೆ ಎಂದು ನಾಯಕರು ಬಣ್ಣಿಸಿದರು.

ರಾಜಭವನಗಳಲ್ಲೂ ನೇರಪ್ರಸಾರ: ದೇಶದ ಎಲ್ಲ ರಾಜಭವನಗಳಲ್ಲಿ, ಮುಖ್ಯಮಂತ್ರಿಗಳ ಅಧಿಕೃತ ಮನೆಗಳಲ್ಲಿ ಕಾರ್ಯಕ್ರಮದ ನೇರಪ್ರಸಾರ ಮಾಡಬೇಕು ಎಂದು ಬಿಜೆಪಿ ಸೂಚನೆ ನೀಡಿತ್ತು. ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಛತ್ತೀಸಗಢ, ಮಹಾರಾಷ್ಟ್ರ, ಉತ್ತರ ಪ್ರದೇಶ... ಹೀಗೆ ಎಲ್ಲಾ ರಾಜ್ಯಗಳಲ್ಲೂ ರಾಜ್ಯಪಾಲರು ಕಾರ್ಯಕ್ರಮವನ್ನು ಕೇಳಿದರು.

'ಮನದ ಮಾತು' ತನ್ನ 100ನೇ ಕಂತನ್ನು ಪೂರೈಸಿ ಸೃಷ್ಟಿಸಿದ ಮೈಲುಗಲ್ಲನ್ನು ದಾಖಲಿಸಲು ದೇಶದ ವಿವಿಧೆಡೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರದಲ್ಲಿ ಮ್ಯಾರಥಾನ್ ಆಯೋಜನೆ ಮಾಡಲಾಗಿತ್ತು. ಇದನ್ನು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಉದ್ಘಾಟನೆ ಮಾಡಿದರು. ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರು ಚಿತ್ರಪ್ರ-ದರ್ಶನವೊಂದನ್ನು ಉದ್ಘಾಟಿಸಿದರು.

ರಾಜಭವನಗಳಲ್ಲಿ ಆಯೋಜಿಸಿದ್ದ ನೇರಪ್ರಸಾರದ ಕಾರ್ಯಕ್ರಮಗಳಲ್ಲಿ ಪದ್ಮ ಪ್ರಶಸ್ತಿ ಪುರಸ್ಕೃತರು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು, 'ಮನದ ಮಾತು' ಕಾರ್ಯಕ್ರಮ-ದಲ್ಲಿ ಉಲ್ಲೇಖಿತರಾದ ಸಾಧಕರು ಭಾಗವಹಿಸಿದ್ದರು.




ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಪ್ರಧಾನಿ ಮೋದಿ ಅವರ 'ಮನದ ಮಾತು' ಕಾರ್ಯಕ್ರಮದ 100ನೇ ಕಂತನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರು ವೀಕ್ಷಿಸಿದರು – ಪಿಟಿಐ ಚಿತ್ರ

- 'ಮನದ ಮಾತು' ಬಾನುಲಿ ಕಾರ್ಯಕ್ರಮದ ನೂರನೇ ಕಂತಿನ ನೇರಪ್ರಸಾರಕ್ಕೆ ವಿಶ್ವಸಂಸ್ಥೆಯ ಪ್ರಧಾನ ಕಚೇರಿ ಸಾಕ್ಷಿಯಾಯಿತು. ಜೊತೆಗೆ, ಹಲವು ದೇಶಗಳಲ್ಲಿ ಇರುವ ಭಾರತದ ರಾಯಭಾರ ಕಚೇರಿಗಳಲ್ಲೂ ಬಾನುಲಿ ಕಾರ್ಯಕ್ರಮದ ನೇರಪ್ರಸಾರ ಮಾಡಲಾಯಿತು
- ಭಾರತ ಸೇರಿದಂತೆ ಹಲವು ದೇಶಗಳಲ್ಲಿ, 52 ಭಾರತೀಯ ಭಾಷೆಗಳಲ್ಲಿ ಮತ್ತು 11 ವಿದೇಶಿ ಭಾಷೆಗಳಲ್ಲಿ ಈ ಬಾನುಲಿ ಕಾರ್ಯಕ್ರಮವ-ನ್ನು ಪ್ರಸಾರ ಮಾಡಲಾಯಿತು
- ಉತ್ತರ ಪ್ರದೇಶದ 300 ಮದರಸಾ-ಗಳಲ್ಲಿ ಮನದ ಮಾತು ಕಾರ್ಯಕ್ರಮ-ವನ್ನು ಪ್ರಸಾರ ಮಾಡಲಾಯಿತು. ಬಿಜೆಪಿಯ ಅಲ್ಪಸಂಖ್ಯಾತರ ವಿಭಾಗವು ಈ ಹಿಂದೆಯೇ 12 ಕಂತುಗಳ ಭಾಷಣವನ್ನು ಉರ್ದುವಿಗೆ ತರ್ಜುಮೆ ಮಾಡಿ, ವಿತರಿಸಿದೆ
- ಮನದ ಮಾತಿನ ನೂರನೇ ಕಂತು ಪ್ರಸಾರವಾದ ಹಿನ್ನೆಲೆಯಲ್ಲಿ ನ್ಯೂಯಾರ್ಕ್ ಹಾಗೂ ನ್ಯೂಜೆ-ರ್ಸಿಯಲ್ಲಿ ವಿಶೇಷ ನಿರ್ಣಯವನ್ನು ಕೈಗೊಳ್ಳಲಾಯಿತು. ಕಾರ್ಯಕ್ರಮವು ಉತ್ತಮ ಆಡಳಿತ ಹಾಗೂ ಪ್ರಜಾಪ್ರಭುತ್ವ-ವನ್ನು ಗಟ್ಟಿಗೊಳಿಸುವ ಪರಿಣಾಮಕಾರಿ ಮಾರ್ಗವಾಗಿದೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ
- ಕೆಂಪು ಕೋಟೆ, ಗೇಟ್ ವೇ ಆಫ್ ಇಂಡಿಯಾ ಸೇರಿದಂತೆ ದೇಶದ 13 ಪಾರಂಪರಿಕ ಸ್ಥಳಗಳಲ್ಲಿ ಧ್ವನಿ–ಬೆಳಕು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮನದ ಮಾತಿಗೆ ನೂರರ ಸಂಭ್ರಮದ ಹಿನ್ನೆಲೆಯಲ್ಲಿ ಈ ಕಾರ್ಯ-ಕ್ರಮವನ್ನು ಸಂಸ್ಕೃತಿ ಸಚಿವಾಲಯವು ಆಯೋಜಿಸಿತ್ತು.



ಭೋಪಾಲ್‌ನಲ್ಲಿ 'ಮನದ ಮಾತು'ವಿನ ನೇರಪ್ರಸಾರ ಕಾರ್ಯಕ್ರಮಕ್ಕೆ ಬಂದಿದ್ದ ಬಿಜೆಪಿ ಬೆಂಬಲಿಗ – ಪಿಟಿಐ ಚಿತ್ರ

'ಮನದ ಮಾತು ಕೇಳುಗರ ಸಂಖ್ಯೆ ಕಡಿಮೆ'

ಪ್ರಧಾನಿ ನರೇಂದ್ರ ಮೋದಿ ಅವರ 'ಮನದ ಮಾತು' ಕಾರ್ಯಕ್ರಮವನ್ನು ದೇಶದ ಶೇ 62ಕ್ಕೂ ಹೆಚ್ಚು ಜನರು ಈವರೆಗೆ ಒಮ್ಮೆಯೂ ಕೇಳಿಯೇ ಇಲ್ಲ ಎನ್ನುತ್ತದೆ ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷಾ ವರದಿ. 'ಮನದ ಮಾತು' ಕಾರ್ಯಕ್ರಮವನ್ನು ತಪ್ಪದೇ ಕೇಳುವವರ ಪ್ರಮಾಣ ತೀರಾ ಕಡಿಮೆ ಇದೆ. ಬಿಜೆಪಿ ಕಾರ್ಯಕರ್ತರು ಮತ್ತು ಬಿಜೆಪಿ ಬೆಂಬಲಿಗರೂ ಮೋದಿ ಅವರ 'ಮನದ ಮಾತು' ಕೇಳುವುದಿಲ್ಲ ಎನ್ನುತ್ತವೆ ಸಮೀಕ್ಷಾ ವರದಿಯ ದತ್ತಾಂಶಗಳು



ಲೋಕನೀತಿ– ಸಿಎಸ್‌ಡಿಎಸ್ 2022ರಲ್ಲಿ ಈ ಸಮೀಕ್ಷೆ ನಡೆಸಿದೆ. 2021ರಲ್ಲಿ ಎಲ್ಲಾ 12 ತಿಂಗಳಲ್ಲಿ ಪ್ರಸಾರವಾದ 'ಮನದ ಮಾತು' ಕಾರ್ಯಕ್ರಮಗಳ ಕುರಿತು ಈ ಪ್ರಶ್ನೆ ಕೇಳಲಾಗಿತ್ತು. ಇಡೀ ವರ್ಷದಲ್ಲಿ ಜನರು ಮನದ ಮಾತನ್ನು ಎಷ್ಟು ಬಾರಿ ಕೇಳಿದ್ದಾರೆ ಎಂಬುದರತ್ತ ಈ ಸಮೀಕ್ಷೆ ತನ್ನ ಗಮನ ಕೇಂದ್ರೀಕರಿಸಿತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ



- ಮನದ ಮಾತು ಕಾರ್ಯಕ್ರಮವನ್ನು 23 ಕೋಟಿ ಜನರು ತಪ್ಪದೇ ಕೇಳುತ್ತಾರೆ ಎಂದು ಐಐಎಂ–ರೋಹತಕ್ ನಡೆಸಿದ ಸಮೀಕ್ಷಾ ವರದಿ ಹೇಳುತ್ತದೆ

ಆಧಾರ: ಸಿಎಸ್‌ಡಿಎಸ್‌ನ 'ಮೀಡಿಯ ಇನ್ ಇಂಡಿಯಾ: ಆಕ್ಸೆಸ್, ಪ್ರಾಕ್ಟೀಸ್, ಕನ್ಸರ್ನ್ಸ್ ಅಂಡ್ ಅಫೆಕ್ಟ್ಸ್ ವರದಿ'

ಪ್ರಜಾವಾಣಿ ಗ್ರಾಫಿಕ್ಸ್

ಅದಾನಿ ಸಮೂಹದ ಅವ್ಯವಹಾರ, ಚೀನಾ ಅತಿಕ್ರಮಣ, ಹೆಚ್ಚುತ್ತಿರುವ ಅಸಮಾನತೆ, ಬೆಲೆ ಏರಿಕೆಯಂಥ ಸಮಸ್ಯೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರದ್ದು 'ಮೌನದ ಮಾತು'

ಕಾಂಗ್ರೆಸ್ ಟ್ವೀಟ್

ರೋಹ್‌ತಕ್‌ನ ಐಐಎಂನವರು 'ಮನದ ಮಾತು'ವಿನ ಪರಿಣಾಮಗಳ ಬಗ್ಗೆ 'ಸುಳ್ಳಿನ ಅಧ್ಯಯನ'ವೊಂದನ್ನು ನಡೆಸಿದ್ದಾರೆ. ಆದರೆ, ಐಐಎಂನ ನಿರ್ದೇಶಕರ ಶೈಕ್ಷಣಿಕ ಅರ್ಹತೆ ಬಗ್ಗೆ ಕೇಂದ್ರ ಸರ್ಕಾರವೇ ಪ್ರಶ್ನೆ ಎತ್ತಿತ್ತು

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸುಮ್ಮನೆ ಬೇರೆ ಬೇರೆ ವಿಷಯಗಳ ಕುರಿತು ಮಾತನಾಡುವ ಬದಲು, ತಮ್ಮ ಹಾಗೂ ಅದಾನಿ ಮಧ್ಯ ಇರುವ ಸಂಬಂಧದ ಕುರಿತು ಮಾತನಾಡಬೇಕು. ಬೆಲೆ ಏರಿಕೆ, ನಿರುದ್ಯೋಗದ ಕುರಿತ ಮಾತು ಯಾವಾಗ?

ನಾನಾ ಪಟೋಲೆ, ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ

ಜನ ಸಂಪರ್ಕದ ಸೇತುವೆ: ಮೋದಿ

ಒಂದನೇ ಪುಟದಿಂದ...

'ನಮ್ಮ ವಿರೋಧಿಗಳು ಸೇರಿದಂತೆ ಇತರರಲ್ಲಿನ ಒಳ್ಳೆಯ ಗುಣಗಳನ್ನು ಗೌರವಿಸಿ, ಮೈಗೂಡಿಸಿಕೊಳ್ಳಬೇಕು ಎಂದು ನನ್ನ ಮಾರ್ಗದರ್ಶಕರೂ ಆಗಿದ್ದ ಆರ್‌ಎಸ್‌ಎಸ್ ಮುಖಂಡ ಲಕ್ಷ್ಮಣರಾವ್ ಇನಾಂದಾರ ಹೇಳುತ್ತಿದ್ದರು' ಎಂದು ನೆನಪಿಸಿಕೊಂಡ ಅವರು, 'ಇತರರಲ್ಲಿನ ಸದ್ಗುಣಗಳನ್ನು ಗೌರವಿಸಿ, ಅವುಗಳಿಂದ ಕಲಿಯುವುದಕ್ಕೆ ಮನದ ಮಾತು ನನ್ನ ಪಾಲಿಗೆ ವೇದಿಕೆಯಾಗಿದೆ' ಎಂದರು.

ಪ್ರತಿ ತಿಂಗಳ ಸಂಚಿಕೆಯಲ್ಲಿ ಕೆಲ ಸಾಧಕರ ಹೆಸರುಗಳನ್ನು ಮೋದಿ ಪ್ರ-ಸ್ತಾಪಿಸಿದ್ದರು. ಆ ಪೈಕಿ ಕೆಲವರೊಂದಿಗೆ ಮೋದಿ ದೂರವಾಣಿ ಮೂಲಕ ಮಾತನಾಡಿದರು.

'ಮೋದಿ ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ನಮ್ಮ ಬಗ್ಗೆ ಪ್ರಸ್ತಾಪಿಸಿದ ನಂತರ ನಮ್ಮ ಕಾರ್ಯಕ್ಕೆ ದೊಡ್ಡ ಬಲವೇ ಸಿಕ್ಕಂತಾಗಿದೆ' ಎಂದು ಅವರೊಂದಿಗೆ ಮಾತನಾಡಿದವರು ಪ್ರತಿಕ್ರಿಯಿಸಿದ್ದಾರೆ.

ಸಾಧಕರ ಜೊತೆ ಮಾತು

'ಮನದ ಮಾತು'ವಿನ 100ನೇ ಸಂಚಿಕೆ ಪ್ರಸಾರವಾದ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ಆಯ್ದ ನಾಲ್ವರು ಸಾಧಕರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು.

ವಿಜಯಶಾಂತಿ ದೇವಿ: ಮಣಿಪುರದ ವಿಜಯಶಾಂತಿ ದೇವಿ ಅವರು ತಾವರೆ ಹೂವುಗಳ ನಾರು ಬಳಸಿ ಬಟ್ಟೆಗಳನ್ನು ತಯಾರಿಸುತ್ತಾರೆ. ಸದ್ಯ 30 ಮಹಿಳೆಯರು ದೇವಿ ಅವರಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ವರ್ಷ 70 ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಂಡು ಬಟ್ಟೆ ಉತ್ಪಾದನೆ ಹೆಚ್ಚಿಸುವ ಜೊತೆಗೆ ರಫ್ತು ಮಾಡುವ ಯೋಜನೆ ಇದೆ ಎಂದು ದೇವಿ ಹೇಳುತ್ತಾರೆ.

ಸುನೀಲ್ ಜಾಗ್ಲಾನ್: ಹರಿಯಾಣದ ಜಿಂದ್ ಜಿಲ್ಲೆಯ ಬೀಬಿಪುರ ಗ್ರಾಮದ ಸುನೀಲ್ ಜಾಗ್ಲಾನ್ ಅವರು 'ಸೆಲ್ಫಿ ವಿತ್ ಡಾಟರ್' ಎಂಬ ಆಂದೋಲನ ಆರಂಭಿಸಿದವರು. 2015ರಲ್ಲಿ ಈ ಆಂದೋಲನ ಆರಂಭಿಸಿದ ಸುನೀಲ್ ಅವರು ನಂತರ, ತಮ್ಮ ಮಗಳ ಜೊತೆ ತೆಗೆದುಕೊಂಡ ಸೆಲ್ಫಿಗಳನ್ನು ಜನರು ಹಂಚಿಕೊಳ್ಳಲು ಅನುಕೂಲವಾಗುವಂತೆ ವೆಬ್‌ಸೈಟ್ ಅನ್ನು ಆರಂಭಿಸಿದರು. 'ಸುನೀಲ್ ಆರಂಭಿಸಿದ 'ಸೆಲ್ಫಿ ವಿತ್ ಡಾಟರ್' ಆಂದೋಲನದಿಂದಾಗಿ ನಾನು 'ಬೇಟಿ ಬಚಾವೊ, ಬೇಟಿ ಪಢಾವೊ' ಯೋಜನೆಯನ್ನು ಹರಿಯಾಣದಿಂದಲೇ ಆರಂಭಿಸಿದೆ' ಎಂದು ಮೋದಿ ಸಂಚಿಕೆಯೊಂದರಲ್ಲಿ ಹೇಳಿದ್ದರು.

ಪ್ರದೀಪ್ ಸಂಗ್ವಾನ್: ಪ್ರದೀಪ್ ಸಂಗ್ವಾನ್ ತಮ್ಮ 'ಹೀಲಿಂಗ್ ಹಿಮಾಲಯಾಸ್' ಆಂದೋಲನದ ಮೂಲಕ ಹಿಮಾಲಯ ತಪ್ಪಲಿನ ಗ್ರಾಮಗಳಲ್ಲಿ ತ್ಯಾಜ್ಯ ನಿರ್ವಹಣೆ ಹಾಗೂ ನೈರ್ಮಲ್ಯ ಕಾಪಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಸಂಗ್ವಾನ್ ನೇತೃತ್ವದ ತಂಡ ಪ್ರತಿದಿನ ಐದು ಟನ್‌ಗಳಷ್ಟು ತ್ಯಾಜ್ಯವನ್ನು ಸಂಗ್ರಹಿಸುತ್ತದೆ.

ಮಂಜೂರ್ ಅಹ್ಮದ್: ಕೇಂದ್ರಾಡಳಿತ ಪ್ರದೇಶ ಜಮ್ಮು–ಕಾಶ್ಮೀರದ ಪುಲ್ವಾಮಾ ಜಿಲ್ಲೆಯ 'ಔಖೂ' ಎಂಬ ಗ್ರಾಮದಲ್ಲಿ ಮಂಜೂರ್ ಅಹ್ಮದ್ ಅವರು ಪೆನ್ಸಿಲ್‌ಗಳನ್ನು ತಯಾರಿಸುವ ಘಟಕ ಸ್ಥಾಪಿಸಿದ್ದಾರೆ. ಇದು, ಈಗ 'ಭಾರತದ ಪೆನ್ಸಿಲ್ ಗ್ರಾಮ' ಎಂದೇ ಖ್ಯಾತಿಯಾಗಿದೆ. ಈ ಘಟಕದಲ್ಲಿ 200ಕ್ಕೂ ಹೆಚ್ಚು ಜನರಿಗೆ ಅಹ್ಮದ್ ಅವರು ಉದ್ಯೋಗ ನೀಡಿದ್ದಾರೆ. ಪೆನ್ಸಿಲ್‌ಗಳ ತಯಾರಿಕೆ ಮೂಲಕ ಗ್ರಾಮವೊಂದು ಜನರಿಗೆ ಶಿಕ್ಷಣ ಒದಗಿಸಲು ನೆರವಾಗುತ್ತಿದೆ ಎಂದು ಮೋದಿ ಶ್ಲಾಘಿಸಿದ್ದರು.

ಯುನೆಸ್ಕೊ ಪ್ರಧಾನ ನಿರ್ದೇಶಕಿ ಸಂದೇಶ ಬಿತ್ತರ



ಯುನೆಸ್ಕೊದ ಪ್ರಧಾನ ನಿರ್ದೇಶಕಿ ಆಡ್ರೆ ಅಜೌಲೆ ಅವರು ಕಳುಹಿಸಿದ್ದ ಸಂದೇಶವನ್ನು ಬಿತ್ತರಿಸಲಾಯಿತು. ಬಾನುಲಿ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪ-ಡಿಸಿರುವ ಅವರು, ಮನದ ಮಾತುವಿನಲ್ಲಿ ಮೋದಿ ಅವರು ಹೆಚ್ಚು ಪ್ರಸ್ತಾಪಿಸುವ ವಿಷಯಗಳಾದ ಶಿಕ್ಷಣ ಮತ್ತು ಸಂಸ್ಕೃತಿ ಸಂರಕ್ಷಣೆ ಬಗ್ಗೆಯೂ ಮಾತನಾಡಿದರು.

'2030ರ ವೇಳೆಗೆ ಪ್ರತಿಯೊಬ್ಬರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು ಎಂಬುದು ಯುನೆಸ್ಕೊ ಆಶಯ. ಜನಸಂಖ್ಯೆ ದೃಷ್ಟಿಯಿಂದ ದೊಡ್ಡ ದೇಶವಾಗಿರುವ ಭಾರತದಲ್ಲಿ ಈ ಗುರಿಯನ್ನು ಹೇಗೆ ಸಾಧಿಸುತ್ತೀರಿ' ಎಂದು ಮೋದಿ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೋದಿ, 'ಶಿಕ್ಷಣಕ್ಕೆ ಉತ್ತೇಜನ, ಸಂಸ್ಕೃತಿಯ ಸಂರಕ್ಷಣೆ ಎಂಬುದು ಪ್ರಾಚೀನ ಕಾಲದಿಂದಲೂ ಭಾರತೀಯ ಪರಂಪರೆಯೇ ಆಗಿದೆ. ಈ ದಿಸೆಯಲ್ಲಿ ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ಕಾರ್ಯ ಶ್ಲಾಘನೀಯ' ಎಂದರು.

ಮನದ ಮಾತಿನ ಪ್ರಮುಖಾಂಶಗಳು

- 'ಮನದ ಮಾತು'ವಿನಲ್ಲಿ ಪ್ರಸ್ತಾಪಿಸಿದ್ದ 'ಸ್ವಚ್ಛ ಭಾರತ', 'ಆಜಾದಿ ಕಾ ಅಮೃತ ಮಹೋತ್ಸವ'ದಂತಹ ವಿಷಯಗಳು ಚಳವಳಿ ರೂಪವನ್ನೇ ಪಡೆದಿವೆ
- ಗಿಡಗಳನ್ನು ನೆಡುವುದು, ಸ್ವಚ್ಛತೆ, ಬಡವರಿಗೆ ಶಿಕ್ಷಣ ನೀಡುವಂತಹ ಪ್ರೇರಣಾದಾಯಕ ಕಾರ್ಯದಲ್ಲಿ ತೊಡ-ಗಿದ್ದವರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಯಿತು
- ಇಲ್ಲಿ ಪ್ರಸ್ತಾಪಗೊಂಡವರೆಲ್ಲಾ ನಮ್ಮ 'ಹೀರೊ'ಗಳು. ಅವರಿಂದಾಗಿಯೇ ಈ ಕಾರ್ಯಕ್ರಮಕ್ಕೆ ಜೀವಂತಿಕೆ ಬಂದಿದೆ


ಸೋರಿಕೆ ಪ್ರದೇಶದಲ್ಲಿ ಎನ್‌ಡಿಆರ್‌ಎಫ್ ಸದಸ್ಯರಿಂದ ಪರಿಶೀಲನೆ –ಪಿಟಿಐ ಚಿತ್ರ

ವಿಷಾನಿಲ ಸೋರಿಕೆ 11 ಮಂದಿ ಸಾವು

ಒಂದನೇ ಪುಟದಿಂದ...

ಘಟನೆ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಲಾಗಿದೆ. ಲುಧಿಯಾನ ಪೊಲೀಸರು ಎಫ್‌ಐಆರ್ ದಾಖಲಿಸಿ-ಕೊಂಡಿದ್ದಾರೆ.

ಬೆಳಿಗ್ಗೆ ಮಾರುಕಟ್ಟೆಗೆ ತರಕಾರಿ ಮತ್ತು ಹಾಲು ಖರೀದಿಗೆ ಬಂದ ಕೆಲವರು ಪ್ರಜ್ಞಾಹೀನರಾದಾಗ ಪ್ರಕರಣ ಬಯಲಿಗೆ ಬಂದಿದೆ. ನಾಲ್ವರು ಸ್ಥಳದಲ್ಲಿಯೇ ಮೃತಪಟ್ಟರೆ, ಉಳಿದವರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಇವರೆಲ್ಲರೂ ಉತ್ತರ ಪ್ರದೇಶ, ಬಿಹಾರದಿಂದ ಬಂದಿರುವ ವಲಸಿಗರಾಗಿದ್ದಾರೆ.

'ಈ ಪ್ರದೇಶದ ವಾತಾವರಣ-ದಲ್ಲಿ ಹೈಡ್ರೋಜನ್ ಸಲ್ಫೈಡ್ ಅನಿಲ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬಂದಿದೆ. ಈ ಭಾಗದಲ್ಲಿರುವ ಕಾರ್ಖಾನೆಯವರು ರಾಸಾಯನಿಕ ತ್ಯಾ-ಜ್ಯಗಳನ್ನು ಒಳಚರಂಡಿಗೆ ಸುರಿದಿರಬಹುದು. ಅಲ್ಲಿ ವಿಷಾನಿಲ ಉತ್ಪತ್ತಿ-ಯಾಗಿರಬಹುದೆಂದು ಎನ್‌ಡಿಆರ್‌ಎಫ್ ತಂಡ ಹೇಳಿದೆ' ಎಂದು ಜಿಲ್ಲಾಡಳಿತ ತಿಳಿಸಿದೆ.

'ಮ್ಯಾನ್‌ಹೋಲ್‌ಗಳಿಂದ ರಾಸಾಯನಿಕಗಳ ಮಾದರಿ ಸಂಗ್ರಹಿಸಲಾಗಿದೆ. ಮೃತಪಟ್ಟವರು ಉಸಿರಾಟದ ತೊಂದರೆ ಅನುಭವಿಸಿಲ್ಲ. ವಿಷಾನಿಲವು ನೇರವಾಗಿ ನರಮಂಡಲಕ್ಕೆ ಹಾನಿ ಮಾಡಿರುವುದರಿಂದ ಅವರು ಮೃತಪಟ್ಟಿರಬಹುದು' ಎಂದು ಲುಧಿಯಾನ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

'ವಿಷಾನಿಲ ಹೇಗೆ ಸೋರಿಕೆಯಾಗಿದೆ ಎಂಬ ಬಗ್ಗೆ ಈ ಪ್ರದೇಶದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನೂ ಪರಿಶೀಲಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತಪ್ಪು ಮಾಡಿರುವುದು ಸಾಬೀತಾಗಿಲ್ಲ: ಅದಾನಿ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮನವಿಯಲ್ಲಿ 'ನಾವು ತಪ್ಪು ಮಾಡಿದ್ದೇವೆ ಎಂಬುದಾಗಿ ಹೇಳಿಲ್ಲ' ಎಂದು ಅದಾನಿ ಸಮೂಹವು ಪ್ರತಿಕ್ರಿಯೆ ನೀಡಿದೆ. ಅದಾನಿ ಸಮೂಹದ ವಿರುದ್ಧ ನಡೆಯುತ್ತಿರುವ ಪ್ರಕರಣದ ತನಿಖೆ ಪೂರ್ಣಗೊಳಿಸಲು ಇನ್ನೂ ಆರು ತಿಂಗಳ ಸಮಯಾವಕಾಶ ಬೇಕು ಎಂದು ಸೆಬಿ, ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ಕುರಿತು ಮಾಡಿರುವ ಆರೋಪಗಳ ಕುರಿತ ತನಿಖೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್, ಸೆಬಿಗೆ ಮಾರ್ಚ್ 2ರಂದು ಸೂಚಿಸಿತ್ತು. ಇದರ ಅನ್ವಯ ಸೆಬಿ ಮೇ 2ರಂದು ವರದಿ ಸಲ್ಲಿಸಬೇಕು. ಹಿಂಡನ್‌ಬರ್ಗ್ ರಿಸರ್ಚ್‌ನ ಎಲ್ಲ ಆರೋಪಗಳನ್ನು ಅದಾನಿ ಸಮೂಹ ಅಲ್ಲಗಳೆದಿದೆ.

ಅನುಮಾನಾಸ್ಪದವಾಗಿರುವ 12 ವಹಿವಾಟುಗಳ ತನಿಖೆ, ಪರಿಶೀಲನೆಯು 'ಇವು ಹಲವು ಉಪ ವಹಿವಾಟುಗಳನ್ನು ಒಳಗೊಂಡಿವೆ ಎಂಬುದನ್ನು ತೋರಿಸುತ್ತಿದೆ. ಈ ವಹಿವಾಟುಗಳನ್ನು ಸೂಕ್ಷ್ಮವಾಗಿ ತನಿಖೆಗೆ ಒಳಪಡಿಸಬೇಕು ಎಂದಾದರೆ ಹಲವು ಮೂಲಗಳಿಂದ ದತ್ತಾಂಶ ಸಂಗ್ರಹಿಸಬೇಕು. ಕಂಪನಿಗಳು ಸಲ್ಲಿಸುವ ವಿವರಗಳನ್ನು ತಾಳೆ ಮಾಡಬೇಕು' ಎಂದು ಸೆಬಿ, ತನ್ನ ಮನವಿಯಲ್ಲಿ ಹೇಳಿದೆ.

'ಆರ್‌ಎಸ್‌ಎಸ್‌ನ ಸುಳ್ಳನ್ನು ಹೇಳುವ 'ದಿ ಕೇರಳ ಸ್ಟೋರಿ'

ತಿರುವನಂತಪುರ (ಪಿಟಿಐ): 'ದಿ ಕೇರಳ ಸ್ಟೋರಿ' ಸಿನಿಮಾದ ನಿರ್ಮಾಪಕರ ವಿರುದ್ಧ ಭಾನುವಾರ ಹರಿಹಾಯ್ದಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಲವ್ ಜಿಹಾದ್ ಹೆಸರಿನಲ್ಲಿ ರಾಜ್ಯವನ್ನು ಧಾರ್ಮಿಕ ಉಗ್ರವಾದದ ಕೇಂದ್ರ ಎಂಬುದಾಗಿ ಬಿಂಬಿಸುತ್ತಿರುವ ಸಂಘ ಪರಿವಾರದ ಸುಳ್ಳನ್ನು ಪ್ರಚುರಪ-ಡಿಸುವ ಕೆಲಸವನ್ನು ಈ ಸಿನಿಮಾದ ಮೂಲಕ ಮಾಡಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

ಲವ್ ಜಿಹಾದ್ ಎಂಬ ಪರಿಕಲ್ಪನೆಯನ್ನು ನ್ಯಾಯಾಲಯಗಳು, ತನಿಖಾ ಸಂಸ್ಥೆಗಳು ಅಲ್ಲದೆ ಕೇಂದ್ರ ಗೃಹಸಚಿವಾಲಯವೂ ತಿರಸ್ಕರಿಸಿದೆ ಎಂದೂ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋಮು ಧ್ರುವೀಕರಣ ಮತ್ತು ರಾಜ್ಯದ ವಿರುದ್ಧ ಅಪಪ್ರಚಾರ ನಡೆಸಲು ಉದ್ದೇಶಪೂರ್ವಕವಾಗಿ ಯತ್ನಿಸಲಾಗುತ್ತಿದೆ ಎಂಬುದು ಈ ಹಿಂದಿ ಸಿನಿಮಾದ ಟ್ರೇಲರ್ ನೋಡಿದಾಗ ಭಾಸವಾಗುತ್ತದೆ. ಕೇರಳದಲ್ಲಿ ರಾಜಕೀಯ ಲಾಭ ಪಡೆಯುವ ಸಂಘ ಪರಿವಾರದ ಯತ್ನದ ಭಾಗವಾಗಿ ಈ ಸಿನಿಮಾ ನಿರ್ಮಾಣಗೊಂಡಿದೆ. ಕೋಮುವಾದದ ವಿಷ ಬೀಜಗಳನ್ನು ಬಿತ್ತುವ ಮೂಲಕ ರಾಜ್ಯದಲ್ಲಿ ಧಾರ್ಮಿಕ ಸಾಮರಸ್ಯವನ್ನು ಕದಡಲು ಪ್ರಯತ್ನಿಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಕೇರಳದ 32 ಸಾವಿರ ಮಹಿಳೆಯರು ಮತಾಂತರಗೊಂಡು ಐಎಸ್ ಸಂಘಟನೆಯ ಸದಸ್ಯರಾಗಿ-ದ್ದಾರೆ ಎಂಬುದಾಗಿ ಸಿನಿಮಾದ ಟ್ರೇಲರ್‌ನಲ್ಲಿ ಹೇಳಲಾಗಿದೆ. ಇದು ಸುಳ್ಳು. ಈ ನಕಲಿ ಕಥೆಯು ಸಂಘ ಪರಿವಾರದ ಸುಳ್ಳಿನ ಕಾರ್ಖಾನೆಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಅಭಿವ್ಯಕ್ತಿ ಸ್ವಾತಂತ್ರ್ಯವು ಸುಳ್ಳನ್ನು ಪ್ರಚಾರ ಮಾಡಲು, ಕೋಮುವಾದ ಮತ್ತು ಜನರನ್ನು ವಿಭಜಿಸಲಿರುವ ಪರವಾನಗಿಯಲ್ಲ' ಎಂದು ಹರಿಹಾಯ್ದಿರುವ ಅವರು ಕೇರಳದ ಜನರು ಈ ಸಿನಿಮಾ ತಿರಸ್ಕರಿಸಬೇಕು ಎಂದೂ ಆಗ್ರಹಿಸಿದ್ದಾರೆ.

ಪಟ್ಟಾಭಿಷೇಕ: 'ಕಾಮನ್‌ವೆಲ್ತ್' ಬಿಂಬಿಸುವ ಪರದೆ ಬಳಕೆ

ಲಂಡನ್: ಇಲ್ಲಿನ ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ ಮೇ 6ರಂದು ನಡೆಯಲಿರುವ ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಸಮಾರಂಭದ ಪ್ರಮುಖ ಧಾರ್ಮಿಕ ಕಾರ್ಯಕ್ರಮದಲ್ಲಿ ಬಳಸಲಿರುವ ಬಟ್ಟೆಯ ಪರದೆಯಲ್ಲಿ ಭಾರತ ಸೇರಿದಂತೆ ಕಾಮನ್‌ವೆಲ್ತ್ ದೇಶಗಳ ಹೆಸರುಗಳನ್ನು ಕಸೂತಿ ಮಾಡಲಾಗಿದೆ ಎಂದು ಬಕ್ಕಿಂಗ್‌ಹ್ಯಾಮ್ ಅರಮನೆ ಮೂಲಗಳು ತಿಳಿಸಿವೆ. ಕಾಮನ್‌ವೆಲ್ತ್ ರಾಷ್ಟ್ರಗಳ-ನ್ನು ಪ್ರತಿನಿಧಿಸುವ 56 ಎಲೆಗಳನ್ನು ಹೊಂದಿರುವ ಕೊಂಬೆಗಳಿರುವ ಮರದ ವಿನ್ಯಾಸದ 'ಅಭಿಷೇಕದ ಪರದೆ'ಯನ್ನು ಈಚೆಗೆ ಅನಾವರಣಗೊಳಿಸಲಾಗಿದೆ.

ಮರದ ವಿನ್ಯಾಸದಲ್ಲಿರುವ ಹಕ್ಕಿಗಳು ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳ ಜೊತೆಗಿನ ಸಾಮರಸ್ಯ ಮತ್ತು ಸಂವಹನವನ್ನು ಸಾಂಕೇತಿಸುತ್ತದೆ ಎಂದು ವಿನ್ಯಾಸಕಾರ ಐಡನ್ ಹಾರ್ಟ್ ಹೇಳಿದ್ದಾರೆ.

ಬೈಬಲ್ ಓದಲಿರುವ ಸುನಕ್: ರಾಜ ಮೂರನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಸಮಾರಂಭದಲ್ಲಿ ಬ್ರಿಟನ್ ಪ್ರಧಾನಿ ರಿಶಿ ಸುನಕ್ ಅವರು ಬೈಬಲ್ ಓದಲಿದ್ದಾರೆ ಎಂದು ಮೂಲಗಳು ಹೇಳಿವೆ.

ಎಸ್‌ಇಒ(ಸರ್ಚ್ ಎಂಜಿನ್ ಆಪ್ಟಿಮೈಸೇಶನ್) ಅಂತರ್ಜಾಲ ಮಾರುಕಟ್ಟೆಯ ಒಂದು ಪ್ರಮುಖ ಭಾಗ. ಇದರಿಂದಾಗಿ ಬಹುತೇಕ ಕಂಪನಿ/ಸಂಸ್ಥೆಗಳಲ್ಲಿ ಎಸ್‌ಇಒ ಎಕ್ಸಿಕ್ಯೂಟಿವ್ಸ್ ಎಂಬ ಹೊಸ ಹುದ್ದೆಗಳು ಹುಟ್ಟಿಕೊಂಡಿವೆ. ಈ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ತಯಾರು ಮಾಡಲು ಸಾಕಷ್ಟು ಕೋರ್ಸುಗಳೂ ಲಭ್ಯವಿವೆ.



ಸರ್ಚ್ ಎಂಜಿನ್ ಆಪ್ಟಿಮೈಸೇಶನ್ ಕೋರ್ಸ್

ಸಿಬಂತಿ ಪದ್ಮನಾಭ ಕೆ. ವಿ.

ಇ–ಕೋರ್ಸ್ 2

ಯಾವುದೇ ಕಂಪನಿ ಅಥವಾ ಸಂಸ್ಥೆ ಅಭಿವೃದ್ಧಿಯಾಗಬೇಕಾದರೆ ಅವು ಆನ್‌ಲೈನ್‌ನಲ್ಲಿ ಲಭ್ಯವಿರುವುದು ಇಂದು ಅನಿವಾರ್ಯ. ಏಕೆಂದರೆ ಅಂತಹ ಸಂಸ್ಥೆ ಅಥವಾ ಕಂಪನಿಗಳ ಬಗ್ಗೆ ತಿಳಿದುಕೊಳ್ಳಲು ಜನರು ಮೊದಲು ಅನುಸರಿಸುವ ಮಾರ್ಗ ಇಂಟರ್ನೆಟ್‌ನಲ್ಲಿ ಹುಡುಕುವುದು. ಅವರು ಆ ಕಂಪನಿಗಳ ಗ್ರಾಹಕರಾಗಿ ಬದಲಾಗುವಲ್ಲಿ ಇದು ಮೊದಲನೆಯ ಹೆಜ್ಜೆ. ಒಂದು ನಿರ್ದಿಷ್ಟ ಉತ್ಪನ್ನ ಅಥವಾ ಸೇವೆಗಾಗಿ ಜನರು ಆನ್‌ಲೈನ್ ಸರ್ಚ್ ಮಾಡುವಾಗ ಯಾವ ಕಂಪನಿ ಮೊದಲು ಕಾಣಿಸಿಕೊಳ್ಳುತ್ತದೋ ಆ ಕಂಪನಿಯತ್ತ ಅವರು ಆಕರ್ಷಿತರಾಗುವುದು ಸಹಜ. ಹೀಗಾಗಿ ಗ್ರಾಹಕರ ಆನ್‌ಲೈನ್ ಹುಡುಕಾಟದಲ್ಲಿ ತಮ್ಮ ಉತ್ಪನ್ನಗಳು ಹೆಚ್ಚಾಗಿ ಕಾಣಿಸಿಕೊಳ್ಳಲಿ ಎಂದು ಕಂಪನಿಗಳು/ಸಂಸ್ಥೆಗಳು ಬಯಸುತ್ತಿರುತ್ತವೆ.

ಹಾಗೆಯೇ, ಕ್ಲಿಕ್ಸ್ ಮತ್ತು ವ್ಯೂಸ್ ಆಧಾರದಲ್ಲಿ ಆದಾಯಗಳಿಸುವ ಸಂಸ್ಥೆಗಳೂ ಇಂದು ಬೇಕಾದಷ್ಟಿವೆ. ಅವುಗಳೂ ಬಯಸುವುದು ತಮ್ಮ ಲಿಂಕ್‌ಗಳನ್ನು ಹೆಚ್ಚು ಮಂದಿ ಕ್ಲಿಕ್ ಮಾಡಲಿ ಎಂದೇ. ಇದಕ್ಕಾಗಿ ಇಂಟರ್ನೆಟ್ ಸರ್ಚ್‌ನಲ್ಲಿ ಅವು ಬೇಗನೆ ಕಾಣಿಸಿಕೊಳ್ಳುವುದು ಮುಖ್ಯ. ಹೀಗಾಗಿ ಇಂದು 'ಸರ್ಚ್ ಎಂಜಿನ್ ಆಪ್ಟಿಮೈಸೇಶನ್' (ಎಸ್‌ಇಒ) ಅಂತರ್ಜಾಲ ಮಾರುಕಟ್ಟೆಯ ಒಂದು ಪ್ರಮುಖ ಭಾಗವಾಗಿದೆ. ಇದರಿಂದಾಗಿ ಬಹುತೇಕ ಕಂಪನಿ/ಸಂಸ್ಥೆಗಳಲ್ಲಿ ಎಸ್‌ಇಒ ಎಕ್ಸಿಕ್ಯೂಟಿವ್ಸ್ ಎಂಬ ಹೊಸ ಹುದ್ದೆಗಳು ಹುಟ್ಟಿಕೊಂಡಿವೆ. ಈ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ತಯಾರು ಮಾಡಲು ಸಾಕಷ್ಟು ಕೋರ್ಸುಗಳೂ ಲಭ್ಯವಿವೆ.

ಏನಿದು ಕೋರ್ಸ್?

ಸರ್ಚ್ ಎಂಜಿನ್ ಆಪ್ಟಿಮೈಸೇಶನ್‌ನ ತಂತ್ರಗಾರಿಕೆಗಳನ್ನು ಹೇಳಿಕೊಡುವುದೇ ಈ ಕೋರ್ಸ್‌ನ ಉದ್ದೇಶ. ಅಂದರೆ ನಿರ್ದಿಷ್ಟ ಕಂಪನಿಗಳ ವೆಬ್‌ಸೈಟ್‌ಗಳ ಕಡೆಗೆ ವೆಬ್ ಟ್ರಾಫಿಕ್ ಹೆಚ್ಚಾಗುವಂತೆ ಮಾಡಲು ಏನೇನೆಲ್ಲ ಮಾಡಬಹುದು ಎಂಬುದನ್ನು ಹೇಳಿಕೊಡಲಾಗುತ್ತದೆ. ಉದಾಹರಣೆಗೆ 'ಕೀವರ್ಡ್'ಗಳ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು. ಅಂತರ್ಜಾಲ ಹುಡುಕಾಟದಲ್ಲಿ ಕೀವರ್ಡ್‌ಗಳ ಪಾತ್ರ ತುಂಬ ದೊಡ್ಡದು. ಯಾವುದೋ ಉತ್ಪನ್ನ, ಸೇವೆ ಅಥವಾ ವೆಬ್‌ಪುಟದ ಬಗ್ಗೆ ಒಂದು ಆನ್‌ಲೈನ್ ಲೇಖನ ಸಿದ್ಧಪಡಿಸುತ್ತೇವೆ ಎಂದರೆ ಅದರಲ್ಲಿ ನಿರ್ದಿಷ್ಟ ಕೀವರ್ಡ್‌ಗಳನ್ನು ಬಳಸಿದಷ್ಟು ಅದರ 'ರೀಚ್' ಹೆಚ್ಚಾಗುತ್ತದೆ.

ಕೀವರ್ಡ್‌ಗಳೆಂದರೆ ಜನರು ಹೆಚ್ಚಾಗಿ ಬಳಸುವ, ಹೆಚ್ಚಾಗಿ ಹುಡುಕುವ ಪದಗಳು. ಆನ್‌ಲೈನ್ ಬಳಕೆದಾರರು ಸಾಮಾನ್ಯವಾಗಿ ಏನನ್ನು ಹುಡುಕುತ್ತಿರುತ್ತಾರೆ, ಹಾಗೆ ಹುಡುಕುವಾಗ ಯಾವ ಪದಗಳನ್ನು ಸರ್ಚ್ ಮಾಡುತ್ತಾರೆ ಎಂಬುದನ್ನು ಎಸ್‌ಇಒ ಎಕ್ಸಿಕ್ಯೂಟಿವ್ಸ್ ಸದಾ ಗಮನಿಸುತ್ತಿರುತ್ತಾರೆ. ಗುಣಮಟ್ಟದ ಲೇಖನಗಳನ್ನು ಬರೆಯುವುದು ಮತ್ತು ಪ್ರಕಟಿಸುವುದು, ಹೆಚ್ಚು ರೀಚ್ ಇರುವ ಜಾಲತಾಣಗಳ ಕೊಂಡಿಗಳನ್ನು ಆ ಲೇಖನಗಳ ಮಧ್ಯೆ ಅಲ್ಲಲ್ಲಿ ಬಳಸುವುದು ಅವರ ಇನ್ನಿತರ ಕೆಲಸಗಳು. ಆನ್‌ಲೈನ್ ಸುದ್ದಿ ತಾಣಗಳೂ ತಮ್ಮೆಡೆಗೆ ಓದುಗರನ್ನು ಸೆಳೆಯಲು ಇಂತಹ ಎಸ್‌ಇಒ ತಂತ್ರಗಳನ್ನು ಅಳವಡಿಸಿಕೊಳ್ಳುತ್ತವೆ. ಎಸ್‌ಇಒ ಕೋರ್ಸ್‌ನಲ್ಲಿ ಈ ಕೌಶಲಗಳನ್ನು ಬೆಳೆಸಲು ಮಾರ್ಗದರ್ಶನ ಮಾಡಲಾಗುತ್ತದೆ.

ಕೋರ್ಸ್‌ಗಳು ಎಲ್ಲಿ ಲಭ್ಯ?

- ಎಸ್‌ಇಒ ಪ್ರಾಥಮಿಕ ಕೋರ್ಸ್ ಅನ್ನು ಗೂಗಲ್ ಉಚಿತವಾಗಿ ಒದಗಿಸುತ್ತಿದೆ. ಇದನ್ನು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯವು ಕೋರ್ಸ್‌ಇರಾ ಸಹಯೋಗದಲ್ಲಿ ಅಭಿವೃದ್ಧಿಪಡಿಸಿದೆ. ಮುಂದಿನ ಲಿಂಕ್ ಮೂಲಕ ಇದನ್ನು ಪಡೆಯಬಹುದು: https://learndigital.withgoogle.com/digitalgarage/course/seo-fundamentals
- ಲಿಂಕ್ಡ್‌ಇನ್(Linkedin) ಕೂಡ ಎಸ್‌ಇಒ ಸಂಬಂಧಿಸಿದ ಅನೇಕ ಕೋರ್ಸ್‌ಗಳನ್ನು ನೀಡುತ್ತಿದೆ. ಇವುಗಳಲ್ಲಿ ಕೆಲವು ಉಚಿತ, ಕೆಲವು ಶುಲ್ಕ ಅಪೇಕ್ಷಿಸುವವು ಇವೆ. ಈ ಕೊಂಡಿಯ ಮೂಲಕ ವಿವರ ಪಡೆಯಬಹುದು: https://www.linkedin.com/learning/topics/search-engine-optimization-seo
- ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಒದಗಿಸುವ ನೂರಾರು ಆನ್‌ಲೈನ್ ಕೋರ್ಸ್‌ಗಳಲ್ಲಿ ಎಸ್‌ಇಒ ಕುರಿತಾಗಿಯೂ ಸಾಕಷ್ಟು ಕೋರ್ಸ್‌ಗಳು ಲಭ್ಯವಿವೆ. ಇಲ್ಲಿ ನೋಡಿ: https://infyspringboard.onwingspan.com/web/en/page/home
- ಯುಡೆಮಿ ಎಂಬ ಪ್ರಸಿದ್ಧ ಶಿಕ್ಷಣ ತಂತ್ರಜ್ಞಾನ ಕಂಪನಿಯು ಎಸ್‌ಇಒ ಕುರಿತ ವಿವಿಧ ಹಂತಗಳ ಕೋರ್ಸ್‌ಗಳನ್ನು ಒದಗಿಸುತ್ತದೆ. ಇದಕ್ಕೆ ನಿರ್ದಿಷ್ಟ ಶುಲ್ಕಗಳನ್ನೂ ನಿಗದಿಪಡಿಸಿದೆ. ಆಸಕ್ತರು ಗಮನಿಸಬಹುದು: https://www.udemy.com

ಯಾರು ಮಾಡಬಹುದು?

ಆನ್‌ಲೈನ್ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ಯಾರು ಬೇಕಾದರೂ ಈ ಕೋರ್ಸ್ ಮಾಡಿಕೊಳ್ಳಬಹುದು. ನಿರ್ದಿಷ್ಟ ಔಪಚಾರಿಕ ವಿದ್ಯಾರ್ಹತೆ ಬೇಕಾಗಿಲ್ಲ. ಆದರೂ ಪಿಯುಸಿ, ಪದವಿ ಹಂತದಲ್ಲಿರುವವರು ಈ ಕೋರ್ಸ್ ಮಾಡಿಕೊಂಡರೆ ಹೆಚ್ಚು ಉಪಯುಕ್ತ.

ಕಂಪ್ಯೂಟರ್, ಇಂಟರ್ನೆಟ್ ಬಳಸುವ ಪ್ರಾಥಮಿಕ ತಿಳುವಳಿಕೆ, ಇಂಗ್ಲಿಷ್ ಓದುವ ಮತ್ತು ಬರೆಯುವ ಸಾಮಾನ್ಯ ಸಾಮರ್ಥ್ಯ ಇರುವವರಿಗೆ ಈ ಕೋರ್ಸ್‌ಗಳು ಹೆಚ್ಚು ಪ್ರಯೋಜನಕರ ಅನ್ನಿಸಬಹುದು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿರುವವರಿಗೆ ಇದು ಸಲ್ಲದ ಕೋರ್ಸ್ ಏನಲ್ಲ. ಏಕೆಂದರೆ ಕನ್ನಡದಲ್ಲೂ ಸಾಕಷ್ಟು ಆನ್‌ಲೈನ್ ಕಂಟೆಂಟ್ ಅಭಿವೃದ್ಧಿಪಡಿಸುವುದು ಇಂದಿನ ಅವಶ್ಯಕತೆ. ಆದರೂ ಇಂಗ್ಲಿಷ್ ತಿಳಿವಳಿಕೆಯಿಂದ ಅವಕಾಶಗಳು ತಾವಾಗಿಯೇ ಹೆಚ್ಚಾಗುತ್ತವೆ. ಕೋರ್ಸ್‌ಗಳ ಪಠ್ಯ, ಉಪನ್ಯಾಸಗಳು ಸರಳ ಇಂಗ್ಲಿಷಿನಲ್ಲಿ ಇರುತ್ತವೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ)

ಎಂ.ಸಿ.ಎ ಎಂ.ಎಸ್ಸಿ ಯಾವುದು ಸೂಕ್ತ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನೀಗ ಬಿ.ಎಸ್ಸಿ ಮೂರನೇ ವರ್ಷದಲ್ಲಿ ಓದುತ್ತಿದ್ದೇನೆ. ಮುಂದೆ ಎಂ.ಸಿ.ಎ ಅಥವಾ ಎಂ.ಎಸ್ಸಿ ಮಾಡಬೇಕೆಂದಿದ್ದೇನೆ. ಸರಿಯಾದ ಆಯ್ಕೆ ಯಾವುದೆಂದು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನೀವು ಯಾವ ವಿಷಯಗಳಲ್ಲಿ ಬಿ.ಎಸ್ಸಿ ಮಾಡುತ್ತಿದ್ದೀರೆಂದು ತಿಳಿಸಿಲ್ಲ. ಎಂ.ಸಿ.ಎ ಕೋರ್ಸ್, ಕಂಪ್ಯೂಟರ್ ವಿಜ್ಞಾನದ ಸಿದ್ಧಾಂತಗಳು ಮತ್ತು ಅಪ್ಲಿಕೇಷನ್ಸ್ ಕುರಿತು ಹೆಚ್ಚು ಕೇಂದ್ರೀಕೃತವಾಗಿರುತ್ತದೆ. ಎಂ.ಎಸ್ಸಿ ಕೋರ್ಸ್ ನಂತರದ ಅವಕಾಶಗಳು, ಕೋರ್ಸಿನ ವಿಷಯಗಳ ಮೇಲೆ ಅವಲಂಬಿತವಾಗಿರುತ್ತದೆ. ವೃತ್ತಿಯ ದೃಷ್ಟಿಯಿಂದ, ಎಂ.ಸಿ.ಎ ಅಥವಾ ಎಂ.ಎಸ್ಸಿ ನಂತರ, ಆಯಾ ಕ್ಷೇತ್ರಗಳಲ್ಲಿನ ಕೆಲಸದ ವಿವರಗಳಿಗೆ (ಜಾಬ್ ಪ್ರೊಫೈಲ್) ತಕ್ಕಂತೆ ಜ್ಞಾನ, ಆಸಕ್ತಿ, ಅಭಿರುಚಿ ಮತ್ತು ಕೌಶಲಗಳ ಅಗತ್ಯವಿರುತ್ತದೆ. ಹಾಗಾಗಿ, ನಿಮಗೆ ಯಾವ ವೃತ್ತಿ/ಕೋರ್ಸ್ ಸೂಕ್ತವೆಂದು ಪರಿಶೀಲಿಸಲು, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಒಲವು ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ, ವೃತ್ತಿಯೋಜನೆಯನ್ನು ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

2. ನಾನು ಬಿಕಾಂ ದ್ವಿತೀಯ ವರ್ಷದಲ್ಲಿದ್ದು, ಸಿಎ ಮಾಡಬೇಕೆಂದುಕೊಂಡಿದ್ದೇನೆ. ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕಿದೆ. ಹೇಗೆ ಆರಂಭಿಸಬೇಕು?

ಹೆಸರು, ಊರು ತಿಳಿಸಿಲ್ಲ.

ಸಿಎ ಮಾಡಲು ಎರಡು ಆಯ್ಕೆಗಳಿರುತ್ತದೆ. ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಫೌಂಡೇಷನ್ ಕೋರ್ಸ್‌ಗೆ ಸೇರಿ, ಶೇ 50ರಷ್ಟು ಅಂಕಗಳನ್ನು ಪಡೆದರೆ, ಇಂಟರ್‌ಮೀಡಿಯಟ್ ಕೋರ್ಸ್‌ಗೆ ಅರ್ಹತೆ ಸಿಗುತ್ತದೆ. ಬಿಕಾಂ ಪದವೀಧರರು ಫೌಂಡೇಷನ್ ಕೋರ್ಸ್ ಮಾಡುವ ಅಗತ್ಯವಿಲ್ಲ. ಬಿಕಾಂ ಪದವಿಯಲ್ಲಿ ಕನಿಷ್ಠ ಶೇ 55 ಅಂಕಗಳನ್ನು ಗಳಿಸಿ ನೇರವಾಗಿ ಸಿಎ ಇಂಟರ್‌ಮೀಡಿಯಟ್ ಕೋರ್ಸ್ ಮಾಡಬಹುದು. ಹಾಗಾಗಿ, ಈಗಲೇ ಫೌಂಡೇಷನ್ ಕೋರ್ಸ್ ಮಾಡುವುದು ಅಥವಾ ಬಿಕಾಂ ನಂತರ ನೇರವಾಗಿ ಇಂಟರ್‌ಮೀಡಿಯಟ್ ಕೋರ್ಸ್ ಮಾಡುವುದು, ನಿಮ್ಮ ಆಯ್ಕೆ. ಜೊತೆಗೆ, 3 ವರ್ಷದ ಆರ್ಟಿಕಲ್ಡ್ ತರಬೇತಿ ಪಡೆಯಲು, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳನ್ನು ಸೇರಬೇಕು. ಇಂಟರ್‌ಮೀಡಿಯೆಟ್ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಪರಿಶ್ರಮ, ಬದ್ಧತೆ, ಆತ್ಮವಿಶ್ವಾಸ ಮತ್ತು ಸಮಯದ ನಿರ್ವಹಣೆಯಿಂದ ಸಿಎ ಕೋರ್ಸ್ ಮಾಡಬಹುದು; ಕೋಚಿಂಗ್ ಕಡ್ಡಾಯವಲ್ಲ. ಮೇಲಾಗಿ, ಚಾರ್ಟರ್ಡ್ ಅಕೌಂಟೆಂಟ್ ಇನ್‌ಸ್ಟಿಟ್ಯೂಟ್‌ನಿಂದ ನೀಡುವ ಕೋಚಿಂಗ್ ಮತ್ತು ಮಾರ್ಗದರ್ಶನದ ಸೌಲಭ್ಯ ನೀವು ಉಪಯೋಗಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=RyNVWuRVjbA

3. ನನಗೆ ಕಿವಿ ಕೇಳಿಸುವುದಿಲ್ಲ. ನಾನು ಡಿಪ್ಲೊಮಾ (ಸಿವಿಲ್ ಎಂಜಿನಿಯರಿಂಗ್) ಮುಗಿಸಿದ್ದೇನೆ. ಆದರೆ ಕೆಲವು ವಿಷಯಗಳಲ್ಲಿ ಅನುತ್ತೀರ್ಣನಾಗಿದ್ದು, ನನ್ನ ಅಣ್ಣನ ಸಹಾಯದಿಂದ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಮುಂದೆ ಬಿ.ಇ ಮಾಡಬೇಕು; ಆದರೆ, ಪಾಠಗಳನ್ನು ಕೇಳಿಸಿಕೊಳ್ಳದೆ ಬಿಇ ಓದುವುದು ಕಷ್ಟ. ಕಾಲೇಜಿನಲ್ಲಿ ಉಪನ್ಯಾಸಕರನ್ನು ಕೇಳುವುದಕ್ಕೆ ಭಯ; ಏಕೆಂದರೆ, ಅವರು ನನಗೆ ಅರ್ಥ ಆಗುವ ಹಾಗೆ ಹೇಳುವುದಿಲ್ಲ. ನನ್ನ ಪ್ರಯತ್ನದಿಂದಲೇ ಉತ್ತೀರ್ಣನಾಗುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಶ್ರವಣ ದೋಷವಿದ್ದರೂ, ಡಿಪ್ಲೊಮಾ ಮುಗಿಸಿ ಎಂಜಿನಿಯರಿಂಗ್ ಪದವಿಯನ್ನು ಮಾಡುವ ಧ್ಯೇಯವಿರುವ ನಿಮಗೆ ಅಭಿನಂದನೆಗಳು. ಎಂಜಿನಿಯರಿಂಗ್ ಪದವಿಯನ್ನು ಮಾಡಲು ತಮಿಳುನಾಡಿನ ಕೃಷ್ಣನ್‌ಕೋವಿಲ್‌ನಲ್ಲಿರುವ ಕಲಸಲಿಂಗಮ್ ಅಕಾಡೆಮಿ ಆಫ್ ರಿಸರ್ಚ್ ಅಂಡ್ ಎಜುಕೇಷನ್ ಸಂಸ್ಥೆಯನ್ನು ಸಂಪರ್ಕಿಸಿ. ಈ ಸಂಸ್ಥೆ ಶ್ರವಣದೋಷವಿರುವ ವಿದ್ಯಾರ್ಥಿಗಳಿಗೆಂದೇ ವಿಶೇಷವಾದ ಬಿ.ಟೆಕ್ ಕೋರ್ಸ್ ಮಾಡಲು ಬೇಕಾಗುವ ಎಲ್ಲಾ ಮೂಲಸೌಕರ್ಯಗಳನ್ನು ಹೊಂದಿದೆ ಎನ್ನಲಾಗುತ್ತದೆ. ದೇಶದಲ್ಲಿರುವ ಇಂತಹ ಸಂಸ್ಥೆಗಳನ್ನು ಸಂಪರ್ಕಿಸಿ ನಿಮ್ಮ ಧ್ಯೇಯವನ್ನು ಸಾಧಿಸಲು ಪ್ರಯತ್ನಿಸಿ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: http://kare.kalasalingam.ac.in/course/b-techship-computer-science-and-engineering/ ಇದಲ್ಲದೆ, ನೀವು ಓದುವ ಕಾರ್ಯತಂತ್ರದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ, ನಿಮ್ಮ ಓದುವಿಕೆ ಹೆಚ್ಚು ಪರಿಣಾಮಕಾರಿಯಾಗಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ಲೇಖನವನ್ನು ಗಮನಿಸಿ: http://www.vpradeepkumar.com/effective-learning/

4. ನಾನು ದ್ವಿತೀಯ ಪಿಯುಸಿ ಪರೀಕ್ಷೆಯ ಎಲ್ಲಾ ವಿಷಯದಲ್ಲಿಯೂ ತೇರ್ಗಡೆಯಾಗಿರುತ್ತೇನೆ. ಒಂದೆರಡು ವಿಷಯದಲ್ಲಿ ಅತೃಪ್ತಿಯಿದೆ. ಫಲಿತಾಂಶವನ್ನು ತಿರಸ್ಕರಿಸಿ ಮತ್ತೆ ಪರೀಕ್ಷೆ ಬರೆದರೆ ಪುನರಾವರ್ತಿತ ಅಭ್ಯರ್ಥಿ ಎಂದು ಅಂಕ ಪಟ್ಟಿಯಲ್ಲಿ ನಮೂದಿಸುತ್ತಾರಾ? ಹಾಗೂ, ಅದರಲ್ಲಿ ಮೊದಲಿಗಿಂತಲೂ ಕಡಿಮೆ ಅಂಕಗಳು ಬಂದರೆ ಯಾವ ಅಂಕವನ್ನು ಪರಿಗಣಿಸುತ್ತಾರೆ?

ಹೆಸರು, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ, ಒಂದು ಬಾರಿ ಫಲಿತಾಂಶವನ್ನು ತಿರಸ್ಕರಿಸಿ, ಪೂರಕ ಪರೀಕ್ಷೆಗೆ ಹಾಜರಾದ ಮೇಲೆ ಹಿಂದಿನ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಮರುಪಡೆಯಲು ಅವಕಾಶವಿರುವುದಿಲ್ಲ. ಹಾಗೂ, ಅಂಕಪಟ್ಟಿಯಲ್ಲಿನ ವಿದ್ಯಾರ್ಥಿಯ ವಿವರದಲ್ಲಿ 'ಪುನರಾವರ್ತಿತ' (ರಿಪೀಟರ್) ಎಂಬ ಮಾಹಿತಿಯಿರುತ್ತದೆ.

ಹೆಚ್ಚಿನ ಪ್ರಶ್ನೋತ್ತರಗಳಿಗೆ prajavani.net/ carrer ನೋಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

MATHEMATICS

MULTIPLE CHOICE QUESTIONS

69) If $f(x) = \log_{x^2}(\log x)$, then $f'(x)$ at $x = e$ is

(A) 0 (B) 1 (C) $\frac{1}{e}$ (D) $\frac{1}{2e}$

Ans : (D) $\frac{1}{2e}$

Expln :– $f(x) = \log_{x^2}(\log x) = \frac{\log_e(\log x)}{\log_e x^2} = \frac{\log(\log x)}{2\log x}$

$$f'(x) = \frac{2\log x.\frac{1}{\log x}.\frac{1}{x} - \log(\log x).\frac{2}{x}}{4(\log x)^2}$$

At $x = e$, $\log x = 1$. $\therefore \log(\log x) = 0$.

$$f'(x) = \frac{2.\left(\frac{1}{e}\right)}{4} = \frac{1}{2e}.$$

70) The value of c in Lagrange's theorem for the function $f(x) = \log(\sin x)$ in the interval $\left[\frac{\pi}{6}, \frac{5\pi}{6}\right]$ is..............................

(A) $\frac{\pi}{4}$ (B) $\frac{\pi}{2}$

(C) $\frac{2\pi}{3}$ (D) None of these

Ans : (B) $\frac{\pi}{2}$

Expln :– $f(x) = \log(\sin x)$

$\therefore f'(x) = \frac{1}{\sin x}.\cos x = \cot x \therefore f'(c) = \cot c$

Lagrange's theorem is $f'(c) = \frac{f(b) - f(a)}{b - a}$

Here, $a = \frac{\pi}{6}$, $b = \frac{5\pi}{6}$

$$\therefore f'(c) = \frac{\log\sin\frac{5\pi}{6} - \log\sin\frac{\pi}{6}}{\frac{5\pi}{6} - \frac{\pi}{6}}$$

$$f'(c) = \frac{\log\frac{1}{2} - \log\frac{1}{2}}{\frac{4\pi}{6}} = 0$$

$\therefore f'(c) = \cot c = 0 \Rightarrow c = \frac{\pi}{2}$.

71) If $\tan(x + y) = 33$ and $x = \tan^{-1} 3$ then y is

(A) $\frac{3}{10}$ (B) $\frac{33}{10}$

(C) $\frac{1}{3}$ (D) $\tan^{-1}\frac{3}{10}$

Ans : (D) $\tan^{-1}\frac{3}{10}$

Expln : $-\tan(x + y) = \frac{\tan x + \tan y}{1 - \tan x \tan y}$

$33 = \frac{3 + \tan y}{1 - 3\tan y}$ $\therefore 33(1 - 3\tan y) = 3 + \tan y$

$33 - 99\tan y = 3 + \tan y$

$30 = 100\tan y$ $\therefore$ $\tan y = \frac{30}{100} = \frac{3}{10}$

$\therefore y = \tan^{-1}\frac{3}{10}$

72) $\lim_{x \to \infty}\left(\sqrt{a^2x^2 + bx + x} - ax\right) =$..............................

(A) $\frac{b}{2a}$ (B) $\frac{b}{a}$

(C) $\frac{b+1}{2a}$. (D) $\frac{2b}{a}$

Ans : C

Expln :–

$$\lim_{x \to \infty}\left[\left(\sqrt{a^2x^2 + bx + x} - ax\right) \times \frac{\sqrt{a^2x^2 + bx + x} + ax}{\sqrt{a^2x^2 + bx + x} + ax}\right]$$

$$\lim_{x \to \infty}\frac{a^2x^2 + bx + x - a^2x^2}{\sqrt{a^2x^2 + bx + x} + ax} = \lim_{x \to \infty}\frac{x(b+1)}{\sqrt{x^2\left(x^2 + \frac{b}{x} + \frac{1}{x}\right)} + ax}$$

$$\lim_{x \to \infty}\frac{x(b+1)}{x\left\{\sqrt{a^2 + \frac{b}{x} + \frac{1}{x}} + a\right\}} \lim_{x \to \infty}\frac{b+1}{\sqrt{a^2 + \frac{b}{x} + \frac{1}{x^2}} + a} = \frac{b+1}{2a}.$$

73) The solution of $\frac{6x}{4x - 1} < \frac{1}{2}$ is

(A) $x < -\frac{1}{8}$ (B) $-\frac{1}{8} < x < \frac{1}{4}$

(C) $x < -\frac{1}{8}$ and $x > \frac{1}{4}$ (D) $x > \frac{1}{8}$

Ans : (B) $-\frac{1}{8} < x < \frac{1}{4}$

Expln : $\frac{6x}{4x - 1} < \frac{1}{2} \Rightarrow \frac{6x}{4x - 1} - \frac{1}{2} < 0$

$\frac{12x - (4x - 1)}{2(4x - 1)} < 0$

$\frac{8x + 1}{2(4x - 1)} < 0$

A fraction less than zero means $Nr < 0$ or $Dr < 0$

i.e., $8x + 1 < 0$ or $4x - 1 < 0$.Let $4x - 1 < 0$ and $8x + 1 > 0$.

Then $x < \frac{1}{4}$, $8x + 1 > 0$ $\therefore 8x > -1$ i.e., $x > -\frac{1}{8}$.

$\therefore -\frac{1}{8} < x < \frac{1}{4}$.

PHYSICS

70) An object is placed at 20 cm in front of a concave mirror produces three times magnified real image. What is focal length of the concave morror?

(a) 10 cm (b) 15 cm

(c) 7.5 cm (d) 6.6 cm

Soln: (b): As image is real

$\therefore$ Magnification, $m = -\frac{v}{u} = -3$ or $v = 3u$

Here, $u = -20$ cm

$\therefore v = -60$ cm

According to mirror formula

$\frac{1}{f} = \frac{1}{v} + \frac{1}{u}$

$\frac{1}{f} = \frac{1}{-60} + \frac{1}{-20} = -\frac{4}{60}$

$f = -15$ cm

$|f| = 15$ cm

71) A focal length of a lens is 10 cm. What is power of a lens in dioptre?

(a) 15 D (b) 0.1 D

c) 20 D (d) 10 D

Soln: (d): Power of a lens,

$$P(\text{in dioptre}) = \frac{1}{\text{Focal length } f(\text{in cm})} = \frac{100}{f(\text{in cm})}$$

$$\therefore P = \frac{100}{10} = 10\text{ D}$$

72) A microscope is having objective of focal length 1cm and eyepiece of focal length 6 cm. If tube length is 30 cm and image is formed at the least distance of distinct vision, what is the magnification produced by the microscope? Take D = 25 cm.

(a) 25 (b) 6

(c) 125 (d) 150

Soln: (d): Here,

Focal length of objective, $f_0 = 1$ cm

Focal length of eyepiece, $f_e = 6$ cm

Least distance of distinct visison, $D = 25$ cm

Tube length, $L = 30$ cm

When the image is formed at the least distance of distinct vision, the magnification is

$$m = \frac{L}{f_0}\left(1 + \frac{D}{f_e}\right) = \frac{30}{1}\left(1 + \frac{25}{6}\right)$$

$= 155 \approx 150$

73) A fringe width of a certain interference pattern is $\beta = 0.002$ cm. What is the distance of 5^{th} dark fringe centre?

(a) 9×10^{-3} cm (b) 1×10^{-2} cm

(c) 3.28×10^{6} (d) 11×10^{-2} cm

Soln: (a): Here,

Fringe width, $\beta = 0.002\text{ cm} = 2 \times 10^{-3}$ cm

Distance of n^{th} dark fringe from centre

$x_n = \left(n - \frac{1}{2}\right)\frac{\lambda D}{d}$ where $n = 1, 2, 3, \ldots$

As $\beta = \frac{\lambda D}{d}$

$\therefore x_n = \left(n - \frac{1}{2}\right)\beta$

For 5^{th} dark fringe, $n = 5$

$\therefore x_5 = \left(5 - \frac{1}{2}\right)\beta = \frac{9}{2}\beta = \frac{9}{2} \times 2 \times 10^{-3}$ cm

$= 9 \times 10^{-3}$ cm

74) Diameter of the objective of a telescope is 200 cm. What is the resolving power of a telescope? Take wavelength of light $= 5000\text{ Å}$

(a) 1×10^{6} (b) 6.56×10^{6}

(c) 3.28×10^{6} (d) 3.28×10^{5}

Soln: (c): Here,

Diameter of the objective,

$D = 200\text{ cm} = 200 \times 10^{-2}\text{ m} = 2\text{m}$

Wavelength of light,

$\lambda = 5000\text{ Å} = 5000 \times 10^{-10}\text{ m} = 5 \times 10^{-7}$ m

Resolving power of a telescope $= \frac{D}{1.22\lambda}$

$= \frac{2}{1.22 \times 5 \times 10^{-7}} = \frac{4}{1.22} \times 10^{6} = 3.28 \times 10^{6}$

75) A polarized light of intensity I_0 is passed through another polarized whose pass axis makes an angle of 60^0 with the pass axis of the former. What is the intensity of emergent polarized light from second polarizer?

(a) $I = I_0/5$ **(b)** $I = I_0$ **(c)** $I_0/4$ **(d)** $I = I_0/6$

Soln: (c): According to Malus' law, the intensity of emergent polarized light from second polarizer is $I = I_0\cos^2\theta$

Where θ the angle between pass axes of two polarizer's and I_0 is is the intensity of polarized light after passing through the first polarizer.

Here, $\theta = 60^0$

$\therefore I = I_0\cos^2 60^0 = I_0\left(\frac{1}{2}\right)^2 = \frac{I_0}{4}$

ಪಠ್ಯಕ್ರಮ ಆಯ್ಕೆ; ಅರಿತು, ಮುನ್ನಡೆಯಿರಿ

ಪ್ರಸ್ತುತ ವಿವಿಧ ಪಠ್ಯಕ್ರಮಗಳು ಚಾಲ್ತಿಯಲ್ಲಿವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ಪೋಷಕರಲ್ಲಿರುವ ಗೊಂದಲ. ಈ ಸರಣಿಯಲ್ಲಿ ಪಠ್ಯಕ್ರಮಗಳ ವೈಶಿಷ್ಟಗಳನ್ನು ಪರಿಚಯಿಸಲಾಗುತ್ತಿದೆ.

ವೆಂಕಟ ಸುಬ್ಬರಾವ್. ವಿ


'ನನ್ನ ಮಗನನ್ನು ಐ.ಸಿ.ಎಸ್.ಇ. ಸಿಲಬಸ್ ಇರುವ ಶಾಲೆಗೆ ಸೇರಿಸಬೇಕು ಅಂತಾ ಅಂದ್ಕೊಂಡಿದ್ದೀವಿ'– ಪೋಷಕರೊಬ್ಬರು ಮಾತು ಆರಂಭಿಸಿದರು.

'ಅದು ತುಂಬಾ ಸ್ಟ್ಯಾಂಡರ್ಡ್ ಅಂತೆ, ಅಲ್ಲವಾ?' – 'ಸಿ.ಬಿ.ಎಸ್.ಇ'ಗೆ ಸೇರಿಸಿಬಿಡಿ. ಅದಕ್ಕಿಂತ ಸ್ವಲ್ಪ ಸುಲಭವಾಗಬಹುದು. ಸಿಬಿಎಸ್ಇ ಸ್ಕೂಲ್‌ಗಳು ತುಂಬಾ ಇವೆಯಲ್ಲಾ'– ಅವರ ಜೊತೆಯಲ್ಲಿದ್ದವರು ಮಾತು ಮುಂದುವರಿಸಿದರು. ಅನಿಸಿಕೆ, ಅಭಿಪ್ರಾಯದ ಜೊತೆಗೆ ಸಲಹೆಯನ್ನೂ ನೀಡಿದರು.

'ನನ್ನ ಮಗಳನ್ನು ಸ್ಟೇಟ್ ಸಿಲಬಸ್ ಇರುವ ಶಾಲೆಗೆ ಸೇರಿಸು ಅಂತಿದ್ದಾರೆ. ಸ್ಕೋರ್ ಮಾಡುವುದು ಸುಲಭ ಅಂತೆ. ಮುಂದಕ್ಕೂ ಬಹಳ ಒಳ್ಳೆಯದಾಗುತ್ತದಂತೆ'– ಅವರ ಮಾತಿನ ನಡುವೆ, ಮತ್ತೊಂದು ಧ್ವನಿ ಸೇರಿತು.

'ಈಗ ಎನ್ಐಒಎಸ್ ಅಂತೆ. ಅದು ಓಪನ್ ಸ್ಕೂಲ್ ಅಂತೆ. ಶಾಲೆಗಳು ಎಲ್ಲಿವೆಯೋ. ಗೊತ್ತಿಲ್ಲಪ್ಪ... ಆಮೇಲೆ, ನನ್ನ ಫ್ರೆಂಡ್, ತನ್ನ ಮಗನನ್ನು ಐ.ಜಿ.ಸಿ.ಎಸ್.ಇ ಸಿಲಬಸ್ ಶಾಲೆಗೆ ಸೇರಿಸಿದ್ದ. ಅದೇನೋ, ಬೇರೆ ದೇಶಗಳಿಗೆ ಹೋದಾಗ, ತುಂಬಾ ಅನುಕೂಲವಾಗುತ್ತದೆ...' ಮಾತುಗಳ ಪೋಣಿಸುವಿಕೆಗೆ ಕೊನೆಯೇ ಇಲ್ಲದಂತೆ, ಪೋಷಕರ ಚರ್ಚೆ ಮುಂದುವರಿದಿತ್ತು...!

***



ಪ್ರತಿ ವರ್ಷ ಶೈಕ್ಷಣಿಕ ವರ್ಷದ ಆರಂಭದಲ್ಲಿ, ಅನೇಕ ಪೋಷಕರಲ್ಲಿ ಇಂಥದ್ದೊಂದು ಗೊಂದಲವಿರುವುದಂತೂ ಸಹಜ. ಹಲವು ಪೋಷಕರು, ಪಠ್ಯಕ್ರಮಗಳ ಕುರಿತು ಸರಿಯಾದ ಮಾಹಿತಿ ತಿಳಿಯದೇ, ಮಕ್ಕಳನ್ನು ಶಾಲೆಗೆ ಸೇರಿಸುತ್ತಾರೆ. ಮಕ್ಕಳಿಗೆ ಅದು ಒಗ್ಗದಿದ್ದಾಗ, ಅರ್ಧಕ್ಕೆ ಶಾಲೆ ಬಿಡಿಸಿ, ಪಠ್ಯಕ್ರಮ ಬದಲಿಸುವವರು ಇದ್ದಾರೆ.

ಭಾಗ 1

ನೋಡಿ, ನಮ್ಮ ರಾಜ್ಯದಲ್ಲಿ ಪ್ರಚಲಿತದಲ್ಲಿರುವ ಪಠ್ಯಕ್ರಮಗಳೆಂದರೆ; ಸ್ಟೇಟ್ ಸಿಲಬಸ್(ರಾಜ್ಯ ಪಠ್ಯಕ್ರಮ), ಸಿ.ಬಿ.ಎಸ್.ಇ(ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ ಪಠ್ಯಕ್ರಮ), ಐಸಿಎಸ್ಇ, ಕೇಂಬ್ರಿಡ್ಜ್ ಅಂತರರಾಷ್ಟ್ರೀಯ ಪಠ್ಯಕ್ರಮ, ಐ.ಜಿ.ಸಿ.ಎಸ್.ಇ, ಐ.ಬಿ ಹಾಗೂ ಎನ್.ಐ.ಒ.ಎಸ್. ಹಾಗೆಯೇ ಇತ್ತೀಚಿನ ದಿನಗಳಲ್ಲಿ 'ಹೋಮ್ ಸ್ಕೂಲಿಂಗ್' ಕೂಡಾ ಮುನ್ನಲೆಗೆ ಬರುತ್ತಿದೆ.

ಇವುಗಳಲ್ಲಿ ತಮ್ಮ ಮಕ್ಕಳಿಗೆ ಸರಿಹೊಂದುವ ಪಠ್ಯಕ್ರಮ ನಿರ್ಧರಿಸುವುದು ಬಹಳ ಮುಖ್ಯ ಘಟ್ಟ. ಹಾಗಾಗಿ, ಪಠ್ಯಕ್ರಮದ ಆಯ್ಕೆಗೂ ಮೊದಲು, ಈ ಪಠ್ಯಕ್ರಮಗಳ ವೈಶಿಷ್ಟ್ಯಗಳನ್ನು ತಿಳಿಯಬೇಕು. ಎಲ್ಲ ಪಠ್ಯಕ್ರಮಗಳೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುವಂತೆಯೇ ರೂಪಿಸಲ್ಪಟ್ಟಿರುತ್ತವೆ. ಆದರೆ ನಿಮ್ಮ ಅವಶ್ಯಕತೆಗೆ ಸರಿಹೊಂದುವ ಪಠ್ಯಕ್ರಮವನ್ನು ಆರಿಸಿಕೊಳ್ಳಬಹುದು. ಈಗ ನಾವು, ಒಂದೊಂದಾಗಿ ಪಠ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ಅರಿಯೋಣ

ಸ್ಟೇಟ್ ಸಿಲಬಸ್(ರಾಜ್ಯ ಪಠ್ಯಕ್ರಮ):

ಇದು ರಾಜ್ಯ ಸರ್ಕಾರ ರೂಪಿಸುವ ಪಠ್ಯಕ್ರಮ. ನಮ್ಮಲ್ಲಿ ಬಹಳಷ್ಟು ಜನ ಇದನ್ನು ಓದಿದವರೇ ಇದ್ದೇವೆ. ಬಹಳ ಹಿಂದಿನಿಂದಲೂ ಲಕ್ಷಾಂತರ ವಿದ್ಯಾರ್ಥಿಗಳು ಈ ಪಠ್ಯಕ್ರಮದಲ್ಲಿ ಓದಿ ಮುಂದೆ ಬಂದಿದ್ದಾರೆ.

ಬೇರೆಯ ಶಾಲೆಗಳಿಗೆ ಹೋಲಿಸಿದರೆ ಈ ಪಠ್ಯಕ್ರಮಗಳಿರುವ ಬಹುತೇಕ ಖಾಸಗಿ ಶಾಲೆಗಳಲ್ಲಿ ಶುಲ್ಕ (ಫೀಸ್) ಕಡಿಮೆಯಿರುತ್ತದೆ. ರಾಜ್ಯದ ಎಲ್ಲ ಭಾಗಗಳಲ್ಲೂ ಈ ಶಾಲೆಗಳು ಇರುವುದರಿಂದ, ರಾಜ್ಯದ ಒಳಗಡೆ ವರ್ಗಾವಣೆಯಾಗುವ ಉದ್ಯೋಗಸ್ಥರ ಮಕ್ಕಳಿಗೆ ಇದು ಸೂಕ್ತ ಪಠ್ಯಕ್ರಮ.

ಹಲವಾರು ಶಿಕ್ಷಣ ತಜ್ಞರು ಸೇರಿ ಇದನ್ನು ರೂಪಿಸುತ್ತಾರೆ. ಹಾಗಾಗಿ, ಇದು ಮಕ್ಕಳ ಸರ್ವತೋಮುಖ ಬೆಳವಣಿಗೆ ಗುರಿಯಾಗಿಸಿಕೊಂಡಿರುತ್ತದೆ. ರಾಜ್ಯ ಸರ್ಕಾರದ ಎಲ್ಲ ಅಧಿಸೂಚನೆಗಳನ್ನು ಅನುಷ್ಠಾನಗೊಳಿಸಿ ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲಾಗುತ್ತದೆ. ಈ ಪಠ್ಯಕ್ರಮ ಆಂಗ್ಲಮಾಧ್ಯಮದಲ್ಲೂ ಲಭ್ಯವಿದೆ.

ಸ್ಟೇಟ್ ಪಠ್ಯಕ್ರಮ ಸುಲಭವೇ ?

ಈ ಪ್ರಶ್ನೆ ಬಹಳ ಮಂದಿಯದ್ದು. 'ಹಾಗೇನಿಲ್ಲ. ಚೆನ್ನಾಗಿ ಓದಿದರೆ ಎಲ್ಲವೂ ಸುಲಭ. ಇದು ಸಹಜವಾಗಿ ಸುಲಭವಿದೆ' ಎನ್ನುತ್ತಾರೆ ಬೆಂಗಳೂರಿನ ವಿಡಿಯಾ ಪೂರ್ಣಪ್ರಜ್ಞ ಶಾಲೆಯ ಪ್ರಾಂಶುಪಾಲ ಕೆ.ಎಸ್. ಶ್ರೀಧರ್. 'ವಿದ್ಯಾರ್ಥಿಗಳು ಹೆಚ್ಚು ಒತ್ತಡಕ್ಕೆ ಒಳಗಾಗದೇ ವಿಷಯಗಳನ್ನು ಅರಿತು ಹೆಚ್ಚಿನ ಅಂಕ ಪಡೆಯಲು ಈ ಪಠ್ಯಕ್ರಮ ಸಹಾಯಕ' ಎಂದು ಅವರು ಅಭಿಪ್ರಾಯಪಡುತ್ತಾರೆ. 'ಈ ಪಠ್ಯಕ್ರಮದಲ್ಲಿ ಓದಿದ ಮಕ್ಕಳಿಗೆ ಪಿಯುಸಿಯಲ್ಲಿ ಕಷ್ಟವಾಗುತ್ತದೆ' ಎಂಬ ಮಾತಿದೆಯಲ್ಲಾ ಎಂಬ ಪ್ರಶ್ನೆಗೆ, ಶ್ರೀಧರ್ ಹೇಳುವುದು ಹೀಗೆ;'ಅದು ತಪ್ಪು ಕಲ್ಪನೆ. ಬೇರೆಯದಕ್ಕಿಂತ, ಈ ಪಠ್ಯಕ್ರಮ ಓದಿದ ಮಕ್ಕಳೇ ಚೆನ್ನಾಗಿ ಅಂಕಗಳಿಸಿದ ಉದಾಹರಣೆಗಳಿವೆ' ಎನ್ನುತ್ತಾರೆ.

'ರಾಜ್ಯ ಪಠ್ಯಕ್ರಮದಲ್ಲಿ ಓದಿದ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಿದೆ. 9 ಮತ್ತು 10ನೇ ತರಗತಿಯ ಕೆಲವು ವಿಷಯಗಳಲ್ಲಿ ಸಿಬಿಎಸ್ಇಯಲ್ಲಿ ಉಪಯೋಗಿಸುವ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನೇ ರಾಜ್ಯ ಪಠ್ಯಕ್ರಮದಲ್ಲೂ ಉಪಯೋಗಿಸಲಾಗುತ್ತಿದೆ. ಹಾಗಾಗಿ ಮಕ್ಕಳು ಬೇರೆಯ ಪಠ್ಯಕ್ರಮಗಳಲ್ಲಿ ಕಲಿಯುವಂತೆಯೇ ಕಲಿಯುತ್ತಾರೆ' ಎನ್ನುತ್ತಾರೆ ಶ್ರೀಧರ್.

ಹೀಗಾಗಿ ಯಾವ ಪಠ್ಯಕ್ರಮಕ್ಕಿಂತಲೂ, ರಾಜ್ಯ ಪಠ್ಯಕ್ರಮ ಕಡಿಮೆಯೇನಿಲ್ಲ ಎನ್ನವುದನ್ನು ಅರಿತುಕೊಳ್ಳಬೇಕಿದೆ.

(ಮುಂದಿನ ಸಂಚಿಕೆಯಲ್ಲಿ ಸಿ.ಬಿ.ಎಸ್.ಇ ಮತ್ತು ಐ.ಸಿ.ಎಸ್.ಇ. ಪಠ್ಯಕ್ರಮಗಳ ವೈಶಿಷ್ಟ್ಯಗಳು...)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರಬ್ರಮ್ ಪ್ರೈ. ಲಿ, ಬೆಂಗಳೂರು)

ಗೂಂಜ್ ಅರ್ಬನ್ ಫೆಲೊಷಿಪ್ 2023–24

ಫೆಲೊಷಿಪ್

ವಿವರ: ಗೂಂಜ್ ಸಂಸ್ಥೆ (ಲಾಭರಹಿತ ಸಂಸ್ಥೆ), ಪದವಿ ವಿದ್ಯಾರ್ಥಿಗಳಿಗಾಗಿ ರೂಪಿಸಿರುವ ಕಾರ್ಯಕ್ರಮ 'ಗೂಂಜ್ ಅರ್ಬನ್ ಫೆಲೊಷಿಪ್ 2023–24'. ಇದು 12 ತಿಂಗಳ ಅವಧಿಯ ಕಾರ್ಯಕ್ರಮವಾಗಿದೆ. ಈ ಫೆಲೊಷಿಪ್‌ಗೆ ಆಯ್ಕೆಯಾದವರು, ಭಾರತದ ಯಾವುದೇ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಡೆಯುತ್ತಿರುವ ಸಮುದಾಯ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಅರ್ಹತೆ 21 ರಿಂದ 30 ವರ್ಷಗಳ ವಯೋಮಾನದ (31ನೇ ಜುಲೈ 2023ಕ್ಕೆ ಅನ್ವಯಿಸುವಂತೆ), ಪದವೀಧರ ವಿದ್ಯಾರ್ಥಿಗಳು ಈ ಫೆಲೊಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಓದಲು, ಬರೆಯಲು ಮತ್ತು ಮಾತನಾಡಲು ಬರುವುದು ಕಡ್ಡಾಯ.

ಆರ್ಥಿಕ ನೆರವು: ಪ್ರತಿ ತಿಂಗಳು ಸ್ಟೈಫಂಡ್ ₹20,000

ಅರ್ಜಿ ಸಲ್ಲಿಕೆಗೆ ಕೊನೆ ದಿನ: ಮೇ 25, 2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/GUF3



❦ ಸುಭಾಷಿತ ❦

ಭಾಷೆಯು ಭಾವನೆಯ ಪ್ರತಿಬಿಂಬ.

-ಶ್ರೀರಂಗ

ಪಾತಕಿ ಸಿಂಗ್ ಶಿಕ್ಷೆ ಮೊಟಕು ಬಿಹಾರದಲ್ಲಿ ಅಸಮರ್ಥನೀಯ ನಡೆ

ಆನಂದ್ ಮೋಹನ್ ಸಿಂಗ್‌ಗೆ ವಿಧಿಸಿರುವ ಜೈಲು ಶಿಕ್ಷೆಯನ್ನು ಕಡಿಮೆ ಮಾಡಿರುವ ಬಿಹಾರ ರಾಜ್ಯ ಸರ್ಕಾರದ ನಡೆಯು ಕಾನೂನಿಗೆ ತೋರಿರುವ ಅಗೌರವ. ಆನಂದ್ ಮೋಹನ್ ಸಿಂಗ್ ಮೊದಲು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ವ್ಯಕ್ತಿ, ನಂತರದಲ್ಲಿ ರಾಜಕಾರಣಿ ಆಗಿ ಬದಲಾದವ. ಯುವ, ದಲಿತ ಐಎಎಸ್ ಅಧಿಕಾರಿಯೊಬ್ಬರನ್ನು ಹತ್ಯೆ ಮಾಡಿದ ಅಪರಾಧಕ್ಕಾಗಿ ಸಿಂಗ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಸಿಂಗ್ 14 ವರ್ಷಗಳಿಂದ ಜೈಲಿನಲ್ಲಿದ್ದ. ಸಿಂಗ್‌ಗೆ ವಿಧಿಸಿರುವ ಶಿಕ್ಷೆ ಕಡಿಮೆ ಮಾಡಿ, ಅವನನ್ನು ಜೈಲಿನಿಂದ ಬಿಡುಗಡೆ ಮಾಡುವುದಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಬಿಹಾರ ಸರ್ಕಾರವು 'ಬಿಹಾರ ಪೊಲೀಸ್ ಕಾರಾಗೃಹ ಕೈಪಿಡಿ, 2012'ಕ್ಕೆ ತಿದ್ದುಪಡಿ ತಂದಿದೆ. ಯಾರ ಜೈಲು ಶಿಕ್ಷೆಯನ್ನು ಕಡಿಮೆ ಮಾಡುವಂತಿಲ್ಲ ಎಂಬ ಪಟ್ಟಿಯಲ್ಲಿ ಇರುವ 'ಕರ್ತವ್ಯದಲ್ಲಿರುವ ಸರ್ಕಾರಿ ನೌಕರನ ಕೊಲೆ' ಎಂಬ ವಿವರಣೆಯನ್ನು ತೆಗೆದುಹಾಕುವ ಮೂಲಕ, ಸಿಂಗ್‌ನನ್ನು ಜೈಲಿನಿಂದ ಬಿಡುಗಡೆ ಮಾಡಲು ಸರ್ಕಾರವು ಅವಕಾಶ ಮಾಡಿಕೊಟ್ಟಿದೆ. ಅಂದರೆ, ಕ್ರಿಮಿನಲ್ ಅಪರಾಧ ಎಸಗಿದ ವ್ಯಕ್ತಿಯೊಬ್ಬ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನಿಯಮವನ್ನೇ ಬದಲಾಯಿಸಿದಂತೆ ಆಗಿದೆ. ಸರ್ಕಾರದ ಈ ನಡೆಯು ಸಮಾಜಕ್ಕೆ ಬಹಳ ಕೆಟ್ಟ ಸಂದೇಶವೊಂದನ್ನು ರವಾನಿಸುತ್ತದೆ. ಯಾವ ನಾಚಿಕೆಯೂ ಇಲ್ಲದೆ ನಿಯಮಗಳನ್ನು ಹೀಗೆ ಬದಲಾಯಿಸಿರುವುದು ಅನೈತಿಕ ನಡೆ.



ಅಪರಾಧಿಯೊಬ್ಬನನ್ನು ಜೈಲಿನಿಂದ ಬಿಡುಗಡೆ ಮಾಡುವುದಕ್ಕಾಗಿ ಬಿಹಾರ ಪೊಲೀಸ್ ಕಾರಾಗೃಹ ಕೈಪಿಡಿಗೇ ತಿದ್ದುಪಡಿ ತಂದಿರುವ ಬಿಹಾರ ಸರ್ಕಾರದ ನಡೆಯು ಸಮಾಜಕ್ಕೆ ಬಹಳ ಕೆಟ್ಟ ಸಂದೇಶವನ್ನು ರವಾನಿಸುತ್ತದೆ

ಆನಂದ್ ಮೋಹನ್ ಸಿಂಗ್ ಮಾಜಿ ಸಂಸದ ಕೂಡ ಹೌದು. ಈತ ಬಿಹಾರ ಪೀಪಲ್ಸ್ ಪಾರ್ಟಿಯ (ಬಿಪಿಪಿ) ಸಂಸ್ಥಾಪಕ ನಾಯಕ. ಈ ಪಕ್ಷವು ಬಹುತೇಕ ಎಲ್ಲ ಪಕ್ಷಗಳ ಜೊತೆಯಲ್ಲಿಯೂ ಮೈತ್ರಿ ಹೊಂದಿತ್ತು. ಜೆಡಿಯು ಹಾಗೂ ಬಿಜೆಪಿ ಜೊತೆ ಕೂಡ ಇದು ಮೈತ್ರಿ ಹೊಂದಿತ್ತು. ಅಂತಿಮವಾಗಿ ಇದು ಕಾಂಗ್ರೆಸ್ ಜೊತೆ ವಿಲೀನ ಆಯಿತು. ಸಿಂಗ್ ರಜಪೂತ ಸಮುದಾಯಕ್ಕೆ ಸೇರಿದ ನಾಯಕ. ಬಿಹಾರದಲ್ಲಿ ಬಲಿಷ್ಠವಾಗಿರುವ, ಗಣನೀಯವಾಗಿಯೂ ಇರುವ ಈ ಸಮುದಾಯದಲ್ಲಿ ಸಿಂಗ್ ಪ್ರಭಾವಿ ಕೂಡ ಹೌದು. ಸಿಂಗ್‌ನನ್ನು ತಮ್ಮ ಮಹಾಘಟಬಂಧನದ ಕಡೆ ಸೆಳೆದುಕೊಂಡು, ತಮ್ಮ ನೆಲೆಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವ ಲೆಕ್ಕಾಚಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರದ್ದು. ಸಿಂಗ್, ವಾಸ್ತವದಲ್ಲಿ, ಈ ಕೊಲೆ ಪ್ರಕರಣದಲ್ಲಿ ಮರಣದಂಡನೆಗೆ ಗುರಿಯಾಗಿದ್ದ. ಆದರೆ ಮರಣದಂಡನೆಯನ್ನು ಪಟ್ನಾ ಹೈಕೋರ್ಟ್ ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತು. ಇಲ್ಲಿ ವ್ಯಂಗ್ಯವೆಂದರೆ, ಹಿಂದೆ 'ಇದೇ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು, ಸಿಂಗ್‌ಗೆ ವಿಧಿಸಿದ್ದ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸುವುದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಕೊಲೆ ಮಾತ್ರವೇ ಅಲ್ಲದೆ, ಸಿಂಗ್ ಇನ್ನೂ ಹಲವು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸಿದ್ದಾನೆ. ಸಿಂಗ್ ಬರೀ ರಾಜಕಾರಣಿ ಅಲ್ಲ. ಬದಲಿಗೆ, ಆತ ಒಬ್ಬ ಕ್ರಿಮಿನಲ್. ಈ ವ್ಯಕ್ತಿ ಬಿಹಾರದ ಅಪರಾಧ–ರಾಜಕಾರಣದ ಲಾಂಛನವಾಗಿದ್ದಾನೆ. ಇಂಥವರನ್ನು ಜೈಲಿನಿಂದ ಬಿಡುಗಡೆ ಮಾಡುವುದಕ್ಕಾಗಿ ನಿಯಮಗಳನ್ನು ಬದಲಾಯಿಸಿರುವುದು ಸಿನಿಕ ರಾಜಕಾರಣಕ್ಕೆ ಉದಾಹರಣೆ.

ಬಿಜೆಪಿ ಎದುರಿನ ವಿರೋಧ ಪಕ್ಷಗಳ ಮೈತ್ರಿಕೂಟವನ್ನು ರಚಿಸುವ ಯತ್ನಗಳಲ್ಲಿ ನಿತೀಶ್ ಕುಮಾರ್ ಅವರು ಕೂಡ ಮುಂದಾಳತ್ವ ವಹಿಸಿದ್ದಾರೆ. ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದ ಸಿಂಗ್‌ನನ್ನು ಜೈಲಿನಿಂದ ಹೊರಗೆ ತರಲು ನಿಯಮಗಳನ್ನು ಬದಲಾಯಿಸುವ ಕೆಲಸವು ಇಂಥದ್ದೊಂದು ಮೈತ್ರಿಕೂಟ ರಚಿಸಲು ನಿತೀಶ್ ಅವರು ಹೊಂದಿರುವ ನೈತಿಕ ಹಕ್ಕನ್ನು ಇಲ್ಲವಾಗಿಸುತ್ತದೆ. ಇದು ನಿತೀಶ್ ಅವರ ವ್ಯಕ್ತಿತ್ವವನ್ನು ಹೊಂದಿರುವ ಹೆಸರನ್ನು ಹಾಳು ಮಾಡುತ್ತದೆ. ಅವರ ವಿಶ್ವಾಸಾರ್ಹತೆಗೆ ಪೆಟ್ಟು ಕೊಡುತ್ತದೆ. ಬಿಲ್ಕಿಸ್ ಬಾನು ಪ್ರಕರಣದಲ್ಲಿ, ಅಪರಾಧಿಗಳ ಶಿಕ್ಷೆಯ ಪ್ರಮಾಣ ತಗ್ಗಿಸಿದ ರೀತಿಯಲ್ಲೇ ಈ ಪ್ರಕರಣ ಕೂಡ ಕಾಣುತ್ತದೆ. ಬಿಲ್ಕಿಸ್ ಬಾನು ಪ್ರಕರಣದಲ್ಲಿನ ಅಪರಾಧಿಗಳ ವಿಚಾರವಾಗಿ ಗುಜರಾತ್‌ನ ಬಿಜೆಪಿ ನೇತೃತ್ವದ ಸರ್ಕಾರ ಇರಿಸಿದ ಹೆಜ್ಜೆಗಳನ್ನು ಟೀಕಿಸಿದ ವಿರೋಧ ಪಕ್ಷಗಳ ನಡೆಯು ಈಗ ಪೊಳ್ಳು ಎಂಬಂತೆ ಕಾಣಬಹುದು. ಹಾಗೆಯೇ, ಬಿಹಾರ ಸರ್ಕಾರದ ಈಗಿನ ಕ್ರಮವನ್ನು ಬಿಜೆಪಿ ಟೀಕಿಸುವುದು ಕೂಡ ಪೊಳ್ಳುತನದಿಂದ ಕೂಡಿದೆ. ಈ ರೀತಿಯಲ್ಲಿ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವುದು, ಅದನ್ನು ಬಿಜೆಪಿ ನೇತೃತ್ವದ ಸರ್ಕಾರ ಮಾಡಲಿ ಅಥವಾ ಇತರ ಯಾವುದೇ ಪಕ್ಷ ಮಾಡಲಿ, ಅಪರಾಧಿಗಳು ಹಾಗೂ ರಾಜಕಾರಣದ ನಡುವಿನ ನಂಟನ್ನು ಇನ್ನಷ್ಟು ಹೆಚ್ಚಿಸುತ್ತದೆ.

ವಿಕಾರಗಳು ವಿಜೃಂಭಿಸುತ್ತಿರುವ ಚುನಾವಣಾ ಹೊತ್ತಿನಲ್ಲಿ ಹಕ್ಕೊತ್ತಾಯ ಮುನ್ನೆಲೆಗೆ ಬರಬೇಕು

ಚುನಾವಣೆಯ ಹೊಸ್ತಿಲಲ್ಲಿ ಶ್ರಮಿಕವರ್ಗ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕರ್ನಾಟಕವು ಚುನಾವಣೆಯ ಹೊಸ್ತಿಲಲ್ಲಿ ಇರುವಾಗ ಮತ್ತೊಂದು ಮೇ ದಿನ ಬಂದಿದೆ. ಮೇ ದಿನಾಚರಣೆಯು ಸಮಸ್ತ ಶ್ರಮಜೀವಿಗಳ ಸಂಕಲ್ಪದ ಸಂಕೇತ. 1886ರ ಮೇ ಒಂದರಂದು ಷಿಕಾಗೊವಿನಲ್ಲಿ, ಎಂಟು ಗಂಟೆ ಅವಧಿಯ ಕೆಲಸದ ಮಿತಿಗಾಗಿ ಒತ್ತಾಯಿಸಿ ಬೃಹತ್ ಮುಷ್ಕರ ನಡೆಯಿತು. ಮೇ ಮೂರರಂದು ಗೋಲಿಬಾರ್ ನಡೆದು ಆರು ಜನ ಕಾರ್ಮಿಕರು ಹುತಾತ್ಮರಾದರು. 1889ರ ಅಂತರರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್, ಮೇ ಒಂದನ್ನು ಕಾರ್ಮಿಕ ದಿನವಾಗಿ ಆಚರಿಸಬೇಕೆಂದು ಕರೆ ಕೊಟ್ಟಿತು. 1890ರಿಂದ ಮೇ ದಿನದ ಆಚರಣೆ ಆರಂಭವಾಯಿತು.

1900ರಲ್ಲಿಯೇ ಲೆನಿನ್ ಅವರು ಕಾರ್ಮಿಕ ಚಳವಳಿಯ ಮಿತಿಗಳ ಬಗ್ಗೆ ವಿಮರ್ಶಾತ್ಮಕ ಮುನ್ನೋಟವನ್ನು ಮಂಡಿಸಿದ್ದರು: 'ಎಂಟು ಗಂಟೆ ದುಡಿಮೆಯ ಬೇಡಿಕೆಯು ಕೆಲವು ಮಾಲೀಕರ ಎದುರು ಇಟ್ಟ ಬೇಡಿಕೆ ಮಾತ್ರವಲ್ಲ. ಕಾರ್ಮಿಕರು ಈ ಬೇಡಿಕೆಯ ಸ್ವರೂಪವನ್ನು ಪುಕ್ಕಟೆ ರೈಲು ಟಿಕೆಟ್, ಕಾವಲುಗಾರನ ವಜಾ ಮನ್ನಾ ಮುಂತಾದ ಒತ್ತಾಯಗಳ ಮಟ್ಟಕ್ಕೆ ಇಳಿಸಬಾರದು. ಅಂತರರಾಷ್ಟ್ರೀಯ ಸಮಾಜವಾದಿ ಆಂದೋಲನಗಳೊಂದಿಗೆ ಕಾರ್ಮಿಕರು ಒಂದಾಗಬೇಕು. ಎಲ್ಲ ದೇಶಗಳ ಕಾರ್ಮಿಕ ವರ್ಗದ ವಿಮೋಚನಾ ಹೋರಾಟಗಳೊಂದಿಗೆ ಸಂಬಂಧ ಸ್ಥಾಪಿಸಬೇಕು'. ಲೆನಿನ್ ಅವರ ಈ ನುಡಿಗಳು ಶ್ರಮಜೀವಿ ಚಳವಳಿಯ ಸೈದ್ಧಾಂತಿಕ ವಿಸ್ತಾರವನ್ನು ಸ್ಪಷ್ಟಪಡಿಸುತ್ತವೆ. ಆದರೆ ಇದು ಸಾಧ್ಯವಾಯಿತೇ?

ಉತ್ತರಕ್ಕೆ, ಸಿಐಟಿಯು ಕಾರ್ಮಿಕ ಸಂಘಟನೆಯು 1986ರ ಮೇ ದಿನದಂದು ಕೊಟ್ಟ ಕರೆಯನ್ನು ಗಮನಿಸಬಹುದು: 'ಕಾರ್ಮಿಕ ವರ್ಗದ ಆಂದೋಲನವು ತಕ್ಷಣದ ಪ್ರಶ್ನೆಗಳಿಗೆ ತನ್ನ ಗಮನವನ್ನು ಕೇಂದ್ರೀಕರಿಸಿ ರೈತರು ಮತ್ತು ಕೃಷಿ ಕಾರ್ಮಿಕರಾದಿಯಾಗಿ ಅಸಂಖ್ಯಾತ ಜನಸಮೂಹದಿಂದ ತನ್ನನ್ನು ದೂರವಾಗಿಸಿಕೊಂಡು ಒಂದು ಸಂಕುಚಿತ ಶಕ್ತಿಯಾಗಿಬಿಟ್ಟಿದೆ. ರೈತವರ್ಗವನ್ನು ನಿರ್ಲಕ್ಷಿಸುವ ಸಾಂಪ್ರದಾಯಿಕ ದೃಷ್ಟಿಕೋನವನ್ನು ಬಿಟ್ಟು ಗ್ರಾಮಾಂತರ ಜನಸಮೂಹದ ರಕ್ಷಣೆಗೆ ಈ ಆಂದೋಲನವು ಮುಂದಾಗಬೇಕು'.

ಈ ಮಧ್ಯೆ ಎಲ್ಲ ಎಡಪಕ್ಷಗಳೂ ಎಡಪಂಥೀಯ ಚಳವಳಿಗಳೂ ಬಹಳಷ್ಟು ಕ್ರಿಯಾಶೀಲವಾದದ್ದು ನಿಜ. ಇದರ ಫಲವಾಗಿ ಕೆಲವು ರಾಜ್ಯಗಳಲ್ಲಿ ವಿವಿಧ ಪ್ರಮಾಣದಲ್ಲಿ ಶಾಸಕರು ಆಯ್ಕೆಯಾದರು. ಪಶ್ಚಿಮ ಬಂಗಾಳ, ತ್ರಿಪುರ, ಕೇರಳವು ಎಡಪಕ್ಷಗಳ ಸರ್ಕಾರಗಳಿಗೆ ಸಾಕ್ಷಿಯಾದವು. 2004ರಲ್ಲಿ ಲೋಕಸಭೆಗೆ ಅರವತ್ತು ಸಂಸದರು ಆಯ್ಕೆಯಾದರು. ಆದರೆ ಆನಂತರ ಏನಾಯಿತು? ಸಂಸದರ ಸಂಖ್ಯೆ ಬೆರಳೆಣಿಕೆಯಷ್ಟಾಯಿತು. ಕೇರಳ ಬಿಟ್ಟರೆ ಬೇರೆಲ್ಲೂ ಸರ್ಕಾರಗಳಿಲ್ಲ. ಇಂಥ ಪರಿಸ್ಥಿತಿಗೆ ಬಾಹ್ಯ ಕಾರಣಗಳಿರುವಂತೆ ಆಂತರಿಕ ಕಾರಣಗಳೂ ಇವೆ. ಜನರ ಮನಸ್ಸನ್ನು ಮೋಸಗೊಳಿಸುವ ಕೋಮುವಾದೀಕರಣ ಮತ್ತು ಆರ್ಥಿಕ ಸಾರ್ವಭೌಮತೆಯತ್ತ ಸಾಗಿದ ಬಂಡವಾಳಶಾಹೀಕರಣಗಳು ಬಾಹ್ಯ ಕಾರಣಗಳಾದರೆ, ಸೂಕ್ತ ಸಂಸದೀಯ ಸಂಬಂಧಗಳನ್ನು ವಿಸ್ತರಿಸಿಕೊಳ್ಳದ ಎಡ ಪಕ್ಷಗಳ ಜಡ ಕಾರ್ಯತಂತ್ರವು ಆಂತರಿಕ ಕಾರಣವಾಗಿದೆ.

ಇಲ್ಲಿಯೇ ಡಾ. ಅಂಬೇಡ್ಕರ್ ಅವರು ಒಮ್ಮೆ ಹೇಳಿದ 'ಮಾರ್ಕ್ಸ್‌ವಾದವು ಉಲ್ಲಂಘಿಸಲಾಗದ ವೇದವಾಗಬಾರದು' ಎಂಬ ಮಾತನ್ನು ನೆನೆಯಬಹುದು. ಮನನೀಯವಾಗಿದೆ. ಈ ಮಾತಿಗೆ ನನ್ನದೊಂದು ಮಾತು ಸೇರಿಸಬಯಸುತ್ತೇನೆ: 'ಎಡಪಂಥೀಯತೆಯು ಜಡಪಂಥೀಯತೆಯಾಗಬಾರದು'. ಆದರೂ ಎಡಪಕ್ಷಗಳ ಪ್ರಾಮಾಣಿಕತೆಯನ್ನು ಶಂಕಿಸಲಾಗದು. ಜ್ಯೋತಿ ಬಸು ಅವರು ಪ್ರಧಾನಿಯಾಗುವುದಕ್ಕೆ ಒಪ್ಪದಿರುವ ನಿರ್ಣಯ ಮಾಡಿದ ಮಾರ್ಕ್ಸ್‌ವಾದಿ ಪಕ್ಷದ ನಡೆಯನ್ನು ಕುರಿತು ಕೆಲಕಾಲಾನಂತರ ಜ್ಯೋತಿ ಬಸು ಅವರೇ 'ಚಾರಿತ್ರಿಕ ಪ್ರಮಾದ' ಎಂದರು. ಆದರೆ ಪಕ್ಷದ ನಿರ್ಣಯದಿಂದ ಬೇಸರಗೊಂಡು ಪಕ್ಷವನ್ನು ಬಿಡಲಿಲ್ಲ. ಪಕ್ಷಾಂತರ ಮಾಡಲಿಲ್ಲ. ಇದು ಎಡಪಕ್ಷಗಳ ನೇತಾರರ ಪ್ರಾಮಾಣಿಕ ಬದ್ಧತೆಗೆ ಒಂದು ಉದಾಹರಣೆ.

ಈಗ ಕರ್ನಾಟಕದ ಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷಾಂತರಗಳಿಗೆ ಬರವಿಲ್ಲ; ಸೈದ್ಧಾಂತಿಕ ಬದ್ಧತೆಗೆ ಬೆಲೆಯಿಲ್ಲ. ಇದು ಶಕ್ತಿ ರಾಜಕಾರಣದ ಮಾಮೂಲು ಎಂಬಂತಾಗಿದೆ. ವ್ಯಕ್ತಿನಿಂದೆಯ ವಿಕಾರವಂತೂ ವಾಕರಿಕೆ ಬರುವಷ್ಟು ವಿಜೃಂಭಿಸುತ್ತಿದೆ. ಇಂಥ ವಿಪರ್ಯಾಸಗಳ ನಡುವೆಯೂ ನಮ್ಮ ಶ್ರಮಿಕ ಶಕ್ತಿಯ ಹಕ್ಕೊತ್ತಾಯಗಳು ಮುನ್ನೆಲೆಗೆ ಬರಬೇಕು. ಈಗ ಶ್ರಮಜೀವಿಗಳೆಂದರೆ ಬರೀ ಕಾರ್ಖಾನೆಯ ಕಾರ್ಮಿಕರಲ್ಲ. ರೈತರು, ಕೃಷಿ ಕೆಲಸಗಾರರು, ಮಹಿಳೆಯರು, ದಲಿತರು, ಅಸಂಘಟಿತ ವಲಯದ ಶ್ರಮಿಕರು, ಎಲ್ಲಾ ಬಗೆಯ ದುಡಿಮೆಗಾರರು ಸೇರುತ್ತಾರೆ. ಬಹುಪಾಲು ದುಡಿಮೆಗಾರರಿಗೆ ಬದುಕಿನ ಭದ್ರತೆಯಿಲ್ಲ. ಶ್ರಮ ಮೂಲ ಕೆಲಸಗಳನ್ನೂ ಒಳಗೊಂಡಂತೆ ಬಹುಪಾಲು ಕೆಲಸಗಳಿಗೆ ಹೊರಗುತ್ತಿಗೆಯ ನೌಕರರನ್ನು ಪಡೆಯಲಾಗಿದೆ. ಈ ಮೂಲಕ ಸರ್ಕಾರವು ತನ್ನ ಜವಾಬ್ದಾರಿ ಮತ್ತು ಅಧಿಕಾರವನ್ನು ಖಾಸಗಿ ಕಂಪನಿಗಳಿಗೆ ಕೊಡುತ್ತಿದೆ.

ಕೇಂದ್ರ ಸರ್ಕಾರವಂತೂ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ 'ದಾನ' ಮಾಡುತ್ತಿದೆ. ನೆಹರೂ ಅವರ ಕಾಂಗ್ರೆಸ್ ಕಾಲದಲ್ಲಿ 23 ಸಾರ್ವಜನಿಕ ಉದ್ದಿಮೆಗಳು ಸ್ಥಾಪನೆಗೊಂಡವು. ಇಂದಿರಾ ಗಾಂಧಿ ಕಾಂಗ್ರೆಸ್ ಆಡಳಿತಾವಧಿಯಲ್ಲಿ 66 ಸಾರ್ವಜನಿಕ ಉದ್ದಿಮೆಗಳು ಸ್ಥಾಪಿತವಾದವು. ಯಾವೊಂದು ಸರ್ಕಾರಿ ಉದ್ದಿಮೆಯೂ ಖಾಸಗಿಯವರಿಗೆ ಮಾರಾಟವಾಗಲಿಲ್ಲ. ಬಿಜೆಪಿ ಆಡಳಿತಾವಧಿಯಲ್ಲಿ ಸಾರ್ವಜನಿಕ ಉದ್ದಿಮೆಗಳು ಸ್ಥಾಪನೆಯಾಗದಿದ್ದರೂ 23 ಸರ್ಕಾರಿ ಉದ್ದಿಮೆಗಳು ಖಾಸಗಿಯವರ ಪಾಲಾದ ಮಾಹಿತಿಯಿದೆ. 1992ರಲ್ಲಿ ಖಾಸಗೀಕರಣಕ್ಕೆ ಕಾರಣವಾದ ಆರ್ಥಿಕ ನೀತಿಗೆ ನಾಂದಿ ಹಾಡಿದ ಕಾಂಗ್ರೆಸ್ ಪಕ್ಷವೇ ಎದೆಬಡಿದುಕೊಳ್ಳುವಂತೆ ಇಂದು ಖಾಸಗಿ ಆರ್ಥಿಕ ಆಧಿಪತ್ಯ ವಿಜೃಂಭಿಸುತ್ತಿದೆ.

ಇದಿಷ್ಟೇ ಅಲ್ಲ, ಹಿಂದಿನ ವರ್ಷದ ಕೇಂದ್ರ ಬಜೆಟ್‌ನಲ್ಲಿ ಶ್ರಮಜೀವಿ ವಲಯದ ಅನುದಾನಕ್ಕೆ ಬಹಳಷ್ಟು ಕತ್ತರಿ ಹಾಕಲಾಗಿದೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಶೇ 25.5, ಗ್ರಾಮೀಣ ಅಭಿವೃದ್ಧಿಗೆ ಶೇ 10.9, ಆಹಾರ ಸಬ್ಸಿಡಿಯಲ್ಲಿ ಶೇ 28.5ರಷ್ಟು ಅನುದಾನವನ್ನು ಕಡಿತ ಮಾಡಿದ್ದು, ಈ ವರ್ಷವೂ ಕೃಷಿ ವಲಯಕ್ಕೆ ₹ 84 ಸಾವಿರ ಕೋಟಿ ಮತ್ತು ಸಮಾಜ ಕಲ್ಯಾಣಕ್ಕೆ ₹ 55 ಸಾವಿರ ಕೋಟಿ ಮಾತ್ರ ಕೊಡಲಾಗಿದೆ. ಒಟ್ಟು ₹ 45 ಲಕ್ಷ ಕೋಟಿ ಮೊತ್ತದ ಬಜೆಟ್‌ನಲ್ಲಿ ಈ ಅನುದಾನ ಕಡಿಮೆಯೆಂದು ಹೇಳಬಹುದು. ಜೊತೆಗೆ ಕಾರ್ಮಿಕರಿಗೆ ಸಂಬಂಧಿಸಿದ 29 ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿ ಒಂದು ಸಂಹಿತೆಯನ್ನು ರೂಪಿಸಲಾಗುತ್ತಿದೆ. 23 ಕೋಟಿ ಕಾರ್ಮಿಕರ ಆದಾಯವನ್ನು ಶಾಸನಬದ್ಧ ಕನಿಷ್ಠ ವೇತನ ಮಟ್ಟಕ್ಕಿಂತ ಕೆಳಗೆ ಇಳಿಸಲಾಗಿದೆ. ಈ ವಿಷಯಗಳು ಕೇಂದ್ರ ಸರ್ಕಾರದ ನೀತಿಗೆ ಸಂಬಂಧಿಸಿದ್ದರೂ ರಾಜ್ಯಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ರಾಜ್ಯದ ಚುನಾವಣೆಗೆ ಹೊರಟಿರುವ ಪಕ್ಷಗಳ ಸಾಮಾಜಿಕ ಮತ್ತು ಆರ್ಥಿಕ ನೀತಿ ಏನು ಎಂಬ ಪ್ರಶ್ನೆ ಮುಖ್ಯವಾಗುತ್ತದೆ.

ರಾಜ್ಯ ಚುನಾವಣೆಯಲ್ಲಿ ತಾತ್ವಿಕ ಪ್ರಶ್ನೆ ಮತ್ತು ಉತ್ತರಗಳು ಮುನ್ನೆಲೆಗೆ ಬರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜಿಎಸ್‌ಟಿ ಮೂಲಕ ರಾಜ್ಯಗಳ ಆರ್ಥಿಕ ಹಕ್ಕನ್ನು ಕಸಿದು ಕೇಂದ್ರೀಕರಿಸಿಕೊಂಡು ರಾಜ್ಯಗಳು ಕೈ ಒಡ್ಡಿ ಬೇಡುವಂತೆ ಮಾಡಿರುವುದನ್ನು ಯಾವ ಪಕ್ಷಗಳು ವಿರೋಧಿಸುತ್ತವೆ ಎಂಬುದು ಮುಖ್ಯ.

ಅಂತೆಯೇ 'ನೀಟ್' ಮತ್ತು ಹೊಸ ಶಿಕ್ಷಣ ನೀತಿ ಕೂಡ ರಾಜ್ಯಗಳ ಹಕ್ಕನ್ನು ಕಸಿಯುತ್ತಿದ್ದು ಅವುಗಳನ್ನು ಪ್ರತಿರೋಧಿಸಬೇಕು. ಎಲ್ಲರ 'ಜಾತಿವಾದ' ಮತ್ತು 'ಧರ್ಮದ್ವೇಷವಾದ'ವನ್ನು ಧಿಕ್ಕರಿಸಬೇಕು.

ರಾಜ್ಯದ ಸ್ವಾಯತ್ತತೆಯನ್ನು ದೃಢವಾಗಿ ಸ್ಥಾಪಿಸುವ, ಎಲ್ಲ ಧರ್ಮಗಳ ಮೂಲಭೂತವಾದವನ್ನು ವಿರೋಧಿಸುವ, ಸಮಾನತೆ ಮತ್ತು ಸೌಹಾರ್ದವನ್ನು ಬೆಸೆದು ಆಡಳಿತ ನಡೆಸುವ, ಎಲ್ಲಾ ಜಾತಿ, ಧರ್ಮಗಳ ದುಡಿಮೆಗಾರರಿಗೆ, ಬಡವರಿಗೆ, ಭದ್ರತೆಯ ಬದುಕು ನೀಡುವ ಸರ್ಕಾರ ನಮಗೆ ಬೇಕು. ಇಂಥ ಸರ್ಕಾರ ಬಂದರೂ ನಮ್ಮ ವಿಮರ್ಶಾ ಪ್ರಜ್ಞೆ ಜಾಗೃತವಾಗಿರಬೇಕು. ಈಗಲಾದರೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಬೇಕು. ಒಂದು ಒಕ್ಕೂಟವಾಗಿ ದೇಶದ ಒಕ್ಕೂಟ ವ್ಯವಸ್ಥೆಯನ್ನು ಉಳಿಸಬೇಕು. ಈ ಎಲ್ಲ 'ಬೇಕುಗಳು' ಶ್ರಮ ಸಂಸ್ಕೃತಿಯ ಸಂಕಲ್ಪವಾಗಲಿ.



ಚುರುಮುರಿ



ಮಾತಿನ ಕುಸ್ತಿ

• ಸುಮಂಗಲಾ

'ನನಗ ರೇಡಿಯೊ ಕೊಡಿಸು ಮೋದಿ ಮಾಮನ 'ಮನ್ ಕೀ ಬಾತ್' ಕೇಳತೀನಿ ಅಂದ್ರ ನೀ ಕೊಡಿಸಲಿಲ್ಲ. ಇದು ನೂರನೇ 'ಮನ್ ಕೀ ಬಾತ್' ಅಂತೆ. ಪಿಎಂ ಶತಕ ಬಾರಿಸೂದು ಅಂದರ ಎಷ್ಟ್ ಮಹತ್ವದ ಕಾರ್ಯಕ್ರಮ...' ಎಂದೆಲ್ಲ ಬೆಕ್ಕಣ್ಣ ಗುರುಗುಡುತ್ತಿತ್ತು.

'ಯುಟ್ಯೂಬಿನಾಗೆ ಕೇಳಾಕಂತಿ' ಎಂದು ಸಮಾಧಾನಿಸಿದೆ. 'ನಮ್ ಚುರುಮುರಿ ಎಷ್ಟ್ ಆಗ್ಯೆತಿ' ಎಂದು ಕೇಳಿತು.

'ಹೋದ ಡಿಸೆಂಬರಿನಾಗೆ ಇನ್ನೂರು ಆಗಿತ್ತಲೇ. ಈಗ...' ನಾನು ಲೆಕ್ಕ ಹಾಕತೊಡಗಿದೆ.

'225 ಆದಾಗ ನಾವೂ ಏನರ ಕಾರ್ಯಕ್ರಮ ಮಾಡೂಣೇನು?' ಎಂದು ನುಲಿಯುತ್ತ ಕೇಳಿತು.

'ಅವರು ಸರ್ಕಾರದ ರೊಕ್ಕದಾಗೆ, ನಮ್ಮ ತೆರಿಗೆ ರೊಕ್ಕದಾಗೆ ಅವರ ಮನದ ಮಾತು ಹೇಳತಾರ. ನಮಗ ಕಾರ್ಯಕ್ರಮಕ್ಕೆ ಯಾರು ರೊಕ್ಕ ಕೊಡತಾರ' ಎಂದು ಬೈದಿದ್ದಕ್ಕೆ ಬಾಲ ಮುದುರಿ ಕೂತಿತು.

ಬೆಕ್ಕಣ್ಣ ಕಿವಿ ನಿಮಿರಿಸಿಕೊಂಡು ನೂರನೇ 'ಮನ್ ಕೀ ಬಾತ್' ಕೇಳುತ್ತ, 'ಕೇಳಿಲ್ಲಿ... ಮಹಿಳೆಯರ ಸಾಧನೆಯನ್ನು ಮೋದಿ ಮಾಮ ಹಾಡಿಹೊಗಳಾಕೆ ಹತ್ಯಾರ... ಎಷ್ಟ್ ಛಂದ ರಂಗಭೂಮಿ ನಟರ ಹಂಗೆ ಮಾತಾಡ್ತಾರ' ಎಂದು ಕುಣಿಯಿತು.

'ಅಲ್ಲಲೇ... ಅಲ್ಲಿ ಡೆಲ್ಲಿವಳಗ ನಮ್ಮ ಹರೇದ ಕುಸ್ತಿ ಪೈಲ್ವಾನರು ಧರಣಿ ನಡೆಸ್ಯಾರೆ. ಮೋದಿ ಮಾಮ ಅವರ ಮನದ ಮಾತನ್ನೂ ಕೇಳಬೇಕಿಲ್ಲೋ' ಎಂದು ಕಿಚಾಯಿಸಿದೆ.

'ಕುಸ್ತಿ ಆಡೋ ಹುಡುಗ ಹುಡುಗೀರು ಸುಮ್ ಸುಮ್ನೆ ಹಿಂಗೆಲ್ಲ ಧರಣಿ ಕುಂತು ನಮ್ಮ ಮಾನ ಕಳಿತಾರ...' ಬೆಕ್ಕಣ್ಣ ಹ್ಞೂಂಕರಿಸಿತು.

'ಮತ್ತ ಅವರು ಪಂದ್ಯದೊಳಗೆ ಗೆದ್ದಾಗ ನಮ್ಮ ದೇಶದ ಗೌರವ ಹೆಚ್ಚಾಯಿತು ಅಂತೆಲ್ಲ ಹಾರಾಡತೀರಿ'.

'ಅವರು ಅಖಾಡದೊಳಗ ಮಾತ್ರ ಕುಸ್ತಿ ಆಡಬಕು, ಪದಕ ಗೆಲ್ಲಬಕು. ಅಖಾಡದಿಂದ ಹೊರಗ ಅಧಿಕಾರಿಗಳು, ಕೋಚ್‌ಗಳು ಯಾರ ಜೊತಿಗೂ ನ್ಯಾಯಗೀಯ ಅಂತೆಲ್ಲ ಮಾತಿನ ಕುಸ್ತಿಗಿಳೀಬಾರದು. ಬೇಟಿ ಬಛಾವ್, ಬೇಟಿ ಬಾಯ್ ಮುಚ್ಚು, ಎಲ್ಲಾ ಥರದ ಮಾತಿನ ಕುಸ್ತಿ ಆಡಾಕೆ ರಾಜಕಾರಣಿಗಳು ಅದಾರ' ಎಂದು ವಕ್ರನಗೆ ಬೀರಿತು!

ದಿನದ ಟ್ವೀಟ್


ಎಚ್‌ಡಿಕೆಗೆ ಪೂರ್ಣ ಅಂಕ



ಜೆಡಿಎಸ್ ಪಕ್ಷವು ಎಚ್.ಡಿ.ಕುಮಾರಸ್ವಾಮಿ ಅವರ ವರ್ಚಸ್ಸು, ಜನರು ಮತ್ತು ಪ್ರಮುಖರ ಜೊತೆ ಅವರು ಹೊಂದಿರುವ ಸಂಪರ್ಕವನ್ನು ಆಧರಿಸಿಯೇ ಬಹುತೇಕ ಮುನ್ನಡೆಯುತ್ತಿದೆ. ಪ್ರತಿ ವಿಧಾನಸಭಾ ಚುನಾವಣೆಯಲ್ಲಿಯೂ ಅವರು ಏಕಾಂಗಿಯಾಗಿ, ಮೂವತ್ತಕ್ಕೂ ಅಧಿಕ ಸ್ಥಾನಗಳಲ್ಲಿ ಪಕ್ಷವನ್ನು ಗೆಲ್ಲಿಸಬಲ್ಲರು ಎಂದಾದರೆ, ಅವರಿಗೆ ಪೂರ್ಣ ಅಂಕ ನೀಡಬೇಕಾಗುತ್ತದೆ. ದೆಹಲಿಯ ಪಕ್ಷಗಳು ಶಾಸಕರನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುತ್ತಿರುವ ಹೊತ್ತಿನಲ್ಲಿಯೂ ಕುಮಾರಸ್ವಾಮಿ ಅವರು ಪಕ್ಷವನ್ನು ಉಳಿಸಿಕೊಂಡಿದ್ದಾರೆ.

ಅಮರನಾಥ ಶಿವಶಂಕರ್, ವಾಸ್ತುಶಿಲ್ಪಿ

ಕಿಡಿನುಡಿ



ದಿಢೀರನೆ ಲಾಕ್‌ಡೌನ್ ಘೋಷಿಸಿದ ನಂತರದ ದಿನಗಳಲ್ಲಿ ಎಷ್ಟು ಮಂದಿ ವಲಸೆ ಕಾರ್ಮಿಕರು ಸಾವಿಗೀಡಾದರು? ಗೊತ್ತಿಲ್ಲ. ಆಸ್ಪತ್ರೆಗಳಿಗೆ ಆಮ್ಲಜನಕದ ಪೂರೈಕೆಯಲ್ಲಾದ ಕೊರತೆಯಿಂದ ಎಷ್ಟು ಮಂದಿ ಕೋವಿಡ್ ಉಲ್ಬಣಿಸಿ ಮೃತಪಟ್ಟರು? ಗೊತ್ತಿಲ್ಲ. ಕಾಂಗ್ರೆಸ್ ಪಕ್ಷ ಎಷ್ಟು ಬಾರಿ ನಿಂದನೆ ಮಾಡಿದೆ? 91.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಶುಕ್ರವಾರ, 1-5-1998

• ಪ್ರಧಾನಿ ಸೂಚನೆ: ರಾಜೀನಾಮೆ ನೀಡಲು ಸುಖರಾಂ ನಿರ್ಧಾರ

ನವದೆಹಲಿ, ಏ. 30 (ಪಿಟಿಐ): ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸೂಚನೆ ಮೇರೆಗೆ ಹಿಮಾಚಲ ಪ್ರದೇಶದ ಬಿಜೆಪಿ ನೇತೃತ್ವದ ಸರ್ಕಾರದ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಕೇಂದ್ರದ ಸಂಪರ್ಕ ಖಾತೆ ಮಾಜಿ ಸಚಿವ ಸುಖರಾಂ ಅವರು ಸಮ್ಮತಿಸಿದ್ದಾರೆ.

ತಮ್ಮ ವಿರುದ್ಧದ ಭ್ರಷ್ಟಾಚಾರ ಪ್ರಕರಣದಲ್ಲಿ ತಾವು ತಪ್ಪಿತಸ್ಥರಲ್ಲದಿದ್ದರೂ ಪ್ರಧಾನ ಮಂತ್ರಿ ಅವರ ಸೂಚನೆ ಮೇರೆಗೆ ರಾಜೀನಾಮೆ ನೀಡಲು ನಿರ್ಧರಿಸಿರುವುದಾಗಿ ಸುಖರಾಂ ಹೇಳಿದ್ದಾರೆ.

• ಸುಬ್ರಮಣಿಯನ್ ಸ್ವಾಮಿ ನಿರ್ಗಮನ: ಲೋಕಶಕ್ತಿ ಸಂತಸ

ನವದೆಹಲಿ, ಏ. 30– ಬಿಜೆಪಿ ನೇತೃತ್ವದ ಸಮ್ಮಿಶ್ರ ರಂಗದ ಸಂಬಂಧವನ್ನು ಕಳಚಿಕೊಳ್ಳುವ ಜನತಾ ಪಕ್ಷದ ಅಧ್ಯಕ್ಷ ಡಾ. ಸುಬ್ರಮಣಿಯನ್ ಸ್ವಾಮಿ ಅವರ ನಿರ್ಧಾರಕ್ಕೆ ಲೋಕಶಕ್ತಿಯು 'ಸದ್ಯ, ಪೀಡೆ ತೊಲಗಿತು' ಎಂದು ಖುಷಿಪಟ್ಟಿದೆ.

'ಕಳೆದ ಒಂದು ದಶಕಕ್ಕೂ ಹಿಂದಿನಿಂದ ರಾಮಕೃಷ್ಣ ಹೆಗಡೆ ಅವರನ್ನು ಕಾಡುತ್ತಾ ಬಂದಿರುವ ಡಾ. ಸ್ವಾಮಿ ಅವರ ನಿರ್ಗಮನದಿಂದ ನಮಗೆ ಉಪಟಳ ಕಡಿಮೆ ಆದಂತಾಯಿತು' ಎಂದು ಲೋಕಶಕ್ತಿಯ ವಕ್ತಾರ ಎಂ. ರಘುಪತಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ನಿಟ್ಟುಸಿರು ಬಿಟ್ಟರು.

50 ವರ್ಷಗಳ ಹಿಂದೆ

ಮಂಗಳವಾರ, 1-5-1973

• ಮನಸ್ಸು, ಬುದ್ಧಿಶಕ್ತಿ ಇದ್ದರೆ ಕಾವೇರಿ ವಿವಾದ ಇತ್ಯರ್ಥ ಸಾಧ್ಯ: ಅರಸು ನಂಬಿಕೆ

ಬೆಂಗಳೂರು, ಏ. 30– ಮನಸ್ಸು ಹಾಗೂ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ ಬುದ್ಧಿಶಕ್ತಿಯಿದ್ದರೆ ಕಾವೇರಿ ನೀರು ವಿವಾದದ ಇತ್ಯರ್ಥ ಸಾಧ್ಯ. ಇದು ರಾಜ್ಯದ ಮುಖ್ಯಮಂತ್ರಿ ಅರಸು ಅವರ ನಂಬಿಕೆ.

ಕಾವೇರಿ ಬಗ್ಗೆ ದೆಹಲಿಯಲ್ಲಿ ನಡೆದ ಮಾತುಕತೆಯಲ್ಲಿ ಭಾಗವಹಿಸಿ ಬೆಳಿಗ್ಗೆ ಹಿಂದಿರುಗಿದ ಮುಖ್ಯಮಂತ್ರಿಗಳು, 'ಆಧುನಿಕ ನೀರಾವರಿ ಪದ್ಧತಿ, ನಾಲಾ ಪದ್ಧತಿಯ ಸುಧಾರಣೆ, ಭೂಗತ ಜಲದ ಉಪಯೋಗ ಮತ್ತಿತರ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಂಡು ಸಮಸ್ಯೆ ಕುರಿತು ವಿವೇಚಿಸಿದಲ್ಲಿ ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯಗಳನ್ನು ತೃಪ್ತಿಗೊಳಿಸಲು ಸಾಧ್ಯ' ಎಂದರು.

• ಪಾಠ ಮಾಡುವ ಉಪಕುಲಪತಿ!

ಬೆಂಗಳೂರು, ಏ. 30– ಶಿಕ್ಷಕರು ಉಪಕುಲಪತಿ ಆಗಬಹುದು. ಉಪಕುಲಪತಿ ಶಿಕ್ಷಕರೂ ಆಗಿರಲು ಸಾಧ್ಯವೇ?

ಶಿಕ್ಷಕರಾಗಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೆ ಏರಿರುವ ಡಾ. ಎಚ್. ನರಸಿಂಹಯ್ಯ ಅವರು ಇದನ್ನು ಸಾಧಿಸಿದ್ದಾರೆ. ಜನಪ್ರಿಯ ಶಿಕ್ಷಕರಾಗಿರುವ ನರಸಿಂಹಯ್ಯ, ಈ ಬಾರಿ ವಿಶ್ವವಿದ್ಯಾಲಯದ ಪರೀಕ್ಷೆಗಳು ಆರಂಭವಾಗುವ ಮುನ್ನ ಸರ್ಕಾರಿ ಸೈನ್ಸ್ ಕಾಲೇಜಿನಲ್ಲಿ ಸುಮಾರು ಒಂದೂವರೆ ತಿಂಗಳು ಶಿಕ್ಷಕನ ಕರ್ತವ್ಯವನ್ನೂ ನಿರ್ವಹಿಸಿದರು.

ಸಂಗತ

ಭೌಗೋಳಿಕ ಹಂಗಿನಲ್ಲಿ 'ಮರಗಳ ಹಿರಿಯಜ್ಜ'

ಬವೋಬಾಬ್ ಮರಗಳಿಗೆ ಜಿ.ಇ. ಟ್ಯಾಗ್ ಪಡೆಯಲು ಮಧ್ಯಪ್ರದೇಶದ ತೋಟಗಾರಿಕೆ ಇಲಾಖೆ ನಡೆಸಿರುವ ಪ್ರಯತ್ನವು ಸಂಘರ್ಷಕ್ಕೆ ಕಾರಣವಾಗಿದೆ

• ಶಿಶಿರ ವಸಿಷ್ಠ

ಬವೋಬಾಬ್ (ಆನೆ ಹುಣಸೆ) ಮರಗಳಿಂದಾಗಿ ಮಧ್ಯಪ್ರದೇಶದ ಐತಿಹಾಸಿಕ ಕೋಟೆನಗರ 'ಮಂಡು' ಮತ್ತೆ ಸುದ್ದಿಯಲ್ಲಿದೆ. ದಕ್ಷಿಣ ಆಫ್ರಿಕಾ ಮೂಲದ, ಬಾಟಲಿ ಆಕಾರದ ಈ ಮರಗಳು ಭಿಲ್ ಬುಡಕಟ್ಟು ಜನರ ಆರೈಕೆಯಲ್ಲಿವೆ. ಮಂಡು ನಗರದಲ್ಲಿ ಸಾವಿರದಷ್ಟು ಸಂಖ್ಯೆಯಲ್ಲಿರುವ ಈ ಮರಗಳಿಗೆ ಜಿ.ಇ. ಟ್ಯಾಗ್, ಅಂದರೆ ಜಿಯಾಗ್ರಫಿಕಲ್ ಇಂಡಿಕೇಷನ್ ಪಡೆಯಲು ಮಧ್ಯಪ್ರದೇಶ ಸರ್ಕಾರದ ತೋಟಗಾರಿಕೆ ಇಲಾಖೆ ಮಾಡುತ್ತಿರುವ ಪ್ರಯತ್ನವು ಭಿಲ್ ಬುಡಕಟ್ಟು ಮತ್ತು ಜಿಲ್ಲಾ ಅರಣ್ಯ ಇಲಾಖೆ ಅಧಿಕಾರಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ.


ಹೈದರಾಬಾದ್‌ನ ಗ್ರೀನ್‌ಲ್ಯಾಂಡ್ ಬೊಟಾನಿಕಲ್ ಗಾರ್ಡನ್‌ನವರ ಕೋರಿಕೆಯ ಮೇರೆಗೆ, ಮಂಡುವಿನಿಂದ ಹನ್ನೊಂದು ಬವೋಬಾಬ್ ಮರಗಳನ್ನು ಸ್ಥಳಾಂತರಿಸಲು ಅರಣ್ಯ ಇಲಾಖೆಯ ಲಾರಿಗಳು ಬಂದಾಗ, ಸ್ಥಳಾಂತರಕ್ಕೆ ಅವಕಾಶ ನೀಡುವುದಿಲ್ಲ ಎಂದು ದೊಡ್ಡ ಪ್ರತಿಭಟನೆ ನಡೆಯಿತು. ಭಿಲ್ ಬುಡಕಟ್ಟು ಜನರನ್ನು ಸಮಾಧಾನಪಡಿಸಿದ ಪೊಲೀಸ್ ಇಲಾಖೆಯು ಅರಣ್ಯ ಇಲಾಖೆ ಮತ್ತು ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಿ ಎಂದಿತು. 'ಶತಮಾನಗಳ ಕಾಲದಿಂದ ನಾವು- ನಮ್ಮವರು ಸಂರಕ್ಷಿಸಿಕೊಂಡು ಬಂದಿರುವ ಮರಗಳಿಗೇಕೆ ಗುರುತಿನ ಚೀಟಿ' ಎನ್ನುವುದು ಭಿಲ್ ಬುಡಕಟ್ಟಿನವರ ಪ್ರಶ್ನೆ.

ಸಾವಿರಾರು ವರ್ಷ ಬದುಕುವ ಬವೋಬಾಬ್ ಮರವನ್ನು 'ಮರಗಳ ಅಜ್ಜ' ಎನ್ನುತ್ತಾರೆ. ಜಿಂಬಾಬ್ವೆಯಲ್ಲಿ ಹನ್ನೊಂದು ವರ್ಷಗಳ ಹಿಂದೆ ನೆಲಕ್ಕುರುಳಿದ ಬವೋಬಾಬ್ ಮರದ ಆಯಸ್ಸು ಬರೋಬ್ಬರಿ 2,450 ವರ್ಷಗಳು. ಮಧ್ಯ ಆಫ್ರಿಕಾ ಮತ್ತು ಮಡಗಾಸ್ಕರ್ ದ್ವೀಪದಲ್ಲಿ ಮೂಲ ನೆಲೆ ಇರುವ ಈ ಮರಗಳು ನಮ್ಮ ಮಧ್ಯಪ್ರದೇಶ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ 'ಅಡನ್‌ಸೋನಿಯ ಡಿಜಿಟಾಟ' ಎಂಬ ತಳಿಯ ಹೆಸರಿನಲ್ಲಿ ಕಾಣಸಿಗುತ್ತವೆ. ಹದಿನಾರರಿಂದ ನೂರು ಅಡಿ ಎತ್ತರ ಬೆಳೆಯುವ ಈ ಮರಗಳ ಹಣ್ಣು ಆಹಾರವಾಗಿ ಬಳಕೆಯಾದರೆ, ತೊಗಟೆಯು ಔಷಧಿಯಾಗಿ ಉಪಯೋಗಕ್ಕೆ ಬರುತ್ತದೆ. ಘೇಂಡಾಮೃಗದ ಚರ್ಮದಂತೆ ನುಣುಪಾದ ಮಡಿಕೆಯ ಕಾಂಡವಿರುವ ಬವೋಬಾಬ್ ಮರದ ಕಾಂಡದಲ್ಲಿ ರೆಂಬೆ ಕೊಂಬೆಗಳಿರುವುದಿಲ್ಲ. ತುದಿಯಲ್ಲಿ ಬೇರಿನಂತೆ ಹರಡಿಕೊಂಡಿರುವ ರೆಂಬೆಗಳಿರುತ್ತವೆ.

ಹಣ್ಣಿನ ತಿರುಳಿನಿಂದ ಜ್ಯೂಸ್ ಮತ್ತು ಜಾಮ್ ತಯಾರಿಸುತ್ತಾರೆ. ಮರದ ತೊಗಟೆಯಿಂದ ಮೀನು ಹಿಡಿಯುವ ಬಲೆ, ಬಟ್ಟೆ ತಯಾರಿಕೆ ಸಾಧ್ಯವಿದೆ. ಬಿರುಬಿಸಿಲಿನ ಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆಯುವ ಈ ಮರಗಳ ಕಾಂಡ ಅಪಾರ ಪ್ರಮಾಣದ ನೀರನ್ನು ಹಿಡಿದಿಟ್ಟುಕೊಳ್ಳುತ್ತದೆ. ತೆಂಗಿನಕಾಯಿ ಗಾತ್ರದ ಹಣ್ಣಿನ ತಿರುಳು ಹುಳಿ, ಸಿಹಿಯಾಗಿದ್ದು ವಿಟಮಿನ್ ಸಿ ಹೇರಳವಾಗಿ ಇರುತ್ತದೆ.

ತಲೆತಲಾಂತರದಿಂದ ಮರಗಳನ್ನು ಕಾಪಾಡಿಕೊಂಡು ಅದರ ಉತ್ಪನ್ನವನ್ನು ಮಾರಿ ಜೀವನೋಪಾಯ ಕಂಡುಕೊಂಡಿರುವ ಭಿಲ್ ಜನರೀಗ ವಿಶ್ವ ಮಟ್ಟದ ಗುರುತಿನ ಚೀಟಿಯಿಂದ ನಮಗಾಗುವ ಲಾಭ ಏನು ಎಂದು ಮುಗ್ಧವಾಗಿ ಪ್ರಶ್ನಿಸುತ್ತಾರೆ. ಹೈದರಾಬಾದ್‌ನ ತೋಟಕ್ಕೆ ಸಸಿಗಳನ್ನು ಕೊಡುವ ಬದಲು ಇಡಿಯ ಮರಗಳನ್ನು ಕೊಡುತ್ತಿರುವ ಅರಣ್ಯ ಇಲಾಖೆಯ ಉದ್ದೇಶದ ಬಗ್ಗೆ ಜನ ಸಿಟ್ಟಾಗಿದ್ದಾರೆ. ತಾವು ಪೂಜಿಸುವ ಮರಗಳಿಗೆ ಯಾವ ಗುರುತಿನ ಚೀಟಿಯೂ ಬೇಡ ಎನ್ನುತ್ತಾರೆ. ಆದರೆ ತೋಟಗಾರಿಕೆ ಇಲಾಖೆಯು ಹುಣಸೆಹುಳಿ ರುಚಿಯ ಹಣ್ಣಿನ ಬವೋಬಾಬ್ ಮರಗಳಿಗೆ ಜಿ.ಐ. ಟ್ಯಾಗ್ ಪಡೆಯಲು ತಯಾರಿ ಮಾಡಿಕೊಂಡಿದೆ. ಅದಕ್ಕಾಗಿ ಭಿಲ್ ಜನರ ಒಕ್ಕೂಟ ರಚಿಸಿ, ಅವರಿಂದಲೇ ಅರ್ಜಿ ಹಾಕಿಸುವ ಪ್ರಯತ್ನ ಶುರುವಾಗಿದೆ.

ಈ ವಿಚಾರ ತಿಳಿಯುತ್ತಿದ್ದಂತೆ ತಮ್ಮ ಜಮೀನಿನಲ್ಲಿರುವ ಬವೋಬಾಬ್ ಮರಗಳನ್ನು ರೈತರು ಕಡಿದು ಮಾರಲು ಶುರು ಮಾಡಿದ್ದಾರೆ. ಬೃಹತ್ ವ್ಯಾಸವಿರುವ ಎಷ್ಟೋ ಮರಗಳನ್ನು ಒಳಗಿನಿಂದ ಕೊರೆದು ಅಂಗಡಿ, ಬಾರು, ಪಬ್ಬು, ಹೋಟೆಲ್‌ಗಳನ್ನಾಗಿ ಪರಿವರ್ತಿಸಲಾಗಿದೆ. ಭಾರತದಲ್ಲಿ ಅಪರೂಪವಾಗಿರುವ ಈ ಮರಗಳನ್ನು ಉಳಿಸಿಕೊಳ್ಳಲು ಜಿ.ಐ. ಟ್ಯಾಗ್ ಉತ್ತಮ ಮಾರ್ಗ ಎಂಬುದು ತೋಟಗಾರಿಕೆ ಇಲಾಖೆಯ ವಾದ.



ಒಂದು ವಸ್ತು ಅಥವಾ ಉತ್ಪನ್ನ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಹುಟ್ಟಿ, ತಯಾರಾಗಿ ಅಲ್ಲಿನ ನಿರ್ದಿಷ್ಟ ಗುಣಮಟ್ಟ ಮತ್ತು ನೆಲಮೂಲದ ಗುಣಲಕ್ಷಣ ಹೊಂದಿದ್ದರೆ ಭೌಗೋಳಿಕ ಸೂಚ್ಯಂಕ ಸಿಗುತ್ತದೆ. ವಿಶೇಷ ತಿನಿಸು, ನೈಸರ್ಗಿಕ ಉತ್ಪನ್ನ, ಆಹಾರ ಮತ್ತು ಬೆಳೆಗಳಿಗೂ ಜಿ.ಐ. ಟ್ಯಾಗ್ ನೀಡಲಾಗುತ್ತದೆ. ಆಗ ಅವುಗಳ ಸಂರಕ್ಷಣೆಗೆ ಅನುದಾನ ಮತ್ತು ಮಾರುಕಟ್ಟೆ ಬೆಲೆ ಎರಡೂ ದೊರಕುತ್ತವೆ. ವಿಶ್ವದ ಬೇರೆ ಯಾರೂ ಇವುಗಳ ಹೆಸರನ್ನು ಬಳಸಿಕೊಂಡು ಉತ್ಪನ್ನ ತಯಾರಿಸಿ ಮಾರಾಟ ಮಾಡಲು ಬರುವುದಿಲ್ಲ.

ನಮ್ಮ ರಾಜ್ಯದ ಮೊಳಕಾಲ್ಮುರು ಸೀರೆ, ಮೈಸೂರು ಸಿಲ್ಕ್, ಚನ್ನಪಟ್ಟಣದ ಬೊಂಬೆ, ನಂಜನಗೂಡಿನ ರಸಬಾಳೆ, ಧಾರವಾಡದ ಪೇಢ, ಬ್ಯಾಡಗಿ ಮೆಣಸಿನಕಾಯಿಗೆ ಜಿ.ಐ. ಟ್ಯಾಗ್ ಸಿಕ್ಕಿದೆ. ತಿರುಪತಿಯ ಲಡ್ಡು, ಮಧ್ಯಪ್ರದೇಶದ ಚಂದೇರಿ ಸಿಲ್ಕ್, ಫ್ರಾನ್ಸ್‌ನ ಶಾಂಪೇನ್, ಮೆಕ್ಸಿಕೊದ ಟಕಿಲ, ಫ್ರಾನ್ಸ್‌ನ ನೀಲಿಬೆಣ್ಣೆ ರಾಕ್‌ಫೋರ್ಟ್, ಡಾರ್ಜಿಲಿಂಗ್‌ನ ಚಹಾ ಇವಕ್ಕೆಲ್ಲ ಜಿ.ಐ. ಟ್ಯಾಗ್ ಇದೆ.

ರಸಗುಲ್ಲ ನಮ್ಮದು, ನಮ್ಮದು ಎಂದು ಒಡಿಶಾ ಮತ್ತು ಪಶ್ಚಿಮ ಬಂಗಾಳ ಜಗಳಕ್ಕೆ ಬಿದ್ದಿವೆ. ಸುವಾಸನೆಯುಕ್ತ ಬಾಸ್‌ಮತಿ ಅಕ್ಕಿಯ ಜಿ.ಐ. ಹಕ್ಕಿಗಾಗಿ ಭಾರತ ಮತ್ತು ಪಾಕಿಸ್ತಾನದ ವ್ಯಾಜ್ಯ ಐರೋಪ್ಯ ಒಕ್ಕೂಟದವರೆಗೂ ಹೋಗಿದೆ. ಗುರುತಿನ ಚೀಟಿ ಸಿಕ್ಕ ತಕ್ಷಣ ನೀವಿದನ್ನು ಬಳಸುವಂತಿಲ್ಲ, ಮಾರುವಂತಿಲ್ಲ, ಇದರಿಂದ ದೂರವಿರಿ ಎಂದು ನಮ್ಮನ್ನೆಲ್ಲ ಮರಗಳಿಂದ ದೂರ ಮಾಡುವುದಿಲ್ಲ ಎಂಬುದಕ್ಕೆ ಖಾತರಿ ಏನು ಎಂದು ಪ್ರಶ್ನಿಸುತ್ತಿರುವ ಭಿಲ್ ಜನರು, ತಮ್ಮ ಹೋರಾಟ ಮುಂದುವರಿಯುತ್ತದೆ ಎಂದಿದ್ದಾರೆ.

ವಾಚಕರ ವಾಣಿ

ಸರ್ಕಾರೇತರ ಮಾಧ್ಯಮದಲ್ಲೂ ಕಾಣಿಸಿಕೊಳ್ಳಲಿ

'ಮನ್ ಕೀ ಬಾತ್' ನೂರನೆಯ ಸಂಚಿಕೆ ವೀಕ್ಷಿಸಿದಾಗ 'ಸದ್ಯ, ರಾಜಕೀಯದ, ಚುನಾವಣೆಗಳ ಪ್ರಸ್ತಾಪ ಮಾಡಲಿಲ್ಲವಲ್ಲ' ಎಂದು ಖುಷಿಯಾಯಿತು. ಅಲ್ಲಿ ಪ್ರಸ್ತಾಪಿಸಲಾದ ಪ್ರತಿಯೊಂದು ವಿಷಯ ಜನ ಆಂದೋಲನವಾಗೇನೂ ಪರಿವರ್ತಿತವಾಗಿಲ್ಲ. ಆದರೆ ಕೆಲವರು ತಮ್ಮ ಮೌಲಿಕ ಕೆಲಸವನ್ನು ಮುಂದುವರಿಸಿರುವುದು ಶ್ಲಾಘನೀಯ. ಆದರೆ ಇದು ರೇಡಿಯೊ ಭಾಷಣಕ್ಕಿಂತ ಹೆಚ್ಚಾಗಿ ಜನರು ಭಾಗವಹಿಸಲು ಅವಕಾಶವಿರುವ ಕಾರ್ಯಕ್ರಮವಾಗಿ ಮರುರೂಪುಗೊಳ್ಳಬೇಕಿದೆ. ಮೋದಿಯವರು ಉಳಿದ ಅಧಿಕಾರಾವಧಿಯಲ್ಲಾದರೂ ಸುದ್ದಿಗೋಷ್ಠಿ, ಪ್ರಶ್ನೋತ್ತರ ಇವುಗಳ ಮೂಲಕ ಸರ್ಕಾರೇತರ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವುದೂ ಅಗತ್ಯ. ವ್ಯಕ್ತಿಗಳನ್ನು, ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವಾಗ ಪಕ್ಷಪಾತದ ಸಾಧ್ಯತೆ ಇರುತ್ತದೆ. ಮುಕ್ತ ಸಂವಾದದಲ್ಲಿ ವ್ಯಕ್ತಿಗತ, ಕ್ಷುಲ್ಲಕ ಪ್ರಶ್ನೆಗಳನ್ನು ದೂರವಿಟ್ಟರೆ ಸಾರ್ವಜನಿಕರಿಗೆ ಆ ಸಂವಹನ ವಿಶ್ವಾಸಾರ್ಹ ಎನಿಸಬಲ್ಲದು.

ರೋಡ್ ಷೋದಲ್ಲಿ ವ್ಯಕ್ತಿ ವಿಜೃಂಭಣೆ, ಚುನಾವಣಾ ಸಭೆಗಳಲ್ಲಿ ಅತಿ ಹೊಗಳಿಕೆ (ಉದಾಹರಣೆಗೆ, ಬಸನಗೌಡ ಪಾಟೀಲ ಯತ್ನಾಳರು ಹಿಂದಿ, ಕನ್ನಡ ಎರಡರಲ್ಲೂ ಮೋದಿಯವರನ್ನು ಅವರ ಸಮ್ಮುಖದಲ್ಲೇ ಸ್ತುತಿಸಿದ್ದನ್ನು ನೋಡಿದೆ) ಇರುತ್ತದೆ. ಪ್ರಧಾನ ಮಂತ್ರಿ ಪಕ್ಷ, ರಾಜಕಾರಣಗಳ ಆಚೆಗೂ ನೆಲೆ ಹೊಂದಿರಬೇಕಲ್ಲವೆ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ವಿಜ್ಞಾನ ಪ್ರಶ್ನೆಪತ್ರಿಕೆ: ಬೇಕು ಕೃಪಾಂಕ

ಈ ಬಾರಿಯ ಎಸ್ಎಸ್ಎಲ್‌ಸಿ ಪರೀಕ್ಷೆಯ ವಿಜ್ಞಾನ ಪ್ರಶ್ನೆಪತ್ರಿಕೆಯ 24ನೇ ಪ್ರಶ್ನೆಗೆ ಎರಡು ಬಗೆಯ ಉತ್ತರಗಳನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಆತಂಕಕ್ಕೆ ದೂಡಲಾಗಿದೆ. ಏ. 10ರಂದು ವಿಜ್ಞಾನ ವಿಷಯದ ಪರೀಕ್ಷೆ ನಡೆಯಿತು. ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಿಸಿದ ಕೀ ಉತ್ತರ ಹಾಗೂ ಮೌಲ್ಯಮಾಪನ ನಡೆಸುವ ಶಿಕ್ಷಕರಿಗೆ ನೀಡಿದ ಕೀ ಉತ್ತರದಲ್ಲಿ ವ್ಯತ್ಯಾಸ ಇದೆ. ಮಂಡಳಿಯು ಎರಡು ಬಗೆಯ ಉತ್ತರಗಳನ್ನು ನೀಡಿದೆ.

ರಾಜ್ಯ ಮಟ್ಟದಲ್ಲಿ ವಿಷಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ನುರಿತ ಅನುಭವವುಳ್ಳ ಪ್ರಶ್ನೆಪತ್ರಿಕೆ ತಯಾರಕರಲ್ಲಿಯೇ ಈ ಮಟ್ಟಿಗೆ ಗೊಂದಲವಿದ್ದರೆ, ಮೂರು ಗಂಟೆಯಲ್ಲಿ ಉತ್ತರ ಬರೆಯುವ ವಿದ್ಯಾರ್ಥಿಗಳಿಗೆ ಇನ್ನೆಷ್ಟು ಗೊಂದಲವಿರಬಹುದು? ಈ ಬಾರಿ ಪರೀಕ್ಷೆ ಬರೆದ ಎಂಟು ಲಕ್ಷ ವಿದ್ಯಾರ್ಥಿಗಳಲ್ಲಿ ಹಲವರು ಮೊದಲ ಕೀ ಉತ್ತರವನ್ನು, ಇನ್ನಷ್ಟು ವಿದ್ಯಾರ್ಥಿಗಳು ಎರಡನೆಯ ಕೀ ಉತ್ತರವನ್ನು ಬರೆದಿದ್ದಾರೆ. ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, 24ನೆಯ ಪ್ರಶ್ನೆಗೆ ಕೃಪಾಂಕವನ್ನು ನೀಡಬೇಕು. ಆ ಮೂಲಕ, ಕಷ್ಟಪಟ್ಟು ಓದಿರುವ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡದೆ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಆತಂಕದಿಂದ ದೂರ ಮಾಡಬೇಕು.

ಹೇಮಾಮಾಲಿನಿ, ಲಕ್ಕಪ್ಪಧನ ಪಾಲಾಕ್ಷ, ಬೆಂಗಳೂರು

ನೋಟು ಬದಲಾವಣೆ: ಅಂಕಿಅಂಶ ಪ್ರಕಟವಾಗಲಿ

ಕೊಳಕಾದ, ಹರಿದ, ಹಾನಿಗೊಳಗಾದ, ವಿರೂಪಗೊಂಡ ಮತ್ತು ದೋಷಯುಕ್ತ ಕರೆನ್ಸಿ ನೋಟುಗಳನ್ನು ಬ್ಯಾಂಕ್ ಶಾಖೆಗಳ ಕೌಂಟರ್‌ನಲ್ಲಿ ವಿನಿಮಯ ಮಾಡಿಕೊಳ್ಳಿ ಎಂಬ ಜಾಹೀರಾತು ದಿನಪತ್ರಿಕೆಗಳಲ್ಲಿ ಹರಿದಾಡುತ್ತಿದೆ. ನಾನು ಗಮನಿಸಿದಂತೆ, ಅದೆಷ್ಟೋ ಜನರು ಅಪ್ಪಿತಪ್ಪಿ ಅಂತಹ ನೋಟುಗಳು ತಮ್ಮ ಕೈ ಸೇರಿದ್ದು ಗಮನಕ್ಕೆ ಬಂದೊಡನೆ, ಅದಕ್ಕೆ ಗಂಜಿ ಹಾಕಿ, ಒಣಗಿಸಿ ಇಸ್ತ್ರಿ ಮಾಡಿ, ಹರಿದ ನೋಟಾದರೆ ಚಿಕ್ಕ ಸೆಲ್ಲೋಟೇಪ್ ಹಚ್ಚಿ ಸಂತೆಯಲ್ಲೋ ಜನಸಂದಣಿ ಇದ್ದಲ್ಲಿಯೋ ಇತರ ನೋಟುಗಳ ಸಂಗಡ ಚಲಾವಣೆ ಮಾಡಿ ಕೈ ತೊಳೆದುಕೊಂಡುಬಿಡುತ್ತಾರೆ. ಕೆಲವು ಬ್ಯಾಂಕಿನವರು ಆರ್‌ಬಿಐ ನೋಟ್ ರಿಫಂಡ್ ಕಾಯ್ದೆ ಅಡಿಯಲ್ಲಿ ಚಲಾವಣೆಗೆ ಸೂಕ್ತ ಎಂದೆನಿಸಿದ ನೋಟುಗಳನ್ನು ಗ್ರಾಹಕರಿಗೆ ಬದಲಾವಣೆ ಮಾಡಿಕೊಡುತ್ತಾರೆ.

ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ಗ್ರಾಹಕರಂತೆ ಭೇಟಿ ನೀಡಿ, ಚಲಾವಣೆಗೆ ಸೂಕ್ತ ಎಂದೆನಿಸದ ನೋಟುಗಳನ್ನು ಬದಲಾವಣೆ ಮಾಡಿಕೊಡುವಂತೆ ಕೇಳುತ್ತಿದ್ದದ್ದು ಆ ದಿನಗಳಲ್ಲಿ ಇತ್ತು. ಈಗಲೂ, ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಶಾಖೆಗೆ ಆಗಾಗ್ಗೆ ಹೋಗಿ ಈ ರೀತಿ ಪರೀಕ್ಷೆ ಮಾಡುವುದು ಒಳ್ಳೆಯದು. ಪ್ರತಿವರ್ಷ ಚಲಾವಣೆಗೆ ಸೂಕ್ತ ಎಂದೆನಿಸದ ಎಷ್ಟೆಲ್ಲಾ ನೋಟುಗಳನ್ನು ಯಾವ ಯಾವ ಬ್ಯಾಂಕುಗಳು ಗ್ರಾಹಕರಿಂದ ಪಡೆದು ರಿಸರ್ವ್ ಬ್ಯಾಂಕಿಗೆ ನೀಡಿವೆ ಎಂಬ ಅಂಕಿಅಂಶವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಿ. ಆಗ ಯಾವ ಯಾವ ಬ್ಯಾಂಕ್ ತಮ್ಮ ಗ್ರಾಹಕರಿಗೆ ಉತ್ತಮವಾಗಿ ಸೇವೆ ಸಲ್ಲಿಸುತ್ತಿದೆ ಎನ್ನುವುದನ್ನು ಜನಸಾಮಾನ್ಯರಿಗೆ ತಿಳಿಸಿದಂತೆ ಆಗುತ್ತದೆ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ಉಚಿತ ಪ್ರಚಾರದ ಪರಿಪಾಟ ಸಲ್ಲ

ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಾಣವಾಗುವ ಬಸ್ ನಿಲ್ದಾಣಗಳಲ್ಲಿ ಕ್ಷೇತ್ರದ ಶಾಸಕರು ತಮ್ಮ ಭಾವಚಿತ್ರಗಳನ್ನು ಹಾಕಿಸಿಕೊಳ್ಳುವ ಪರಿಪಾಟ ಮುಂದುವರಿದಿದೆ. ಶಾಸಕರ ಅನುದಾನದಿಂದ ನಿರ್ಮಾಣವಾಗುತ್ತದೆ ಅಂದಮಾತ್ರಕ್ಕೆ ಅದು ಶಾಸಕರು ತಮ್ಮ ಮನೆಯಿಂದ, ಜೇಬಿನಿಂದ ತಂದ ಹಣವೆಂದು ಭಾವಿಸಿದಂತಿದೆ. ಈ ಕುರಿತು ಸೂಕ್ತ ನಿಯಮವನ್ನು ರೂಪಿಸಬೇಕಿದೆ. ಸ್ವಂತ ಹಣದಿಂದ ಮಾಡುವ ಯಾವುದೇ ಕೆಲಸಕ್ಕೆ ಜನಪ್ರತಿನಿಧಿಗಳು ತಮ್ಮ ಪುತ್ಥಳಿಯನ್ನೇ ಹಾಕಿಕೊಳ್ಳಲಿ, ಆದರೆ ಸಾರ್ವಜನಿಕರ ಹಣದಿಂದ ಈ ರೀತಿಯ ಪ್ರಚಾರ ಖಂಡನೀಯ. ಚುನಾವಣಾ ಸಮಯದಲ್ಲಿ ನೀತಿ ಸಂಹಿತೆ ಅನ್ವಯ ಅವರ ಭಾವಚಿತ್ರದಲ್ಲಿನ ಮುಖಗಳನ್ನು ಮುಚ್ಚುವ ಕೆಲಸ ಮಾಡಲಾಗುತ್ತದೆ. ಹೀಗೆ ಮುಖ ಮುಚ್ಚಿಸಿಕೊಳ್ಳುವ ಉಸಾಬರಿ ಏಕೆ ಬೇಕು? ಇನ್ನು ಮುಂದಾದರೂ ಇಂತಹ ಉಚಿತ ಪ್ರಚಾರದ ಪರಿಪಾಟ ನಿಲ್ಲಲಿ.

ಎಸ್.ರವಿ, ಮೈಸೂರು

ಪಂಚಾಂಗದ ಮುಂದೆ ರಾಜ್ಯಾಂಗದ ಸ್ಥಿತಿ?

ಮನೆಯಲ್ಲಿ ಪೂಜೆ ಮುಗಿಸಿ, ಎರಡು ತಾಸು ತಡವಾಗಿ ಕಚೇರಿಗೆ ಬರುವ ವಿಶೇಷ ಅನುಕೂಲವನ್ನು ಲೆಫ್ಟಿನೆಂಟ್ ಗವರ್ನರ್ ಡಾ. ತಮಿಳುಸಾಯಿ ಸೌಂದರರಾಜನ್ ಅವರು ಪುದುಚೇರಿಯ ಸರ್ಕಾರಿ ಮಹಿಳಾ ಸಿಬ್ಬಂದಿಗೆ ಮಾಡಿಕೊಟ್ಟಿರುವ ಸುದ್ದಿ (ಪ್ರ.ವಾ., ಏ. 29) ಪ್ರಕಟವಾಗಿದೆ. ಮುಂದೊಂದು ದಿನ ಇಂತಹ ಅವಕಾಶಗಳು ಹೆಣ್ಣು ಗಂಡು ಎನ್ನದೆ ದೇಶದ ತುಂಬಾ ಬಂದರೆ ಹೇಗಿದ್ದೀತು? ಆಗ ಆಡಳಿತದಲ್ಲಿ ಇತರ ಧರ್ಮದ ಜನರಿಗೆ ಯಾವ ಹಕ್ಕು ಬಾಧ್ಯತೆಗಳು ಸಿಕ್ಕಬಹುದು? ಪಂಚಾಂಗದ ಕೈ ಮೇಲಾಗಬಹುದಾದ ಅಂತಹ ದಿನಗಳಲ್ಲಿ ರಾಜ್ಯಾಂಗ (ಸಂವಿಧಾನ) ಉಳಿದೀತೆ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಪ್ರಜಾವಾಣಿ@75ಕ್ಕೆ ಸಿನಿ ಸಮ್ಮಾನದ ಮೆರುಗು

ಕನ್ನಡ ಕಲೆ, ಸಾಹಿತ್ಯ, ಸಿನಿಮಾ, ಸಂಸ್ಕೃತಿಗೆ ರಾಯಭಾರಿಯಂತಿರುವ 'ಪ್ರಜಾವಾಣಿ' ಪತ್ರಿಕೆಗೀಗ 75ರ ಸಂಭ್ರಮ. ಕಲಾವಿದರನ್ನು ಗುರುತಿಸುವಲ್ಲಿ, ಅನೇಕ ಕಾಲಘಟ್ಟಗಳಲ್ಲಿ ಸಿನಿಮೋದ್ಯಮಕ್ಕೂ ಸಮಾಜಕ್ಕೂ ನಂಟು ಬೆಸೆಯುವಲ್ಲಿ ಮಹತ್ತರ ಕೊಡುಗೆ ನೀಡಿರುವ ಪತ್ರಿಕೆ ಈಗ ಸಿನಿಮಾ ಕ್ಷೇತ್ರದಲ್ಲಿನ ಸಾಧಕರನ್ನು ಗುರುತಿಸಿ, ಗೌರವಿಸುವ ಗಮನಾರ್ಹ ಕಾರ್ಯ ಕೈಗೆತ್ತಿಕೊಂಡಿದೆ. ಚಂದನವನದ ಚೆಂದದ ಸಮ್ಮಾನವಾಗಿರುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಏಕೆ, ಹೇಗೆ, ಎಲ್ಲಿ, ಯಾವಾಗ ಎಂಬಿತ್ಯಾದಿ ಮಾಹಿತಿ ಇಲ್ಲಿದೆ...

ಕರುನಾಡಿನ ಪತ್ರಿಕೋದ್ಯಮದಲ್ಲಿ ಏಳು ದಶಕಗಳನ್ನು ಪೂರೈಸಿರುವ 'ಪ್ರಜಾವಾಣಿ' ಪತ್ರಿಕೆ ತನ್ನ 75ನೇ ವರ್ಷದ ಸಂಭ್ರಮದ ಅಂಗವಾಗಿ ಅನೇಕ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಕಥೆಗಾರರು, ಕವಿಗಳಿಗೆಲ್ಲ ಸ್ಪರ್ಧೆಗಳ ಮೂಲಕ ವೇದಿಕೆ ಒದಗಿಸಿ, ಗೌರವಿಸುತ್ತ ಬಂದಿರುವ ಪತ್ರಿಕೆ ರಂಗಭೂಮಿಗೂ ವಿಶಿಷ್ಟ ಸ್ಥಾನ ಕಲ್ಪಿಸಿದೆ. ಸಿನಿಮಾ ಕಲಾವಿದರನ್ನು ಪರಿಚಯಿಸುವಲ್ಲಿಯೂ ಹಿಂದೆ ಬಿದ್ದಿಲ್ಲ. ಈ ದಾರಿಯಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟು, ಈ ವರ್ಷದಿಂದ ಚಲನಚಿತ್ರ ರಂಗದ ಸಾಧಕರನ್ನು ಗುರುತಿಸಿ ಗೌರವಿಸುವಂತಹ 'ಸಿನಿ ಸಮ್ಮಾನ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಉದ್ದೇಶವೇನು?

ಚಂದನವನದ ಪ್ರತಿಭೆಗಳನ್ನು ಗುರುತಿಸಲು ಮತ್ತು ಕನ್ನಡ ಚಿತ್ರರಂಗದ ಅಭೂತಪೂರ್ವ ಪರಂಪರೆಯನ್ನು ಎತ್ತಿಹಿಡಿಯಲು 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ವೇದಿಕೆಯಾಗಬೇಕೆಂಬುದು ಈ ಕಾರ್ಯಕ್ರಮದ ಆಶಯ. ಸ್ಯಾಂಡಲ್‌ವುಡ್‌ನಲ್ಲಿರುವ ಅಸಾಧಾರಣ ಪ್ರತಿಭೆಗಳನ್ನು ಗುರುತಿಸಿ, ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶವಿದೆ.

2022ರ ಜನವರಿ 1ರಿಂದ ಡಿಸೆಂಬರ್ 31ರವರೆಗೆ ಸೆನ್ಸಾರ್ ಮಂಡಳಿಯಿಂದ ಪ್ರಮಾಣೀಕೃತಗೊಂಡು ಬಿಡುಗಡೆಯಾದ ಚಿತ್ರಗಳನ್ನು ಕೆಲ ತಿಂಗಳುಗಳ ಹಿಂದೆ ಸಮ್ಮಾನಕ್ಕಾಗಿ ಪರಿಗಣಿಸಲು ಆಹ್ವಾನಿಸಲಾಗಿತ್ತು. ಈ ಆಯ್ಕೆ ಪ್ರಕ್ರಿಯೆ ವಿಶಿಷ್ಟವಾಗಿದೆ. ಇದು ಚಿತ್ರರಂಗದವರು ಹಾಗೂ ಜನರನ್ನು ಒಳಗೊಳ್ಳುವಂತಹ ಆಲೋಚನೆ. ನಾಮನಿರ್ದೇಶಿತ ಸಿನಿಮಾಗಳು ಹಾಗೂ ವಿಜೇತರ ಕುರಿತಂತೆ ಯಾವುದೇ ಪೂರ್ವಗ್ರಹ ಇರಕೂಡದು ಎಂಬ ಎಚ್ಚರಿಕೆಯೂ ಇದಾಗಿದೆ.

ಆಯ್ಕೆ ಪ್ರಕ್ರಿಯೆ ಹೇಗೆ?

ಆಯ್ಕೆಯು ಯಾವುದೇ ವ್ಯಕ್ತಿ, ಸಂಸ್ಥೆಯ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದಂತೆ ಅತ್ಯಂತ ಪಾರದರ್ಶಕ ಮತ್ತು ವೃತ್ತಿಪರವಾಗಿ ನಡೆಯುತ್ತಿದೆ. ಇಡೀ ಆಯ್ಕೆ ಪ್ರಕ್ರಿಯೆಯನ್ನು ಮೂರು ಸ್ತರಗಳಲ್ಲಿ ನಡೆಸಲಾಗುತ್ತಿದೆ. ಆಹ್ವಾನದ ವೇಳೆಯೇ ತಿಳಿಸಲಾಗಿದ್ದ ನಮ್ಮೆಲ್ಲ ಮಾನದಂಡಗಳನ್ನು ಪೂರೈಸಿದ ಚಿತ್ರಗಳನ್ನು ಪರಿಗಣಿಸಲಾಗಿದೆ. ಈ ಚಿತ್ರಗಳನ್ನು ನಮ್ಮ 20 ಪರಿಣತ ತಾಂತ್ರಿಕ ತೀರ್ಪುಗಾರರ ಮಂಡಳಿ ವೀಕ್ಷಿಸಿ, ಪ್ರತಿ ವಿಭಾಗದಲ್ಲಿ ತಲಾ ಐದು ನಾಮನಿರ್ದೇಶನ ಮಾಡಿದೆ.

ತಾಂತ್ರಿಕ ತೀರ್ಪುಗಾರರ ಮಂಡಳಿಯಲ್ಲಿ ಸಿನಿಮಾ ರಂಗದಲ್ಲಿ ಅಪಾರ ಅನುಭವ ಹೊಂದಿರುವ ಸಂಗೀತ ನಿರ್ದೇಶಕ ವಿ.ಮನೋಹರ್, ನಿರ್ದೇಶಕ ಜಯತೀರ್ಥ, ಗೀತ ಸಾಹಿತಿ ಕವಿರಾಜ್, ನಟಿ 'ಸ್ಪರ್ಶ' ರೇಖಾ, ನಟ ಸಂಪತ್ ಕುಮಾರ್, ಗಾಯಕಿ ಎಂ.ಡಿ.ಪಲ್ಲವಿ, ಸಂಕಲನಕಾರ ಎಂ.ಎನ್.ಸ್ವಾಮಿ, ನಿರ್ದೇಶಕಿ ರೂಪಾರಾವ್, ಛಾಯಾಗ್ರಾಹಕ ಎಚ್.ಎಂ.ರಾಮಚಂದ್ರ, ಗ್ರೇಡಿಂಗ್ ತಂತ್ರಜ್ಞ ಸುನೀಲ್ ಕಾಮತ್ ಇದ್ದಾರೆ. ಸಿನಿಮಾ ಪತ್ರಿಕೋದ್ಯಮದಲ್ಲಿ ದಶಕಗಳ ಅನುಭವ ಹೊಂದಿರುವ, ಉತ್ತಮ ಸಿನಿಮಾ ವಿಮರ್ಶಕರೆನಿಸಿರುವ ಪ್ರೀತಿ ನಾಗರಾಜ್, ಗಂಗಾಧರ್ ಮೊದಲಿಯಾರ್, ಸಂಧ್ಯಾರಾಣಿ, ಪ್ರತಿಭಾ ನಂದಕುಮಾರ್, ವಿಶ್ವನಾಥ್, ಪ್ರೇಮ್‌ಕುಮಾರ್ ಹರಿಯಬ್ಬೆ, ಶ್ರುತಿ, ಭಾಸ್ಕರ್ ರಾವ್, ಎಂ.ಕೆ.ರಾಘವೇಂದ್ರ, ಹರೀಶ್ ಮಲ್ಯ ಇದ್ದಾರೆ.

ನಿರ್ದೇಶಕ ಗಿರೀಶ ಕಾಸರವಳ್ಳಿ ಮುಖ್ಯ ತೀರ್ಪುಗಾರರ ಸಮಿತಿ ಅಧ್ಯಕ್ಷರಾಗಿದ್ದಾರೆ. ನಾದಬ್ರಹ್ಮ ಹಂಸಲೇಖ, ನಟ ಪ್ರಕಾಶ್ ರಾಜ್, ನಿರ್ದೇಶಕ ಯೋಗರಾಜ್ ಭಟ್, ನಟಿ ಶ್ರುತಿ ಹರಿಹರನ್, ನಿರ್ದೇಶಕಿ ಸುಮನಾ ಕಿತ್ತೂರು, ಬೆಂಗಳೂರು ಚಿತ್ರೋತ್ಸವದ ಸಂಸ್ಥಾಪಕ ವಿದ್ಯಾಶಂಕರ್ ಈ ಸಮಿತಿಯಲ್ಲಿರುವ ಇತರ ಮುಖ್ಯ ತೀರ್ಪುಗಾರರು. ಎರಡನೇ ಸ್ತರದಲ್ಲಿ ಮುಖ್ಯ ತೀರ್ಪುಗಾರರ ಮಂಡಳಿಯಿಂದ ನಾಮನಿರ್ದೇಶನಗಳಿಗೆ ಅಂತಿಮರೂಪ ದೊರೆತಿದೆ.

ಇಡೀ ಪ್ರಶಸ್ತಿಯ ವಿಶಿಷ್ಟ ಮತ್ತು ಅನನ್ಯವಾದ ಹೆಜ್ಜೆ ಮೂರನೇ ಸ್ತರ. ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಮಂದಿಯಿಂದ ಮತದಾನ ನಡೆಯಲಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ನಿರ್ಮಾಪಕರ ಸಂಘ, ನಿರ್ದೇಶಕರ ಸಂಘ ಸೇರಿದಂತೆ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನ ಮಾಡುತ್ತಾರೆ.

ನಂತರ ಮುಖ್ಯ ತೀರ್ಪುಗಾರರ ಮಂಡಳಿಯಿಂದ ಮೇಲಿನ ಮೂರು ಸ್ತರಗಳಿಂದಾದ ಆಯ್ಕೆಗೆ ಅಂತಿಮ ಅನುಮೋದನೆ ದೊರೆಯುತ್ತದೆ. ಕೊನೆಯ ಹಂತದಲ್ಲಿ ಮೇ 27ರಂದು ವಿಜೇತರ ಘೋಷಣೆಯಾಗಲಿದೆ. 15 ವಿಭಾಗಗಳಲ್ಲಿ ಅರ್ಹರ ಆಯ್ಕೆಗೆ ಈ ಪ್ರಕ್ರಿಯೆ ಅನ್ವಯವಾಗಲಿದೆ.



'ಪ್ರಜಾವಾಣಿ ಸಿನಿ ಸಮ್ಮಾನ' ಟ್ರೋಫಿ ಅನಾವರಣವನ್ನು ನಿರ್ದೇಶಕ ಗಿರೀಶ ಕಾಸರವಳ್ಳಿ ಕ್ಲಾಪ್ ಮಾಡುವ ಮೂಲಕ ನಡೆಸಿದರು. ಟಿಪಿಎಂಎಲ್ ಸಿಇಒ ಮತ್ತು ಡೆಕ್ಕನ್ ಹೆರಾಲ್ಡ್ ಸಂಪಾದಕ ಸೀತಾರಾಮನ್ ಶಂಕರ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ಸಂಗೀತ ನಿರ್ದೇಶಕ ವಿ. ಮನೋಹರ್, ನಿರ್ದೇಶಕಿ ಸುಮನಾ ಕಿತ್ತೂರು, ಹಂಸಲೇಖ ಹಾಗೂ ಎನ್. ವಿದ್ಯಾಶಂಕರ್ ಭಾಗವಹಿಸಿದ್ದರು

ತಾಂತ್ರಿಕ ತೀರ್ಪುಗಾರರ ಮಂಡಳಿ ತಜ್ಞರ (ಚಿತ್ರರಂಗ) ಪ್ರತಿಕ್ರಿಯೆ

ಪಾರದರ್ಶಕ ಪ್ರಕ್ರಿಯೆ



ಇಡೀ ಆಯ್ಕೆ ಪ್ರಕ್ರಿಯೆಯಲ್ಲಿ ಒಳ್ಳೆಯ ಸಿನಿಮಾ, ಕೆಟ್ಟ ಸಿನಿಮಾ, ಸುಮಾರಾಗಿರುವ ಸಿನಿಮಾಗಳನ್ನೂ ನೋಡಿರುವೆ. ಇದರಿಂದ ಕನ್ನಡ ಚಿತ್ರರಂಗ ಯಾವ ದಿಕ್ಕಿನತ್ತ ಹೋಗುತ್ತಿದೆ ಎಂಬ ಚಿತ್ರಣ ದೊರೆಯಿತು. ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿದೆ. ತೀರ್ಪುಗಾರರಿಗೆ ಪರಸ್ಪರ ಪರಿಚಯವೇ ಇರಲಿಲ್ಲ. ಹೀಗಾಗಿ ಯಾವುದೇ ಶಿಫಾರಸು, ಸ್ವ ಹಿತಾಸಕ್ತಿಗಳಿಗೆ ಅವಕಾಶ ಇರಲಿಲ್ಲ. ತುಂಬ ನ್ಯಾಯಯುತವಾದ ಆಯ್ಕೆ ನಡೆಯುತ್ತದೆ ಎಂಬದನ್ನು ಇಲ್ಲಿನ ಪ್ರತಿ ಹಂತದ ಆಯ್ಕೆ ಹೇಳುತ್ತಿದೆ. 'ಪ್ರಜಾವಾಣಿ'ಗೆ ಕೆಲಸಕ್ಕೆ ಸೇರಬೇಕೆಂಬ ನನ್ನ ಬಹಳ ಹಿಂದಿನ ಆಸೆ ಈ ಮೂಲಕವಾದರೂ ನೆರವೇರಿದಂತಾಗಿದೆ!

ವಿ.ಮನೋಹರ್, ಸಂಗೀತ ನಿರ್ದೇಶಕ

ಒಬ್ಬರದ್ದೇ ಅಭಿಪ್ರಾಯವಿಲ್ಲ



ಇಡೀ ಆಯ್ಕೆಯ ಕಸರತ್ತು ಬಹಳ ವೃತ್ತಿಪರವಾಗಿದೆ. ಪ್ರಕ್ರಿಯೆ ವಿಸ್ತೃತವಾಗಿದೆ. ಯೋಚನೆ ಮಾಡಿ ಶೆಡ್ಯೂಲ್ ಮಾಡಿದ್ದಾರೆ ಅನ್ನಿಸಿತು. ಎಲ್ಲರಿಗೂ ನ್ಯಾಯಯುತವಾಗಿ ಸ್ಕೋರಿಂಗ್ ಆಗುವ ರೀತಿಯಲ್ಲಿತ್ತು. ತೀರ್ಪುಗಾರರ ಮಂಡಳಿಯಲ್ಲಿ ಕೂಡ ಒಬ್ಬರ ಅಭಿಪ್ರಾಯದಿಂದ ಫಲಿತಾಂಶ ವ್ಯತ್ಯಾಸವಾಗುವುದಕ್ಕೆ ಅವಕಾಶವಿಲ್ಲ. ಎಲ್ಲರೂ ನೀಡಿದ ಅಂಕಗಳಿಂದ ಆಯ್ಕೆ ಆಗುವ ರೀತಿಯಲ್ಲಿ ಪ್ರಕ್ರಿಯೆ ರೂಪಿಸಲಾಗಿದೆ. ಇದು ಉತ್ತಮ ಹೆಜ್ಜೆ. ತುಂಬಾ ಶಿಸ್ತಿನಿಂದ ಕೂಡಿದೆ.

ಎಂ.ಡಿ.ಪಲ್ಲವಿ, ಸ್ವರ ಸಂಯೋಜಕಿ,ಗಾಯಕಿ.

ವಿಶ್ವಾಸಾರ್ಹತೆ ಮುಖ್ಯವಾಗುತ್ತದೆ



ಆಯ್ಕೆ ಪ್ರಕ್ರಿಯೆ ತುಂಬ ಚೆನ್ನಾಗಿದೆ. ನಿಷ್ಪಕ್ಷಪಾತವಾಗಿದೆ. ಕಣ್ಣುತಪ್ಪಿನಿಂದಲೋ, ಯಾರೋ ಒಬ್ಬರ ಆಲೋಚನೆಯಿಂದಲೋ ಯಾವುದೇ ಪ್ರತಿಭೆಗೆ ಅನ್ಯಾಯವಾಗುವ ಪ್ರಮೇಯವೇ ಇಲ್ಲ. ಮೊದಲ ಹೆಜ್ಜೆಯಲ್ಲಿಯೇ ಈ ರೀತಿ ಪ್ರಕ್ರಿಯೆ ಆಯ್ಕೆ ಮಾಡಿಕೊಂಡಿರುವುದು ಸ್ವಾಗತಾರ್ಹ. ಪ್ರಶಸ್ತಿಗಳೇ ನಾಯಿಕೊಡೆಗಳಾಗಿರುವಂತಹ ದಿನದಲ್ಲಿ ಪ್ರಶಸ್ತಿ ನೀಡುವ ಸಂಸ್ಥೆಯ ವಿಶ್ವಾಸಾರ್ಹತೆ ಕೂಡ ಮುಖ್ಯವಾಗುತ್ತದೆ. ಕೊಡುವವರ ವಿಶ್ವಾಸಾರ್ಹತೆ ಮೇಲೆ ಪ್ರಶಸ್ತಿ ಮೌಲ್ಯ ನಿರ್ಧಾರವಾಗುತ್ತದೆ. ಆ ದಿಸೆಯಲ್ಲಿ 'ಪ್ರಜಾವಾಣಿ' ದಿಟ್ಟ ಹೆಜ್ಜೆ ಇಟ್ಟಿದೆ.

ಕವಿರಾಜ್, ಗೀತ ಸಾಹಿತಿ


ಬಹಳ ಸ್ಪಷ್ಟತೆ ಇದೆ



ಆಯ್ಕೆ ಕಸರತ್ತಿನಲ್ಲಿ ಬಹಳ ಸ್ಪಷ್ಟತೆಯಿದೆ ಅನ್ನಿಸಿತು. ನಮಗೆ ಸಿನಿಮಾ ತೋರಿಸುವ ಮೊದಲು ನೀವು ಯಾವ ವಿಭಾಗದಲ್ಲಿ ಆಯ್ಕೆ ಮಾಡಬೇಕೆಂಬ ನಿಖರವಾದ ನಿರ್ದೇಶನ ನೀಡಿದ್ದರು. ಸಿನಿಮಾ ಲಿಂಕ್ ಓಪನ್ ಆಗದೆ ಸ್ವಲ್ಪ ಅಡಚಣೆಯಾಯಿತು. ಆದರೆ ಅದನ್ನು ತಕ್ಷಣ ಸರಿಪಡಿಸಿದರು. ಸಿನಿಮಾದಲ್ಲಿ ಸಂಗೀತ ಎಂದರೆ ಹಾಡು ಮಾತ್ರವಲ್ಲ, ಹಿನ್ನೆಲೆ ಸಂಗೀತವೂ ಸೇರುತ್ತದೆ. ಅದನ್ನು ಪರಿಗಣಿಸಬೇಕೆಂದು ಮುಂದಿನ ಹಂತದ ತೀರ್ಪುಗಾರರಿಗೆ ಮನವಿ ಮಾಡುತ್ತೇನೆ. ಪ್ರಕ್ರಿಯೆ ತುಂಬ ಅಚ್ಚುಕಟ್ಟಾಗಿದೆ. ಒಂದು ರೀತಿ ಅಕಾಡೆಮಿ ಆಯ್ಕೆಯ ಅನುಭವ ನೀಡಿದೆ.

ಜಯತೀರ್ಥ, ಚಲನಚಿತ್ರ ನಿರ್ದೇಶಕರು


ಹೊಸತನದಿಂದ ಕೂಡಿದೆ



ನನ್ನ ಪಾಲಿಗೆ ಬಂದ ಎಲ್ಲ ಚಿತ್ರಗಳನ್ನೂ ನೋಡಿದೆ. ಅದರಲ್ಲಿ ಕೆಲವೇ ಕೆಲವು ಗುಣಮಟ್ಟದ ಸಿನಿಮಾಗಳು ಸಿಕ್ಕವು. ಅತ್ಯುತ್ತಮವಾಗಿದ್ದು ಮಾತ್ರ ಅಂತಿಮವಾಗಿ ಉಳಿದುಕೊಳ್ಳುತ್ತವೆ. ಇಡೀ ಆಯ್ಕೆ ಪ್ರಕ್ರಿಯೆ ಹೊಸತನದಿಂದ ಕೂಡಿದೆ. ಬೇರೆ ಕೆಲ ಪ್ರಶಸ್ತಿ ನೋಡಿರುವೆ. ಯಾರೋ ಶಿಫಾರಸು ಮಾಡುತ್ತಾರೆ. ಇಲ್ಲಿ ಸಿನಿಮಾ ನೋಡಿ ಪಟ್ಟಿ ಕಳುಹಿಸಿದ ನಂತರವೂ ಒಬ್ಬ ತೀರ್ಪುಗಾರನಿಗೆ ಇನ್ನೊಬ್ಬ ತೀರ್ಪುಗಾರನ ಬಗ್ಗೆ ಗೊತ್ತಿರಲಿಲ್ಲ. ಪರಸ್ಪರ ಕರೆ ಮಾಡಿ, ಶಿಫಾರಸು ಮಾಡುವ ಪ್ರಮೇಯವೇ ಇರಲಿಲ್ಲ. ಒಳ್ಳೆಯ ಪ್ರಕ್ರಿಯೆ. ಪ್ರಾಮಾಣಿಕವಾಗಿ ಕೆಲಸ ಮಾಡಲು ಮುಕ್ತ ಅವಕಾಶ. ಚೆನ್ನಾಗಿಲ್ಲದ ಸಿನಿಮಾಗಳನ್ನು ಮುಲಾಜಿಲ್ಲದೆ ಹೊರಗಿಟ್ಟಿದ್ದೇವೆ.

ಎಂ.ಎನ್.ಸ್ವಾಮಿ, ಸಿನಿಮಾ ಸಂಕಲನಕಾರರು

ಬೇರೆಯವರಿಗೂ ಮಾದರಿ



ಇಡೀ ಆಯ್ಕೆ ಪ್ರಕ್ರಿಯೆ ತುಂಬ ಮೃದುವಾಗಿತ್ತು ಮತ್ತು ವೃತ್ತಿಪರವಾಗಿತ್ತು. ಡೆಡ್‌ಲೈನ್ ಸ್ವಲ್ಪ ಬಿಗಿಯಾಗಿತ್ತು. ನಾನು 2-3 ಬೇರೆ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕೆಲಸ ಮಾಡಿರುವೆ. ಆದರೆ ಈ ರೀತಿ 3 ಸ್ತರದಲ್ಲಿ ಆಯ್ಕೆ ನೋಡಿದ್ದು ಭಾರತದಲ್ಲಿಯೇ ಇದೇ ಮೊದಲು. ಇಲ್ಲಿ ಯಾರಿಗೂ ಅನ್ಯಾಯ ಆಗುವುದಿಲ್ಲ. ಹಂತ ಹಂತವಾಗಿ ಫಿಲ್ಟರ್ ಆಗುತ್ತದೆ. ಬೇರೆ ಪ್ರಶಸ್ತಿಗಳಿಗೂ ಮಾದರಿಯಾಗಬಲ್ಲ ಆಯ್ಕೆ ಪ್ರಕ್ರಿಯೆ. ವಿಸ್ತೃತವಾಗಿದೆ. ಆಯ್ಕೆ ನಿರ್ವಹಣೆ ರೀತಿಯೇ ಪ್ರಶಸ್ತಿ ಮೌಲ್ಯ ಮತ್ತು ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ರೂಪಾ ರಾವ್, ಚಲನಚಿತ್ರ ನಿರ್ದೇಶಕಿ.


ಸ್ಪಷ್ಟವಾಗಿ ವಿವರಿಸಿದ್ದರು



ಆಯ್ಕೆ ಪ್ರಕ್ರಿಯೆ ಖುಷಿಯ ಅನುಭವ ನೀಡಿದೆ. ನಾವು ಹೆಚ್ಚಿನ ಸಮಯ ತಾಂತ್ರಿಕವಾಗಿ ಸಿನಿಮಾ ನೋಡುತ್ತೇವೆ. ಕಲರ್ ಗ್ರೇಡ್ ಮಾಡುವಾಗ ಧ್ವನಿಯಿಲ್ಲದೆ ಸಿನಿಮಾ ನೋಡಿರುತ್ತೇವೆ. ಆದರೆ ಇಲ್ಲಿ ಯಾವೆಲ್ಲ ಅಂಶಗಳನ್ನು ಪರಿಗಣಿಸಬೇಕೆಂದು ಸ್ಪಷ್ಟವಾಗಿ ವಿವರಿಸಿದ್ದರು. ಯಾವ ವಿಭಾಗವನ್ನು ಹೇಗೆ ಆಯ್ಕೆ ಮಾಡಬೇಕೆಂದು ಹೇಳಿದ್ದರು. ಒಟ್ಟಾರೆಯಾಗಿ ಚೆನ್ನಾಗಿತ್ತು. ನೋಡಿಲ್ಲದ ಅನೇಕ ಸಿನಿಮಾಗಳನ್ನು ನೋಡಿದಾಗ ಖುಷಿಯಾಯ್ತು. ತಾಂತ್ರಿಕವಾಗಿಯೂ ಎಲ್ಲ ಆಯಾಮದಿಂದಲೂ ಸಿನಿಮಾ ನೋಡಬೇಕಾಗುತ್ತದೆ. ಆ ಪ್ರಕ್ರಿಯೆ ಇಲ್ಲಿ ನಡೆದಿದೆ.

ಸುನಿಲ್ ಕಾಮತ್, ಗ್ರೇಡಿಂಗ್ ತಂತ್ರಜ್ಞ

ಉತ್ತಮವಾದ ಪ್ರಕ್ರಿಯೆ



ಪತ್ರಿಕೋದ್ಯಮದ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಪ್ರಜಾವಾಣಿ ಕುರಿತು ಗೌರವ ಹೊಂದಿರುವೆ. ಕನ್ನಡದ ಸಾಕ್ಷಿಪ್ರಜ್ಞೆಯಿದು. ಮೌಲ್ಯಯುತವಾದ ಸಂಸ್ಥೆ. ಇಂಥ ಸಂಸ್ಥೆ ಪ್ರಶಸ್ತಿ ನೀಡುತ್ತಿರುವುದು ಸಾಮಾನ್ಯವಾಗಿ ನಿರೀಕ್ಷೆ ಮತ್ತು ಮೌಲ್ಯ ಹೆಚ್ಚಿಸುತ್ತದೆ. ಮೌಲ್ಯಯುತ ಸಿನಿಮಾ ಗುರುತಿಸುವ, ಚಿತ್ರರಂಗಕ್ಕೆ ಉತ್ತೇಜನ ನೀಡುವ ಪ್ರಕ್ರಿಯೆ. ಇಲ್ಲಿ ಪ್ರಶಸ್ತಿ ಪಡೆಯದೇ ಇದ್ದವರಿಗೂ ಮುಂದಿನ ವರ್ಷಗಳಲ್ಲಿ ಶ್ರಮ ಹಾಕಲು ಉತ್ತೇಜನ ನೀಡುತ್ತದೆ. ಆಯ್ಕೆ ಪ್ರಕ್ರಿಯೆ ಮತ್ತು ಆಯ್ಕೆ ಮಾಡಿದ ತಂಡ ತುಂಬ ವಿಶೇಷವಾಗಿದೆ. ಇಡೀ ಪ್ರಕ್ರಿಯೆ ಚಿತ್ರರಂಗಕ್ಕೆ ಇನ್ನಷ್ಟು ಜವಾಬ್ದಾರಿ, ಉತ್ತೇಜನ ನೀಡುತ್ತದೆ. ಪತ್ರಿಕೆಯ ಪ್ರಯತ್ನಕ್ಕೆ ಅಭಿನಂದನೆಗಳು.

ಎಚ್.ಎಂ.ರಾಮಚಂದ್ರ, ಛಾಯಾಗ್ರಾಹಕ

3 ಬಗೆ, 24 ಪ್ರಶಸ್ತಿಗಳು

ಪ್ರಶಸ್ತಿಗಳ ವಿಭಾಗಗಳನ್ನು ಮೂರು ಬಗೆಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯದು 'ಅಸಾಧಾರಣ ಪ್ರತಿಭೆಯ ಚಿತ್ರಗಳು'. ಇದರ ಅಡಿಯಲ್ಲಿ ಶ್ರೇಷ್ಠ ನಟ, ಶ್ರೇಷ್ಠ ನಟಿ, ವರ್ಷದ ಸಿನಿಮಾ, ಶ್ರೇಷ್ಠ ಪೋಷಕ ನಟ ಸೇರಿದಂತೆ ಇಡೀ ಚಲನಚಿತ್ರೋದ್ಯಮದ ಕೆಲಸವನ್ನು ಗುರುತಿಸಿ, ಗೌರವಿಸುವಂತಹ ಒಟ್ಟು 15 ಸಮ್ಮಾನಗಳಿವೆ. ಎರಡನೆಯದು 'ಚಲನಚಿತ್ರ ಉದ್ಯಮಕ್ಕೆ ಹೊಸ ದಿಕ್ಕು ತೋರಿಸಬಲ್ಲ ಸಿನಿಮಾಗಳು'. ಈ ವಿಭಾಗದಡಿ ಶ್ರೇಷ್ಠ ಚಿತ್ರನಿರ್ಮಾಣ ವಿನ್ಯಾಸ (ಕಲೆ, ಪ್ರಸಾಧನ, ವಸ್ತ್ರಾಲಂಕಾರ ಮುಂತಾದವು), ಜೀವಮಾನ ಸಾಧನೆ ಪ್ರಶಸ್ತಿ, ಸಾಮಾಜಿಕ ಪರಿಣಾಮ ಬೀರಿದ ಚಿತ್ರಗಳು, ವಿ. ಎಫ್. ಎಕ್ಸ್, ಎಸ್. ಎಫ್. ಎಕ್ಸ್, ಅತ್ಯುತ್ತಮ ಪೋಸ್ಟ್ ಪ್ರೊಡಕ್ಷನ್ , ಅನಿಮೇಷನ್ ಪ್ರಶಸ್ತಿಗಳಿವೆ. 3ನೆಯದು 'ಸಾರ್ವಜನಿಕರಿಂದ ಆಯ್ಕೆ' ವಿಭಾಗ ಇವೆ. ಇದರಡಿ ಶ್ರೇಷ್ಠ ನಟ, ಶ್ರೇಷ್ಠ ನಟಿ, ಅತ್ಯುತ್ತಮ ಚಿತ್ರ, ಅತ್ಯುತ್ತಮ ಸಂಗೀತ ಪ್ರಶಸ್ತಿಗಳಿವೆ. ಇದಕ್ಕೆ ನಮ್ಮ ಓದುಗರು https://www.prajavani.net/cinesamman ತಾಣದಲ್ಲಿ ಮತದಾನ ಮಾಡುವ ಮೂಲಕ ಅವರ ನೆಚ್ಚಿನ ನಟ, ನಟಿ, ಸಿನಿಮಾಗಳನ್ನು ಆಯ್ಕೆ ಮಾಡಬಹುದು.

ಪ್ರಕ್ರಿಯೆಯೇ ವೃತ್ತಿಪರವಾಗಿದೆ



ಈ ಆಯ್ಕೆ ಪ್ರಕ್ರಿಯೆಯ ತಾಂತ್ರಿಕ ಸಮಿತಿಯಲ್ಲಿರುವುದಕ್ಕೆ ಹೆಮ್ಮೆ ಎನ್ನಿಸುತ್ತಿದೆ. ಇಡೀ ಆಯ್ಕೆ ಪ್ರಕ್ರಿಯೆ ತುಂಬ ವೃತ್ತಿಪರವಾಗಿದೆ. ಆಯ್ಕೆಗೆ ಹಲವು ಮಾನದಂಡಗಳನ್ನು ನೀಡಲಾಗಿತ್ತು. ತೀರ್ಪುಗಾರರಿಗೆ ಸಿನಿಮಾ ಲಿಂಕ್ ಕಳುಹಿಸುವುದರಿಂದ ಹಿಡಿದು ಪ್ರತಿ ಹಂತದಲ್ಲೂ ವೃತ್ತಿಪರತೆ ಎದ್ದು ಕಾಣಿಸಿತು. ತಾಂತ್ರಿಕ ಸಮಿತಿಯಲ್ಲಿ ಎಷ್ಟು ಜನರಿದ್ದಾರೆ, ಒಟ್ಟು ಎಷ್ಟು ಸಿನಿಮಾಗಳಿವೆ ಎಂಬ ಯಾವ ಮಾಹಿತಿಯೂ ಇರಲಿಲ್ಲ. ನಮಗೆ ನೀಡಿದ ಸಿನಿಮಾಗಳನ್ನಷ್ಟೇ ನೋಡಿ ನಮ್ಮ ಅಭಿಪ್ರಾಯ ದಾಖಲಿಸುವುದು ಒಂದು ರೀತಿ ಪಾರದರ್ಶಕ ಆಯ್ಕೆಗೆ ಮನ್ನಣೆ ನೀಡಿರುವುದನ್ನು ತೋರಿಸುತ್ತದೆ. ಹೀಗಾಗಿ ಪ್ರಶಸ್ತಿ ಸುತ್ತಿಗೆ ಸಿನಿಮಾಗಳನ್ನು ಆಯ್ಕೆ ಮಾಡುವುದು ಸವಾಲಿನ ಕೆಲಸವಾಗಿತ್ತು. ಪ್ರತಿ ವರ್ಷ ಈ ಪ್ರಶಸ್ತಿ ನೀಡುವಂತಾಗಲಿ ಎಂದು ಆಶಿಸುತ್ತೇನೆ.

'ಸ್ಪರ್ಶ'ರೇಖಾ, ಸಿನಿಮಾ ನಟಿ

ಕನ್ನಡದ ಆಸ್ಕರ್



'ಪ್ರಜಾವಾಣಿ' ಇತಿಹಾಸ ಗಮನಿಸಿದರೆ ಎಲ್ಲ ಸಮಯದಲ್ಲಿಯೂ, ಎಲ್ಲ ವಿಭಾಗದಲ್ಲಿಯೂ ಜವಾಬ್ದಾರಿಯಿಂದ ವರ್ತಿಸಿದ ಪತ್ರಿಕೆ. ಇಲ್ಲಿನ ಕಥಾಸ್ಪರ್ಧೆ, ಕವನ ಸ್ಪರ್ಧೆಗಳು ಸಾಂಸ್ಕೃತಿಕವಾಗಿ ಸಂಚಲನ ಮೂಡಿಸಿವೆ. ಇಲ್ಲಿಂದ ಅದೆಷ್ಟೋ ಒಳ್ಳೆಯ ಕಥೆಗಾರರು ಸಿನಿಮಾ ರಂಗಕ್ಕೂ ಸಿಕ್ಕಿದ್ದಾರೆ. ಇಂಥ ಪತ್ರಿಕೆಯ ಸಿನಿ ಸಮ್ಮಾನ ನನಗೆ ವೈಯಕ್ತಿಕವಾಗಿ ಒಂದು ರೀತಿಯಲ್ಲಿ ಕನ್ನಡದ ಆಸ್ಕರ್‌ನಂತೆ ಭಾಸವಾಗುತ್ತಿದೆ. ಇಡೀ ಆಯ್ಕೆ ಪ್ರಕ್ರಿಯೆಯನ್ನೂ ಕೂಡ ಅದೇ ರೀತಿ ರೂಪಿಸಲಾಗಿದೆ. ಬಹುಶಃ ಕನ್ನಡ ಚಿತ್ರರಂಗದಲ್ಲಿ ಇದೊಂದು ದೊಡ್ಡ ಮಟ್ಟದ ಗೌರವ. ತಾಂತ್ರಿಕ ಸಮಿತಿ ಸದಸ್ಯನಾಗಿ ದೊಡ್ಡ ಜವಬ್ದಾರಿ ಎಂದು ಭಾವಿಸಿ ನನ್ನ ಕೆಲಸವನ್ನು ನಿಭಾಯಿಸಿರುವೆ. ಖಂಡಿತವಾಗಿ ಇದೊಂದು ಭಿನ್ನ ಅನುಭವ.

ಸಂಪತ್ ಕುಮಾರ್, ನಟ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಅಪಕಾರವಾದ ಉಪಕಾರ

ಬಳಲಿ ನೆಲದಲಿ ಮಲಗಿ ಮೈಮರೆತು ನಿದ್ರಿಪನ |
ಕುಲುಕಿ ಹಾಸಿಗೆಯನರಸೆನುವುದುಪಕೃತಿಯೆ? ||
ಒಳಿತನೆಸಗುವೆನೆಂದು ನೆಮ್ಮದಿಯ ನುಂಗದಿರು |
ಸುಲಭವಲ್ಲೊಳಿತೆಸಗೆ – ಮಂಕುತಿಮ್ಮ || 873 ||

ಪದ-ಅರ್ಥ: ಹಾಸಿಗೆಯನರಸೆನುವುದುಪಕೃತಿಯೆ = ಹಾಸಿಗೆಯನು + ಅರಸು + ಎನುವುದು + ಉಪಕೃತಿಯೆ(ಉಪಕಾರವೆ), ಒಳಿತನೆಸಗುವೆನೆಂದು = ಒಳಿತನು + ಎಸಗುವೆನೆಂದು (ಮಾಡುವೆನೆಂದು), ಸುಲಭವಲ್ಲೊಳಿತೆಸಗೆ = ಸುಲಭವಲ್ಲ + ಒಳಿತ + ಎಸಗೆ(ಮಾಡುವುದು).

ವಾಚ್ಯಾರ್ಥ: ದಣಿದು ಸುಸ್ತಾಗಿ ನೆಲದ ಮೇಲೆಯೇ ಮಲಗಿ ನಿದ್ರಿಸುವವನನ್ನು, ಬಡಿದು ಎಬ್ಬಿಸಿ, ಹಾಸಿಗೆಯನ್ನು ಹುಡುಕಿಕೊಂಡು ಹೋಗಿ ಮಲಗು ಎನ್ನುವುದು ಉಪಕಾರವೆ? ಒಳ್ಳೆಯದನ್ನು ಮಾಡುವೆನೆಂದು ಹೊರಟು ಇದ್ದ ನೆಮ್ಮದಿಯನ್ನು ನುಂಗಿ ಹಾಕಬೇಡ. ಒಳಿತನ್ನು ಮಾಡುವುದು ಸುಲಭವಲ್ಲ.

ವಿವರಣೆ: ಮತ್ತೊಬ್ಬರಿಗೆ ಉಪಕಾರಮಾಡುವುದು ಸುಲಭವಲ್ಲ. ಸಹಾಯ ಮಾಡುತ್ತೇನೆ ಎಂಬುದೇ ಅಹಂಕಾರವಾಗಬಹುದು. ನಾನು ಉಪಕಾರವೆಂದು ಮಾಡುವುದು ಆ ವ್ಯಕ್ತಿಗೆ ಅಪಕಾರವೇ ಆದೀತು. ಬುದ್ಧನ ಅನೇಕ ಜಾತಕ ಕಥೆಗಳಲ್ಲಿ ಒಂದರಲ್ಲಿ ರಾಜನ ಅರಮನೆಯ ಅಡುಗೆಯವನ ಕಥೆ ಬರುತ್ತದೆ. ಆತ ಪ್ರಸಿದ್ಧ ಬಾಣಸಿಗ. ಅವನ ಹಾಗೆ ರುಚಿರುಚಿಯಾದ ಅಡುಗೆ ಮಾಡುವವರೇ ಇರಲಿಲ್ಲ. ರಾಜನಿಗಂತೂ ಅವನ ಅಡುಗೆಯೆಂದರೆ ಪಂಚಪ್ರಾಣ. ಬೇರೆ ಯಾರೇ ಅಡುಗೆ ಮಾಡಿದರೂ ಆತನಿಗೆ ಸಮಾಧಾನವಿರಲಿಲ್ಲ. ಅದು ಹೇಗೋ ಒಂದು ಕೋತಿ ಅಡುಗೆಯವನ ಸ್ನೇಹವನ್ನು ಸಂಪಾದಿಸಿತ್ತು, ಯಾವಾಗಲೂ ಕೋತಿ ಅಡುಗೆ ಮನೆಯಲ್ಲೇ ಇರುತ್ತಿತ್ತು. ಬಾಣಸಿಗ, ಕೋತಿಗೆ ಸಣ್ಣ ಸಣ್ಣ ಕೆಲಸಗಳನ್ನು ಹೇಳುತ್ತಿದ್ದ. ಅದು ಅತ್ಯಂತ ಶ್ರದ್ಧೆಯಿಂದ ಹೇಳಿದ ಕೆಲಸಗಳನ್ನು ಮಾಡುತ್ತಿತ್ತು. ಕೋತಿ ದಿನನಿತ್ಯ ಆತ ಅಡುಗೆ ಮಾಡುವುದನ್ನು ಗಮನಿಸುತ್ತಿತ್ತು. ಒಂದು ಬಾರಿ ಅರಮನೆಯಲ್ಲಿ ಬಹುದೊಡ್ಡ ಸಮಾರಂಭ. ಅನೇಕ ರಾಜರು, ರಾಜಪರಿವಾರದವರು, ನಗರ ಶ್ರೇಷ್ಠರು ಅರಮನೆಗೆ ಬಂದಿದ್ದಾರೆ. ಭರ್ಜರಿ ಊಟದ ಏರ್ಪಾಟು ಮಾಡಿದ್ದರು. ಅಡುಗೆಯವನಿಗೆ ಮೈತುಂಬ ಕೆಲಸ. ಅವನಿಗದು ಪರೀಕ್ಷೆ. ವಿಶೇಷ ಪದಾರ್ಥವೆಂದು ಶ್ಯಾವಿಗೆಯ ಪಾಯಸ ಮಾಡಿದ. ಗೋಡಂಬಿ, ದ್ರಾಕ್ಷಿ, ಗೇರುಬೀಜ, ಅತ್ಯುತ್ತಮ ಶ್ಯಾವಿಗೆಗಳನ್ನು ಶುದ್ಧ ತುಪ್ಪದಲ್ಲಿ ಹುರಿದು ಗಟ್ಟಿ ಹಾಲಿನಲ್ಲಿ ಪಾಯಸ ಮಾಡಿ ಮುಚ್ಚಿಟ್ಟ. ಊಟಕ್ಕೆ ಸಮಯವಿದ್ದುದರಿಂದ ವಿಶ್ರಾಂತಿಗೆಂದು ಹೊರಗೆ ಹೋದ. ನಡೆದದ್ದನ್ನೆಲ್ಲ ಕೋತಿ ನೋಡಿತ್ತು. ಪಾಪ! ತನ್ನ ಸ್ನೇಹಿತ ಇಷ್ಟೊಂದು ಅಡುಗೆ ಮಾಡುವಾಗ ಮರೆತುಬಿಟ್ಟ, ಅವನಿಗೆ ಉಪಕಾರ ಮಾಡಲೆಂದು ಎರಡು ಹಿಡಿ ಉಪ್ಪನ್ನು ತಂದು ಪಾಯಸಕ್ಕೆ ಹಾಕಿಬಿಟ್ಟಿತು. ನಿತ್ಯವೂ ಆತ ಉಪ್ಪು ಹಾಕುವುದನ್ನು ಕಂಡಿದ್ದ ಕೋತಿಗೆ ಯಜಮಾನ ಇಂದು ಮರೆತ ಎನ್ನಿಸಿತ್ತು. ಮುಂದೇನಾಯಿತು ಎಂದು ಹೇಳುವುದು ಅವಶ್ಯವಿಲ್ಲ. ಕೋತಿಯ ಉಪಕಾರ ನಿಜವಾಗಿಯೂ ಅಪಕಾರವಾಗಿತ್ತು. ಕಗ್ಗ ಒಂದು ಸುಂದರ ಉಪಮೆಯನ್ನು ನೀಡುತ್ತದೆ. ದಣಿದು, ನೆಲದ ಮೇಲೆ ಮಲಗಿ ನಿದ್ರಿಸುತ್ತಿದ್ದಾನೆ ವ್ಯಕ್ತಿಯೊಬ್ಬ. ಮಲವನಿಗೆ ಉಪಕಾರ ಮಾಡಲೆಂದು, ಅವನನ್ನು ಎಬ್ಬಿಸಿ, ಹಾಸಿಗೆಯನ್ನು ಹುಡುಕಿಕೊಂಡು ಹೋಗಿ ಮಲಗು ಎನ್ನುವುದು ಸರಿಯೆ? ಅವನ ಗಾಢನಿದ್ರೆಯನ್ನು ಹಾಳುಮಾಡಿ, ನೆಮ್ಮದಿಯನ್ನು ಕೆಡಿಸಲಿಲ್ಲವೆ? ಅದಕ್ಕೇ ಉಪಕಾರ ಮಾಡುವ ಮುನ್ನ, ನಾವು ಮಾಡುವ ಕ್ರಿಯೆ ಅಪಕಾರವನ್ನು ಮಾಡೀತೇ ಎಂದು ಯೋಚಿಸುವುದು ಒಳ್ಳೆಯದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಏಕಾದಶಿ ಗಂ. 22-10 ನಕ್ಷತ್ರ: ಪೂರ್ವಫಲ್ಗುಣಿ ಗಂ. 17.51 ಯೋಗ: ಧ್ರುವ ಗಂ. 11-44, ಕರಣ: ವಣಿಜ ಗಂ. 09-23, ಮೇಷ ಮಾಸದ 17 ನೇ ದಿನ, ಮಳೆನಕ್ಷತ್ರ: ಭರಣಿ 2. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-13 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 10 ಶವ್ವಾಲ್, ದಿನ ವಿಶೇಷ : ಮೇ ಡೇ, ಮೋಹಿನಿ ಏಕಾದಶಿ, ಕಾರ್ಮಿಕರ ದಿನ.
ಅದೃಷ್ಟ ಸಂಖ್ಯೆ : 8, 2

ಮೇಷ: ಸೂರ್ಯೋದಯದೊಳಗೆ ಮನಸ್ಸಂಕಲ್ಪವನ್ನು ನೆರವೇರಿಸಿ ಕೊಳ್ಳಲು ಸರ್ವಪ್ರಯತ್ನಗಳನ್ನೂ ನಡೆಸುವಿರಿ. ಸ್ಥಿರ ಆಸ್ತಿ ಸಂಪಾದಿಸುವ ನಿರ್ಣಯದಲ್ಲಿ ದೃಢವಾಗಿ ನಿಲ್ಲುವಂಥ ತೀರ್ಮಾನ ಮಾಡಿಕೊಳ್ಳಿರಿ.

ವೃಷಭ: ಆಶ್ವಾಸನೀಯ ವರ್ತನೆಯಿಂದ ಇತರರಿಗೆ ಬಹಳ ಸಂತಸ ಉಂಟಾಗುವುದು. ಪ್ರವಾಸ ಹೋಗುವ ಯೋಜನೆಗಳು ಕಾರ್ಯ ರೂಪಕ್ಕೆ ಬರಲಿದೆ. ಹವ್ಯಾಸಿ ಬರಹಗಾರರಿಗೆ ಖ್ಯಾತಿ ಪಡೆಯಲು ವೇದಿಕೆ ದೊರಕುವುದು.

ಮಿಥುನ: ಮಿತ್ರರಿಂದ ಸಹಾಯವನ್ನು ಪಡೆಯುವುದು ಮಾತ್ರವಲ್ಲದೆ ಅವರ ಕಷ್ಟಕಾಲಕಾಲದಲ್ಲಿ ಅವರ ಸಹಾಯ ಮಾಡಲು ನೀವು ಸರ್ವಸನ್ನದ್ಧರಾಗಿ ಇರಬೇಕಾಗುತ್ತದೆ. ತಂಗಿಯರ ವಿದ್ಯಾಭ್ಯಾಸದಲ್ಲಿ ಮೇಲ್ವಿಚಾರಣೆ ನಡೆಸಿ.

ಕರ್ಕಾಟಕ: ಪೂರ್ಣಾಯುವನ್ನು ಅನುಭವಿಸದೆ ಕುಟುಂಬಸ್ಥರು ನಿಧನರಾದದ್ದು ದುಃಖವಾಗುತ್ತದೆ. ಯುವಕರು ಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ನಿಮ್ಮ ವಿದ್ಯಾಲಯದ ಕಾರ್ಯಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಡಬೇಕಾಗುತ್ತದೆ.

ಸಿಂಹ: ಸಮಸ್ಯೆಗಳ ಬಗ್ಗೆಯೆ ಹೆಚ್ಚು ಯೋಚನೆ ಮಾಡುವುದರಿಂದ ಅದರ ಬಗ್ಗೆ ಪರಿಹಾರ ಸಿಗುವ ಸೂಚನೆಗಳಿಲ್ಲ. ಮನೋಭಿಲಾಷೆಯನ್ನು ಸಿದ್ಧಿಸಿಕೊಳ್ಳಲಿಕ್ಕಾಗಿ ಇತರರಿಗೆ ಮಾರಕವಾಗುವ ಮಾರ್ಗ ಆರಿಸಿಕೊಳ್ಳಬೇಡಿ.

ಕನ್ಯಾ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವ ಮಾರ್ಗ ಸಿಗಲಿದೆ. ಧನ ಆದಾಯಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇರುವುದಿಲ್ಲ. ಹೊಸ ವ್ಯವಹಾರದಲ್ಲಿ ಸ್ನೇಹಿತರ ಹಿತವಚನ, ಸಹಾಯ , ಸಹಕಾರ ದೊರೆಯಲಿದೆ.

ತುಲಾ: ನೆರೆ-ಹೊರೆಯವರೊಂದಿಗಿನ ವ್ಯವಹಾರಿಕ ಸಂಬಂಧದಲ್ಲಿ ಸಣ್ಣಪುಟ್ಟ ವಿಚಾರಗಳಿಗೆ ದೊಡ್ಡ ಮಟ್ಟದಲ್ಲಿ ಭಿನ್ನಾಭಿಪ್ರಾಯ ಮೂಡಬಹುದು. ಕಾಶಿಪುರಾಧೀಶ್ವರಿ ಅನ್ನಪೂರ್ಣೇಶ್ವರಿಯನ್ನು ದರ್ಶಿಸಿ ಶುಭವಾಗುವುದು.

ವೃಶ್ಚಿಕ: ವೈಯಕ್ತಿಕ ಸಮಸ್ಯೆಗಳು ಏನೇ ಇದ್ದರೂ, ನಿಮ್ಮ ಈ ದಿನದ ಮೊದಲ ಆದ್ಯತೆ ವೃತ್ತಿ ವಿಷಯಗಳಿಗೆ ಮಾತ್ರ ಇರಲಿ. ಉದ್ಯೋಗದ ಬದುಕಿನಲ್ಲಿ ತಪ್ಪಿ ಹೋಗಿದ್ದ ಅವಕಾಶಗಳು ಮತ್ತೆ ನಿಮಗೆ ದೊರೆಯುವ ಸಂಭವವಿದೆ.

ಧನು: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಅಗತ್ಯ ಚರ್ಚೆ ನಡೆಸಿ, ಆಗುಹೋಗುಗಳ ಬಗ್ಗೆ ಪ್ರತಿನಿತ್ಯವು ಗಮನಹರಿಸಿ. ಖಾದಿ ಉದ್ಯಮದವರಿಗೆ ಸರಕಾರದಿಂದ ಸೌಲಭ್ಯ ದೊರೆಯಲಿದೆ.

ಮಕರ: ಅಪೇಕ್ಷೆ ಪಟ್ಟದ್ದ ಹೊಸ ಉದ್ಯೋಗ ಸಂಪಾದಿಸುವಲ್ಲಿ ರಾಜಕೀಯ ವ್ಯಕ್ತಿಗಳ ಮೂಲಕ ಯಶಸ್ಸು ಗಳಿಸುವಿರಿ. ನೀವು ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು ಪ್ರಥಮವಾಗಿ ತೆಗೆದುಹಾಕಿ.


ಕುಂಭ: ವ್ಯವಹಾರದಲ್ಲಿನ ಹಿಂದಿನ ನಿರ್ಧಾರಗಳು ಒಳಿತಿಗಾಗಿ ಬದಲಾಗುವ ಸಂಭವವಿದೆ. ಹಿತ ಅನುಭವ ಹೊಂದುವಿರಿ. ವ್ಯಾಪಾರ ಹಾಗೂ ವಾಣಿಜ್ಯದ ಸುಧಾರಣೆಗೆ ಸಾಕಷ್ಟು ಅಡೆತಡೆಗಳು ಒದಗಿ ಬರುವುವು.

ಮೀನ: ಉದ್ಯೋಗರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆ ಕಂಡು ಬರುವುದು. ಹವ್ಯಾಸಗಳಲ್ಲಿ ತೊಡಗುವುದಕ್ಕೆ ಸಮಯ ಸಿಗುವುದು. ಕುಟುಂಬದ ಸದಸ್ಯರ ಮಾತುಗಳನ್ನು ತಾಳ್ಮೆಯಿಂದ ಕೇಳಿರಿ. ಆರೋಗ್ಯದ ಮೇಲೆ ಗಮನವಿಡಿ.

ಪದಬಂಧ 5305 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇತರರಿಗೆ ವಹಿಸಿ ಕೊಡುವುದು (4)
5.ಸಪೂರವಾದ ಸೊಂಟ (4)
7.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
9.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
10.ದಾಯಾದಿ ಜಗಳವಿದು (5)
11.ಪರಿಶುದ್ಧವಾದುದನ್ನು ಹೀಗೆನ್ನಿ (3)
12.ವೇಗ ಅಥವಾ ಶೀಘ್ರತೆ (3)
14.ಪಾರಿತೋಷ ಸಿಕ್ಕಿರುವುದಕ್ಕೇ ಅತ್ಯಂತ ಆನಂದ! (4)
17.ಶುಭಕಾರ್ಯಗಳಲ್ಲಿ ಹಾಕುವ ಪೀಠ (4)

ಮೇಲಿಂದ ಕೆಳಕ್ಕೆ
1.ಅತಿಯಾದ ದುಃಖ (4)
2.ಕಣ್ಣಿನ ಎವೆ (2)
3.ಪ್ರತಿರೂಪ ಇಲ್ಲಿದೆ (2)
4.ಈತ ಅತ್ಯಂತ ಬುದ್ಧಿವಂತ (4)
6.ಎಲ್ಲರನ್ನೂ ಒಂದುಗೂಡಿಸುವುದು (5)
8.ವಿಶೇಷವಾದ ಜ್ಞಾನ (3)
9.ಹಿರಿಮೆಯನ್ನು ಹೇಳುವ ಘನತೆ (3)
11.ಮೇಲ್ವಿಚಾರಣೆಯನ್ನು ಹೀಗೆನ್ನಿ (4)
13.ಬರಿದಾಗದ ಬತ್ತಳಿಕೆ (4)
15.ಪಕ್ಷದ ಆರನೆಯ ದಿನ (2)
16.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)



5304ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಹರವಿ
5.ವಲೀಮುಖ
7.ವಿನ್ಯಾಸ 8.ಅಂತರ್ದೇಶೀಯ
11.ಬಲಿಷ್ಠ 12.ರಸಭಂಗ
14.ರಿಕಾಪು 15.ಉಪಯೋಗ

ಮೇಲಿಂದ ಕೆಳಕ್ಕೆ:
1.ಗೊತ್ತುವಳಿ 2.ಗುದಾಮು
4.ವಿರಸ 6.ಖಚಿತ
7.ವಿಜಯ 8.ಅಂಗುಷ್ಠ
9.ಶೀಕರ 10.ಅಂಗರಾಗ
11.ಬತೇರಿ 13.ಸಮೀಪ

ಸುಡೊಕು 5691

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5690 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

‘ಮೈತ್ರಿ ಸರ್ಕಾರ ಬಂದರೆ ನಾಯಕರಿಗಷ್ಟೇ ಲಾಭ’

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ಸಂದರ್ಶನ

ಬಿ.ಕೆ. ಹರಿಪ್ರಸಾದ್

ಬೆಂಗಳೂರು: ‘ಅತಂತ್ರ ಸ್ಥಿತಿ ನಿರ್ಮಾಣವಾದರೆ ಭವಿಷ್ಯದಲ್ಲಿ ಎದುರಿಸಬೇಕಾದ ಸಮಸ್ಯೆಗಳೇನು ಎಂಬುದು ಜನರಿಗೆ ಗೊತ್ತಿದೆ. ಹೀಗಾಗಿ, ಈ ಬಾರಿ ಕಾಂಗ್ರೆಸ್‌ಗೆ ಬಹುಮತ ದೊರಕುವುದನ್ನು ತಡೆಯಲಾಗದು’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್‌ನ ನಿರೀಕ್ಷೆ, ಫಲಿತಾಂಶ ನಿರ್ಧರಿಸುವ ವಿಷಯಗಳ ಕುರಿತು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಅವರು ಮಾತನಾಡಿದ್ದಾರೆ.

• ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯಲ್ಲಿ ಕೊನೆಯ ಹಂತದಲ್ಲಿ ಉಂಟಾದ ಗೊಂದಲಗಳಿಗೆ ಏನು ಕಾರಣ?

ಮೊದಲ ಪಟ್ಟಿಯಲ್ಲೇ 131 ಅಭ್ಯರ್ಥಿಗಳ ಆಯ್ಕೆಯಾಗಿತ್ತು. ಆದರೆ, 124 ಮಂದಿಯ ಹೆಸರನ್ನು ಮಾತ್ರ ಪ್ರಕಟಿಸಲಾಯಿತು. ಎರಡನೇ ಹಂತದಲ್ಲಿ 49 ಅಭ್ಯರ್ಥಿಗಳ ಆಯ್ಕೆ ನಡೆಯಿತು. ಕೊನೆಯ ಪಟ್ಟಿಯಲ್ಲಿ 19 ಸ್ಥಾನಗಳಲ್ಲಿ ಸ್ವಲ್ಪ ಸಮಸ್ಯೆಯಾಯಿತು. 224 ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅದೇನೂ ದೊಡ್ಡದಲ್ಲ.

• ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಷ್ಟು ಸ್ಥಾನ ಗಳಿಸಲಿದೆ?

ಪ್ರಜಾಧ್ವನಿ ಯಾತ್ರೆಯಿಂದ ಆರಂಭವಾಗಿ ರಾಜ್ಯದ ಉದ್ದಗಲಕ್ಕೆ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದೇನೆ. ಜನರ ಪ್ರತಿಕ್ರಿಯೆ ನೋಡಿದರೆ ಬಿಜೆಪಿ ಸರ್ಕಾರದ ವಿರುದ್ಧ ಜನರಿಗೆ ಸಿಟ್ಟು ಇರುವುದು ಸ್ಪಷ್ಟವಾಗಿ ಕಾಣುತ್ತಿದೆ. ಬೆಲೆ ಏರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಜನ ರೊಚ್ಚಿಗೆದ್ದಿದ್ದಾರೆ. ಈ ಬಾರಿ ಸಂಪೂರ್ಣ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರ ಹಿಡಿಯುವುದು ಖಚಿತ.

• ಮುಖ್ಯಮಂತ್ರಿ ಪಟ್ಟಕ್ಕಾಗಿ ಕಾಂಗ್ರೆಸ್ ನಾಯಕರ ನಡುವಿನ ಪೈಪೋಟಿ ಚುನಾವಣೆಯಲ್ಲಿ ಹಿನ್ನಡೆ ಉಂಟು ಮಾಡುವುದಿಲ್ಲವೆ?

ರಾಜಕೀಯ ಪಕ್ಷಗಳ ನಾಯಕರಲ್ಲಿ ಅಧಿಕಾರಕ್ಕಾಗಿ ಪೈಪೋಟಿ ಸಹಜ. ಹಾಗೆಯೇ ನಮ್ಮ ಪಕ್ಷದಲ್ಲೂ ಇದೆ. ಚುನಾವಣೆ ಫಲಿತಾಂಶ ಬಂದ ಬಳಿಕ ಪಕ್ಷದ ಶಾಸಕರು ತಮ್ಮ ನಾಯಕನನ್ನು ಆಯ್ಕೆ ಮಾಡುತ್ತಾರೆ. ‘ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಗಲು ₹ 2,500 ಕೋಟಿ ಕೊಡಬೇಕು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಆ ಪರಿಸ್ಥಿತಿ ಕಾಂಗ್ರೆಸ್‌ನಲ್ಲಿ ಇಲ್ಲ.

• ಮೈತ್ರಿಗಾಗಿ ರಾಷ್ಟ್ರೀಯ ಪಕ್ಷಗಳ ದೂತರು ಬಂದಿದ್ದಾರೆ ಎಂಬ ಜೆಡಿಎಸ್ ನಾಯಕರ ಹೇಳಿಕೆಯಲ್ಲಿ ನಿಜವಿದೆಯೆ?

ಕಾಂಗ್ರೆಸ್ ವಿರುದ್ಧ ಇರುವ ಬಿಜೆಪಿ ಮತ್ತು ತೆಲಂಗಾಣ ರಾಷ್ಟ್ರ ಸಮಿತಿ ಪಕ್ಷಗಳು ಜೆಡಿಎಸ್ ಪಕ್ಷವನ್ನು ಬೆಂಬಲಿಸುತ್ತಿವೆ. ವಿರೋಧಿಗಳ ಜತೆ ಕೈ ಜೋಡಿಸಿರುವ ಜೆಡಿಎಸ್ ಬಳಿ ಕಾಂಗ್ರೆಸ್ ಹೋಗುವ ಪ್ರಶ್ನೆಯೇ ಇಲ್ಲ. ಬಿಜೆಪಿಯ ನಾಯಕರು ಹೋಗಿರಬಹುದೇನೋ? ಅವರೇ ಹೇಳಬೇಕು.

• ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರದಿಂದ ಕಾಂಗ್ರೆಸ್‌ಗೆ ಹಿನ್ನಡೆ ಆಗಲಿದೆಯೆ?

ನರೇಂದ್ರ ಮೋದಿ ಹಿಂದೆಯೂ ರಾಜ್ಯದಲ್ಲಿ ಪ್ರಚಾರ ಮಾಡಿದ್ದರು. ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಪ್ರಚಾರ ನಡೆಸಿದ್ದರು. ಪ್ರಧಾನಿಯಾಗಿಯೇ 2018ರ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದರು. ಆ ಯಾವ ಸಂದರ್ಭದಲ್ಲೂ ಬಿಜೆಪಿಗೆ ಬಹುಮತ ಲಭಿಸಲಿಲ್ಲ. ಎಲ್.ಕೆ. ಅಡ್ವಾಣಿ ನೇತೃತ್ವವಹಿಸಿದ್ದಾಗ ಮಾತ್ರ ಬಿಜೆಪಿಗೆ 110 ಸ್ಥಾನ ಸಿಕ್ಕಿತ್ತು.

• ಅತಂತ್ರ ವಿಧಾನಸಭೆನಿರ್ಮಾಣವಾದರೆ ಕಾಂಗ್ರೆಸ್‌ನ ಆಯ್ಕೆಗಳೇನು?

ಈ ಬಾರಿ ಅತಂತ್ರ ಸ್ಥಿತಿ ಉದ್ಭವಿಸುವುದೇ ಇಲ್ಲ. ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ಕರ್ನಾಟಕದ ಜನರಿಗೆ ನಷ್ಟ. ಕೇವಲ ನಾಯಕರಿಗಷ್ಟೇ ಲಾಭ ಆಗುತ್ತದೆ. ಇದನ್ನು ಅರಿತಿರುವ ಜನರು ಕಾಂಗ್ರೆಸ್‌ಗೆ ಬಹುಮತ ನೀಡುತ್ತಾರೆ.

• ‘ಕಾಂಗ್ರೆಸ್ ಶೇಕಡ 85ರಷ್ಟು ಭ್ರಷ್ಟಾಚಾರದ ಪಕ್ಷ’ ಎಂಬ ಮೋದಿ ಆರೋಪಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಇದು ವಿದ್ಯಾವಂತನೊಬ್ಬ ಹೇಳುವ ಮಾತಲ್ಲ. ಆಡಳಿತದ ವಿವಿಧ ಹಂತದಲ್ಲಿನ ವೆಚ್ಚದ ಕುರಿತು ರಾಜೀವ್ ಗಾಂಧಿ ಅವರು ಹೇಳಿದ್ದ ಮಾತನ್ನು ಮೋದಿ ತಿರುಚುತ್ತಿದ್ದಾರೆ. ಬಿಜೆಪಿ ಸರ್ಕಾರದ ವಿರುದ್ಧದ ಶೇ 40ರಷ್ಟು ಲಂಚದ ಆರೋಪ, ಮಾಡಾಳ್ ವಿರೂಪಾಕ್ಷಪ್ಪ ಪ್ರಕರಣ, ಪಿಎಸ್‌ಐ ನೇಮಕಾತಿ ಹಗರಣ, ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಕುರಿತು ಅವರು ಜನರಿಗೆ ಉತ್ತರ ಹೇಳಬೇಕು.

• ಕಾಂಗ್ರೆಸ್ ‘ಗ್ಯಾರಂಟಿ’ಗಳನ್ನು ನೀಡಿ ಮೋಸ ಮಾಡುತ್ತದೆ ಎಂಬ ಬಿಜೆಪಿ ಆರೋಪ ಮಾಡುತ್ತಿದೆಯಲ್ಲವೆ?

ಕಾಂಗ್ರೆಸ್‌ನ ‘ಗ್ಯಾರಂಟಿ’ಗಳು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿವೆ. ನರೇಂದ್ರ ಮೋದಿಯವರೇ ಈಗ ನಮ್ಮ ಪಕ್ಷದ ಗ್ಯಾರಂಟಿಗಳ ವಿರುದ್ಧ ಮಾತನಾಡುತ್ತಿದ್ದಾರೆ. ಹಾಗಿದ್ದರೆ, ಅವರೇ ಹಿಂದೆ ಪ್ರತಿ ಪ್ರಜೆಗೆ ₹ 15 ಲಕ್ಷ ನೀಡುವ, ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಅವರ ಯಾವ ಮಾತನ್ನು ಜಾರಿಗೆ ಅನುಷ್ಠಾನಕ್ಕೆ ತಂದಿದ್ದಾರೆ ಎಂಬುದನ್ನು ಮೊದಲು ಹೇಳಲಿ. ಕಾಂಗ್ರೆಸ್‌ನ ಯೋಜನೆಗಳ ಲೇಬಲ್ ಬದಲಿಸಿದ್ದೇ ಅವರ ಸಾಧನೆ.

ವೈಯಕ್ತಿಕ ಗೋಳು: ಪ್ರಚಾರ ಸಭೆ ಬಳಕೆ

• ‘ಮೋದಿ ವಿಷ ಸರ್ಪ’ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಬಿಜೆಪಿಗೆ ಅನುಕೂಲ ಸೃಷ್ಟಿಸಿತೇ?

ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್, ಸೋನಿಯಾ ಗಾಂಧಿ ಸೇರಿದಂತೆ ಅನೇಕರನ್ನು ಮೋದಿ ಅವರು ಕೀಳುಮಟ್ಟದ ಪದಗಳಿಂದ ನಿಂದಿಸಿದ್ದರು. ಖರ್ಗೆಯವರು ಗ್ರಾಮೀಣ ಭಾಷೆಯಲ್ಲಿ ‘ವಿಷ ಕಾರುವವರು’ ಎಂದು ಹೇಳಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ. ಆ ಮಾತನ್ನು ಬಳಸುವುದರಿಂದ ಬಿಜೆಪಿಯ ರಾಜಕೀಯ ಲಾಭ ಆಗದು. ದೇಶದ ಜನರಿಗಾಗಿ ಏನು ಮಾಡಿದ್ದೇನೆ ಎಂಬುದನ್ನು ಪ್ರಧಾನಿ ಹೇಳಬೇಕಿತ್ತು. ದುರಂತ ಎಂದರೆ ಅವರು ವೈಯಕ್ತಿಕ ಗೋಳು ತೋಡಿಕೊಳ್ಳಲು ಪ್ರಚಾರ ಸಭೆಯನ್ನು ಬಳಸುತ್ತಿದ್ದಾರೆ.



ಸಿದ್ದರಾಮಯ್ಯ ತವರಲ್ಲೇ ಸೋಮಣ್ಣ ಸವಾಲು

• ಕೆ.ನರಸಿಂಹಮೂರ್ತಿ

ವರುಣ ಗಮನ ಸೆಳೆದ ಕಣ — ಸಾಕ್ಷಾತ್ ಸಮೀಕ್ಷೆ



ಮೈಸೂರು: 2008ರಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ಮೊದಲ ಬಾರಿಗೆ ವರುಣ ಕ್ಷೇತ್ರವು ಕಾಂಗ್ರೆಸ್‌ನ ಸಿದ್ದರಾಮಯ್ಯ ಮತ್ತು ಬಿಜೆಪಿಯ ವಿ.ಸೋಮಣ್ಣ ನಡುವಿನ ಪ್ರಬಲ ಪೈಪೋಟಿಯಿಂದ ಹೈವೋಲ್ಟೇಜ್ ಕ್ಷೇತ್ರವಾಗಿ ರಾಜ್ಯದ ಗಮನ ಸೆಳೆದಿದೆ.

ಇದುವರೆಗಿನ ಮೂರು ಚುನಾವಣೆಗಳಲ್ಲೂ ಕಾಂಗ್ರೆಸ್ ಗೆದ್ದಿದೆ. ಮೊದಲೆರಡರಲ್ಲಿ ಸಿದ್ದರಾಮಯ್ಯ, 2018ರಲ್ಲಿ ಮಗ ಡಾ.ಯತೀಂದ್ರ ಗೆದ್ದಿದ್ದರು. ‘ಕಾಂಗ್ರೆಸ್‌ನ ಭದ್ರಕೋಟೆಯಲ್ಲಿ 2ನೇ ಸ್ಥಾನದಲ್ಲಿರುವ ಪಕ್ಷವನ್ನು ಮೇಲಕ್ಕೆತ್ತುತ್ತಾರೆ’ ಎಂದು ಬಿಜೆಪಿ ಸೋಮಣ್ಣ ಅವರನ್ನು ಕಣಕ್ಕಿಳಿಸಿದೆ. ಜೆಡಿಎಸ್, ಬಿಎಸ್‌ಪಿ ಕಣದಲ್ಲಿದ್ದರೂ ಇಬ್ಬರೇ ಚರ್ಚೆಯ ಕೇಂದ್ರ.

ಮೈಸೂರು, ನಂಜನಗೂಡು ಮತ್ತು ತಿ.ನರಸೀಪುರ ತಾಲ್ಲೂಕಿನ ಗ್ರಾಮಗಳನ್ನೊಳಗೊಂಡ ಕ್ಷೇತ್ರ ಸಿದ್ದರಾಮಯ್ಯನವರ ಭದ್ರಕೋಟೆಯೂ ಹೌದು. ಬಹುಪಾಲು ಮತದಾರರು ಅವರ ಅಭಿಮಾನಿಗಳು. ಹೀಗಾಗಿಯೇ ಡಾ.ಯತೀಂದ್ರ ಮೊದಲ ಚುನಾವಣೆಯಲ್ಲೇ 58ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದರು. ಆ ಲೆಕ್ಕಾಚಾರದಲ್ಲೇ ತವರು ಕ್ಷೇತ್ರಕ್ಕೆ ಸಿದ್ದರಾಮಯ್ಯ ಮರಳಿದ್ದಾರೆ.

ಕ್ಷೇತ್ರದಲ್ಲಿ ಮೊದಲ ಗೆಲುವಿನ ಬಳಿಕ ಸಿದ್ದರಾಮಯ್ಯ ವಿರೋಧಪಕ್ಷದ ನಾಯಕರಾಗಿದ್ದರು, ನಂತರದ ಚುನಾವಣೆಯಲ್ಲಿ ಮುಖ್ಯಮಂತ್ರಿಯಾದರು. ಹುಟ್ಟೂರು ಸಿದ್ದರಾಮನಹುಂಡಿಯೂ ಇಲ್ಲೇ ಇದೆ. ಐದು ವರ್ಷವಾದರೂ ‘ಸಿದ್ದರಾಮಯ್ಯ ಟ್ರೆಂಡ್’ ಬದಲಾಗಿಲ್ಲ. ‘ಇದು ನನ್ನ ಕೊನೆಯ ಚುನಾವಣೆ’ ಎಂಬ ಅಸ್ತ್ರವನ್ನೂ ಬಳಸಿದ್ದಾರೆ.

‘ಸೋಮಣ್ಣ ಬಿಟ್ಟು ಯಾರೇ ಸ್ಪರ್ಧಿಸಿದ್ದರೂ, ಗೆಲುವು ಸುಲಭವಾಗುತ್ತಿತ್ತು. ಈಗ ಸಾಕಷ್ಟು ಬೆವರು ಹರಿಸಬೇಕು’ ಎಂಬ ಮಾತು ಕ್ಷೇತ್ರದಲ್ಲಿದ್ದು, ‘ನಾಮಪತ್ರ ಸಲ್ಲಿಕೆಗಷ್ಟೇ ಕ್ಷೇತ್ರಕ್ಕೆ ಬರುವೆ’ ಎಂದಿದ್ದ ಸಿದ್ದರಾಮಯ್ಯ, ನಂತರವೂ ಬಂದು ಪ್ರಚಾರ ನಡೆಸಿದ್ದಾರೆ. 2006ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎದುರಿಸಿದ್ದ ಉಪ ಚುನಾವಣೆಯಂಥದ್ದೇ ಕಠಿಣ ಸವಾಲು ಈಗಲೂ ಎದುರಾಗಿದೆ. ಕೇವಲ 247 ಮತಗಳ ಅಂತರದಲ್ಲಿ ಗೆದ್ದಿದ್ದನ್ನು ‘ರಾಜಕೀಯ ಪುನರ್ಜನ್ಮ’ ಎಂದೇ ಸಿದ್ದರಾಮಯ್ಯ ಕರೆದುಕೊಳ್ಳುತ್ತಾರೆ. ಆಗ ಅವರ ವಿರೋಧಿಗಳು ಒಟ್ಟಾಗಿದ್ದ ಸನ್ನಿವೇಶವೇ ಮತ್ತೆ ನಿರ್ಮಾಣವಾಗಿದೆ.

ಇಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಕಣಕ್ಕಿಳಿಯಲಿದ್ದಾರೆ ಎನ್ನುವ ವಾತಾವರಣವಿತ್ತು. ‘ಕ್ಷೇತ್ರದಲ್ಲಿ ಹೆಚ್ಚಿರುವ ವೀರಶೈವ ಲಿಂಗಾಯತರ ಮತಗಳನ್ನು ಪಡೆದರೆ ಗೆಲ್ಲಬಹುದೆಂಬ ಲೆಕ್ಕಾಚಾರದಲ್ಲಿ ಪಕ್ಷ ಕಣಕ್ಕಿಳಿಸಲಿದೆ’ ಎನ್ನಲಾಗಿತ್ತು. ಬದಲಾದ ಸನ್ನಿವೇಶದಲ್ಲಿ, ಅದೇ ಲೆಕ್ಕಾಚಾರದಲ್ಲೇ ಸೋಮಣ್ಣ ಅವರನ್ನು ಕಣಕ್ಕಿಳಿಸಲಾಗಿದೆ.

ಜಾತಿ ಅಸ್ತ್ರವನ್ನು ಮೀರಿದ ಬೆಂಬಲ ಸಿದ್ದರಾಮಯ್ಯನವರಿಗಿದೆ. ‘ವೀರಶೈವ ಲಿಂಗಾಯತ ಮತಗಳನ್ನು ಬಿಜೆಪಿ ಸೆಳೆದರೂ ಕಾಂಗ್ರೆಸ್‌ನ ಸಾಂಪ್ರದಾಯಿಕ ಹಾಗೂ ಅಹಿಂದ ಮತಗಳು, ಜಾತಿ ಮೀರಿ ಕ್ಷೇತ್ರದಲ್ಲಿ ಒಟ್ಟುಗೂಡಿರುವ ಬೆಂಬಲಿಗರ ಮತಗಳು ಕೈಹಿಡಿಯುತ್ತವೆ’ ಎಂಬ ನಿರೀಕ್ಷೆಯಿದೆ. ಪುತ್ರ, ಶಾಸಕ ಡಾ.ಯತೀಂದ್ರ, ಸೊಸೆ (ದಿವಂಗತ ರಾಕೇಶ್ ಪತ್ನಿ) ಸ್ಮಿತಾ ಕೂಡ ಪ್ರಚಾರಕ್ಕಿಳಿದಿದ್ದಾರೆ.

ಸೋಮಣ್ಣ ಗೆಲ್ಲಬೇಕು ಎನ್ನುವ ಛಲದೊಂದಿಗೆ ಕ್ಷೇತ್ರದಲ್ಲಿ ಭರ್ಜರಿ ಪ್ರಚಾರ ಮಾಡುತ್ತಾ ಬೆವರು ಬಸಿಯುತ್ತಿದ್ದಾರೆ. ಇಬ್ಬರ ಬೆಂಬಲಿಗರ ನಡುವೆ ಘರ್ಷಣೆ ನಡೆದಿದ್ದು, ಕ್ಷೇತ್ರದಲ್ಲಿನ ಪೈಪೋಟಿಯನ್ನು ಸಾರಿ ಹೇಳುತ್ತಿದೆ.

‘ಕ್ಷೇತ್ರವನ್ನು ಸಿದ್ದರಾಮಯ್ಯ, ಯತೀಂದ್ರ ಏನೇನೂ ಅಭಿವೃದ್ಧಿಗೊಳಿಸಿಲ್ಲ. ನಾನು ಗೋವಿಂದರಾಜ ನಗರದಂತೆ ಅಭಿವೃದ್ಧಿಗೊಳಿಸುತ್ತೇನೆ’ ಎಂದು ಸೋಮಣ್ಣ ಭರವಸೆ ಕೊಡುತ್ತಿದ್ದಾರೆ. ಆದರೆ, ಅದರ ಬಗ್ಗೆ ಪರಿಚಯವಿಲ್ಲದ ಮತದಾರರು, ‘ವರುಣ ನಾಲೆ ನಿರ್ಮಿಸಿ ನೀರು ಕೊಟ್ಟರು’ ಎಂದು ಸಿದ್ದರಾಮಯ್ಯ ಅವರನ್ನು ನೆನೆಯುತ್ತಾರೆ. ತಂದೆ–ಮಗನ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಮಾದರಿಗಳೇ ಅವರ ಮುಂದಿವೆ. ನಿಷ್ಕ್ರಿಯರಾಗಿದ್ದ ಘೋಷಿತ ಅಭ್ಯರ್ಥಿ ಅಭಿಷೇಕ್ ಬದಲು, ತಿ.ನರಸೀಪುರದ ಮಾಜಿ ಶಾಸಕ ಡಾ.ಭಾರತಿ ಶಂಕರ್ ಅವರನ್ನು ಜೆಡಿಎಸ್ ಕಣಕ್ಕಿಳಿಸಿದೆ. 1999ರ ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದಿದ್ದ ಅವರು ಸಕ್ರಿಯ ರಾಜಕಾರಣದಲ್ಲಿಲ್ಲ. ಪರಿಶಿಷ್ಟ ಮತಗಳನ್ನು ಸೆಳೆಯುವಷ್ಟು ಪ್ರಭಾವಿಯೂ ಅಲ್ಲ.


ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಕಣದಲ್ಲಿದ್ದಾರೆ. ಈ ಪಕ್ಷ 2008ರ ಚುನಾವಣೆಯಲ್ಲಿ 3ನೇ ಸ್ಥಾನದಲ್ಲಿತ್ತು. ಜೆಡಿಎಸ್ 4ನೇ ಸ್ಥಾನದಲ್ಲಿತ್ತು. ನಂತರದ ಚುನಾವಣೆಯಲ್ಲಿ ಈ ಸ್ಥಾನಗಳು ಅದಲು ಬದಲಾದವು. 2018ರಲ್ಲೂ ಮೂರನೇ ಸ್ಥಾನದಲ್ಲಿದ್ದ ಜೆಡಿಎಸ್‌ಗೆ ಕ್ಷೇತ್ರದಲ್ಲಿ ನೆಲೆ ಇಲ್ಲ.

ಕಾ.ಪು. ಸಿದ್ದಲಿಂಗಸ್ವಾಮಿಗೆ ‘ಮೊರೆ’

ಮಾಜಿ ಮುಖ್ಯಮಂತ್ರಿಯ ಆಪ್ತಸಹಾಯಕರಾಗಿದ್ದ ಕಾ.ಪು. ಸಿದ್ದಲಿಂಗಸ್ವಾಮಿಯವರ ಸಹಾಯ ಕೇಳುವ ಅನಿವಾರ್ಯ ಸನ್ನಿವೇಶವನ್ನು ಚುನಾವಣೆಯು ಸೋಮಣ್ಣ ಅವರಿಗೆ ತಂದೊಡ್ಡಿದೆ.

2013ರ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ ಸಿದ್ದರಾಮಯ್ಯ ಅವರಿಗೆ ಪೈಪೋಟಿ ನೀಡಿ 2ನೇ ಸ್ಥಾನ ಪಡೆದಿದ್ದ ಸಿದ್ದಲಿಂಗಸ್ವಾಮಿ, ಈ ಬಾರಿಯೂ ಟಿಕೆಟ್ ಆಕಾಂಕ್ಷಿಯಾಗಿದ್ದರು. ಈಗ ಸೋಮಣ್ಣ ಜೊತೆ ಕೈಜೋಡಿಸಿದ್ದಾರೆ. ವೈಮನಸ್ಸು ಮರೆತು ಶ್ರಮಿಸುವುದಾಗಿ ಹೇಳಿರುವ ಬಿ.ವೈ.ವಿಜಯೇಂದ್ರ ಒಮ್ಮೆಯಷ್ಟೇ ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ. ಬಿ.ಎಸ್.ಯಡಿಯೂರಪ್ಪ ಪ್ರಚಾರಕ್ಕೆ ಇನ್ನೂ ಬಂದಿಲ್ಲ.







ಫಲಿತಾಂಶದ ಹಿನ್ನೋಟ

ಕ್ಷೇತ್ರ	2013	2018
ವರುಣ	ಕಾಂಗ್ರೆಸ್	ಕಾಂಗ್ರೆಸ್

‘ಮೋದಿ ಜನರ ಮಾತು ಕೇಳುವುದು ಯಾವಾಗ?’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮನ್ ಕಿ ಬಾತ್’ ಕೇಳಿದ ದೇಶದ ಜನರು ಮೋದಿ ಅವರನ್ನು ಎರಡು ಬಾರಿ ಪ್ರಧಾನಿ ಮಾಡಿದ್ದಾರೆ. ಆದರೆ, ಮೋದಿ ಜನರ ಮಾತು ಕೇಳುವುದು ಯಾವಾಗ ಎಂಬ ಪ್ರಶ್ನೆ ಮೂಡತೊಡಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಹೇಳಿದರು.

ಭಾನುವಾರ ನಡೆದ ಆಮ್ ಆದ್ಮಿ ಪಾರ್ಟಿ (ಎಎಪಿ)ಯ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಹಾಗೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

‘ರೈಲು ನಿಲ್ದಾಣದಲ್ಲಿ ಟೀ ಮಾರಾಟ ಮಾಡುತ್ತಿದ್ದ ನರೇಂದ್ರ ಮೋದಿ ಅಧಿಕಾರ ಸಿಕ್ಕ ಬಳಿಕ ರೈಲುಗಳನ್ನೇ ಮಾರಾಟ ಮಾಡಿದರು. ವಿಮಾನ, ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಸೇರಿ ಸರ್ಕಾರಿ ಸ್ವಾಮ್ಯದ ಪ್ರತಿಯೊಂದೂ ಸಂಸ್ಥೆಯನ್ನು ಖಾಸಗಿಯವರಿಗೆ ಒತ್ತೆ ಇಡುತ್ತಿದ್ದಾರೆ. ಮೋದಿ ಅವರ ಮಿತ್ರರು ಇಡೀ ದೇಶ ದೋಚುತ್ತಿದ್ದಾರೆ’ ಎಂದು ದೂರಿದರು.

> **ಬಿಜೆಪಿಗೆ ಪರ್ಯಾಯವಾಗಿ ಕಾಂಗ್ರೆಸ್‌ಗೆ ಮತ ಹಾಕಿದರೆ ಬದಲಾವಣೆ ಅಸಾಧ್ಯ. ಕಾಂಗ್ರೆಸ್ ಶಾಸಕರನ್ನು ಬಿಜೆಪಿ ಖರೀದಿಸುತ್ತದೆ. ಪಕ್ಷ ಬದಲಾದರೂ ಆಡಳಿತ ಒಂದೇ.**
> **ಭಗವಂತ ಸಿಂಗ್ ಮಾನ್**
> ಪಂಜಾಬ್ ಮುಖ್ಯಮಂತ್ರಿ

‘ಪ್ರತಿಯೊಂದಕ್ಕೂ ತೆರಿಗೆ ವಿಧಿಸಿ ಬಡವರನ್ನು ಸಂಕಷ್ಟಕ್ಕೆ ತಳ್ಳಿದ್ದಾರೆ. ಟೀ, ಮೊಸರು, ಬೆಣ್ಣೆ, ದೋಸೆ, ಆಲೂ ಪರೋಟ, ಇಂಧನ, ದ್ವಿಚಕ್ರ ವಾಹನಗಳ ಮೇಲೆ ಜಿಎಸ್‌ಟಿ ಹೇರಲಾಗಿದೆ. ರಾತ್ರಿ ಸುಖ ನಿದ್ದೆ ಮಾಡಲು ಹಾಕುವ ಫ್ಯಾನ್ ಮೇಲೂ ಜಿಎಸ್‌ಟಿ ವಿಧಿಸಲಾಗಿದೆ. ಇಂತಹ ಆಡಳಿತ ನಿಮಗೆ ಬೇಕೇ’ ಎಂದು ಪ್ರಶ್ನಿಸಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಪ್ರಚಾರ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು, ಚಿತ್ರದುರ್ಗ ಎಎಪಿ ಅಭ್ಯರ್ಥಿ ಬಿ.ಇ.ಜಗದೀಶ್ ಇದ್ದರು.

ಬಿಜೆಪಿ ಪ್ರಣಾಳಿಕೆ ಇಂದು ಬಿಡುಗಡೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸೋಮವಾರ ಬೆಳಿಗ್ಗೆ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಿದ್ದು, ಮಹಿಳೆಯರಿಗೆ ಉಚಿತ ಬಸ್ ಪಾಸ್ ಸೇರಿ ಹಲವು ಆಶ್ವಾಸನೆಗಳನ್ನು ಪ್ರಕಟಿಸುವ ಸಾಧ್ಯತೆ ಇದೆ.

ಪ್ರಣಾಳಿಕೆ ತಯಾರಿಕೆಗೆ ಸಚಿವ ಡಾ.ಕೆ. ಸುಧಾಕರ್ ನೇತೃತ್ವದಲ್ಲಿ ಸಮಿತಿ ರಚಿಸಿ ರಾಜ್ಯ ಎಲ್ಲ ಕಡೆಗಳಿಂದ ವಿವಿಧ ವರ್ಗಗಳಿಂದ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಸ್ವೀಕರಿಸಿ ಪ್ರಣಾಳಿಕೆ ರೂಪಿಸಲಾಗಿದೆ. ಇದರಲ್ಲಿ ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಯುವಕರಿಗೆ ಹಲವು ಭರವಸೆಗಳನ್ನು ಬಿಜೆಪಿ ನೀಡಲಿದೆ.

ಪ್ರಣಾಳಿಕೆಯಲ್ಲಿ ಒಪಿಎಸ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಮಾಡುವ ವಿಚಾರವು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯ ಭಾಗವಾಗಿರಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಮುಖಂಡರನ್ನು ತಮ್ಮ ನಿವಾಸದಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎರಡು ದಿನಗಳಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ, ಮಲೆನಾಡು ಮತ್ತು ಬೆಂಗಳೂರಿಗೆ ಪ್ರತ್ಯೇಕ ಪ್ರಣಾಳಿಕೆಗಳನ್ನು ನೀಡಲಾಗುವುದು’ ಎಂದರು.

200 ಯುನಿಟ್‌ವರೆಗೆ ಉಚಿತ ವಿದ್ಯುತ್, ಮನೆಯ ಯಜಮಾನಿಗೆ ತಿಂಗಳಿಗೆ ₹ 2,000, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರತೀ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ, ಎಲ್ಲ ಮಹಿಳೆಯರಿಗೆ ಉಚಿತ ಬಸ್ ಪಾಸ್ ಮತ್ತು ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆಯ ಘೋಷಣೆಗಳು ಪ್ರಣಾಳಿಕೆಯಲ್ಲಿ ಇರುತ್ತವೆ. ಪಕ್ಷ ಅಧಿಕಾರಕ್ಕೆ ಬಂದರೆ ಈ ಯೋಜನೆಗಳ ಅನುಷ್ಠಾನಕ್ಕೆ ಮೊದಲ ಸಂಪುಟ ಸಭೆಯಲ್ಲೇ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

‘ಉಚಿತ ಕೊಡುಗೆಗಳಿಗೆ ಸಂಪನ್ಮೂಲವನ್ನು ಹೇಗೆ ಸಂಗ್ರಹಿಸಲಾಗುತ್ತದೆ ಎಂದು ಬಿಜೆಪಿ ಪ್ರಶ್ನೆ ಮಾಡುತ್ತಿದೆ. ಬಿಜೆಪಿ ಸರ್ಕಾರದಲ್ಲಿನ ಭ್ರಷ್ಟಾಚಾರ ನಿಲ್ಲಿಸಿದರೆ ಈ ಯೋಜನೆಗಳಿಗೆ ಅಗತ್ಯವಿರುವಷ್ಟು ಆರ್ಥಿಕ ಸಂಪನ್ಮೂಲ ದೊರಕುತ್ತದೆ’ ಎಂದರು.

ಕೊಡುಗೆಯ ಲೆಕ್ಕ ನೀಡಲಿ: ‘ಕಾಂಗ್ರೆಸ್ ಪಕ್ಷದವರು 91 ಬಾರಿ ಬೈದಿದ್ದಾರೆ ಎಂದು ಪ್ರಧಾನಿ ಮೋದಿ ಪ್ರಚಾರದಲ್ಲಿ ಹೇಳುತ್ತಿದ್ದಾರೆ. ಅದರ ಬದಲಿಗೆ ಡಬಲ್ ಎಂಜಿನ್ ಸರ್ಕಾರ ರಾಜ್ಯಕ್ಕೆ ನೀಡಿರುವ ಕೊಡುಗೆಗಳ ಲೆಕ್ಕ ನೀಡಲಿ’ ಎಂದು ಶಿವಕುಮಾರ್ ಆಗ್ರಹಿಸಿದರು.

‘ನಾವು ನಿರ್ದೇಶಕ, ನಿರ್ಮಾಪಕರಲ್ಲ’

‘ಜಿ. ಪರಮೇಶ್ವರ ಮೇಲಿನ ದಾಳಿ ನಾಟಕ’ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, ‘ನಾನಾಗಲೀ, ಪರಮೇಶ್ವರ ಅವರಾಗಲೀ ನಿರ್ದೇಶಕರೂ ಅಲ್ಲ, ನಿರ್ಮಾಪಕರೂ ಅಲ್ಲ. ಕುಮಾರಣ್ಣ ಏನಾದರೂ ಮಾತನಾಡಿಕೊಳ್ಳಲಿ. ಅವರು ದೊಡ್ಡ ನಿರ್ಮಾಪಕರು’ ಎಂದರು.

‘ಪರಮೇಶ್ವರ ಸರಳ ವ್ಯಕ್ತಿ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ನಾವು ದಿನನಿತ್ಯ ಬಣ್ಣ ಹಚ್ಚಿ ನಾಟಕ ಮಾಡುತ್ತಿಲ್ಲ’ ಎಂದು ಹೇಳಿದರು.

ಜಂಬೂಸವಾರಿ ಮಾರ್ಗದಲ್ಲಿ ರೋಡ್ ಶೋ • ಕಾರ್ಯಕರ್ತರು, ಬೆಂಬಲಿಗರಲ್ಲಿ ಹುರುಪು

ಮೋದಿಯತ್ತ ಮೊಬೈಲ್: ಭದ್ರತಾ ಲೋಪ?

ಪ್ರಜಾವಾಣಿ ವಾರ್ತೆ



ಮೈಸೂರಿನಲ್ಲಿ ರೋಡ್ ಶೋ ನಡೆಸುವಾಗ ಪ್ರಧಾನಿ ನರೇಂದ್ರ ಮೋದಿ ಅವರತ್ತ ಮೊಬೈಲ್ ಫೋನ್ ತೂರಿಬಂತು

ಮುಖ್ಯಾಂಶಗಳು
- ಮೈಸೂರು ಪೇಟ ಧರಿಸಿದ್ದ ಪ್ರಧಾನಿ ನರೇಂದ್ರ ಮೋದಿ
- ಕಲಾತಂಡಗಳ ಮೆರುಗು
- 6 ಕಿ.ಮೀ ಸಂಚಾರ

ಮೈಸೂರು: ತಿಂಗಳಲ್ಲಿ 2ನೇ ಬಾರಿಗೆ ಅರಮನೆ ನಗರಿಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅದ್ಧೂರಿ ರೋಡ್ ಶೋ ನಡೆಸಿ, ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ರಂಗು ತುಂಬಿದರು. ಈ ವೇಳೆ ಅವರತ್ತ ಕಾರ್ಯಕರ್ತರ ಕಡೆಯಿಂದ ಹೂವಿನ ದಳಗಳೊಂದಿಗೆ ತೂರಿಬಂದ ಮೊಬೈಲ್ ಫೋನ್ ಆತಂಕ ಮೂಡಿಸಿತು. ಭದ್ರತಾ ಲೋಪದ ಪ್ರಶ್ನೆಯನ್ನೂ ಹುಟ್ಟು ಹಾಕಿತು.

ಚಿಕ್ಕಗಡಿಯಾರದ ಬಳಿ ಮಹಿಳಾ ಕಾರ್ಯಕರ್ತೆಯೊಬ್ಬರು ಹೂ ಎರಚಲು ಮುಂದಾದಾಗ ಕೈಯಲ್ಲಿದ್ದ ಮೊಬೈಲ್ ಫೋನ್ ಅನ್ನೂ ಅಕಸ್ಮಾತ್ ಎಸೆದಿದ್ದಾರೆ. ವಾಹನಕ್ಕೆ ಬಡಿದ ಅದು ಬಳಿಕ ಕೆಳಕ್ಕೆ ಬಿದ್ದಿತು. ಅದನ್ನು ಸ್ವತಃ ಮೋದಿ ಹಾಗೂ ಎಸ್‌ಪಿಜಿಯವರು ಕೂಡ ಗಮನಿಸಿದರು.

‘ಮೊಬೈಲ್ ಫೋನ್ ಎಸೆದವರು ಮಹಿಳಾ ಬಿಜೆಪಿ ಕಾರ್ಯಕರ್ತೆ ಎಂದು ಗುರುತಿಸಲಾಗಿದೆ. ದುರುದ್ದೇಶದಿಂದ ಎಸೆದಿಲ್ಲ ಎಂದು ಅವರು ಹೇಳಿದ್ದಾರೆ. ಎಸ್‌ಪಿಜಿಯವರು ನಂತರ ಮೊಬೈಲ್ ಫೋನ್ ಅನ್ನು ಹಿಂದಿರುಗಿಸಿದ್ದಾರೆ’ ಎಂದು ಎಡಿಜಿಪಿ ಅಲೋಕ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಜಂಬೂಸವಾರಿ ಮಾರ್ಗ: ಗನ್‌ಹೌಸ್ ವೃತ್ತದಿಂದ ಆರಂಭವಾದ ‘ಶೋ’ನಲ್ಲಿ ಮೈಸೂರು ಪೇಟ ಧರಿಸಿದ್ದ ಮೋದಿ ಅವರೊಂದಿಗೆ ಶಾಸಕರು, ಬಿಜೆಪಿ ಟಿಕೆಟ್ ವಂಚಿತರಾದ ಕೆ.ಎಸ್. ಈಶ್ವರಪ್ಪ ಹಾಗೂ ಎಸ್.ಎ.ರಾಮದಾಸ್ ಇದ್ದರು. ಸಂಸದ ಪ್ರತಾಪ ಸಿಂಹ ಸಾಥ್ ನೀಡಿದರು. ವಿಶೇಷವಾಗಿ ಸಿದ್ಧಪಡಿಸಿದ್ದ ತೆರೆದ ವಾಹನದ ಮೇಲೇರಿದ ಮೋದಿ ಜನರತ್ತ ಕೈಬೀಸಿ ಜೋಶ್ ತುಂಬಿದರು. ದಸರಾ ಜಂಬೂಸವಾರಿ ಸಾಗುವ ಮಾರ್ಗದಲ್ಲೇ ರೋಡ್ ಶೋ ನಡೆದದ್ದು ವಿಶೇಷ. ಬನ್ನಿಮಂಟಪದ ಎಲ್‌ಐಸಿ ವೃತ್ತದವರೆಗೆ ಸಾಗಬೇಕಿದ್ದ ರೋಡ್ ಶೋ ಸಮಯದ ಅಭಾವದಿಂದಾಗಿ ಹೈವೇ ವೃತ್ತದವರೆಗಷ್ಟೆ ನಡೆಯಿತು. ಅಲ್ಲಿ ತೆರೆದ ವಾಹನದಿಂದ ಕೆಳಗಿಳಿದ ಮೋದಿ, ಕೆಲ ದೂರ ನಡೆಯುತ್ತಾ ನೆರೆದಿದ್ದ ಜನರತ್ತ ಕೈಬೀಸಿದರು, ನಮಿಸಿದರು. ಬಳಿಕ, ವಾಹನದಲ್ಲಿ ತೆರಳಿದರು. ಒಟ್ಟು 1 ಗಂಟೆ 15 ನಿಮಿಷ ರೋಡ್ ಶೋ ನಡೆಯಿತು. ವಿವಿಧ 25 ಕಲಾತಂಡಗಳು ಮೆರುಗು ಹೆಚ್ಚಿಸಿದವು.

ಮೋದಿ ಅವರಿಗೆ ಮೈಸೂರು ವೀಳ್ಯದೆಲೆ, ಮೈಸೂರು ಪಾಕ್, ಮೈಸೂರು ರೇಷ್ಮೆ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಪೇಟ, ಅರಮನೆ ಕಲಾಕೃತಿ, ರೇಷ್ಮೆ ಪಂಚೆ, ಶಲ್ಯ ಸೇರಿದಂತೆ 18 ವಸ್ತುಗಳನ್ನು ಉಡುಗೊರೆಯಾಗಿ ನೀಡಲಾಯಿತು.

ನಾದಸ್ವರ ಕಲಾವಿದರ ಮೇಳದೊಂದಿಗೆ ಮೈಸೂರು ಪೇಟ, ರೇಷ್ಮೆ ಶಲ್ಯ– ಪಂಚೆ ಧರಿಸಿದ್ದ ಪುರುಷರು, ಮೈಸೂರು ರೇಷ್ಮೆ ಸೀರೆಯುಟ್ಟಿದ್ದ ಮಹಿಳೆಯರು ಪೂರ್ಣ ಕುಂಭ ಸ್ವಾಗತ ನೀಡಿದರು. ಎಲ್ಲೆಡೆ ಬಿಜೆಪಿ ಬಾವುಟಗಳು ರಾರಾಜಿಸಿದವು. ಮೋದಿ... ಮೋದಿ... ಮೋದಿ ಘೋಷಣೆಗಳು ಮುಗಿಲುಮುಟ್ಟಿದವು.

ಸಂಕ್ಷಿಪ್ತ ಸುದ್ದಿ

ಪಿ.ರಾಜೀವ್ ಸೇರಿ ಇಬ್ಬರ ಮೇಲೆ ಎಫ್‌ಐಆರ್

ಬೆಳಗಾವಿ: ಕುಡಚಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೋಳಿಗುಡ್ಡದಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ಹಣ ಹಂಚಿಕೆ ಮಾಡಿದ ಆರೋಪದ ಮೇಲೆ, ಬಿಜೆಪಿ ಅಭ್ಯರ್ಥಿ ಪಿ.ರಾಜೀವ್ ಸೇರಿ ಇಬ್ಬರ ಮೇಲೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದೆ.

ಪ್ರಧಾನಿ ಭಾಗವಹಿಸಿದ್ದ ಬಿಜೆಪಿಯ ಬಹಿರಂಗ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಉದ್ದೇಶದಿಂದ ಮುಗಳಖೋಡ ಪಟ್ಟಣದ ಬಳಿ ಹಣ ಹಂಚಿಕೆ ಮಾಡಿ, ಆಮಿಷ ತೋರಿಸಲಾಗಿದೆ ಎಂಬ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಇದನ್ನು ಆಧರಿಸಿ ಟಿವಿ ವಾಹಿನಿಯೊಂದು ಸುದ್ದಿ ಬಿತ್ತರಿಸಿದೆ. ಇವುಗಳ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅಭ್ಯರ್ಥಿ ಪಿ.ರಾಜೀವ್ ಹಾಗೂ ಮುಗಳಖೋಡದ ಹಾಲಪ್ಪ ಹನುಮಂತ ಶೇಗುಣಸಿ ಎಂಬುವರ ವಿರುದ್ಧ ಅಧಿಕಾರಿ ಅಭಿಷೇಕ್ ಪಾಂಡೆ ಅವರು ಹಾರೂಗೇರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಬಿಜೆಪಿ ಶಾಸಕನ ವಿರುದ್ಧ ಪ್ರಕರಣ ದಾಖಲು

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಅನುಮತಿ ಪಡೆಯದೆ ಇಲ್ಲಿನ ಗಂಗಾಜಲ ತಾಂಡಾ ಬಳಿಯ ಕೆ.ವಿ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶನಿವಾರ ಪ್ರಚಾರ ಮಾಡಿದ ಬಿಜೆಪಿ ಅಭ್ಯರ್ಥಿ ಶಾಸಕ ಅರುಣಕುಮಾರ ಪೂಜಾರ ವಿರುದ್ಧ ನೀತಿಸಂಹಿತೆ ಉಲ್ಲಂಘನೆ ಆರೋಪದಡಿ ಭಾನುವಾರ ಪ್ರಕರಣ ದಾಖಲಿಸಲಾಗಿದೆ.

ಮತಯಾಚನೆ ಮಾಡಿದ ವಿಡಿಯೊವನ್ನು ಅರುಣಕುಮಾರ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದರು. ರುದ್ರಪ್ಪ ಯಲ್ಲಪ್ಪ ಭಜಂತ್ರಿ ಎಂಬುವವರು ದೂರು ಸಲ್ಲಿಸಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಪ್ಪು ಜಯಂತಿ ಮುಗಿದ ಅಧ್ಯಾಯ; ಪ್ರೇಮಾ ಕಾರ್ಯಪ್ಪ

ಮಡಿಕೇರಿ: ಟಿಪ್ಪು ಜಯಂತಿ ಆಚರಣೆ ಮುಗಿದ ಅಧ್ಯಾಯ ಎಂದು ಕಾಂಗ್ರೆಸ್ ನಾಯಕಿ ಪ್ರೇಮಾ ಕಾರ್ಯಪ್ಪ ತಿಳಿಸಿದರು.

‘ಭಾವನಾತ್ಮಕ ವಿಚಾರಗಳಿಂದ ಬದುಕಿಗೆ ಪ್ರಯೋಜನ ಆಗುವುದಿಲ್ಲ. ಇನ್ನಾದರೂ ನಾವು ಭಾವನಾತ್ಮಕ ವಿಚಾರಗಳನ್ನು ಬಿಟ್ಟು ಅಭಿವೃದ್ಧಿಯ ವಿಚಾರಗಳ ಕುರಿತು ಮಾತನಾಡಬೇಕು’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಯಾವುದೋ ಕಾಲದಲ್ಲಿ ಟಿಪ್ಪು ಜಯಂತಿ ಆಚರಣೆ ಮಾಡಿದರು ಎಂಬ ಕಾರಣಕ್ಕೆ ನಿರಂತರವಾಗಿ ಅದನ್ನೇ ಪ್ರಸ್ತಾಪಿಸುವುದು ಸರಿಯಲ್ಲ. ಮತ್ತೆ ಮತ್ತೆ ಅದನ್ನೇ ಕೆದಕುವ ಮೂಲಕ ಬಿಜೆಪಿ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದೆ’ ಎಂದರು.

ಗಂಗಾವತಿ ಪ್ರಚಾರ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ಸಿ.ಎಂ ಯೋಗಿ ಆದಿತ್ಯನಾಥ


ಉತ್ತರ, ದಕ್ಷಿಣ ಭಾರತ ಬೆಸೆಯುವ ಅಂಜನಾದ್ರಿ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ಉತ್ತರ ಭಾರತದ ಅಯೋಧ್ಯೆಯ ರಾಮಮಂದಿರ ಮತ್ತು ದಕ್ಷಿಣ ಭಾರತದ ಗಂಗಾವತಿಯ ಅಂಜನಾದ್ರಿಯ ಆಂಜನೇಯ ಈ ಎರಡೂ ಪವಿತ್ರ ಸ್ಥಳಗಳು ದೇಶವನ್ನು ಒಗ್ಗೂಡಿಸುತ್ತವೆ. ಪ್ರಧಾನಿ ನರೇಂದ್ರ ಮೋದಿ ಅವರ ಏಕ್ ಭಾರತ್ ಶ್ರೇಷ್ಠ ಭಾರತ್ ಪರಿಕಲ್ಪನೆ ಸಾಕಾರಗೊಳಿಸಲು ಇವು ನೆರವಾಗಲಿವೆ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.

ಭಾನುವಾರ ಗಂಗಾವತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರಣ್ಣ ಮುನವಳ್ಳಿ ಪರ ಮತಯಾಚಿಸಿದ ಅವರು ‘ ಅಂಜನಾದ್ರಿ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ₹ 120 ಕೋಟಿ ಮಂಜೂರು ಮಾಡಿದೆ. ಅಯೋಧ್ಯೆದಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದೆ. ಅದರ ಉದ್ಘಾಟನೆಗೆ ನೀವೆಲ್ಲರೂ ಬರಬೇಕು. ರಾಮ ಮತ್ತು ಆಂಜನೇಯನ ದರ್ಶನ ಸುಲಭವಾಗಿಸಲು ಗಂಗಾವತಿಯಿಂದ ಆಯೋಧ್ಯೆಗೆ ಕೇಂದ್ರ ರೈಲು ಸೌಲಭ್ಯ ಕಲ್ಪಿಸಲಿದೆ' ಎಂದರು.

ಭಾಷಣದಲ್ಲಿ ಹಿಂದುತ್ವದ ಮಂತ್ರ ಜಪಿಸಿದ ಯೋಗಿ, ‘ಡಬಲ್ ಎಂಜಿನ್ ಸರ್ಕಾರದಿಂದ ಮಾತ್ರ ರಾಮನ ಭಕ್ತನ ಕ್ಷೇತ್ರ ವೇಗವಾಗಿ ಅಭಿವೃದ್ಧಿಯಾಗುತ್ತದೆ. ಉತ್ತರ ಪ್ರದೇಶದಲ್ಲಿ ಈಗ ಶಾಂತಿ ನೆಲೆಸಲು ಕಾರಣವಾಗಿದ್ದೇ ಡಬಲ್ ಎಂಜಿನ್ ಸರ್ಕಾರ’ ಎಂದರು.



ಗಂಗಾವತಿಯಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬೆಳ್ಳಿ ಗದೆ ಮತ್ತು ಅಂಜನಾದ್ರಿ ಆಂಜನೇಯನ ಬೃಹತ್ ಚಿತ್ರ ನೀಡಿದರು. ಬಿಜೆಪಿ ಅಭ್ಯರ್ಥಿ ಪರಣ್ಣ ಮುನವಳ್ಳಿ ಇದ್ದರು

ನಾಥ ಪರಂಪರೆ ನಕಲಿ ಎನ್‌ಕೌಂಟರ್ ಮಾಡುವಂಥದ್ದಲ್ಲ: ಎಚ್‌ಡಿಕೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ನಾಥ ಪರಂಪರೆ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ ಅವರನ್ನಿಟ್ಟುಕೊಂಡು ಒಕ್ಕಲಿಗರ ಮತ ಸೆಳೆಯಲು ಬಿಜೆಪಿ ಯತ್ನಿಸುತ್ತಿದೆ. ಆದರೆ, ಕರ್ನಾಟಕದ ನಾಥ ಪರಂಪರೆಗೂ, ಉತ್ತರಪ್ರದೇಶದ ನಾಥ ಪರಂಪರೆಗೂ ವ್ಯತ್ಯಾಸವಿದೆ. ನಮ್ಮ ನಾಥ ಪರಂಪರೆ ಬುಲ್ಡೋಜರ್ (ನಾಶ) ಮಾಡುವಂಥದ್ದಲ್ಲ, ನಕಲಿ ಎನ್‌ಕೌಂಟರ್ ಮಾಡುವಂಥದ್ದಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಹೇಳಿದರು.


ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಾಥ ಪರಂಪರೆಯ ರಾಜಕೀಯ ಆದಿಚುಂಚನಗಿರಿ ಮಠಕ್ಕೆ ಮಾತ್ರ ಸೀಮಿತವಾದುದು. ಜನರು ಉತ್ತರ ಪ್ರದೇಶದ ನಾಥ ಪರಂಪರೆ ನೋಡಿ ಮತ ಹಾಕುವುದಿಲ್ಲ. ಇಲ್ಲಿ ನಮ್ಮ ಸ್ವಾಮೀಜಿಗಳು ನಾಥಪರಂಪರೆಯನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿಕೊಂಡು ಬರುತ್ತಿದ್ದಾರೆ’ ಎಂದರು. ‘ಬಿಜೆಪಿ ಮತ್ತು ಕಾಂಗ್ರೆಸ್ ರಾಷ್ಟ್ರೀಯ ಮುಖಂಡರು ಕನ್ನಡ ಭಾಷೆ, ಬೆಳಗಾವಿ ಗಡಿ ಸಮಸ್ಯೆ ಬಗ್ಗೆ ಚಕಾರ ಎತ್ತುತ್ತಿಲ್ಲ’ ಎಂದರು. ‘ಚನ್ನಪಟ್ಟಣಕ್ಕೆ ಇನ್ನೂ 3–4 ಬಾರಿ ಮೋದಿ ಬಂದರೂ ತೊಂದರೆ ಇಲ್ಲ’ ಎಂದರು.

ಕಾಂಗ್ರೆಸ್–ಬಿಜೆಪಿ ಸಮಬಲ, ಸಮಾನ ಛಲ

ವೈಯಕ್ತಿಕ ವರ್ಚಸ್ಸು, ಬಂಡಾಯ, ಒಳಬೇಗುದಿ, ಅನುಕಂಪದ ಅಲೆಯೇ ನಿರ್ಣಾಯಕ

• ಸಂತೋಷ ಈ. ಚಿನಗುಡಿ


ಲಕ್ಷ್ಮೀ ಹೆಬ್ಬಾಳಕರ | ರಮೇಶ ಜಾರಕಿಹೊಳಿ | ಅಭಯ ಪಾಟೀಲ | ಬಾಲಚಂದ್ರ ಜಾರಕಿಹೊಳಿ | ರತ್ನಾ ಮಾಮನಿ



ಸಾಕ್ಷಾತ್ ಸಮೀಕ್ಷೆ

ಬೆಳಗಾವಿ: ವೈಯಕ್ತಿಕ ವರ್ಚಸ್ಸು, ಬಂಡಾಯ, ಒಳಬೇಗುದಿ ಹಾಗೂ ಅನುಕಂಪದ ಅಲೆ- 10 ವಿಧಾನಸಭಾ ಕ್ಷೇತ್ರಗಳ (ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಬರುವ 8, ಉತ್ತರ ಕನ್ನಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 2) ಫಲಿತಾಂಶದ ಮೇಲೆ ಪ್ರಭಾವ ಬೀರುವ ಸಂಗತಿಗಳಿವು. ತಲಾ ಐದು ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಾಬಲ್ಯ ಮೆರೆದಿವೆ.

ಜಿಲ್ಲೆಯಲ್ಲಿ ಒಟ್ಟು 18 ಕ್ಷೇತ್ರಗಳಿವೆ. 2018ರಲ್ಲಿ 10 ಕ್ಷೇತ್ರಗಳಲ್ಲಿ ಬಿಜೆಪಿ, 8 ಕಡೆ ಕಾಂಗ್ರೆಸ್ ಗೆದ್ದಿದ್ದವು. 'ಆಪರೇಷನ್ ಕಮಲ'ದ ಪರಿಣಾಮ 2019ರಲ್ಲಿ ನಡೆದ ಉಪಚುನಾವಣೆಯಲ್ಲಿ ಗೋಕಾಕ, ಅಥಣಿ ಹಾಗೂ ಕಾಗವಾಡ ಕ್ಷೇತ್ರಗಳು ಬಿಜೆಪಿ ಪಾಲಾದವು. ಬಿಜೆಪಿ ಬಲ 13ಕ್ಕೆ ಏರಿದರೆ, ಕಾಂಗ್ರೆಸ್ 5ಕ್ಕೆ ಕುಗ್ಗಿತು.

ವೈಯಕ್ತಿಕ ವರ್ಚಸ್ಸಿನ ಕ್ಷೇತ್ರಗಳು: ಸತತ ಆರು ಬಾರಿ ಗೆದ್ದಿರುವ ರಮೇಶ ಜಾರಕಿಹೊಳಿಗೆ ಇದು ಏಳನೇ ಚುನಾವಣೆ. ಐದು ಬಾರಿ ಕಾಂಗ್ರೆಸ್, ಉಪಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದರು. ಪಕ್ಷ ಯಾವುದಾದರೂ ವೈಯಕ್ತಿಕ ವರ್ಚಸ್ಸಿನಿಂದಲೇ ಗೆಲ್ಲುವುದು 'ಸಾಹುಕಾರ್'ಗೆ ರೂಢಿ. ಈ ಬಾರಿ ಸ್ಪರ್ಧೆ ತುಸು ಭಿನ್ನವಾಗಿದೆ. ಗೋಕಾಕದಲ್ಲಿ ಪಂಚಮಸಾಲಿ ಸಮುದಾಯ ದೊಡ್ಡದು. ಈ ಕಾರಣಕ್ಕೆ ಕಾಂಗ್ರೆಸ್ ಡಾ.ಮಹಾಂತೇಶ ಕಡಾಡಿಗೆ ಟಿಕೆಟ್ ನೀಡಿದೆ. ಹಿರಿಯ ನಾಯಕ ಅಶೋಕ ಪೂಜಾರಿ ಬಂಡಾಯ ಶಮನಗೊಳಿಸಿದೆ. ಒಂದೆಡೆ, ಲಕ್ಷ್ಮಣ ಸವದಿ ಗೋಕಾಕದಲ್ಲಿಯೂ 'ಸೇಡು' ತೀರಿಸಿಕೊಳ್ಳಲು ಮುಂದಾಗಿದ್ದಾರೆ. ಇನ್ನೊಂದೆಡೆ ಲಕ್ಷ್ಮೀ ಹೆಬ್ಬಾಳಕರ ಜತೆಗಿನ 'ವೈರತ್ವ'ವೂ ರಮೇಶ ಅವರಿಗೆ ಪರಿಣಾಮ ಬೀರಬಹುದು ಎಂಬ ಲೆಕ್ಕಾಚಾರ ರಾಜಕೀಯ ವಲಯದಲ್ಲಿದೆ.

ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಬೆಳಗಾವಿ ಗ್ರಾಮೀಣ ಕ್ಷೇತ್ರದ ಮನೆಮನೆಗೂ ಪರಿಚಿತೆ. ವೈಯಕ್ತಿಕ ವರ್ಚಸ್ಸಿನ ಜತೆಗೆ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ, ಸಮುದಾಯದ ಬೆಂಬಲ ಹಾಗೂ ಮರಾಠಾ ನಾಯಕರ ಬಾಂಧವ್ಯ ಅವರಿಗೆ ಬಲ ತಂದುಕೊಟ್ಟಿವೆ. ಕಳೆದೊಂದು ವರ್ಷದಿಂದ ಪ್ರತಿ ಹಳ್ಳಿಯಲ್ಲೂ ನಡೆಸಿದ 'ಅರಿಸಿನ- ಕುಂಕುಮ' ಕಾರ್ಯಕ್ರಮ, ರಾಜಹಂಸಗಡ ಕೋಟೆ ಮೇಲಿನ ಶಿವಾಜಿ ಮೂರ್ತಿ ಪ್ರತಿಷ್ಠಾಪನೆ ಲಕ್ಷ್ಮೀಗೆ ವರವಾಗುವ ಸಾಧ್ಯತೆ ಹೆಚ್ಚು. ಇಷ್ಟು ವರ್ಷ ಆಪ್ತರಾಗಿದ್ದ ರಮೇಶ ಜಾರಕಿಹೊಳಿ ಈಗ ವೈರಿಯಾಗಿದ್ದಾರೆ. ತಾವು ಗೆಲ್ಲದಿದ್ದರೂ ಚಿಂತೆಯಿಲ್ಲ; ಲಕ್ಷ್ಮೀಯನ್ನು ಸೋಲಿಸಿಯೇ ಸಿದ್ಧ ಎಂದು ಹಟ ತೊಟ್ಟಿದ್ದಾರೆ. ಅದನ್ನೂ ಹಗುರವಾಗಿ ತೆಗೆದುಕೊಳ್ಳುವಂತಿಲ್ಲ.

ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಅಭಯ ಪಾಟೀಲ ಮೂರು ಬಾರಿ ಶಾಸಕರಾಗಿದ್ದಾರೆ. ವೈಯಕ್ತಿಕ ಪ್ರಭಾವ ಕಳೆದೆರಡು ಗೆಲುವಿಗೆ ಕಾರಣ. ಜೈನರಾದ ಅಭಯ, ಮರಾಠಾ ಹಾಗೂ ಲಿಂಗಾಯತ ಸಮುದಾಯಗಳ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದಾರೆ. 58 ಸದಸ್ಯ ಬಲದ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕೇವಲ 2 ಸ್ಥಾನಗಳಲ್ಲಿ ಎಂಇಎಸ್ ಗೆದ್ದಿದೆ. ಅಷ್ಟರಮಟ್ಟಿಗೆ ಅಭಯ ಪಾಟೀಲ ಮರಾಠಿಗರನ್ನು ಬಿಜೆಪಿಯತ್ತ ಸೆಳೆದಿದ್ದಾರೆ. ಮರಾಠಿ ಮತದಾರರ ಸೆಳೆಯಲೆಂದೇ ಬೆಳಗಾವಿ ಮಹಾನಗರ ಪಾಲಿಕೆ ಮೇಯರ್, ಉಪಮೇಯರ್ ಹುದ್ದೆಗಳನ್ನು ಮರಾಠಿಗರಿಗೆ ನೀಡಿದ್ದಾರೆ. ಪಾಲಿಕೆ ಸದಸ್ಯರ ಬಲವೇ ಅವರಿಗೆ 'ಪ್ಲಸ್ ಪಾಯಿಂಟ್'.

ಅರಭಾವಿ ಕ್ಷೇತ್ರ 60 ವರ್ಷಗಳಿಂದಲೂ ವ್ಯಕ್ತಿಯ ಪ್ರಭಾವಳಿಯನ್ನೇ ನಂಬಿದೆ. ದಿವಂಗತ ವಿ.ಎಸ್. ಕೌಜಲಗಿ ಐದು ಬಾರಿ ತಮ್ಮ ಶಕ್ತಿಯಿಂದಲೇ ಗೆದ್ದಿದ್ದರು. ಈಗ ಸತತ ಐದು ಬಾರಿ ಬಾಲಚಂದ್ರ ಜಾರಕಿಹೊಳಿ ಗೆದ್ದಿದ್ದಾರೆ. ಕಾಂಗ್ರೆಸ್‌ನಿಂದ ಅರವಿಂದ ದಳವಾಯಿ ಮೂರನೇ ಬಾರಿ ಸ್ಪರ್ಧೆಗಿಳಿದಿದ್ದಾರೆ.

ಒಂದಾದ ಎಂಇಎಸ್ ಬಣಗಳು

ಒಂದು ಕಾಲಕ್ಕೆ ಎಂಇಎಸ್ ಬೆಂಬಲಿತ ಆರು ಶಾಸಕರು ಜಿಲ್ಲೆಯಲ್ಲಿದ್ದರು. ಈಗ ಒಬ್ಬರೂ ಇಲ್ಲ. ಸದ್ಯ ಆರು ಕ್ಷೇತ್ರಗಳಲ್ಲಿ ಎಂಇಎಸ್ ಬೆಂಬಲಿತ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಎಂಇಎಸ್ ಬಣಗಳು ಒಂದಾಗಿವೆ. ಕಾಂಗ್ರೆಸ್– ಬಿಜೆಪಿಯಲ್ಲಿ ಟಿಕೆಟ್ ತಪ್ಪಿದ ನಾಯಕರೂ ಮರಳಿದ್ದಾರೆ. ಮಹಾರಾಷ್ಟ್ರ ಸರ್ಕಾರವು 865 ಹಳ್ಳಿಗಳ ಮರಾಠಿಗರಿಗೆ ಉಚಿತ ಶಿಕ್ಷಣ, ಆರೋಗ್ಯ ವಿಮೆ ಘೋಷಿಸಿದೆ. ಈ ಎಲ್ಲ ಅಂಶಗಳು ಭಾವನಾತ್ಮಕವಾಗಿ ಅವರನ್ನು ಒಂದುಗೂಡಿಸಿದ್ದು, ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ನಿದ್ದೆಗೆಡಿಸಿದೆ.

ಪಕ್ಷೇತರ ಅಭ್ಯರ್ಥಿ ಭೀಮಪ್ಪ ಗಡಾದ ಅವರೂ ಪ್ರಬಲ ಪೈಪೋಟಿ ಒಡ್ಡಿದ್ದಾರೆ.

ಒಳಬೇಗುದಿಯ ಕ್ಷೇತ್ರಗಳು: ಬೆಳಗಾವಿ ಉತ್ತರ ಕ್ಷೇತ್ರದಲ್ಲಿ ಶಾಸಕ ಅನಿಲ ಬೆನಕೆಗೆ ಟಿಕೆಟ್ ತಪ್ಪಿಸಿ ಡಾ.ರವಿ ಪಾಟೀಲ ಅವರಿಗೆ ಟಿಕೆಟ್ ನೀಡಿದ್ದು, ಬಿಜೆಪಿ ಕಾರ್ಯಕರ್ತರಲ್ಲೇ ಒಡಕು ಮೂಡಿಸಿದೆ. ಬೆನಕೆ ಬಂಡಾಯ ಎದ್ದಿಲ್ಲ. ಆದರೆ, ಒಳಬೇಗುದಿ ತಳ್ಳಿಹಾಕುವಂತಿಲ್ಲ. ಲಿಂಗಾಯತರು 75 ಸಾವಿರ, ಮರಾಠಾ ಹಾಗೂ ಮುಸ್ಲಿಂ ಸಮುದಾಯದ ತಲಾ 50 ಸಾವಿರದಷ್ಟು ಮತದಾರರು ಇದ್ದಾರೆ. ಲಿಂಗಾಯತ ಅಭ್ಯರ್ಥಿ ನಿಲ್ಲಿಸಿದ್ದರಿಂದ ಲಿಂಗಾಯತ, ಮರಾಠಾ ಮತಗಳು ತಮಗೇ ಸಿಗುತ್ತವೆ ಎನ್ನುವುದು ಬಿಜೆಪಿ ಲೆಕ್ಕಾಚಾರ. ಎಂಇಎಸ್ ಅಭ್ಯರ್ಥಿ ಮರಾಠಾ ಮತ ಒಡೆಯುತ್ತಾರೆ, ಮುಸ್ಲಿಂ ಮತಗಳ ಬಲದಿಂದ ಗೆಲ್ಲಬಹುದು ಎನ್ನುವುದು ಕಾಂಗ್ರೆಸ್ ಯೋಚನೆ. ಅನಿಲ ಬೆನಕೆ ನಡೆಯು ಫಲಿತಾಂಶವನ್ನು ನಿರ್ಧಾರಿಸಲಿದೆ.

ರಾಮದುರ್ಗದ ಶಾಸಕ ಮಹಾದೇವಪ್ಪ ಯಾದವಾಡ ಬಂಡಾಯದಿಂದ ಹಿಂದೆ ಸರಿದಿದ್ದಾರೆ. ಆದರೆ, ಬಿಜೆಪಿಗೆ ಬೆಂಬಲ ಸೂಚಿಸಿಲ್ಲ. ಬಿಜೆಪಿ ಟಿಕೆಟ್ ಪಡೆದ ಚಿಕ್ಕರೇವಣ್ಣ ಗೆದ್ದರೆ ಕ್ಷೇತ್ರದಲ್ಲಿ ತಮ್ಮ 'ಅಸ್ತಿತ್ವ'ವೇ ಇಲ್ಲವಾಗುತ್ತದೆ ಎಂಬ ಆತಂಕ ಅವರಿಗಿದೆ. ಕಾಂಗ್ರೆಸ್‌ನ ಅಶೋಕ ಪಟ್ಟಣ ತಮ್ಮ ಅವಧಿಯಲ್ಲಿ ಮಾಡಿದ ಕೆಲಸಗಳು ಇನ್ನೂ ಜನಮನದಲ್ಲಿವೆ. ಮಹಾದೇವಪ್ಪ ಅವರ ಬೆಂಬಲ ಪಡೆಯುವ ಯತ್ನ ಕೂಡ ನಡೆಸಿದ್ದಾರೆ. ಕೋವಿಡ್, ಪ್ರವಾಹದ ಸಂದರ್ಭದಲ್ಲಿ ಕೈಗೊಂಡ ಸೇವೆಗಳನ್ನೇ ಚಿಕ್ಕರೇವಣ್ಣ ಒರೆಗೆ ಹಚ್ಚಿದ್ದಾರೆ. ಬಿಜೆಪಿಗೆ ಬುದ್ಧಿ ಕಲಿಸಬೇಕು ಎಂಬ ಮಹಾದೇವಪ್ಪನವರ ನಿರ್ಧಾರ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ಮಾಜಿ ಸಚಿವ ಡಿ.ಬಿ. ಇನಾಮದಾರ ನಿಧನದಿಂದ ಚನ್ನಮ್ಮನ ಕಿತ್ತೂರು ಕ್ಷೇತ್ರ ಹೊಸ ದಿಕ್ಕಿನತ್ತ ಸಾಗಿದೆ. ಶಾಸಕ ಮಹಾಂತೇಶ ದೊಡ್ಡಗೌಡರ ವಿರುದ್ಧ ಕಾಂಗ್ರೆಸ್ ಬಾಬಾಸಾಹೇಬ ಪಾಟೀಲ ಅವರನ್ನು ಕಣಕ್ಕಿಳಿಸಿದೆ. ಇನಾಮದಾರ ಶಿಷ್ಯರಾದ ಬಾಬಾಸಾಹೇಬ 2018ರಲ್ಲಿ ಪಕ್ಷೇತರವಾಗಿ ನಿಂತು ಗುರುವಿನ ಸೋಲಿಗೆ ಕಾರಣವಾಗಿದ್ದರು. ಈಗ ಇನಾಮದಾರ ಕುಟುಂಬ ತಟಸ್ಥವಾಗಿದೆ. ಒಳೇಟಿನಿಂದ ಕಾಂಗ್ರೆಸ್‌ಗೆ ಹಿನ್ನಡೆಯಾದರೆ ಅಚ್ಚರಿಯಿಲ್ಲ.

ಬಂಡಾಯದ ಕ್ಷೇತ್ರಗಳು: ಬೈಲಹೊಂಗಲದಲ್ಲಿ ಜಗದೀಶ ಮೆಟಗುಡ್ಡಗೆ ಬಿಜೆಪಿ ಟಿಕೆಟ್ ಕೊಟ್ಟಿದ್ದರಿಂದ ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಬಂಡಾಯ ಎದ್ದಿದ್ದಾರೆ. 2018ರಲ್ಲಿ ಇಬ್ಬರ ನಡುವಿನ ಜಗಳ ಕಾಂಗ್ರೆಸ್‌ಗೆ ಲಾಭ ತಂದಿತ್ತು. ಈ ಬಾರಿಯೂ ಇತಿಹಾಸ ಮರಳುತ್ತದೆ ಎನ್ನುವುದು ಜನರ ಮಾತು. ಜೆಡಿಎಸ್ ಅಭ್ಯರ್ಥಿ ಶಂಕರ ಮಾಡಲಗಿ ಮೂವರಿಂದಲೂ ಒಂದಷ್ಟು ಮತ ಕಿತ್ತುಕೊಳ್ಳುವ ಸಾಧ್ಯತೆ ಇದೆ.

ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಹಿಡಿತ ಸಾಧಿಸಿದ್ದ, ವಿಧಾನಸಭೆ ಉಪಸಭಾಧ್ಯಕ್ಷರಾಗಿದ್ದ ಆನಂದ ಮಾಮನಿ ಆರು ತಿಂಗಳ ಹಿಂದೆ ನಿಧನರಾದರು. ರತ್ನಾ ಮಾಮನಿ ಅವರನ್ನು ಕಣಕ್ಕಿಳಿಸಿದ ಬಿಜೆಪಿ ಅನುಕಂಪದ ಅಲೆಯನ್ನೇ ನೆಚ್ಚಿಕೊಂಡಿದೆ. ಸತೀಶ ಜಾರಕಿಹೊಳಿ ಅವರ ಆಪ್ತ ವಿಶ್ವಾಸ ವೈದ್ಯ ಕಾಂಗ್ರೆಸ್‌ನಿಂದ ನಿಂತಿದ್ದಾರೆ. ಕಾಂಗ್ರೆಸ್‌ನ ಪ್ರಬಲ ಆಕಾಂಕ್ಷಿ ಆಗಿದ್ದ ಸೌರಭ್ ಚೋಪ್ರಾ ಜೆಡಿಎಸ್ ಸೇರಿ ಕಣಕ್ಕಿಳಿದಿದ್ದಾರೆ. 2013, 2018ರಲ್ಲಿ ಈ ಇಬ್ಬರ ಒಳಜಗಳದಿಂದಲೇ ಮಾಮನಿ ಗೆದ್ದಿದ್ದರು. ಕಾಂಗ್ರೆಸ್ಸಿಗರ ಕದನ ಈಗಲೂ ಮುಂದುವರಿದಿದೆ.

ಮರಾಠಾ ಪ್ರಾಬಲ್ಯ: ಶೇ 80ರಷ್ಟು ಮರಾಠರೇ ಇರುವ ಕ್ಷೇತ್ರ ಖಾನಾಪುರ. ಈವರೆಗೆ ನಡೆದ 14 ಚುನಾವಣೆಗಳಲ್ಲಿ 12 ಬಾರಿ ಎಂಇಎಸ್ ಗೆದ್ದಿದೆ. ಕಾಂಗ್ರೆಸ್, ಬಿಜೆಪಿ ಒಂದೊಂದೇ ಬಾರಿ ಗೆದ್ದಿವೆ. ಶಾಸಕಿ, ಡಾ.ಅಂಜಲಿ ನಿಂಬಾಳಕರ ಕಾಂಗ್ರೆಸ್‌ನಿಂದ ಮತ್ತೆ ಕಣದಲ್ಲಿದ್ದಾರೆ. ಬಿಜೆಪಿಯಿಂದ ವಿಠ್ಠಲ ಹಲಗೇಕರ್, ಜೆಡಿಎಸ್‌ನಿಂದ ನಾಸೀರ್ ಬಾಗವಾನ್, ಎಂಇಎಸ್‌ನಿಂದ ಮುರಳೀಧರ ಪಾಟೀಲ ತೋಳೇರಿಸಿದ್ದಾರೆ. ಮರಾಠರ ಮತಗಳು ಚದುರುವುದು ಪಕ್ಕಾ. ನಾಲ್ಕೂ ದಿಕ್ಕಿನಲ್ಲಿ ಸಮಾನ ಸ್ಪರ್ಧೆ ಇರುವುದು ಇಲ್ಲಿನ ವಿಶೇಷ.

ಬೆಳಗಾವಿ ಜಿಲ್ಲೆ: ಕ್ಷೇತ್ರಗಳ ಬಲಾಬಲ (ಒಟ್ಟು ಕ್ಷೇತ್ರ 18)		
ಕ್ಷೇತ್ರ	2013	2018
ಬೆಳಗಾವಿ ದಕ್ಷಿಣ	ಎಂಇಎಸ್	ಬಿಜೆಪಿ
ಬೆಳಗಾವಿ ಉತ್ತರ	ಕಾಂಗ್ರೆಸ್	ಬಿಜೆಪಿ
ಬೆಳಗಾವಿ ಗ್ರಾಮೀಣ	ಬಿಜೆಪಿ	ಕಾಂಗ್ರೆಸ್
ಸವದತ್ತಿ ಯಲ್ಲಮ್ಮ	ಬಿಜೆಪಿ	ಬಿಜೆಪಿ
ರಾಮದುರ್ಗ	ಕಾಂಗ್ರೆಸ್	ಬಿಜೆಪಿ
ಗೋಕಾಕ	ಕಾಂಗ್ರೆಸ್	ಕಾಂಗ್ರೆಸ್
ಅರಭಾವಿ	ಬಿಜೆಪಿ	ಬಿಜೆಪಿ
ಬೈಲಹೊಂಗಲ	ಕೆಜೆಪಿ	ಕಾಂಗ್ರೆಸ್
ಚನ್ನಮ್ಮನ ಕಿತ್ತೂರು	ಕಾಂಗ್ರೆಸ್	ಬಿಜೆಪಿ
ಖಾನಾಪುರ	ಎಂಇಎಸ್	ಕಾಂಗ್ರೆಸ್
ಅಥಣಿ	ಬಿಜೆಪಿ	ಕಾಂಗ್ರೆಸ್
ಚಿಕ್ಕೋಡಿ–ಸದಲಗಾ	ಕಾಂಗ್ರೆಸ್	ಕಾಂಗ್ರೆಸ್
ಹುಕ್ಕೇರಿ	ಬಿಜೆಪಿ	ಬಿಜೆಪಿ
ರಾಯಬಾಗ	ಬಿಜೆಪಿ	ಬಿಜೆಪಿ
ಕುಡಚಿ	ಬಿಜೆಪಿ	ಬಿಜೆಪಿ
ಯಮಕನಮರಡಿ	ಕಾಂಗ್ರೆಸ್	ಕಾಂಗ್ರೆಸ್
ನಿಪ್ಪಾಣಿ	ಬಿಜೆಪಿ	ಬಿಜೆಪಿ
ಕಾಗವಾಡ	ಬಿಜೆಪಿ	ಕಾಂಗ್ರೆಸ್

2019ರ ಉಪಚುನಾವಣೆ	
ಕ್ಷೇತ್ರ	ಪಕ್ಷ
ಅಥಣಿ	ಬಿಜೆಪಿ
ಕಾಗವಾಡ	ಬಿಜೆಪಿ
ಗೋಕಾಕ	ಬಿಜೆಪಿ

39,07,485 ಜಿಲ್ಲೆಯ ಒಟ್ಟು ಮತದಾರರ ಸಂಖ್ಯೆ

19,71,642 ಪುರುಷರು

142 ಲೈಂಗಿಕ ಅಲ್ಪಸಂಖ್ಯಾತರು

19,35,701 ಮಹಿಳೆಯರು

185 ಕಣದಲ್ಲಿರುವ ಅಭ್ಯರ್ಥಿಗಳು

ಪಕ್ಷಗಳಿಗಿಂತ ಕುಟುಂಬಗಳ ವರ್ಚಸ್ಸೇ ದೊಡ್ಡದು!


ಲಕ್ಷ್ಮಣ ಸವದಿ | ಸತೀಶ ಜಾರಕಿಹೊಳಿ | ಶಶಿಕಲಾ ಜೊಲ್ಲೆ | ರಮೇಶ ಕತ್ತಿ

ಚಿಕ್ಕೋಡಿ: ಬೆಳಗಾವಿ ಜಿಲ್ಲೆಯ 18 ವಿಧಾನಸಭಾ ಕ್ಷೇತ್ರಗಳ ಪೈಕಿ ಎಂಟು ಚಿಕ್ಕೋಡಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿವೆ. 2018ರ ಚುನಾವಣೆಯಲ್ಲಿ ತಲಾ ನಾಲ್ಕು ಕ್ಷೇತ್ರಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಗೆದ್ದುಕೊಂಡಿದ್ದವು. ಈಗಲೂ ಕಣದಲ್ಲಿ ನಾಲ್ಕರಲ್ಲಿ ಬಿಜೆಪಿ, ಉಳಿದ ನಾಲ್ಕರಲ್ಲಿ ಕಾಂಗ್ರೆಸ್ ಪಾರಮ್ಯ ಸಾಧಿಸಿವೆ.

ಸವದಿ ಕುಟುಂಬ, ಕತ್ತಿ ಕುಟುಂಬ, ಹುಕ್ಕೇರಿ ಕುಟುಂಬ, ಜಾರಕಿಹೊಳಿ ಕುಟುಂಬ, ಜೊಲ್ಲೆ ಕುಟುಂಬ–ಹೀಗೆ ಪಕ್ಷಗಳಿಗಿಂತ ಇಲ್ಲಿ ಕುಟುಂಬಗಳ ವರ್ಚಸ್ಸೇ ದೊಡ್ಡದು.

2019ರಲ್ಲಿ ನಡೆದ 'ಆಪರೇಷನ್ ಕಮಲದ ಅಡ್ಡಪರಿಣಾಮ' ಇಲ್ಲಿ ಕಾಡುತ್ತಿದೆ. ಆಪರೇಷನ್ ಕಾರಣದಿಂದಲೇ ಅಥಣಿ ಹಾಗೂ ಕಾಗವಾಡ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳೇ ಅದಲು-ಬದಲಾಗಿದ್ದಾರೆ. ಚಿಕ್ಕೋಡಿ–ಸದಲಗಾ, ಯಮಕನಮರಡಿ, ನಿಪ್ಪಾಣಿ ಕ್ಷೇತ್ರಗಳಲ್ಲಿ ಪಕ್ಷಕ್ಕಿಂತ ಹೆಚ್ಚಾಗಿ ಕುಟುಂಬಗಳ ವರ್ಚಸ್ಸೇ ಗೆಲುವು ತರಲಿದೆ.

ಅಥಣಿಯಲ್ಲಿ ಬಿಜೆಪಿಯಿಂದ 'ಹ್ಯಾಟ್ರಿಕ್' ವಿಜಯ ಸಾಧಿಸಿ, 2018ರ ಚುನಾವಣೆಯಲ್ಲಿ ಸೋತಿದ್ದ ಲಕ್ಷ್ಮಣ ಸವದಿ ಈಗ ಕಾಂಗ್ರೆಸ್ ಅಭ್ಯರ್ಥಿ. 'ಆಪರೇಷನ್'ನ ಅಡ್ಡಪರಿಣಾಮವಿದು. ಬಿಜೆಪಿ ಸರ್ಕಾರ ರಚನೆಗೆ ಕೈಜೋಡಿಸಿದ ಕಾರಣಕ್ಕೆ ಮಹೇಶ ಕುಮಠಳ್ಳಿ ಅವರಿಗೆ ಟಿಕೆಟ್ ನೀಡಲಾಗಿದೆ. 'ಸಮಸ್ಯೆ ಅದಲ್ಲ; ಸ್ವಾಭಿಮಾನಕ್ಕೆ ಧಕ್ಕೆ ಮಾಡಿದ್ದಾರೆ' ಎಂಬ ಕಾರಣ ನೀಡಿ ಸವದಿ ಬಿಜೆಪಿ ತೊರೆದಿದ್ದಾರೆ.

2018ರಲ್ಲಿ ರಮೇಶ ಜಾರಕಿಹೊಳಿ ಕಾಂಗ್ರೆಸ್‌ನಲ್ಲಿದ್ದಾಗ ಸವದಿ ಅವರನ್ನು ಸೋಲಿಸಲು ತಂತ್ರ ಹೂಡಿದ್ದರು. ಈಗ ಕುಮಠಳ್ಳಿ ಬೆನ್ನಿಗೆ ನಿಂತಿದ್ದಾರೆ. ಕಾಂಗ್ರೆಸ್ ಧ್ವಜ ಹಿಡಿದವರು, ಈಗ ಬಿಜೆಪಿ ಝಂಡಾ ಎತ್ತಿಕೊಂಡಿದ್ದಾರೆ.

ಕುಮಠಳ್ಳಿ ಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಪಂಚಮಸಾಲಿ ಸಮುದಾಯದವರು. 20 ವರ್ಷಗಳ ರಾಜಕಾರಣದಲ್ಲಿ 'ಸವದಿ ಸಾಹುಕಾರ್'ಗೇ ನಿಷ್ಠವಾದ ದೊಡ್ಡ ಸಂಖ್ಯೆಯ ಮತದಾರರೂ ಇದ್ದಾರೆ. ಎರಡೂ ಕಡೆಯಿಂದ ಸಮಬಲ ಕಾಣಿಸುತ್ತಿವೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸನಗೌಡ ಪಾಟೀಲ ಯತ್ನಾಳ ಜೊತೆಯಾಗಿಯೇ ಅಥಣಿಗೆ ಬಂದಿದ್ದು ಕ್ಷೇತ್ರ ಎಷ್ಟು ಕಾವೇರಿದೆ ಎಂಬುದಕ್ಕೆ ಸಾಕ್ಷಿ.

ಕಾಗವಾಡ ಕ್ಷೇತ್ರದ ಸದ್ಯದ ರಾಜಕೀಯ ಕೂಡ ಆಪರೇಷನ್‌ನ ಇನ್ನೊಂದು ಅಡ್ಡಪರಿಣಾಮ. ಬಿಜೆಪಿಯಿಂದ 'ಹ್ಯಾಟ್ರಿಕ್' ಜಯ ಗಳಿಸಿದ್ದ ರಾಜು ಕಾಗೆ 2019ರಲ್ಲಿ ಕಾಂಗ್ರೆಸ್ ಸೇರಿ, ಉಪಚುನಾವಣೆಯಲ್ಲಿ ಸೋತರು. 2018ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಶ್ರೀಮಂತ ಪಾಟೀಲ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದರು. ಈ ಭಾಗದಲ್ಲಿ ಲಕ್ಷ್ಮಣ ಸವದಿ–ರಾಜು ಕಾಗೆ ಜಿಗರಿ ಸ್ನೇಹಿತರು. ಲಿಂಗಾಯತ ಸಮುದಾಯದ ಇಬ್ಬರೂ ಮತ್ತೆ ಒಂದಾಗಿದ್ದಾರೆ. ಸವದಿ ಕೂಡ ಅವಿಭಜಿತ ಕಾಗವಾಡ ತಾಲ್ಲೂಕಿನಲ್ಲಿ ಪ್ರಬಲ ಪಡೆ ಹೊಂದಿದ್ದಾರೆ. ಇದು ಬಿಜೆಪಿ ಅಭ್ಯರ್ಥಿ ಮರಾಠಾ ಸಮುದಾಯಕ್ಕೆ ಸೇರಿದ ಶ್ರೀಮಂತ ಪಾಟೀಲಗೆ ಸವಾಲಾಗಿದೆ.

ವರ್ಚಸ್ಸೇ ಪಣಕ್ಕೆ: ಚಿಕ್ಕೋಡಿ–ಸದಲಗಾ ಕ್ಷೇತ್ರದಲ್ಲಿ ಐದು ಬಾರಿ ಶಾಸಕ, ಎರಡು ಬಾರಿ ವಿಧಾನ ಪರಿಷತ್ ಸದಸ್ಯ, ಒಂದು ಬಾರಿ ಸಂಸದರಾದವರು ಪ್ರಕಾಶ ಹುಕ್ಕೇರಿ. ತಂದೆಯ ವರ್ಚಸ್ಸಿನ ನೆರಳಲ್ಲೇ ಎರಡು ಬಾರಿ ಗೆದ್ದಿರುವ ಗಣೇಶ ಹುಕ್ಕೇರಿ ಹ್ಯಾಟ್ರಿಕ್ ಉಮೇದಿನಲ್ಲಿದ್ದಾರೆ. ಮಾಜಿ ಸಚಿವ, ದಿವಂಗತ ಉಮೇಶ ಕತ್ತಿ ಅವರ ಸಹೋದರ ರಮೇಶ ಕತ್ತಿ ಅವರನ್ನು ಇಲ್ಲಿ ಕಣಕ್ಕಿಳಿಸಿ ಬಿಜೆಪಿ ಹೊಸತಂತ್ರ ಹೂಡಿದೆ. ವೈಯಕ್ತಿಕ ವರ್ಚಸ್ಸು ಹೊಂದಿದ ಎರಡು ಕುಟುಂಬಗಳ ನಡುವೆ ಪೈಪೋಟಿ ಜೋರಾಗಿದೆ.

ಉಮೇಶ ಕತ್ತಿ ಅಗಲಿಕೆ ಹುಕ್ಕೇರಿ ಕ್ಷೇತ್ರದ ಮತದಾರರನ್ನು ಕಾಡಿದೆ. ಅವರ ಪುತ್ರ ನಿಖಿಲ್ ಕತ್ತಿಗೆ ಬಿಜೆಪಿ ಟಿಕೆಟ್ ನೀಡಿದೆ. ಹಿರಿಯರಾದ ಎ.ಬಿ.ಪಾಟೀಲ ಕಾಂಗ್ರೆಸ್‌ನಿಂದ ಮತ್ತೆ ಕಣದಲ್ಲಿದ್ದಾರೆ. ಇತ್ತ 'ಅನುಕಂಪ' ಅತ್ತ 'ಅನುಭವ' ಎರಡನ್ನೂ ಜನ ಒರೆಗೆ ಹಚ್ಚಿ ನೋಡುತ್ತಿದ್ದಾರೆ. ಎ.ಬಿ. ಪಾಟೀಲ ಪಂಚಮಸಾಲಿ ಸಮುದಾಯದವರು. ಕ್ಷೇತ್ರದಲ್ಲಿ ಪಂಚಮಸಾಲಿ ಮತದಾರರು ದೊಡ್ಡ ಸಂಖ್ಯೆಯಲ್ಲಿದ್ದಾರೆ ಎಂಬುದು ಗಮನಾರ್ಹ.

ನಿಪ್ಪಾಣಿಯಲ್ಲಿ ಕಾಂಗ್ರೆಸ್ ಆಕಾಂಕ್ಷಿಯಾಗಿದ್ದ ಉತ್ತಮ ಪಾಟೀಲ ಈಗ ಎನ್‌ಸಿಪಿ ಸೇರಿ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ಕಾಕಾಸಾಹೇಬ ಪಾಟೀಲ, ಬಿಜೆಪಿ ಅಭ್ಯರ್ಥಿ ಶಶಿಕಲಾ ಜೊಲ್ಲೆ ಮಧ್ಯೆ ನೇರ ಪೈಪೋಟಿ ಇದೆ. ಶೇ 90ರಷ್ಟು ಮರಾಠಿ ಭಾಷಿಗರು ಇಲ್ಲಿದ್ದಾರೆ. ಕಾಂಗ್ರೆಸ್ ಮೇಲೆ ಸೇಡು ತೀರಿಸಿಕೊಳ್ಳಲು ಉತ್ತಮ ಪಾಟೀಲ ಹಟಕ್ಕೆ ಬಿದ್ದಂತಿದೆ.

ಮೂರು ಮೀಸಲು ಕ್ಷೇತ್ರಗಳು: ಪರಿಶಿಷ್ಟ ಜಾತಿಗೆ ಮೀಸಲಾದ ರಾಯಬಾಗ ಕ್ಷೇತ್ರದಲ್ಲಿ ಶಂಭು ಕಲ್ಲೋಳಿಕರ ಕಾಂಗ್ರೆಸ್ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗುತ್ತದೆ ಎಂದು ಐಎಎಸ್ ಹುದ್ದೆ ಬಿಟ್ಟು ಬಂದರು. ಪಕ್ಷವು ಮಹಾವೀರ ಮೋಹಿತೆ ಅವರಿಗೆ ಟಿಕೆಟ್ ನೀಡಿದ್ದರಿಂದ ಮುನಿಸಿಕೊಂಡರು. ಮೂರು ಬಾರಿ ಶಾಸಕರಾದ ದುರ್ಯೋಧನ ಐಹೊಳೆ ಮತ್ತೆ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಇಬ್ಬರ ನಡುವಿನ ಜಗಳ ದುರ್ಯೋಧನ ಅವರ 'ಗದೆ'ಯ ಬಲ ಹೆಚ್ಚಿಸಿದೆ.

ಪರಿಶಿಷ್ಟ ಜಾತಿಗೆ ಮೀಸಲಾದ ಕುಡಚಿಯಲ್ಲಿ ಶಾಸಕ ಪಿ.ರಾಜೀವ್ ಬಿಜೆಪಿ ಅಭ್ಯರ್ಥಿ. 2008, 2013ರಲ್ಲಿ ಬಿಜೆಪಿ ಅಭ್ಯರ್ಥಿ ಆಗಿ ಸೋತಿದ್ದ ಮಹೇಂದ್ರ ತಮ್ಮಣ್ಣವರ ಈ ಬಾರಿ ಕಾಂಗ್ರೆಸ್‌ನಿಂದ ನಿಂತಿದ್ದಾರೆ. ಲಿಂಗಾಯತ ಹಾಗೂ ಕುರುಬ ಸಮಾಜದ ಮತದಾರರ ಸಂಖ್ಯೆ ಇಲ್ಲಿ ಹೆಚ್ಚಿದೆ. ಲಿಂಗಾಯತ ಮತಗಳು ಬಿಜೆಪಿಯತ್ತ, ಕುರುಬ ಮತಗಳು ಕಾಂಗ್ರೆಸ್‌ನತ್ತ ವಾಲಿದ್ದರಿಂದ ಯಾರ ಬಲ ಹೆಚ್ಚು ಎಂಬುದು ತರ್ಕಕ್ಕೆ ಸಿಗದಾಗಿದೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಯಮಕನಮರಡಿಯಲ್ಲಿ ಸತೀಶ ಜಾರಕಿಹೊಳಿ ಬಲಾಢ್ಯರು. ಅದಾಗಿಯೂ 2018ರಲ್ಲಿ ಮಾರುತಿ ಅಷ್ಟಗಿ ಅವರು 2,850 ಮತಗಳಿಂದ ಸೋತಿದ್ದರು. ಸ್ಪರ್ಧೆ ಒಡ್ಡಬಲ್ಲ ಮಾರುತಿ ಅವರಿಗೆ ಈ ಬಾರಿ ಬಿಜೆಪಿ ಟಿಕೆಟ್ ಕೊಡಲಿಲ್ಲ. ಮುನಿಸಿಕೊಂಡ ಅವರು ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಹೊಸಮುಖ ಬಸವರಾಜ ಹುಂದ್ರಿ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಜಾರಕಿಹೊಳಿ ಸಹೋದರರ ನಡುವಿನ ಒಳ ಒಪ್ಪಂದ ಎಂಬ ದೂರು ಈಗಲೂ ಕೇಳಿಬಂದಿದೆ.

ಕಾಡುತ್ತಿದೆ ಲಿಂಗಾಯತ ನಾಯಕರ ಅಗಲಿಕೆ

ಲಿಂಗಾಯತ ದೊಡ್ಡ ನಾಯಕರ ಅಕಾಲಿಕ ಅಗಲಿಕೆ ಬಿಜೆಪಿಯನ್ನು ಕಾಡುತ್ತಿದೆ. ಕೇಂದ್ರ ಸಚಿವರಾಗಿದ್ದ ಸುರೇಶ ಅಂಗಡಿ, ಸಚಿವರಾಗಿದ್ದ ಉಮೇಶ ಕತ್ತಿ, ವಿಧಾನಸಭೆ ಉಪಸಭಾತಿಯಾಗಿದ್ದ ಆನಂದ ಮಾಮನಿ ಅಗಲಿಕೆ ಬಿಜೆಪಿಯ ಕಸುವು ಕುಗ್ಗಿಸಿದೆ.

ಜಿಲ್ಲೆಯಲ್ಲಿ ಲಿಂಗಾಯತ ಮತದಾರರ ಸಂಖ್ಯೆ ದೊಡ್ಡದು. ಯಾವುದೇ ಒಳಪಂಗಡದ ಮತಗಳು ಹಂಚಿಹೋಗಬಾರದು ಎಂದು ಬಿಜೆಪಿ ಒಂದೆಡೆ ಯಡಿಯೂರಪ್ಪ ಹಾಗೂ ಇನ್ನೊಂದೆಡೆ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಜಿಲ್ಲೆಗೆ ನುಗ್ಗಿಸಿದೆ. ಲಕ್ಷ್ಮಣ ಸವದಿ ಪಕ್ಷ ಬಿಟ್ಟಿದ್ದು ಇತರೇ ಕ್ಷೇತ್ರಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಇವರು ಹೊತ್ತಿದ್ದಾರೆ.

ರಾಮನಗರ: ಒಕ್ಕಲಿಗರದೇ ಪ್ರಾಬಲ್ಯ, ರಾಜ್ಯ ರಾಜಕಾರಣದಲ್ಲಿ ಶಕ್ತಿ ಕೇಂದ್ರ

ಜೆಡಿಎಸ್ ಕೋಟೆ: ಕೈ, ಕಮಲ ಕಣ್ಣು

• ಆರ್. ಜಿತೇಂದ್ರ


ಎಚ್‌.ಡಿ. ಕುಮಾರಸ್ವಾಮಿ | ಡಿ.ಕೆ. ಶಿವಕುಮಾರ್ | ಆರ್. ಅಶೋಕ | ಸಿ.ಪಿ. ಯೋಗೇಶ್ವರ | ನಿಖಿಲ್ ಕುಮಾರಸ್ವಾಮಿ

ರಾಮನಗರ: ಜಿಲ್ಲೆಯಲ್ಲಿ ಸಾಂಪ್ರದಾಯಿಕ ಎದುರಾಳಿಗಳಾಗಿರುವ ಜೆಡಿಎಸ್–ಕಾಂಗ್ರೆಸ್ ಮಧ್ಯೆ ಈ ಬಾರಿ ಬಿಜೆಪಿ ಕೂಡ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ. ಈ ಕಾರಣಕ್ಕಾಗಿಯೇ ಆ ಪಕ್ಷದ ಮುಖಂಡರು ಇತ್ತ ಹೆಚ್ಚು ಗಮನ ಹರಿಸಿದ್ದಾರೆ.

ರಾಮನಗರ ಪುಟ್ಟ ಜಿಲ್ಲೆಯಾದರೂ ರಾಜ್ಯ ರಾಜಕಾರಣದಲ್ಲಿ ದೊಡ್ಡ ಶಕ್ತಿಕೇಂದ್ರವಾಗಿ ಗುರುತಿಸಿಕೊಂಡಿದೆ. ಈಗಾಗಲೇ ನಾಲ್ವರು ಮುಖ್ಯಮಂತ್ರಿಗಳನ್ನು ಕೊಟ್ಟಿರುವ ಜಿಲ್ಲೆಯಲ್ಲಿ ಈ ಬಾರಿ ಜೆಡಿಎಸ್–ಕಾಂಗ್ರೆಸ್‌ನ ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿಗಳಿಬ್ಬರೂ ಕಣದಲ್ಲಿ ಇದ್ದಾರೆ. ಅಕ್ಕಪಕ್ಕದ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಅಪ್ಪ–ಮಗ ಸ್ಪರ್ಧೆ ಮಾಡಿದ್ದಾರೆ. 59 ಅಭ್ಯರ್ಥಿಗಳ ಪೈಕಿ ಒಬ್ಬ ಮಹಿಳೆ ಇದ್ದಾರೆ.

ಒಕ್ಕಲಿಗ ಸಮುದಾಯದ ಪ್ರಾಬಲ್ಯ ಇರುವ ಜಿಲ್ಲೆಯಲ್ಲಿ ಕಳೆದ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರು ಆಯ್ಕೆಯಾಗಿದ್ದರು. ಕನಕಪುರದಲ್ಲಿ ಮಾತ್ರ ಕಾಂಗ್ರೆಸ್‌ನಿಂದ ಡಿ.ಕೆ.ಶಿವಕುಮಾರ್ 'ಬಂಡೆ'ಯಂತೆ ಗಟ್ಟಿಯಾಗಿದ್ದಾರೆ. ಈ ಬಾರಿ ಬಿಜೆಪಿ ಯಾರ ಪಾಲಿಗೆ ಮಗ್ಗಲ ಮುಳ್ಳಾಗಲಿದೆ ಎನ್ನುವ ಚರ್ಚೆ ನಡೆಯುತ್ತಿದೆ.

ಜಿಲ್ಲೆಯಲ್ಲಿ ಈವರೆಗಿನ ಚುನಾವಣೆಗಳಲ್ಲಿ ಬಿಜೆಪಿ ಸಾಧನೆ ಹೇಳಿಕೊಳ್ಳುವಂತೆ ಇಲ್ಲ. ಮಾಗಡಿ ಹಾಗೂ ಚನ್ನಪಟ್ಟಣದಲ್ಲಿ ತಲಾ ಒಂದು ಬಾರಿ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ. ಆದರೆ, ಈ ಬಾರಿ ಕಮಲ ಪಾಳಯ ರಾಮನಗರವನ್ನು ರಾಜಕೀಯ 'ಪ್ರಯೋಗ ಶಾಲೆ'ಯನ್ನಾಗಿ ಬಳಸಿಕೊಳ್ಳುತ್ತಿದೆ. ರಾಮದೇವರ ಬೆಟ್ಟದಲ್ಲಿ ಅಯೋಧ್ಯೆ ಮಾದರಿ ರಾಮಮಂದಿರ ನಿರ್ಮಾಣದ ಘೋಷಣೆ ಮಾಡಿದ್ದು, ನಾಲ್ಕೂ ಕ್ಷೇತ್ರಗಳಲ್ಲಿ ಒಕ್ಕಲಿಗರಿಗೆ ಟಿಕೆಟ್ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮೊದಲಾದ ನಾಯಕರೂ ಇಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ತವರಿನಲ್ಲೇ ಕಟ್ಟಿಹಾಕುವ ಸಲುವಾಗಿ ಬಿಜೆಪಿ ಕನಕಪುರದಲ್ಲಿ ಸಚಿವ ಆರ್.ಅಶೋಕ ಅವರನ್ನು ಕಣಕ್ಕೆ ಇಳಿಸಿದೆ. ಡಿ.ಕೆ.ಸಹೋದರರು ಇಲ್ಲಿ ಕಾರ್ಯಕರ್ತರ ಕೋಟೆಯನ್ನೇ ಕಟ್ಟಿಕೊಂಡಿದ್ದು, ಸದ್ಯ ಕಾಂಗ್ರೆಸ್ ಪ್ರಬಲವಾಗಿದೆ. ಛಲ ಬಿಡದ ಅಶೋಕ, ಡಿಕೆಶಿ ಪಾಳೆಗಾರಿಕೆ ವಿರುದ್ಧ ಟೀಕಾಸ್ತ್ರಗಳ ಬಾಣ ಹೂಡುತ್ತಿದ್ದಾರೆ. ನಿರ್ಭೀತಿಯಿಂದ ಮತದಾನ ಮಾಡುವ ವಾತಾವರಣ ಬೇಕು. ದಬ್ಬಾಳಿಕೆ ತಡೆಗೆ ಜೆಡಿಎಸ್ ಕಾರ್ಯಕರ್ತರೂ ತಮ್ಮನ್ನು ಬೆಂಬಲಿಸಬೇಕು ಎಂದು ಹೇಳುತ್ತಿದ್ದಾರೆ.

ಕನಕಪುರದಲ್ಲಿ ಜೆಡಿಎಸ್‌ಗೆ ತನ್ನದೇ ಆದ ಸಾಂಪ್ರದಾಯಿಕ ಮತಗಳು ಇವೆ. ಕಳೆದ ಬಾರಿ ಇಲ್ಲಿ ನಾರಾಯಣಗೌಡ ಕಡೆ ಕ್ಷಣದಲ್ಲಿ ಅಭ್ಯರ್ಥಿ ಆಗಿದ್ದರೂ 47ಸಾವಿರ ಮತ ಪಡೆದಿದ್ದರು. ಸದ್ಯ ಅವರ ಜೊತೆಗೆ ಮತ್ತೊಬ್ಬ ಜೆಡಿಎಸ್ ನಾಯಕ ಡಿ.ಎಂ.ವಿಶ್ವನಾಥ್ ಡಿ.ಕೆ. ಶಿವಕುಮಾರ್ ಜೊತೆ ಕೈ ಜೋಡಿಸಿದ್ದಾರೆ. ಜೆಡಿಎಸ್ ಈ ಬಾರಿ ತಾಲ್ಲೂಕು ಘಟಕದ ಅಧ್ಯಕ್ಷ ನಾಗರಾಜು ಎಂಬುವರನ್ನು ಕಣಕ್ಕೆ ಇಳಿಸಿದೆ. ಈವರೆಗೆ ದೇವೇಗೌಡ, ಕುಮಾರಸ್ವಾಮಿ ಕನಕಪುರಕ್ಕೆ ಕಾಲಿಟ್ಟಿಲ್ಲ. ಪ್ರತಿಯಾಗಿ, ಡಿ.ಕೆ.ಶಿವಕುಮಾರ್ ಚನ್ನಪಟ್ಟಣಕ್ಕೆ ಹೋಗಿಲ್ಲ. ಇದು ಹೊಂದಾಣಿಕೆ ರಾಜಕಾರಣ ಎನ್ನುವುದು ಬಿಜೆಪಿ ಆರೋಪ.

ಚನ್ನಪಟ್ಟಣದಲ್ಲಿ ಈ ಬಾರಿಯೂ ಜೆಡಿಎಸ್ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿಯ ಸಿ.ಪಿ.ಯೋಗೇಶ್ವರ ಮುಖಾಮುಖಿ ಆಗಿದ್ದಾರೆ. ಸದ್ಯಕ್ಕೆ ಸಮಬಲದ ಹೋರಾಟ ನಡೆದಿದೆ. ಕುಮಾರಸ್ವಾಮಿ ಕಡೆಯ ಎರಡು ದಿನದಲ್ಲಿ ಕ್ಷೇತ್ರ ಪ್ರವಾಸದ ಮೂಲಕ ಮತದಾರರನ್ನು ಓಲೈಸುವ ಆತ್ಮವಿಶ್ವಾಸದಲ್ಲಿ ಇದ್ದಾರೆ. ಯೋಗೇಶ್ವರ, ಈ ಬಾರಿ ಸ್ವಾಭಿಮಾನಿ ಮತದಾರರು ಸ್ಥಳೀಯ ಅಭ್ಯರ್ಥಿಯನ್ನೇ ಬೆಂಬಲಿಸಲಿದ್ದಾರೆ ಎನ್ನುವ ನಂಬಿಕೆ ಹೊಂದಿದ್ದಾರೆ. ಕ್ಷೇತ್ರದಲ್ಲಿ ಮೋದಿ ಪ್ರವಾಸ ಗೆಲುವಿನ ಟಾನಿಕ್‌ನಂತೆ ಕೆಲಸ ಮಾಡಲಿದೆ ಎನ್ನುವ ವಿಶ್ವಾಸ ಅವರದ್ದು.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ ಆಗಿದ್ದ ಪ್ರಸನ್ನ ಟಿಕೆಟ್ ಘೋಷಣೆಗೂ ಮುನ್ನ ಜೆಡಿಎಸ್ ಸೇರಿಕೊಂಡರು. ಮತ್ತೊಂದೆಡೆ, ಡಿ.ಕೆ.ಶಿವಕುಮಾರ್ ಭಾವ ಶರತ್‌ಚಂದ್ರ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಆಗಿ ಕಣದಲ್ಲಿದ್ದಾರೆ. ಇಷ್ಟೆಲ್ಲ ಹಿನ್ನಡೆ ಬಳಿಕ ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಎಸ್.ಗಂಗಾಧರ್ ಅವರಿಗೆ ಟಿಕೆಟ್ ನೀಡಿದೆ. ಕಾಂಗ್ರೆಸ್ ಇಲ್ಲಿ ಹಿಂದುಳಿದವರು, ಮುಸ್ಲಿಮರ ಮತಗಳನ್ನು ಸೆಳೆದಷ್ಟೂ ಬಿಜೆಪಿಗೆ ಅನುಕೂಲ ಆಗಲಿದೆ ಎನ್ನುವ ಮಾತಿದೆ.

ಕಳೆದೆರಡು ದಶಕದಿಂದ ಕುಮಾರಸ್ವಾಮಿ ಕುಟುಂಬದವರು ಪ್ರತಿನಿಧಿಸುತ್ತಿರುವ ರಾಮನಗರ ಕ್ಷೇತ್ರದಲ್ಲಿ ಈ ಬಾರಿ ಕುಮಾರಸ್ವಾಮಿ ಪುತ್ರ ನಿಖಿಲ್ ಸ್ಪರ್ಧೆಯಲ್ಲಿದ್ದಾರೆ. ಅವರಿಗೆ ಎದುರಾಳಿಯಾಗಿ ಕಾಂಗ್ರೆಸ್‌ನಿಂದ ಇಕ್ಬಾಲ್ ಹುಸೇನ್ ಹಾಗೂ ಬಿಜೆಪಿಯಿಂದ ಗೌತಮ್ ಗೌಡ ಕಣದಲ್ಲಿದ್ದು, ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಕುಮಾರಸ್ವಾಮಿ ತಮ್ಮ ಕುಟುಂಬ ನಿಷ್ಠರಾದ ಕಾರ್ಯಕರ್ತರನ್ನು ಹೆಚ್ಚಾಗಿ ನಂಬಿದ್ದು, ಕಳೆದ ಬಾರಿ ಕೈತಪ್ಪಿದ ಅಲ್ಪಸಂಖ್ಯಾತರ ಮತಗಳನ್ನು ಸೆಳೆಯುವ ಪ್ರಯತ್ನ ನಡೆಸಿದ್ದಾರೆ. ಇಕ್ಬಾಲ್ ಹುಸೇನ್ ಡಿ.ಕೆ. ಸಹೋದರರನ್ನು ನಂಬಿದ್ದು, ಅಲ್ಪಸಂಖ್ಯಾತರು, ದಲಿತ, ಹಿಂದುಳಿದ ವರ್ಗದವರ ಆಶೀರ್ವಾದದ ವಿಶ್ವಾಸದಲ್ಲಿದ್ದಾರೆ. ಮೊದಲ ಬಾರಿಗೆ ಸ್ಪರ್ಧಿಸಿರುವ ಗೌತಮ್ ಗೌಡ ವಿಶ್ವಾಸ ಮೂಡಿಸಿದ್ದು, ಪಕ್ಷದಲ್ಲಿನ ಬಂಡಾಯವನ್ನೆಲ್ಲ ಬದಿಗೊತ್ತಿ ಪ್ರಚಾರ ಮಾಡುತ್ತಿದ್ದಾರೆ. ಇಲ್ಲಿ ಬಿಜೆಪಿ ಮತಗಳಿಕೆ ಹೆಚ್ಚಾದಷ್ಟು ಕಾಂಗ್ರೆಸ್‌ಗೆ ಲಾಭ ಎನ್ನಲಾಗುತ್ತಿದೆ.

ಮಾಗಡಿಯಲ್ಲಿ ತ್ರಿಕೋನ ಸ್ಪರ್ಧೆಯ ವಾತಾವರಣ ಇದೆ. ಕಾಂಗ್ರೆಸ್ ಅಭ್ಯರ್ಥಿ ಎಚ್.ಸಿ.ಬಾಲಕೃಷ್ಣ ಹಾಗೂ ಜೆಡಿಎಸ್ ಅಭ್ಯರ್ಥಿ ಎ.ಮಂಜುನಾಥ್ ಮೂರನೇ ಬಾರಿಗೆ ಮುಖಾಮುಖಿ ಆಗುತ್ತಿದ್ದು, ಬಿಜೆಪಿಯಿಂದ ಮೊದಲ ಬಾರಿಗೆ ಸ್ಪರ್ಧಿಸಿರುವ ಪ್ರಸಾದ್ ಗೌಡ ಪೈಪೋಟಿ ನೀಡುವ ವಿಶ್ವಾಸದಲ್ಲಿ ಇದ್ದಾರೆ. ಕ್ಷೇತ್ರದಲ್ಲಿ ಜೆಡಿಎಸ್‌ಗೆ ಇರುವ ಹಿಡಿತ ಮಂಜುನಾಥ್‌ಗೆ ವರವಾದರೆ, ಬಾಲಕೃಷ್ಣ ವೈಯಕ್ತಿಕ ವರ್ಚಸ್ಸು ಮತ್ತು ಕೈ ನಾಯಕರನ್ನು ನಂಬಿದ್ದಾರೆ. ಬಿಜೆಪಿಗೆ ಟಿಕೆಟ್ ಆಕಾಂಕ್ಷಿಗಳ ಬಂಡಾಯದ ಬಿಸಿ ತಟ್ಟಿದೆ.

ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ರಾಮನಗರ	ಜೆಡಿಎಸ್	ಜೆಡಿಎಸ್
ಚನ್ನಪಟ್ಟಣ	ಸಮಾಜವಾದಿ ಪಾರ್ಟಿ	ಜೆಡಿಎಸ್
ಮಾಗಡಿ	ಜೆಡಿಎಸ್	ಜೆಡಿಎಸ್
ಕನಕಪುರ	ಕಾಂಗ್ರೆಸ್	ಕಾಂಗ್ರೆಸ್

*2018ರಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಜೆಡಿಎಸ್‌ನ ಅನಿತಾ ಕುಮಾರಸ್ವಾಮಿ ಆಯ್ಕೆ



9,04,702 ಜಿಲ್ಲೆಯ ಒಟ್ಟು ಮತದಾರರ ಸಂಖ್ಯೆ

4,45,130 ಪುರುಷರು

58 ಲೈಂಗಿಕ ಅಲ್ಪಸಂಖ್ಯಾತರು

4,59,514 ಮಹಿಳೆಯರು

59 ನಾಲ್ಕು ಕ್ಷೇತ್ರದಲ್ಲಿ ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು


ಶಿವಮೊಗ್ಗ ಜಿಲ್ಲೆ ಆನವಟ್ಟಿಯಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಮಧು ಬಂಗಾರಪ್ಪ ಪರ ನಟ ಶಿವರಾಜ್‌ಕುಮಾರ್ ರೋಡ್ ಶೋ ನಡೆಸಿದರು

ಸಿದ್ದರಾಮಯ್ಯ, ಶೆಟ್ಟರ್, ಖೇಣಿ ಪರ ಪ್ರಚಾರ

ಅಧಿಕೃತ ರಾಜಕೀಯ ಪ್ರವೇಶವಿಲ್ಲ: ಶಿವರಾಜ್‌ಕುಮಾರ್ ಘೋಷಣೆ

ಪ್ರಜಾವಾಣಿ ವಾರ್ತೆ

ಆನವಟ್ಟಿ: 'ಪತ್ನಿ ಗೀತಾ ಮಾತ್ರ ಕಾಂಗ್ರೆಸ್ ಪಕ್ಷ ಸೇರಿದ್ದಾರೆ. ನನಗೆ ರಾಜಕೀಯ ಗೊತ್ತಿಲ್ಲ. ಹೀಗಾಗಿ ಅಧಿಕೃತವಾಗಿ ರಾಜಕೀಯ ಪ್ರವೇಶ ಮಾಡಿಲ್ಲ. ಒಳ್ಳೆಯ ಕೆಲಸ ಮಾಡುವವರು ಎಲ್ಲ ಪಕ್ಷದಲ್ಲೂ ನನ್ನ ಗೆಳೆಯರಿದ್ದಾರೆ. ಅವರ ಪರ ಕಾಳಜಿಯಿಂದ ಮಾತ್ರ ಚುನಾವಣೆಯಲ್ಲಿ ಪ್ರಚಾರ ಮಾಡುತ್ತಿದ್ದೇನೆ' ಎಂದು ನಟ ಶಿವರಾಜ್‌ಕುಮಾರ್ ಘೋಷಿಸಿದರು.


ಪಟ್ಟಣದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಮಧು ಬಂಗಾರಪ್ಪ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರಂತರವಾಗಿ ಚಿತ್ರೀಕರಣ ಇರುವುದರಿಂದ ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಳ್ಳಲು ಅವಕಾಶ ಸಿಗುವುದಿಲ್ಲ. ಕೇವಲ ಪ್ರಚಾರದಲ್ಲಿ ತೊಡಗಿಕೊಳ್ಳಲು ಮಾತ್ರ ಸೀಮಿತಗೊಂಡಿರುವೆ' ಎಂದರು.

'ಬಾಮೈದ ಮಧು ಬಂಗಾರಪ್ಪ, ಆತ್ಮೀಯರಾದ ಸಿದ್ದರಾಮಯ್ಯ, ಶಿರಸಿಯ ಕಾಂಗ್ರೆಸ್ ಅಭ್ಯರ್ಥಿ ಭೀಮಣ್ಣ ನಾಯ್ಕ, ಜಗದೀಶ್ ಶೆಟ್ಟರ್, ವಿಜಯ್‌ಸಿಂಗ್, ಅಶೋಕ ಖೇಣಿ ಪರವೂ ಪ್ರಚಾರಕ್ಕೆ ತೆರಳುವೆ' ಎಂದರು.

'ಜಗದೀಶ ಶೆಟ್ಟರ್ ಅಪ್ಪಾಜಿಯ ದೊಡ್ಡ ಅಭಿಮಾನಿ. ಅವರ ಕುಟುಂಬದವರು ನನ್ನನ್ನು ಹಾಗೂ ಅಪ್ಪುವನ್ನು ಬಹಳ ಗೌರವಿಸುತ್ತಿದ್ದರು. ಶೆಟ್ಟರ್ ಯಾವುದೇ ಪಕ್ಷದಲ್ಲಿದ್ದರೂ ಹುಬ್ಬಳ್ಳಿಯಲ್ಲಿ ಶೂಟಿಂಗ್ ಇದ್ದರೆ ಉಪಾಹಾರಕ್ಕೆ ಅವರ ಮನೆಗೇ ಹೋಗುತ್ತಿದ್ದೆವು. ಶೆಟ್ಟರ್ ಪರ ಪ್ರಚಾರಕ್ಕೆ ಹೋಗುತ್ತೇನೆ' ಎಂದರು.

'ನಟ ಸುದೀಪ್ ಪ್ರಚಾರದಲ್ಲಿ ಭಾಗವಹಿಸಿದ್ದನ್ನೂ ನಾನು ಪ್ರಚಾರಕ್ಕೆ ಬಂದಿರುವುದನ್ನು ಹೋಲಿಕೆ ಮಾಡುವುದು ಸರಿಯಲ್ಲ. ಅವರಿಗೆ ಸರಿ ಅನಿಸಿದ್ದನ್ನು ಅವರು ಮಾಡುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಇದಕ್ಕೂ ಮುನ್ನ ಶಿವರಾಜ್‌ಕುಮಾರ್ ಅವರು ಮಧು ಬಂಗಾರಪ್ಪ ಪರ ರೋಡ್ ಶೋ ನಡೆಸಿದರು.

'ಮೈತ್ರಿಗೆ ಬಂದವರ ಹೆಸರು ಬಹಿರಂಗಪಡಿಸಲಿ'



ಹುಬ್ಬಳ್ಳಿ: 'ಚುನಾವಣೋತ್ತರ ಮೈತ್ರಿಗಾಗಿ ರಾಷ್ಟ್ರೀಯ ಪಕ್ಷಗಳ ದೂತರು ನನ್ನ ಬಳಿ ಬಂದಿದ್ದರು ಎಂದಿರುವ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು, ತಮ್ಮ ಬಳಿ ಬಂದವರ ಹೆಸರು ಬಹಿರಂಗಪಡಿಸಲಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದರು.

ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಪಕ್ಷದ ಅಧ್ಯಕ್ಷರಾದ ಜೆ.ಪಿ. ನಡ್ಡಾ ನನ್ನ ಮೇಲೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನಾನೇ ಮುಖ್ಯಮಂತ್ರಿ ಎಂಬ ಮಾತುಗಳನ್ನಾಡಿದ್ದಾರೆ. ಅವರ ಮಾತಿಗೆ ನಾನು ಚಿರಋಣಿ' ಎಂದರು.

ಬೈಜೂಸ್‌ನಿಂದ ಭಾರತಕ್ಕೆ ಹೆಚ್ಚು ಎಫ್‌ಡಿಐ: ರವೀಂದ್ರನ್


ರವೀಂದ್ರನ್

ನವದೆಹಲಿ (ಪಿಟಿಐ): ಭಾರತಕ್ಕೆ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ತರುವುದರಲ್ಲಿ ಬೇರೆ ನವೋದ್ಯಮಗಳಿಗೆ ಹೋಲಿಸಿದರೆ ಬೈಜೂಸ್ ಪಾಲು ಹೆಚ್ಚಿಗೆ ಇದೆ ಎಂದು ಕಂಪನಿ ಸಿಇಒ ಬೈಜು ರವೀಂದ್ರನ್ ಅವರು ಉದ್ಯೋಗಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ವಿದೇಶಿ ವಿನಿಮಯ ನಿರ್ವಹಣೆಗೆ ಸಂಬಂಧಿಸಿದ ಎಲ್ಲ ನಿಯಮಗಳನ್ನು ಕಂಪನಿ ಅನುಸರಿಸಿದೆ ಎಂದೂ ಹೇಳಿದ್ದಾರೆ.

ಅತಿ ಹೆಚ್ಚು ಎಫ್‌ಡಿಐ ಆಕರ್ಷಿಸಿದ್ದರಿಂದಾಗಿ 55 ಸಾವಿರಕ್ಕೂ ಅಧಿಕ ಪ್ರತಿಭಾನ್ವಿತ ವೃತ್ತಿಪರರಿಗೆ ಉದ್ಯೋಗಾವಕಾಶ ಸೃಷ್ಟಿಸಲು ಸಾಧ್ಯವಾಯಿತು. ಇದರಿಂದಾಗಿಯೇ ನವೋದ್ಯಮಗಳ ಪೈಕಿ ಭಾರತದ ಅತಿದೊಡ್ಡ ಉದ್ಯೋಗದಾತ ಕಂಪನಿ ಆಗಿ ಹೊರಹೊಮ್ಮಲು ಸಾಧ್ಯವಾಯಿತು ಎಂದು ರವೀಂದ್ರನ್ ತಿಳಿಸಿದ್ದಾರೆ.

ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ ಉಲ್ಲಂಘನೆ ಸಂಬಂಧ ಜಾರಿ ನಿರ್ದೇಶನಾಲಯವು ರವೀಂದ್ರನ್ ಅವರ ಮನೆ ಮತ್ತು ಕಚೇರಿಗಳ ಮೇಲೆ ಜಾರಿ ಶನಿವಾರ ದಾಳಿ ನಡೆಸಿದೆ.

ಭಾರತದ ಅತ್ಯಂತ ಮೌಲ್ಯಯುತ ನವೋದ್ಯಮ, ಬೈಜೂಸ್ ಒಮ್ಮೆ ₹ 1.80 ಲಕ್ಷ ಕೋಟಿ ಮಾರುಕಟ್ಟೆ ಮೌಲ್ಯ ಹೊಂದಿತ್ತು. ಜನರಲ್ ಅಟ್ಲಾಂಟಿಕ್, ಬ್ಲಾಕ್ ರಾಕ್ ಮತ್ತು ಸಿಕೊಯಾ ಕ್ಯಾಪಿಟಲ್ ತರಹದ ಜಾಗತಿಕ ಹೂಡಿಕೆದಾರರನ್ನೂ ಆಕರ್ಷಿಸಿತ್ತು.

2011ರಿಂದ 2023ರ ನಡುವಿನ ಅವಧಿಯಲ್ಲಿ ಕಂಪನಿಯು ₹ 28 ಸಾವಿರ ಕೋಟಿಯಷ್ಟು ಎಫ್‌ಡಿಐ ಆಕರ್ಷಿಸಿದೆ. ಇದೇ ಅವಧಿಯಲ್ಲಿ ಕಂಪನಿಯು ವಿವಿಧ ದೇಶಗಳಿಗೆ ₹ 9,754 ಕೋಟಿಯನ್ನು ಕಡಲಾಚೆಗಿನ ನೇರ ಹೂಡಿಕೆಯ ಹೆಸರಿನಲ್ಲಿ ಪಾವತಿಸಿದೆ.

'70ಕ್ಕೂ ಅಧಿಕ ಪ್ರಭಾವಿ ಹೂಡಿಕೆದಾರರು ಕಂಪನಿಯಲ್ಲಿ ಹಣ ತೊಡಗಿಸಿದ್ದಾರೆ. ನಮ್ಮ ಕಾರ್ಯಾಚರಣೆ ಮತ್ತು ವಿದೇಶಿ ವಿನಿಮಯ ನಿರ್ವಹಣೆ ಬಗ್ಗೆ ಅವರು ತೃಪ್ತಿ ಹೊಂದಿದ್ದಾರೆ. ಜಾರಿ ನಿರ್ದೇಶನಾಲಯವು ಸಹ ಅದೇ ರೀತಿಯ ನಿರ್ಣಯಕ್ಕೆ ಬರುವ ವಿಶ್ವಾಸವಿದೆ' ಎಂದು ಶನಿವಾರ ತಡರಾತ್ರಿ ಉದ್ಯೋಗಿಗಳಿಗೆ ಬರೆದಿರುವ ಪತ್ರದಲ್ಲಿ ರವೀಂದ್ರನ್ ಅವರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಸ್ವಾಧೀನ ಪ್ರಕ್ರಿಯೆಗಳನ್ನು ಕೈಗೊಂಡಿದ್ದು, ಅದಕ್ಕಾಗಿ ಒಂದಿಷ್ಟು ಹಣವನ್ನು ಕಳುಹಿಸಲಾಗಿತ್ತು. ಕಂಪನಿಯ ಬೆಳವಣಿಗೆಯ ಭಾಗವಾಗಿ ₹ 9 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡಲಾಗಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹445
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹455

ನಾಮಿನಿ ಮರೆತರೆ ಸಮಸ್ಯೆ


ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಬ್ಯಾಂಕ್ ಖಾತೆ, ಮ್ಯೂಚುವಲ್ ಫಂಡ್, ಪಿಪಿಎಫ್, ಇಪಿಎಫ್, ಎನ್‌ಪಿಎಸ್ ಸೇರಿ ಹಲವು ಹಣಕಾಸು ಹೂಡಿಕೆ ವ್ಯವಹಾರ ಮಾಡುವಾಗ ಅನೇಕರು ನಾಮಿನಿ ಕಾಲಂ ಭರ್ತಿ ಮಾಡುವುದನ್ನು ಕಡೆಗಣಿಸುತ್ತಾರೆ. ಆದರೆ, ಈ ಕಾಲಂ ಭರ್ತಿ ಮಾಡುವುದನ್ನು ಕಡೆಗಣಿಸಿದರೆ, ಪರಿಶ್ರಮದ ಸಂಪಾದನೆಯು ನಿಮ್ಮ ಪ್ರೀತಿಪಾತ್ರರಿಗೆ ಸೇರುವುದು ಕಷ್ಟ. ನಾಮಿನಿಯ ಮಹತ್ವ ಏನು, ಏಕೆ ಪ್ರತಿಯೊಬ್ಬರೂ ಹೂಡಿಕೆ ಮಾಡುವಾಗ ನಾಮಿನಿ (ನಾಮನಿರ್ದೇಶನ) ಮಾಡುವಲ್ಲಿ ಎಚ್ಚರಿಕೆ ವಹಿಸಬೇಕು ಎಂಬುದನ್ನು ಒಂದಿಷ್ಟು ತಿಳಿಯೋಣ.

₹ 35 ಸಾವಿರ ಕೋಟಿಗೆ ದಿಕ್ಕಿಲ್ಲ: ನಿಮಗೆ ಗೊತ್ತಾ? ಸರ್ಕಾರಿ ಸ್ವಾಮ್ಯದ 10.24 ಕೋಟಿ ಬ್ಯಾಂಕ್ ಖಾತೆಗಳಲ್ಲಿ ಇರುವ ಸುಮಾರು ₹ 35 ಸಾವಿರ ಕೋಟಿ ಹಣಕ್ಕೆ ವಾರಸುದಾರರರೇ ಇಲ್ಲ. ಹಾಗಾಗಿ ಈ ವರ್ಷದ ಫೆಬ್ರುವರಿಯಲ್ಲಿ ಒಟ್ಟು ₹ 35,012 ಕೋಟಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ವರ್ಗಾಯಿಸಲಾಗಿದೆ. ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಇತ್ತೀಚೆಗಷ್ಟೇ ಲೋಕಸಭೆಗೆ ಈ ಮಾಹಿತಿ ನೀಡಿದ್ದಾರೆ. 10 ವರ್ಷಗಳಿಂದ ಖಾತೆಗಳಲ್ಲಿ ವಹಿವಾಟು ನಡೆಯದ ಕಾರಣ ಅಂತಹ ಖಾತೆಗಳಲ್ಲಿ ದಿಕ್ಕಿಲ್ಲದೆ ಉಳಿದುಕೊಂಡಿರುವ ಹಣವನ್ನು ಬ್ಯಾಂಕ್‌ಗಳು ಆರ್‌ಬಿಐಗೆ ವರ್ಗಾಯಿಸಿವೆ.

ವಾರಸುದಾರರಿಲ್ಲದ ಠೇವಣಿಗಳನ್ನು ಹೊಂದಿರುವ ಬ್ಯಾಂಕ್‌ಗಳ ಪೈಕಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೊದಲ ಸ್ಥಾನದಲ್ಲಿದೆ. ಎಸ್‌ಬಿಐನಲ್ಲಿ ₹ 8,086 ಕೋಟಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ₹ 5,340 ಕೋಟಿ, ಕೆನರಾ ಬ್ಯಾಂಕ್‌ನಲ್ಲಿ ₹ 4,558 ಕೋಟಿ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ ₹ 3,904 ಕೋಟಿ ವಾರಸುದಾರರಿಲ್ಲದ ಠೇವಣಿ ಇತ್ತು.

ನಾಮಿನಿ ಮಾಡದಿರುವುದೇ ಸಮಸ್ಯೆಗೆ ಕಾರಣ: ಮೇಲಿನ ಮಾಹಿತಿಯಂತೆ ಬ್ಯಾಂಕ್‌ಗಳಲ್ಲಿ ವಾರಸುದಾರರಿಲ್ಲದ ₹ 35 ಸಾವಿರ ಕೋಟಿ ಠೇವಣಿ ಉಳಿದುಕೊಳ್ಳಲು ಗ್ರಾಹಕರು ನಾಮಿನಿ ಮಾಡದಿರುವುದೇ ಪ್ರಮುಖ ಕಾರಣ. ನಾಮಿನಿ ಮಾಡದಿದ್ದಾಗ, ವ್ಯಕ್ತಿ ನಿಧನ ಹೊಂದಿದಾಗ ಬ್ಯಾಂಕ್ ಖಾತೆಗಳಲ್ಲೇ ಹಣ ಉಳಿದುಕೊಳ್ಳುತ್ತದೆ. ಹೀಗೆ 10 ವರ್ಷಕ್ಕಿಂತ ಹೆಚ್ಚು ಅವಧಿಗೆ ಠೇವಣಿಯಲ್ಲಿ ವಾರಸುದಾರರಿಲ್ಲದೆ ಉಳಿದುಕೊಳ್ಳುವ ಹಣವನ್ನು ಬ್ಯಾಂಕ್‌ಗಳು ಆರ್‌ಬಿಐಗೆ ವರ್ಗಾಯಿಸುತ್ತವೆ.

ಬ್ಯಾಂಕ್ ಖಾತೆಗಳಲ್ಲಿ ಮಾತ್ರವಲ್ಲ, ಮ್ಯೂಚುವಲ್ ಫಂಡ್ ಖಾತೆಗಳು, ಷೇರು, ಪಿಪಿಎಫ್, ಇಪಿಎಫ್, ವಿಮಾ ಪಾಲಿಸಿಗಳು ಸೇರಿ ಹಲವೆಡೆ ಹೂಡಿಕೆದಾರರು ನಾಮಿನಿ ಗೊತ್ತುಪಡಿಸದ ಕಾರಣ ಹೂಡಿಕೆ ಹಣ ಅಲ್ಲೇ ಉಳಿದುಕೊಳ್ಳುತ್ತಿದೆ. ಇದನ್ನು ತಪ್ಪಿಸಲೆಂದೇ ಕೇಂದ್ರ ಸರ್ಕಾರವು ಹೂಡಿಕೆ ಉತ್ಪನ್ನಗಳಿಗೆ ನಾಮಿನಿ ಉಲ್ಲೇಖಿಸುವುದನ್ನು ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಜಾಗೃತಿ ಅಭಿಯಾನಗಳನ್ನು ಕೈಗೊಂಡಿದೆ. ಮ್ಯೂಚುವಲ್ ಫಂಡ್‌ಗಳಿಗೆ ನಾಮಿನಿ ಗೊತ್ತುಪಡಿಸಲು ಹೂಡಿಕೆದಾರರಿಗೆ ಸೆಪ್ಟೆಂಬರ್ 30ರ ಗಡುವು ನಿಗದಿಪಡಿಸಿದೆ.

ನಾಮಿನಿ ಸೂಚಿಸದಿದ್ದರೆ ಮಾಲೀಕತ್ವ ವರ್ಗಾವಣೆ ಕಷ್ಟಸಾಧ್ಯ: ವ್ಯಕ್ತಿಯ ಮರಣದ ನಂತರ ಆತನ ಹೂಡಿಕೆಯ ಮಾಲೀಕತ್ವ ಯಾರದ್ದಾಗಬೇಕು ಎಂದು ಸೂಚಿಸುವ ವ್ಯವಸ್ಥೆಯೇ ನಾಮನಿರ್ದೇಶನ ಮಾಡುವುದು. ಹೂಡಿಕೆಗಳಿಗೆ ನಾಮಿನಿ ಸೂಚಿಸದಿದ್ದರೆ ನಿರ್ದಿಷ್ಟ ಹೂಡಿಕೆಯ ಮಾಲೀಕತ್ವ ಕುರಿತು ವಿವಾದ ತಲೆದೋರುತ್ತದೆ. ಹೂಡಿಕೆ ಮೊತ್ತಕ್ಕೆ ಇಂತಹ ವ್ಯಕ್ತಿಯೇ ಉತ್ತರಾಧಿಕಾರಿ ಎನ್ನುವುದನ್ನು ಸಾಬೀತುಪಡಿಸಲು ಬಹಳಷ್ಟು ಕಾನೂನು ಪ್ರಕ್ರಿಯೆಗಳು ಇರುತ್ತವೆ. ನಿಯಮಾನುಸಾರ ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಪೂರೈಸಲು ಬಹಳ ಸಮಯ ಕೂಡ ಬೇಕಾಗುತ್ತದೆ. ಹಾಗಾಗಿ ನಿಮ್ಮ ಕುಟುಂಬ ಇಂತಹ ಪರಿಸ್ಥಿತಿ ಎದುರಿಸಬಾರದು ಎಂದಾದಲ್ಲಿ ನಾಮಿನಿ ಕಾಲಂ ಭರ್ತಿ ಮಾಡಲು ಮರೆಯಬೇಡಿ.

ನಾಮಿನಿ ವಿವರಗಳನ್ನು ಯಾವಾಗ ಪರಿಷ್ಕರಿಸಬೇಕು?: ಮದುವೆಯಾದ ಸಂದರ್ಭದಲ್ಲಿ ಅಥವಾ ವಿಚ್ಛೇದನ ಪಡೆದಾಗ ನಾಮಿನಿ ವಿವರಗಳನ್ನು ಪರಿಷ್ಕರಿಸಬೇಕು. ಹೀಗೆ ಮಾಡಿದಾಗ ಸೂಕ್ತ ವ್ಯಕ್ತಿಗೆ ಹೂಡಿಕೆ ಲಾಭ ದಕ್ಕುತ್ತದೆ. ಮಕ್ಕಳು ಜನಿಸಿದ ನಂತರದಲ್ಲಿ ನಾಮಿನಿ ಬದಲಾಯಿಸುವ ಅಗತ್ಯತೆಯನ್ನು ಪರಿಶೀಲಿಸಬೇಕು. ದೀರ್ಘಕಾಲದ ಹೂಡಿಕೆಗಳಿಗೆ ಮಕ್ಕಳನ್ನು ನಾಮಿನಿ ಮಾಡುವುದರಿಂದ ಹೆಚ್ಚು ಅನುಕೂಲ. ನಾಮಿನಿ ಮಾಡಿರುವ ವ್ಯಕ್ತಿ ಸಾವನ್ನಪ್ಪಿದಾಗ ನಾಮಿನಿಯನ್ನು ಬದಲಿಸಬೇಕಾಗುತ್ತದೆ ಎಂಬುದು ನೆನಪಿರಲಿ. ನೀವು ನಾಮಿನಿ ಮಾಡಿರುವ ವ್ಯಕ್ತಿಗೆ ಆ ಬಗ್ಗೆ ಮೊದಲೇ ವಿವರ ಒದಗಿಸಿರಿ. ಹೀಗೆ ಮಾಡಿದಾಗ ಸಂಕಷ್ಟದ ಸಂದರ್ಭದಲ್ಲಿ ಬೇಗ ಕ್ಲೇಮ್ ಸಲ್ಲಿಸಲು ಸಾಧ್ಯವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ನಿಮ್ಮ ಹೂಡಿಕೆಗಳಿಗೆ ಸರಿಯಾದ ನಾಮಿನಿ ಆಯ್ಕೆ ಹೇಗೆ?

ಹೂಡಿಕೆ ಉತ್ಪನ್ನ	ಯಾರನ್ನು ನಾಮಿನಿ ಮಾಡಬಹುದು?
ಜೀವ ವಿಮೆ	ಪತಿ-ಪತ್ನಿ, ಮಕ್ಕಳು, ತಂದೆ-ತಾಯಿ, ಸಂಬಂಧಿಕರನ್ನು ನಾಮಿನಿ ಮಾಡಬಹುದು
ಬ್ಯಾಂಕ್ ಖಾತೆ	ಪತಿ-ಪತ್ನಿ, ಮಕ್ಕಳು, ಮೊಮ್ಮಕ್ಕಳನ್ನು ನಾಮಿನಿ ಮಾಡಬಹುದು
ಷೇರುಗಳು	ಯಾರಾದರೊಬ್ಬರನ್ನು ನಾಮಿನಿ ಮಾಡಬಹುದು
ಮ್ಯೂಚುವಲ್ ಫಂಡ್	ಹೂಡಿಕೆಯನ್ನು ಪಾಲು ಮಾಡಿ 3 ಜನರನ್ನು ನಾಮಿನಿ ಮಾಡಬಹುದು
ಸಾರ್ವಜನಿಕ ಭವಿಷ್ಯ ನಿಧಿ	ಕುಟುಂಬದ ಸದಸ್ಯರನ್ನು ಮಾಡಿದರೆ ಒಳಿತು
ಕಾರ್ಮಿಕರ ಭವಿಷ್ಯ ನಿಧಿ	ಕುಟುಂಬದ ಸದಸ್ಯರು ಮಾತ್ರ ನಾಮಿನಿಯಾಗಬಹುದು

(ಸೂಚನೆ: ಇದು ಸಲಹೆ ಮಾತ್ರ. ನಿಮ್ಮ ಅಗತ್ಯಕ್ಕೆ ತಕ್ಕಂತೆ ನಾಮಿನಿಯಲ್ಲಿ ಬದಲಾವಣೆ ಮಾಡಬಹುದು)

ಉತ್ತಮ ಗಳಿಕೆ ಕಂಡ ಷೇರುಪೇಟೆ



ಏಪ್ರಿಲ್ 28ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 61,112 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.44ರಷ್ಟು ಗಳಿಕೆ ದಾಖಲಿಸಿದೆ. 18,065 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.50ರಷ್ಟು ಗಳಿಕೆ ಕಂಡುಕೊಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಬಹುಪಾಲು ಕಂಪನಿಗಳ ಉತ್ತಮ ಸಾಧನೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 7.3ರಷ್ಟು, ರಿಯಲ್ ಎಸ್ಟೇಟ್ ಶೇ 5ರಷ್ಟು, ಇನ್ಫ್ರಾ ಇಂಡೆಕ್ಸ್ ಶೇ 3.6ರಷ್ಟು ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.3ರಷ್ಟು ಹೆಚ್ಚಳ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,395.13 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,874.25 ಕೋಟಿ ಮೌಲ್ಯದ ಷೇರುಗಳನ್ನು ಪಡೆದುಕೊಂಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಜೊಮಾಟೊ, ಇಂಡಸ್ ಟವರ್ಸ್, ಟಾಟಾ ಕನ್ಸ್ಯೂಮರ್ ಪ್ರಾಡಕ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಲಾರ್ಸನ್ ಆ್ಯಂಡ್ ಟ್ಯೂಬ್ರೊ, ಅದಾನಿ ಎಂಟರ್‌ಪ್ರೈಸಸ್, ಬ್ಯಾಂಕ್ ಆಫ್ ಬರೋಡ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಸ್ಲೆ ಇಂಡಿಯಾ, ಸೀಮನ್ಸ್ ಗಳಿಸಿಕೊಂಡಿವೆ.

ಮುನ್ನೋಟ : ಈ ವಾರ ಹ್ಯಾವೆಲ್ಸ್, ಎನ್‌ಡಿಟಿವಿ, ಜ್ಯೋತಿ ಲ್ಯಾಬ್ಸ್, ಹೋಮ್ ಫಸ್ಟ್, ಅಂಬುಜಾ ಸಿಮೆಂಟ್, ಫೈವ್ ಪೈಸಾ, ಟಾಟಾ ಸ್ಟೀಲ್, ಯುಕೋ ಬ್ಯಾಂಕ್, ಗೋದ್ರೆಜ್ ಪ್ರಾಪರ್ಟೀಸ್, ಎಂಆರ್‌ಎಫ್, ಟೈಟನ್, ಟಾಟಾ ಕೆಮಿಕಲ್ಸ್, ಎಚ್‌ಡಿಎಫ್‌ಸಿ, ಬಾಂಬೆ ಡೈಯಿಂಗ್, ಟಾಟಾ ಪವರ್, ಯೂನಿಯನ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.


ಟ್ವಿಟರ್: ಓದುವ ಲೇಖನಕ್ಕೆ ಮಾತ್ರ ಹಣ

ವಾಷಿಂಗ್ಟನ್ (ಎಎಫ್‌ಪಿ): ಪ್ರಕಾಶನ ಸಂಸ್ಥೆಗಳು ತಮ್ಮ ಓದುಗರಿಂದ ಪ್ರತಿ ಲೇಖನಕ್ಕೆ ಶುಲ್ಕ ಪಡೆಯಲು ಟ್ವಿಟರ್ ಅವಕಾಶ ಕಲ್ಪಿಸಲಿದೆ ಎಂದು ಟ್ವಿಟರ್ ಮುಖ್ಯಸ್ಥ ಎಲಾನ್ ಮಸ್ಕ್ ತಿಳಿಸಿದ್ದಾರೆ.


'ತಿಂಗಳ ಚಂದಾದಾರಿಕೆ ಪಡೆದುಕೊಳ್ಳದ ಬಳಕೆದಾರರು, ಯಾವಾಗಲಾದರೂ ಒಮ್ಮೆ ಒಂದು ಲೇಖನ ಓದಲು ಬಯಸಿದರೆ, ಲೇಖನಕ್ಕೆ ಹಣ ಪಾವತಿಸಲು ಸಾಧ್ಯವಾಗುತ್ತದೆ. ಇದು ಮಾಧ್ಯಮ ಸಂಸ್ಥೆಗಳು ಹಾಗೂ ಸಾರ್ವಜನಿಕರಿಗೆ ದೊಡ್ಡ ಪ್ರಯೋಜನ ತಂದುಕೊಡುತ್ತದೆ' ಎಂದು ಮಸ್ಕ್ ಟ್ವೀಟ್ ಮಾಡಿದ್ದಾರೆ.

ಈ ಯೋಜನೆಯು ಮುಂದಿನ ತಿಂಗಳು ಆರಂಭವಾಗಲಿದೆ ಎಂದು ಮಸ್ಕ್ ಹೇಳಿದ್ದಾರೆ. ಆದರೆ, ಈ ಯೋಜನೆಯಿಂದ ಸಿಗುವ ಮೊತ್ತದಲ್ಲಿ ಟ್ವಿಟರ್ ಎಷ್ಟು ಪಾಲನ್ನು ತನಗಾಗಿ ಇರಿಸಿಕೊಳ್ಳಲಿದೆ, ನಿರ್ದಿಷ್ಟವಾಗಿ ಎಷ್ಟು ಶುಲ್ಕ ವಿಧಿಸಲಾಗುತ್ತದೆ ಎಂಬ ವಿವರ ನೀಡಿಲ್ಲ.

















ಪಂಜಾಬ್ ಕಿಂಗ್ಸ್‌ಗೆ ರೋಚಕ ಜಯ

ಚೆನ್ನೈ ಸೂಪರ್ ಕಿಂಗ್ಸ್‌ಗೆ ತವರಿನಂಗಳದಲ್ಲಿ ನಿರಾಶೆ; ಕೊನೆಯ ಎಸೆತದಲ್ಲಿ ಫಲಿತಾಂಶ ನಿರ್ಧಾರ

ಚೆನ್ನೈ (ಪಿಟಿಐ): ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲಿನ ಆಘಾತ ನೀಡಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರೋಚಕ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 200 ರನ್ ಗಳಿಸಿತ್ತು. ಕಠಿಣ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ತಂಡವು ಮಾಡಿದ ಹೋರಾಟಕ್ಕೆ 4 ವಿಕೆಟ್‌ಗಳ ಜಯ ಒಲಿಯಿತು. 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 201 ರನ್ ಗಳಿಸಿತು. ಲಿಯಾಮ್ ಲಿವಿಂಗ್‌ಸ್ಟೋನ್ (40; 24ಎಸೆತ) ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

ಅಂತಿಮ ಓವರ್‌ನಲ್ಲಿ ತಂಡಕ್ಕೆ ಒಂಬತ್ತು ರನ್‌ಗಳ ಅಗತ್ಯವಿತ್ತು. ಮಹೀಷ ಪಥಿರಾಣ ಹಾಕಿದ ಈ ಓವರ್‌ನಲ್ಲಿ ಒಂದೂ ಬೌಂಡರಿ ಅಥವಾ ಸಿಕ್ಸರ್ ದಾಖಲಾಗಲಿಲ್ಲ. ಆದರೆ ಬ್ಯಾಟರ್‌ಗಳಾದ ಸಿಕಂದರ್ ರಝಾ ಮತ್ತು ಶಾರೂಕ್ ಖಾನ್ ಅವರು ಐದು ಎಸೆತಗಳಲ್ಲಿ ಆರು ರನ್‌ಗಳನ್ನು ಗಳಿಸಿದರು.

ಇದರಿಂದಾಗಿ ಕೊನೆಯ ಎಸೆತದಲ್ಲಿ ಮೂರು ರನ್‌ಗಳನ್ನು ಗಳಿಸುವ ಸವಾಲು ಇತ್ತು. ಬ್ಯಾಟರ್ ರಝಾ ಎಸೆತವನ್ನು ಬ್ಯಾಕ್‌ವರ್ಡ್ ಡೀಪ್ ಸ್ಕ್ವೇರ್‌ಲೆಗ್‌ಗೆ ಹೊಡೆದರು. ಅದನ್ನು ತಡೆದ ಫೀಲ್ಡರ್ ತೀಕ್ಷಣ ಚೆಂಡನ್ನು ವಿಕೆಟ್‌ಕೀಪರ್ ಧೋನಿಗೆ ಎಸೆಯುವ ಮುನ್ನವೇ ಬ್ಯಾಟರ್‌ಗಳು ಮೂರು ರನ್ ಪೂರೈಸಿ ಸಂಭ್ರಮ ಆಚರಿಸಿದರು.

ತಿರುವು ನೀಡಿದ ಲಿಯಾಮ್: 15 ಓವರ್‌ಗಳವರೆಗೂ ಪಂದ್ಯ ಚೆನ್ನೈ ಹಿಡಿತದಲ್ಲಿತ್ತು. ತಂಡದ ಮೊತ್ತ 3 ವಿಕೆಟ್‌ಗಳಿಗೆ 129 ರನ್‌ಗಳಾಗಿತ್ತು.



ಲಿಯಾಮ್ ಲಿವಿಂಗ್‌ಸ್ಟೋನ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಆದರೆ ತುಷಾರ್ ದೇಶಪಾಂಡೆ ಹಾಕಿದ 16ನೇ ಓವರ್‌ನಲ್ಲಿ ಮೂರು ಸಿಕ್ಸರ್ ಹಾಗೂ ಒಂದು ಬೌಂಡರಿ ಬಾರಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ ಪಂದ್ಯಕ್ಕೆ ತಿರುವು ನೀಡಿದರು. ಅದೊಂದೇ ಓವರ್‌ನಲ್ಲಿ 24 ರನ್‌ಗಳು ಬಂದವು. ಆ ಓವರ್‌ನ ಕೊನೆಯ ಎಸೆತದಲ್ಲಿ ಲಿಯಾಮ್ ಔಟಾದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಜಿತೇಶ್ ಶರ್ಮಾ ಮತ್ತು ಕ್ರೀಸ್‌ಗೆ ಬಂದ ಸ್ಯಾಮ್ ಕರನ್ 17ನೇ ಓವರ್‌ನಲ್ಲಿ ತಲಾ ಒಂದು ಸಿಕ್ಸ್ ಹೊಡೆದರು. ಈ ಓವರ್‌ನಲ್ಲಿ 17 ರನ್‌ಗಳು ತಂಡದ ಮೊತ್ತಕ್ಕೆ ಸೇರಿದವು.

ಡೆವೊನ್ ಅರ್ಧಶತಕ: ಚೆನ್ನೈ ತಂಡದ ಆರಂಭಿಕ ಬ್ಯಾಟರ್ ಡೆವೊನ್ ಕಾನ್ವೆ ಅರ್ಧಶತಕ (52 ಎಸೆತಗಳಲ್ಲಿ 92) ವ್ಯರ್ಥವಾಯಿತು. ಚೆನ್ನೈ ಇನಿಂಗ್ಸ್‌ನ ಕೊನೆಯ ಎರಡು ಎಸೆತಗಳಲ್ಲಿ ಮಹೇಂದ್ರಸಿಂಗ್ ಧೋನಿ ಹೊಡೆದ ಎರಡು ಸಿಕ್ಸರ್‌ಗಳು ಅಭಿಮಾನಿಗಳ ಮನದಲ್ಲಿ ಅಚ್ಚೊತ್ತಿದವು.

ಆದರೆ, ಚೆನ್ನೈ ತಂಡದ ಬೌಲರ್‌ಗಳ ದೌರ್ಬಲ್ಯ ಮತ್ತೊಮ್ಮೆ ನಾಯಕ ಧೋನಿಯ ಅಸಮಾಧಾನಕ್ಕೆ ಕಾರಣವಾಯಿತು.

ಪಂಜಾಬ್ ತಂಡದ ಯಾವುದೇ ಬ್ಯಾಟರ್ ಅರ್ಧಶತಕ ದಾಟಲಿಲ್ಲ. ಆದರೆ, ಕ್ರೀಸ್‌ಗೆ ಬಂದವರೆಲ್ಲರೂ ತಂಡದ ಗೆಲುವಿಗೆ ಕಾಣಿಕೆ ನೀಡಿದರು. ನಾಯಕ ಶಿಖರ್ ಧವನ್ ಮತ್ತು ಪ್ರಭಸಿಮ್ರನ್ ಸಿಂಗ್ ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಅದರ ಮೇಲೆ ಉಳಿದವರು ಗೆಲುವಿನ ಸೌಧ ಕಟ್ಟಿದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 4ಕ್ಕೆ200 (20 ಓವರ್‌ಗಳಲ್ಲಿ)
ಋತುರಾಜ್ ಸ್ಟಂಪ್ಡ್ ಜಿತೇಶ್ ಬಿ ಸಿಕಂದರ್ 37 (31ಎ, 4X4, 6X1)
ಡೆವೊನ್ ಔಟಾಗದೆ 92 (52ಎ, 4X16, 6X1)
ಶಿವಂ ಸಿ ಶಾರೂಕ್ ಬಿ ಅರ್ಷದೀಪ್ 28 (17ಎ, 4X1, 6X2)
ಮೋಯಿನ್ ಸ್ಟಂಪ್ಡ್ ಜಿತೇಶ್ ಬಿ ಚಾಹರ್ 10 (6ಎ, 4X2)
ಜಡೇಜ ಸಿ ಲಿವಿಂಗ್‌ಸ್ಟೋನ್ ಬಿ ಸ್ಯಾಮ್ 12 (10ಎ)
ಧೋನಿ ಔಟಾಗದೆ 13 (4ಎ, 6X2)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–86 (ಋತುರಾಜ್ ಗಾಯಕವಾಡ; 9.4), 2–130 (ಶಿವಂ ದುಬೆ; 13.6), 3–158 (ಮೋಯಿನ್ ಅಲಿ; 16.1), 4–185 (ರವೀಂದ್ರ ಜಡೇಜ; 19.1)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–37–1, ಕಗಿಸೊ ರಬಾಡ 4–0–34–0, ಸ್ಯಾಮ್ ಕರನ್ 4–0–46–1, ರಾಹುಲ್ ಚಾಹರ್ 4–0–35–1, ಸಿಕಂದರ್ ರಝಾ 3–0–31–1, ಲಿಯಾಮ್ ಲಿವಿಂಗ್‌ಸ್ಟೋನ್ 1–0–16–0

ಪಂಜಾಬ್ ಕಿಂಗ್ಸ್: 6ಕ್ಕೆ201 (20 ಓವರ್‌ಗಳಲ್ಲಿ)
ಪ್ರಭಸಿಮ್ರನ್‌ಸಿಂಗ್ ಸ್ಟಂಪ್ಡ್ ಧೋನಿ ಬಿ ಜಡೇಜ 42 (24ಎ, 4X4, 6X2)
ಶಿಖರ್ ಸಿ ಪಥಿರಾಣಾ ಬಿ ತುಷಾರ್ 28 (15ಎ, 4X4, 6X1)
ಅಥರ್ವ್ ಸಿ ಮತ್ತು ಬಿ ಜಡೇಜ 13 (17ಎ)
ಲಿವಿಂಗ್‌ಸ್ಟೋನ್ ಸಿ ಋತುರಾಜ್ ಬಿ ತುಷಾರ್ 40 (24ಎ, 4X1, 6X4)
ಸ್ಯಾಮ್ ಬಿ ಪಥಿರಾಣಾ 29 (20ಎ, 4X1, 6X1)
ಜಿತೇಶ್ ಸಿ ರಶೀದ್ (ಬದಲಿ) ತುಷಾರ್ 21 (10ಎ, 4X2. 6X1)
ಶಾರೂಕ್ ಔಟಾಗದೆ 2 (3ಎ)
ಸಿಕಂದರ್ ರಝಾ ಔಟಾಗದೆ 13 (7ಎ, 4X1)
ಇತರೆ: 13 (ಲೆಗ್‌ಬೈ 7, ವೈಡ್ 6)
ವಿಕೆಟ್ ಪತನ: 1–50 (ಶಿಖರ್ ಧವನ್; 4.2), 2–81 (ಪ್ರಭಸಿಮ್ರನ್ ಸಿಂಗ್; 8.3), 3–94 (ಅಥರ್ವ್ ತೈಡೆ; 10.2), 4–151 (ಲಿಯಾಮ್ ಲಿವಿಂಗ್‌ಸ್ಟೋನ್; 15.5), 5–170 (ಸ್ಯಾಮ್ ಕರನ್; 17.1), 6–186 (ಜಿತೇಶ್ ಶರ್ಮಾ; 18.4)
ಬೌಲಿಂಗ್: ಆಕಾಶ್ ಸಿಂಗ್ 3–0–35–0, ತುಷಾರ್ ದೇಶಪಾಂಡೆ 4–0–49–3, ಮಹೀಷ ತೀಕ್ಷಣ 4–0–36–0, ರವೀಂದ್ರ ಜಡೇಜ 4–0–32–2, ಮೋಯಿನ್ ಅಲಿ 1–0–10–0, ಮಹೀಷ ಪಥಿರಾಣಾ 4–0–32–1

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 4 ವಿಕೆಟ್‌ಗಳ ಜಯ

ಯಶಸ್ವಿ ಜೈಸ್ವಾಲ್ ಶತಕ ವ್ಯರ್ಥ; ಟಿಮ್ ಡೇವಿಡ್ ಅಬ್ಬರ

ರಾಜಸ್ಥಾನ ಮಣಿಸಿದ ಮುಂಬೈ

ಮುಂಬೈ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ಯಶಸ್ವಿ ಜೈಸ್ವಾಲ್ ಐಪಿಎಲ್‌ನಲ್ಲಿ ಗಳಿಸಿದ ಚೊಚ್ಚಲ ಶತಕ ವ್ಯರ್ಥವಾಯಿತು. ಕೊನೆಯ ಓವರ್‌ನಲ್ಲಿ ಮೂರು ಸಿಕ್ಸರ್‌ಗಳನ್ನು ಸಿಡಿಸಿದ ಟಿಮ್ ಡೇವಿಡ್ ಅವರು ಮುಂಬೈ ಇಂಡಿಯನ್ಸ್‌ಗೆ ರೋಚಕ ಗೆಲುವು ತಂದಿತ್ತರು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗ ಆರು ವಿಕೆಟ್‌ಗಳಿಂದ ರಾಜಸ್ಥಾನ ತಂಡವನ್ನು ಮಣಿಸಿತು. ಐಪಿಎಲ್ ಟೂರ್ನಿಯ 1,000ನೇ ಪಂದ್ಯ ಇದಾಗಿತ್ತು.

ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 212 ರನ್ ಗಳಿಸಿತು. ಜೈಸ್ವಾಲ್ ಅವರು 62 ಎಸೆತಗಳಲ್ಲಿ 124 ರನ್ ಗಳಿಸಿದರು. ಎಂಟು ಸಿಕ್ಸರ್ ಮತ್ತು 16 ಬೌಂಡರಿಗಳನ್ನು ಬಾರಿಸಿದರು.

ಮುಂಬೈ ಇಂಡಿಯನ್ಸ್ ತಂಡ 19.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 214 ರನ್ ಗಳಿಸಿ ಗೆದ್ದಿತು. ಟಿಮ್ ಡೇವಿಡ್ (ಔಟಾಗದೆ 45 ರನ್, 14 ಎ., 4X2, 6X5) ಮತ್ತು ಸೂರ್ಯಕುಮಾರ್ (55 ರನ್, 29 ಎ., 4X8, 6X2) ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸವಾಲಿನ ಗುರಿ ಬೆನ್ನಟ್ಟಿದ ಮುಂಬೈ ತಂಡ, ನಾಯಕ ರೋಹಿತ್ ಶರ್ಮಾ (3) ಅವರನ್ನು ಬೇಗನೇ ಕಳೆದುಕೊಂಡಿತು. ಇಶಾನ್ ಕಿಶನ್ (28 ರನ್, 23 ಎ.) ಮತ್ತು ಕ್ಯಾಮರಾನ್ ಗ್ರೀನ್ (44 ರನ್, 26 ಎ.) ಎರಡನೇ ವಿಕೆಟ್‌ಗೆ 62 ರನ್ ಸೇರಿಸಿದರು. ಆ ಬಳಿಕ ಸೂರ್ಯಕುಮಾರ್ ಯಾದವ್ ಗೆಲುವಿನ ಕನಸು ಜೀವಂತವಾಗಿರಿಸಿಕೊಂಡರು.



ಗೆಲುವಿನ ಸಂಭ್ರಮದಲ್ಲಿ ಟಿಮ್ ಡೇವಿಡ್ (ಎಡ) ಮತ್ತು ತಿಲಕ್ –ಎಎಫ್‌ಪಿ ಚಿತ್ರ

ಟ್ರೆಂಟ್ ಬೌಲ್ಟ್ ಬೌಲಿಂಗ್‌ನಲ್ಲಿ ಸಂದೀಪ್ ಶರ್ಮಾ ಅವರ ಅಮೋಘ ಕ್ಯಾಚ್‌ಗೆ ಸೂರ್ಯಕುಮಾರ್ ಔಟಾದರೂ, ಡೇವಿಡ್ ಅಬ್ಬರದ ಆಟ ಮುಂದುವರಿಸಿದರು. ತಿಲಕ್ ವರ್ಮಾ (ಅಜೇಯ 29, 21 ಎ.) ಜತೆ ಮುರಿಯದ ಐದನೇ ವಿಕೆಟ್‌ಗೆ 3.5 ಓವರ್‌ಗಳಲ್ಲಿ 62 ರನ್ ಸೇರಿಸಿ ಪಂದ್ಯವನ್ನು ರಾಯಲ್ಸ್ ಕೈಯಿಂದ ಕಿತ್ತುಕೊಂಡರು.

ಜೇಸನ್ ಹೋಲ್ಡರ್ ಬೌಲ್ ಮಾಡಿದ ಕೊನೆಯ ಓವರ್‌ನಲ್ಲಿ ಗೆಲುವಿಗೆ 17 ರನ್‌ಗಳು ಬೇಕಿದ್ದವು. ಮೊದಲ ಮೂರೂ ಎಸೆತಗಳನ್ನು ಡೇವಿಡ್ ಸಿಕ್ಸರ್‌ಗೆ ಅಟ್ಟಿ, ಮುಂಬೈ ಪಾಳೆಯದಲ್ಲಿ ಸಂಭ್ರಮಕ್ಕೆ ಕಾರಣರಾದರು.

ಜೈಸ್ವಾಲ್ ಶತಕ ಸಂಭ್ರಮ: ರಾಯಲ್ಸ್ ಪರ ಜೈಸ್ವಾಲ್ ಅವರನ್ನು ಬಿಟ್ಟರೆ ಕ್ರೀಸ್‌ಗೆ ಬಂದ ಉಳಿದ ಬ್ಯಾಟರ್‌ಗಳಲ್ಲಿ ಒಬ್ಬರೂ ಹೆಚ್ಚು ರನ್ ಗಳಿಸಲಿಲ್ಲ. ಜೈಸ್ವಾಲ್ ಈ ಐಪಿಎಲ್ ಟೂರ್ನಿಯಲ್ಲಿ ಶತಕ ಗಳಿಸಿದ ಮೂರನೇ ಆಟಗಾರ ಎನಿಸಿದರು.

ಆರಂಭಿಕ ಜೋಡಿ ಯಶಸ್ವಿ ಹಾಗೂ ಜಾಸ್ ಬಟ್ಲರ್ ಸೇರಿ ಏಳು ಓವರ್‌ಗಳಲ್ಲಿ 72 ರನ್‌ಗಳನ್ನು ಸೇರಿಸಿದರು. ಇದರಲ್ಲಿ ಬಟ್ಲರ್ ಪಾಲು ಕೇವಲ 18 ರನ್‌ಗಳು ಮಾತ್ರ. ಸಂಜು ಸ್ಯಾಮ್ಸನ್ ಹತ್ತು ಎಸೆತಗಳಲ್ಲಿ 14 ರನ್ ಗಳಿಸಿ ಔಟಾದರು. ದೇವದತ್ತ ಪಡಿಕ್ಕಲ್ (2), ಜೇಸನ್ ಹೋಲ್ಡರ್, ಹೆಟ್ಮೆಯರ್ ಮತ್ತು ಧ್ರುವ್ ಜುರೇಲ್ ಅವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 212 (ಯಶಸ್ವಿ ಜೈಸ್ವಾಲ್ 124, ಜಾಸ್ ಬಟ್ಲರ್ 18, ಸಂಜು ಸ್ಯಾಮ್ಸನ್ 14, ಪಿಯೂಷ್ ಚಾವ್ಲಾ 34ಕ್ಕೆ2, ಅರ್ಷದ್ ಖಾನ್ 39ಕ್ಕೆ3) ಮುಂಬೈ ಇಂಡಿಯನ್ಸ್ 19.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 214 (ಇಶಾನ್ ಕಿಶನ್ 28, ಕ್ಯಾಮರಾನ್ ಗ್ರೀನ್ 44, ಸೂರ್ಯಕುಮಾರ್ 55, ತಿಲಕ್ ಔಟಾಗದೆ 29, ಟಿಮ್ ಡೇವಿಡ್ ಔಟಾಗದೆ 45, ಆರ್.ಅಶ್ವಿನ್ 27ಕ್ಕೆ 2)

ಆರ್‌ಸಿಬಿಗೆ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ನದ್ದೇ ಚಿಂತೆ

ಬೆಂಗಳೂರಿಗೆ ರಾಹುಲ್ ‘ಚಾಲೆಂಜ್’

ಲಖನೌ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪ್ಲೇ ಆಫ್ ಹಂತಕ್ಕೆ ಪ್ರವೇಶಿಸಲು ಪ್ರಮುಖ ತಂಡಗಳ ನಡುವೆ ಜಿದ್ದಾಜಿದ್ದಿ ಜೋರಾಗಿಯೇ ನಡೆಯುತ್ತಿದೆ. ಅಂಕಪಟ್ಟಿಯಲ್ಲಿ ಪ್ರತಿದಿನವೂ ಏರಿಳಿತಗಳು ಕಾಣುತ್ತಿವೆ.

ಈ ಕಠಿಣ ಪೈಪೋಟಿಯಲ್ಲಿಯೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವೂ ತನ್ನ ಪ್ಲೇಆಫ್ ಅವಕಾಶ ಗಿಟ್ಟಿಸಿಕೊಳ್ಳಬೇಕಿದೆ. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಸತತ ವೈಫಲ್ಯ ಈ ತಂಡದ ದೌರ್ಬಲ್ಯವಾಗಿದೆ. ಸೋಮವಾರ ಇಲ್ಲಿಯ ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿರುವ ಆರ್‌ಸಿಬಿಗೆ ಈ ಅಂಶವೇ ಮೊತ್ತೊಮ್ಮೆ ಕಾಡುವ ಸಾಧ್ಯತೆ ಇದೆ.

ಈಚೆಗೆ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಆರ್‌ಸಿಬಿಯ ದೌರ್ಬಲ್ಯವನ್ನು ಸಮರ್ಥವಾಗಿ ಬಳಸಿಕೊಂಡಿತ್ತು. ಆ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಒಬ್ಬರೇ ಅರ್ಧಶತಕ ಬಾರಿಸಲು ಸಾಧ್ಯವಾಗಿದ್ದು. ಫಫ್ ಮತ್ತು ಗ್ಲೆನ್ ಆಟ ನಡೆಯದಂತೆ ಕೆಕೆಆರ್ ನೋಡಿಕೊಂಡಿದ್ದು ಫಲಕಾರಿಯಾಗಿತ್ತು.



ಲಖನೌ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಆರ್‌ಸಿಬಿ ತಂಡದ ಕೊಹ್ಲಿ ಹಾಗೂ ಫಫ್ ಡುಪ್ಲೆಸಿ –ಚಿತ್ರ/ಆರ್‌ಸಿಬಿ

ಗಾಯಗೊಂಡಿರುವ ಫಫ್ ಡುಪ್ಲೆಸಿ ಕಳೆದ ಮೂರು ಪಂದ್ಯಗಳಲ್ಲಿ ‘ಇಂಪ್ಯಾಕ್ಟ್ ಪ್ಲೇಯರ್’ ಆಗಿ ಕಣಕ್ಕಿಳಿಯುತ್ತಿದ್ದಾರೆ. ಬ್ಯಾಟಿಂಗ್ ಮಾತ್ರ ಮಾಡುತ್ತಿದ್ದಾರೆ.

ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿ ಇರುವ ತಂಡವು ಮೇಲೆ ಏರಬೇಕಾದರೆ ಮುಂಬರುವ ಪಂದ್ಯಗಳಲ್ಲಿ ಹೆಚ್ಚು ಗೆಲುವುಗಳನ್ನು ಸಾಧಿಸಬೇಕು. ಮಧ್ಯಮ ಕ್ರಮಾಂಕದಲ್ಲಿ ಕೆಲವು ಬದಲಾವಣೆಗಳೊಂದಿಗೆ ಇಳಿಯುವ ಸಾಧ್ಯತೆ ಇದೆ. ಇದರಿಂದಾಗಿ ಪದಾರ್ಪಣೆಗಾಗಿ ಕಾಯುತ್ತಿರುವ ಕರ್ನಾಟಕದ ಬ್ಯಾಟರ್ ಮನೋಜ್ ಭಾಂಡಗೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಹೋದ ತಿಂಗಳು ಬೆಂಗಳೂರಿನಲ್ಲಿ ಆಡಿದ್ದ ಲಖನೌ ತಂಡವು ಆರ್‌ಸಿಬಿ ವಿರುದ್ಧ ರೋಚಕ ಜಯ ಸಾಧಿಸಿತ್ತು. ಆಗ ನಿಕೊಲಸ್ ಪೂರನ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಅವರು ಅಬ್ಬರಿಸಿದ್ದರು. ಈಗಲೂ ಅವರು ಉತ್ತಮ ಲಯದಲ್ಲಿದ್ದಾರೆ. ತಂಡದ ನಾಯಕ, ಕನ್ನಡಿಗ ಕೆ.ಎಲ್. ರಾಹುಲ್ ಸ್ಟ್ರೈಕ್ ರೇಟ್ ಕಡಿಮೆ ಇದೆ ಎನ್ನುವುದನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಭರ್ಜರಿಯಾಗಿಯೇ ಆಡುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನೆಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	8	6	2	0	12	0.638
ಲಖನೌ	8	5	3	0	10	0.841
ರಾಜಸ್ಥಾನ	9	5	4	0	10	0.800
ಚೆನ್ನೈ	9	5	4	0	10	0.329
ಪಂಜಾಬ್	9	5	4	0	10	-0.447
ಬೆಂಗಳೂರು	8	4	4	0	8	-0.139
ಮುಂಬೈ	8	4	4	0	8	-0.502
ಕೋಲ್ಕತ್ತ	9	3	6	0	6	-0.147
ಹೈದರಾಬಾದ್	8	3	5	0	6	-0.577
ಡೆಲ್ಲಿ	8	2	6	0	4	-0.898

ಭಾನುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ತುಷಾರ್	ಚೆನ್ನೈ	17

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಯಶಸ್ವಿ	ರಾಜಸ್ಥಾನ	428

ಚೆಸ್: ಇಯಾನ್ ನಿಪೊಮ್‌ನಿಷಿ ವಿರುದ್ಧ ಗೆಲುವು

ಚೀನಾದ ಲಿರೆನ್‌ಗೆ ವಿಶ್ವ ಕಿರೀಟ

ಅಸ್ತಾನಾ, ಕಜಕಸ್ತಾನ (ಎಎಫ್‌ಪಿ): ಗ್ರ್ಯಾಂಡ್‌ಮಾಸ್ಟರ್ ಡಿಂಗ್ ಲಿರೆನ್ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಚೀನಾದ ಮೊದಲ ಆಟಗಾರ ಎನಿಸಿದರು. ಇಯಾನ್ ನಿಪೊಮ್‌ನಿಷಿ ವಿರುದ್ಧ ಭಾನುವಾರ ನಡೆದ ನಾಲ್ಕು ರ‍್ಯಾಪಿಡ್ ಪಂದ್ಯಗಳ ಟೈಬ್ರೇಕರ್ ಸರಣಿಯ ಮೊದಲ ಮೂರು ಡ್ರಾ ಆದ ಮೇಲೆ ಕೊನೆಯದನ್ನು ಗೆದ್ದುಕೊಂಡ ಲಿರೆನ್ 17ನೇ ವಿಶ್ವ ಚೆಸ್ ಸಾಮ್ರಾಟ ಎನಿಸಿದರು.

14 ಪಂದ್ಯಗಳ ಫೈನಲ್ ಸರಣಿ ಶನಿವಾರ 7–7ರಲ್ಲಿ ಸಮನಾಗಿದ್ದ ಕಾರಣ ನಾಲ್ಕು ಪಂದ್ಯಗಳ ಟೈಬ್ರೇಕ್ ಸರಣಿಯನ್ನು ಭಾನುವಾರ ನಡೆಸಲಾಯಿತು. ಟೈಬ್ರೇಕರ್‌ಅನ್ನು ಲಿರೆನ್ 2.5–1.5 ಪಾಯಿಂಟ್‌ಗಳಿಂದ ಜಯಿಸಿದರು.

ಫಿಡೆ ಧ್ವಜದಡಿ ಆಡಿದ ರಷ್ಯದ ಗ್ರ್ಯಾಂಡ್‌ಮಾಸ್ಟರ್ ನಿಪೊಮ್‌ನಿಷಿ ಫೈನಲ್‌ನ ಬಹುಭಾಗ ಒಂದು ಪಾಯಿಂಟ್ ಅಂತರದ ಮುನ್ನಡೆ ಕಾಪಾಡಿಕೊಂಡಿದ್ದರು. ಆದರೆ 12ನೇ ಪಂದ್ಯವನ್ನು ಚೀನಾದ ಆಟಗಾರ ಬಿಳಿ ಕಾಯಿಗಳಲ್ಲಿ ಆಡಿ ಗೆಲ್ಲುವ ಮೂಲಕ ಸ್ಕೋರ್ ಮೊದಲ ಬಾರಿ 6–6ರಲ್ಲಿ ಸಮನಾಗಿತ್ತು. ನಂತರದ ಎರಡು ಪಂದ್ಯಗಳು ‘ಡ್ರಾ’ ಆಗಿದ್ದವು.



ಡಿಂಗ್ ಲಿರೆನ್

30 ವರ್ಷದ ಡಿಂಗ್ ವಿಶ್ವ ಚಾಂಪಿಯನ್ ಆಗುವ ಮೂಲಕ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಒಂದು ದಶಕದ ಆಧಿಪತ್ಯ ಕೊನೆಗೊಂಡಂತಾಯಿತು. ಕಳೆದ ಬಾರಿ ಅಂದರೆ 2021ರಲ್ಲಿ ದುಬೈನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಾರ್ಲ್‌ಸನ್, ನಿಪೊಮ್‌ನಿಷಿ ಅವರನ್ನು ಸೋಲಿಸಿ ಐದನೇ ಸಲ ವಿಶ್ವ ಕಿರೀಟ ಧರಿಸಿದ್ದರು. ಆದರೆ ಕಳೆದ ವರ್ಷದ ಜುಲೈನಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿಆಡುವ ಪ್ರೇರಣೆ ಕಳೆದುಕೊಂಡಿದ್ದೇನೆ ಎಂದು ಹಠಾತ್ತನೇ ಘೋಷಿಸಿದ್ದರು.

ಕ್ಯಾಂಡಿಡೇಟ್ಸ್ ಟೂರ್ನಿಯ ಚಾಂಪಿಯನ್ ಆಗಿದ್ದ 32 ವರ್ಷದ ನಿಪೊಮ್‌ನಿಷಿ, ಕಾರ್ಲ್‌ಸನ್ ಎದುರು ಆಡಬೇಕಾಗಿತ್ತು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಕ್ಯಾಂಡಿಡೇಟ್ಸ್ ಟೂರ್ನಿಯ ರನ್ನರ್ ಅಪ್ ಆಗಿದ್ದ ಲಿರೆನ್ ಚಾಲೆಂಜರ್ ಆದರು.

ಚೀನಾ ಪಾರಮ್ಯ: ಪುರುಷರ ಮತ್ತು ಮಹಿಳೆಯರ ವಿಶ್ವ ಚಾಂಪಿಯನ್ ಕಿರೀಟಗಳು ಈಗ ಚೀನಾ ಬಳಿಯಿದ್ದಂತಾಗಿದೆ. ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರು ಜುಲೈನಲ್ಲಿ ನಡೆಯುವ ಫೈನಲ್‌ನಲ್ಲಿ ಸ್ವದೇಶದ ಲೀ ಟಿಂಗ್‌ಜೀ ಅವರನ್ನು ಎದುರಿಸಲಿದ್ದಾರೆ.

ಶೂಟಿಂಗ್: ಮೈರಾಜ್–ಗಣೆಮತ್‌ಗೆ ಚಿನ್ನ

ಕೈರೊ, ಈಜಿಪ್ಟ್ (ಪಿಟಿಐ): ಭಾರತದ ಮೈರಾಜ್ ಅಹಮದ್ ಖಾನ್ ಮತ್ತು ಗಣೆಮತ್ ಶೆಖೊನ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ ಸ್ಕೀಟ್ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಭಾರತದ ಶೂಟರ್‌ಗಳು 6–2ರಿಂದ ಮೆಕ್ಸಿಕೊದ ಲೂಯಿಸ್ ಗ್ಯಾಲರ್ಡೊ ಆಲಿವೆರೊಸ್ ಮತ್ತು ಗೇಬ್ರಿಯೇಲಾ ರಾಡ್ರಿಗಸ್ ಅವರ ಸವಾಲು ಮೀರಿದರು.

ಈ ವಿಶ್ವಕಪ್‌ನಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದು. ಇಟಲಿಯ ಸಿಮೊನಾ ಸ್ಕೊಚೆಟ್ಟಿ– ಗೇಬ್ರಿಯೇಲಾ ರೊಸೆಟ್ಟಿ ಜೋಡಿ ಕಂಚು ತಮ್ಮದಾಗಿಸಿಕೊಂಡರು.

ಅರ್ಹತಾ ಸುತ್ತಿನಲ್ಲಿ ಮೈರಾಜ್–ಗಣೆಮತ್ 150ರ ಪೈಕಿ 143 ಪಾಯಿಂಟ್ಸ್ ಗಳಿಸಿದ್ದರು.



ಸ್ಪರ್ಧೆಗೆ ಚಾಲನೆ ನೀಡಿದ ಹಿಮಾ ದಾಸ್ (ಬಲ)

10ಕೆ: ಗುರು, ವೈಷ್ಣವಿಗೆ ಅಗ್ರಸ್ಥಾನ

ಬೆಂಗಳೂರು: ಗುರು ಹಾಗೂ ವೈಷ್ಣವಿ ಅವರು ಗಾರ್ಮಿನ್ ಇಂಡಿಯಾ ವಾಚ್ ಕಂಪನಿಯ 20ನೇ ವರ್ಷಾಚರಣೆ ಅಂಗವಾಗಿ ಭಾನುವಾರ ಇಲ್ಲಿ ನಡೆದ 10ಕೆ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ಗುರು ಅವರು 33 ನಿಮಿಷ 51.10 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅಶುತೋಷ್ ಮತ್ತು ಹರ್‌ಪ್ರೀತ್ ಸಿಂಗ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ವೈಷ್ಣವಿ 40 ನಿ. 25.54 ಸೆ.ಗಳಲ್ಲಿ ಗುರಿ ತಲುಪಿದರು. ಮಾನ್ಯ ಕೆ.ಎಂ. ಮತ್ತು ಫರ್ಹೀನ್ ಫಿರ್ದೋಸ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು. ಮಹಿಳಾ ಸ್ಪ್ರಿಂಟರ್ ಹಿಮಾ ದಾಸ್ ಸ್ಪರ್ಧೆಗೆ ಚಾಲನೆ ನೀಡಿದರು.

ಏಷ್ಯಾ ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್‌ಗೆ ಚಿನ್ನದ ಪದಕ

ರೋಚಕ ಹೋರಾಟದಲ್ಲಿ ಗೆಲುವು

ದುಬೈ (ಪಿಟಿಐ): ರೋಚಕ ಹೋರಾಟದಲ್ಲಿ ಗೆದ್ದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ವಿಭಾಗದ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಇಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ, ಆರಂಭದ ಹಿನ್ನಡೆಯಿಂದ ಪುಟಿದೆದ್ದ ಭಾರತದ ಆಟಗಾರರು, ಮಲೇಷ್ಯಾದ ಆಂಗ್ ಯೆವ್ ಸಿನ್– ತಿಯೊ ಎ ಯಿ ಅವರನ್ನು ಸೋಲಿಸಿದರು.

ರೋಚಕ ಹೋರಾಟ: 2022ರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಸಾತ್ವಿಕ್– ಚಿರಾಗ್, ಈ ಪಂದ್ಯದ ಫೈನಲ್‌ನಲ್ಲಿ ರೋಚಕ ಹೋರಾಟ ನಡೆಸಿದರು.

ಮೊದಲ ಗೇಮ್ ಸೋತ ಸಾತ್ವಿಕ್-ಚಿರಾಗ್ ಎರಡನೇ ಗೇಮ್‌ನಲ್ಲಿ 8–13 ರಲ್ಲಿ ಹಿನ್ನಡೆಯಲ್ಲಿದ್ದರು. ಈ ಹಂತದಿಂದ ಭಾರತದ ಆಟಗಾರರ ಚೇತೋಹಾರಿ ಆಟ ಮನಸೂರೆಗೊಂಡಿತು. ಮಲೇಷ್ಯಾ ಆಟಗಾರರ ತಪ್ಪುಗಳ ಲಾಭ ಪಡೆದ ಸಾತ್ವಿಕ್– ಚಿರಾಗ್ 18–15ರಿಂದ ಮೇಲುಗೈ ಪಡೆದರು. ಬಳಿಕ ಮೂರು ಗೇಮ್ ಪಾಯಿಂಟ್ಸ್ ಗಳಿಸಿ ಪಂದ್ಯವನ್ನು ನಿರ್ಣಾಯಕ ಗೇಮ್‌ಗೆ ಕೊಂಡೊಯ್ದರು.

ಮೂರನೇ ಮತ್ತು ನಿರ್ಣಾಯಕ ಗೇಮ್‌ನ ಆರಂಭದಲ್ಲಿ ತಾಂತ್ರಿಕ ನೈಪುಣ್ಯ ಮೆರೆದ ಮಲೇಷ್ಯಾ ಆಟಗಾರರು 8–5ರಿಂದ ಮುನ್ನಡೆದರು. ವಿರಾಮದ ಹೊತ್ತಿಗೆ ಇದು 11–8ಕ್ಕೆ ತಲುಪಿತು. ಬಳಿಕ ಚಿರಾಗ್– ಸಾತ್ವಿಕ್ ಹಿನ್ನಡೆಯನ್ನು 14–15ಕ್ಕೆ ತಗ್ಗಿಸಿಕೊಂಡರು. ನೆಟ್‌ನಲ್ಲಿ ಆಂಗ್ ಮಾಡಿದ ತಪ್ಪಿನ ಲಾಭ ಗಳಿಸಿ 17–16ರ ಮೇಲುಗೈ ಸಾಧಿಸಿದರು. ಬಳಿಕ ನಡೆದ ತೀವ್ರ ಹೋರಾಟದಲ್ಲಿ ಭಾರತದ ಆಟಗಾರರು ಗೆಲುವಿನ ನಗೆ ಬೀರಿದರು.



ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಆಟದ ವೈಖರಿ– ಪಿಟಿಐ ಚಿತ್ರ

ಆ್ಯಂಟನಿಗೆ ಸಿಂಗಲ್ಸ್ ಕಿರೀಟ: ಇಂಡೊನೇಷ್ಯಾದ ಆ್ಯಂಟನಿ ಸಿನಿಸುಕ ಗಿಂಟಿಂಗ್ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ತೈವಾನ್‌ನ ತೈ ಜು ಯಿಂಗ್ ಚಾಂಪಿಯನ್ ಆದರು.

ಟೈಗರ್ ಕಪ್: ಜಿಯಾನ್ ಮಿಂಚು

ಬೆಂಗಳೂರು: ಮೊಹಮ್ಮದ್ ಜಿಯಾನ್ (27ಕ್ಕೆ 4) ಅವರ ಬೌಲಿಂಗ್ ಬಲದಿಂದ ಬೆಳಗಾವಿಯ ಯೂನಿಯನ್ ಜಿಮ್‌ಖಾನಾ ತಂಡವು ಟೈಗರ್ ಕಪ್ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ 28 ರನ್‌ಗಳಿಂದ ಅಕ್ಷಯ್ ಸ್ಪೋರ್ಟ್ಸ್ ಅಕಾಡೆಮಿ ವಿರುದ್ಧ ಗೆದ್ದಿತು.

ಭಾನುವಾರ ನಡೆದ ಮತ್ತೊಂದು ಪಂದ್ಯದಲ್ಲಿ ಸಿಕ್ಸ್ ಅಕಾಡೆಮಿ 9 ವಿಕೆಟ್‌ಗಳಿಂದ ರಘು ಅಕಾಡೆಮಿ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕ್ರೀಡಾಂಗಣ: ಯೂನಿಯನ್ ಜಿಮ್‌ಖಾನಾ: 30 ಓವರ್‌ಗಳಲ್ಲಿ 8 ವಿಕೆಟ್‌ಗೆ 168 (ಪ್ರಣವ್ ಜೆ. 49, ರುಷಿಲ್ 48; ಅಥರ್ವ್ 21ಕ್ಕೆ 3, ಸಶಾಂಗ್ ರಾವ್ 29ಕ್ಕೆ 3). ಅಕ್ಷಯ್ ಸ್ಪೋರ್ಟ್ಸ್: 27.1 ಓವರ್‌ಗಳಲ್ಲಿ 140 (ಚಿರಾಗ್ 38, ಸಶಾಂಗ್ 35; ಮೊಹಮ್ಮದ್ ಜಿಯಾನ್ 27ಕ್ಕೆ 4).

ರಘು ಅಕಾಡೆಮಿ: 28.1 ಓವರ್‌ಗಳಲ್ಲಿ 156 (ಸೆವಿತ್ 50, ಸೂರಜ್ ಸುಧಾಕರ್ 23; ತನುಶ್ ಮಿಶ್ರಾ 12ಕ್ಕೆ 2, ತಕ್ಷ್ ಗಣಪತಿ 24ಕ್ಕೆ 2). ಸಿಕ್ಸ್ ಅಕಾಡೆಮಿ: 15.1 ಓವರ್‌ಗಳಲ್ಲಿ 1 ವಿಕೆಟ್‌ಗೆ 159 (ಶೌರ್ಯ ಗೌಡ 74, ಆಹಾನ್ ದಾಸ್ 37).

ಟೆನಿಸ್: ಸುಮಿತ್ ನಗಾಲ್‌ಗೆ ಪ್ರಶಸ್ತಿ

ರೋಮ್ (ಪಿಟಿಐ): ಸುಮಿತ್ ನಗಾಲ್ ಅವರು ಯೂರೋಪ್ ನೆಲದಲ್ಲಿ ಕ್ಲೇ ಕೋರ್ಟ್‌ನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ ಗೆದ್ದ ಭಾರತದ ಮೊದಲ ಆಟಗಾರ ಎನಿಸಿಕೊಂಡರು.

ಭಾನುವಾರ ಕೊನೆಗೊಂಡ ರೋಮ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆದರು. 25 ವರ್ಷದ ನಗಾಲ್ ಫೈನಲ್‌ನಲ್ಲಿ 6–3, 6–2 ರಲ್ಲಿ ನೆದರ್ಲೆಂಡ್ಸ್‌ನ ಜೆಸ್ಪರ್ ಡಿ ಜಾಂಗ್ ವಿರುದ್ಧ ಗೆದ್ದರು.

ನಗಾಲ್‌ಗೆ ವೃತ್ತಿಜೀವನದಲ್ಲಿ ದೊರೆತ ಮೂರನೇ ಎಟಿಪಿ ಚಾಲೆಂಜರ್ ಪ್ರಶಸ್ತಿ ಇದಾಗಿದ್ದು, 2019ರಲ್ಲಿ ಬ್ಯೂನಸ್ ಐರಿಸ್‌ನಲ್ಲಿ ಚಾಂಪಿಯನ್ ಆದ ಬಳಿಕ ಮೊದಲ ಟ್ರೋಫಿ ಜಯಿಸಿದ್ದಾರೆ.

ಮಾಧ್ಯಮಗಳ ಮೇಲೆ ಪ್ರತಿಭಟನೆನಿರತ ಕುಸ್ತಿಪಟುಗಳ ಆರೋಪ

ಬ್ರಿಜ್‌ಭೂಷಣ್ ಸಿಂಗ್‌ಗೆ ಹೆಚ್ಚು ಬೆಂಬಲ

ನವದೆಹಲಿ (ಪಿಟಿಐ): ಮಾಧ್ಯಮಗಳು ಕ್ರೀಡಾಪಟುಗಳಿಗಿಂತ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೇ ಹೆಚ್ಚು ಬೆಂಬಲ ನೀಡುತ್ತಿವೆ ಎಂದು ಧರಣಿನಿರತ ಕುಸ್ತಿಪಟುಗಳು ಭಾನುವಾರ ಆರೋಪಿಸಿದ್ದಾರೆ.

ಬ್ರಿಜ್‌ಭೂಷಣ್ ಅವರಿಗೆ ಮಾತನಾಡಲು ವೇದಿಕೆ ಒದಗಿಸಬಾರದು ಎಂದು ಮಾಧ್ಯಮಗಳಿಗೆ ಅವರು ಹೇಳಿದ್ದಾರೆ.

‘ಕುಸ್ತಿಪಟುಗಳಿಗಿಂತ ಬ್ರಿಜ್‌ಭೂಷಣ್ ಅವರಿಗೆ ಮಾಧ್ಯಮಗಳು ಬೆಂಬಲ ನೀಡುತ್ತಿವೆ. ನಿಮಗೆ ಅವರ ಕ್ರಿಮಿನಲ್ ಹಿನ್ನೆಲೆ ಗೊತ್ತು. ಇಲ್ಲಿ ಕುಳಿತ ಅಥವಾ ಇನ್ನುಳಿದ ಕ್ರೀಡೆಗಳನ್ನು ಪ್ರತಿನಿಧಿಸುವ ಅಥ್ಲೀಟ್‌ಗಳ ಮೇಲೆ ಕ್ರಿಮಿನಲ್ ಪ್ರಕರಣಗಳಿವೆಯೇ’ ಎಂದು ಬಜರಂಗ್ ಪೂನಿಯಾ ಮಾಧ್ಯಮದ ಪ್ರತಿನಿಧಿಗಳನ್ನು ಪ್ರಶ್ನಿಸಿದರು.



ಬಜರಂಗ್ ಪೂನಿಯಾ ಮತ್ತು ವಿನೇಶಾ ಪೋಗಟ್

‘ಸಂಸದನಾಗುವುದಕ್ಕಿಂತ ಒಲಿಂಪಿಕ್ ಪದಕ ಜಯಿಸುವುದು ಬಹಳ ಕಷ್ಟ’ ಎಂದು ಟೋಕಿಯೊ ಒಲಿಂಪಿಕ್ಸ್ ಕಂಚು ವಿಜೇತ ಬಜರಂಗ್ ನುಡಿದರು.

‘ಕ್ರೀಡಾಪಟುಗಳು ದೇಶಕ್ಕಾಗಿ ಪದಕಗಳನ್ನು ಗೆಲ್ಲುತ್ತಾರೆ. ಆತ (ಬ್ರಿಜ್‌ಭೂಷಣ್) ಪದಕವಿಜೇತರನ್ನೇ ಪ್ರಶ್ನಿಸುತ್ತಾರೆ. ಈವರೆಗೆ 40 ಮಂದಿ ಮಾತ್ರ ಒಲಿಂಪಿಕ್ ಪದಕ ಗೆದ್ದಿರಬಹುದು. ಆದರೆ ಸಾವಿರಾರು ಜನ ಸಂಸದರಾಗಿದ್ದಾರೆ’ ಎಂದು ಹೇಳಿದರು.

ಡಬ್ಲ್ಯುಎಫ್‌ಐಅನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಒಂದು ಕುಟುಂಬ (ಪೋಗಟ್) ಪ್ರಯತ್ನಿಸುತ್ತಿದೆ ಎಂಬ ಬ್ರಿಜ್‌ಭೂಷಣ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಜರಂಗ್, ‘ಡಬ್ಲ್ಯುಎಫ್‌ಐನಲ್ಲಿ ಸ್ಥಾನ ಪಡೆಯಬೇಕೆಂದರೆ ರಾಜ್ಯ ಸಂಸ್ಥೆಯ ಸದಸ್ಯರಾಗಿರಬೇಕು. ಫೆಡರೇಷನ್ ನಿಯಂತ್ರಣಕ್ಕೆ ತೆಗೆದುಕೊಳ್ಳಲು ನಾವು ಬಯಸಿಲ್ಲ. ಉತ್ತರ ಪ್ರದೇಶ ಕುಸ್ತಿ ಸಂಸ್ಥೆಯಲ್ಲಿ ಬ್ರಿಜ್‌ಭೂಷಣ್ ಕುಟುಂಬದವರೇ ಹೆಚ್ಚಿದ್ದಾರೆ’ ಎಂದಿದ್ದಾರೆ.

‘ಪ್ರತಿಭಟನೆ ರಾಜಕೀಯ ಪ್ರೇರಿತ’;ಗೊಂಡಾ ವರದಿ: ತಮ್ಮ ವಿರುದ್ಧ ಕುಸ್ತಿಪಟುಗಳು ನಡೆಸುತ್ತಿರುವ ಪ್ರತಿಭಟನೆಯ ಹಿಂದೆ ರಾಜಕೀಯ ವ್ಯಕ್ತಿಗಳ ಕೈವಾಡವಿದೆ ಎಂದು ಬ್ರಿಜ್‌ಭೂಷಣ್ ಆರೋಪಿಸಿದ್ದಾರೆ.

ಏಳು ಮಂದಿ ಮಹಿಳಾ ಕುಸ್ತಿಪಟುಗಳು ಮಾಡಿರುವ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿ ಬ್ರಿಜ್‌ಭೂಷಣ್ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿನೇಶಾ ಪೋಗಟ್, ಬಜರಂಗ ಪೂನಿಯಾ ಸೇರಿದಂತೆ ದೇಶದ ಪ್ರಮುಖ ಕುಸ್ತಿಪಟುಗಳು ಏಪ್ರಿಲ್ 23ರಿಂದ ನವದೆಹಲಿಯ ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಸೈಕ್ಲಿಂಗ್: ಕರ್ನಾಟಕ ತಂಡಕ್ಕೆ ಆರು ಪದಕ

ಬೆಂಗಳೂರು: ಕರ್ನಾಟಕ ಸೈಕ್ಲಿಸ್ಟ್‌ಗಳು ಹರಿಯಾಣದ ರೋಹ್ಟಕ್‌ನಲ್ಲಿ ಭಾನುವಾರ ಕೊನೆಗೊಂಡ ರಾಷ್ಟ್ರೀಯ ಖೇಲೊ ಇಂಡಿಯಾ ಮಹಿಳಾ ಲೀಗ್ ರಸ್ತೆ ಸೈಕ್ಲಿಂಗ್‌ನಲ್ಲಿ ತಲಾ ಮೂರು ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಜಯಿಸಿದ್ದಾರೆ.

ಜೂನಿಯರ್ ಬಾಲಕಿಯರ ವಿಭಾಗದ 20 ಕಿ.ಮೀ. ಟೈಮ್ ಟ್ರಯಲ್ ಸ್ಪರ್ಧೆಯಲ್ಲಿ ಅಕ್ಷತಾ ಬಿರಾದಾರ (31 ನಿ. 33.96 ಸೆ.) ಬೆಳ್ಳಿ ಮತ್ತು ಭಾವನಾ ಪಾಟೀಲ (31 ನಿ. 41.99 ಸೆ.) ಕಂಚು ಗೆದ್ದರು. 25 ಕಿ.ಮೀ. ಮಾಸ್ ಸ್ಟಾರ್ಟ್ ಸ್ಪರ್ಧೆಯಲ್ಲಿ ಭಾವನಾ ಮತ್ತು ಸಬ್‌ಜೂನಿಯರ್ ವಿಭಾಗದ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ ದೀಪಿಕಾ ಫಡತಾರೆ ಬೆಳ್ಳಿ ಗೆದ್ದರು. 10 ಕಿ.ಮೀ. ಟೈಮ್ ಟ್ರಯಲ್ ಸ್ಪರ್ಧೆಯಲ್ಲೇ ಅನುಪಮಾ ಗುಳೇದ ಕಂಚು ಜಯಿಸಿದರು. 20 ಕಿ.ಮೀ. ಮಾಸ್ ಸ್ಟಾರ್ಟ್ ಸ್ಪರ್ಧೆಯಲ್ಲಿ ದೀಪಿಕಾ ಅವರಿಗೆ ಕಂಚು ಒಲಿಯಿತು.


ವಿಶ್ವ ಬಾಕ್ಸಿಂಗ್: ಶಿವ, ಆಕಾಶ್ ಭರವಸೆ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಸಾಮರ್ಥ್ಯ ಸುಧಾರಣೆಯತ್ತ ಚಿತ್ತ ನೆಟ್ಟಿರುವ ಭಾರತದ ಬಾಕ್ಸರ್‌ಗಳು ಸೋಮವಾರ ಇಲ್ಲಿ ಆರಂಭವಾಗಲಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಕಳೆದ ಆವೃತ್ತಿಯಲ್ಲಿ ಭಾರತಕ್ಕೆ ಕೇವಲ ಒಂದು ಕಂಚಿನ ಪದಕ ದಕ್ಕಿತ್ತು. ಈ ಚಾಂಪಿಯನ್‌ಷಿಪ್ ಒಲಿಂಪಿಕ್ಸ್‌ಗೆ ಅರ್ಹತಾ ಕೂಟವಲ್ಲ. ಆದರೆ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಉತ್ತಮ ಪೂರ್ವಾಭ್ಯಾಸವಾಗಲಿದೆ.

ಏಷ್ಯನ್ ಕ್ರೀಡಾಕೂಟದ ಮೂಲಕ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿಸುವ ಅವಕಾಶವಿದೆ.

ಆರು ಬಾರಿಯ ಏಷ್ಯನ್ ಚಾಂಪಿಯನ್‌ಷಿಪ್ ಪದಕವಿಜೇತ ಶಿವ ಥಾಪಾ (63.5 ಕೆಜಿ) ಅವರ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಕಳೆದ ಆವೃತ್ತಿಯಲ್ಲಿ ಪದಕ ಗೆದ್ದಿದ್ದ ಏಕೈಕ ಬಾಕ್ಸರ್ ಆಕಾಶ್ ಕುಮಾರ್ ಕೂಡ ಭರವಸೆ ಎನಿಸಿದ್ದಾರೆ.




ಶಿವ ಥಾಪಾ

ಶಿವ ಅವರು ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಜಯಿಸುವ ಮೂಲಕ ಆ ಕೂಟದಲ್ಲಿ ಆರು ಪದಕಗಳನ್ನು ಜಯಿಸಿದ ಮೊದಲ ಪುರುಷ ಬಾಕ್ಸರ್ ಎಂಬ ದಾಖಲೆ ಬರೆದಿದ್ದರು. 2015ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದ ಶಿವ, ಪ್ರತಿಷ್ಠಿತ ಟೂರ್ನಿಯಲ್ಲಿ ಈ ಬಾರಿ ತಮ್ಮ ಪದಕದ ಬಣ್ಣ ಬದಲಾಯಿಸುವ ಕಾತರದಲ್ಲಿದ್ದಾರೆ.

ಬಹಿಷ್ಕಾರ: ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು ರಷ್ಯಾ ಮತ್ತು ಬೆಲಾರೂಸ್ ಬಾಕ್ಸರ್‌ಗಳಿಗೆ ತಮ್ಮ ದೇಶದ ಧ್ವಜದಡಿ ಸ್ಪರ್ಧೆ ಮಾಡಲು ಶಿಫಾರಸು ಮಾಡಿರುವುದನ್ನು ಆಕ್ಷೇಪಿಸಿ ಬ್ರಿಟನ್, ಉಕ್ರೇನ್, ಜೆಕ್ ಗಣರಾಜ್ಯ, ಪೋಲೆಂಡ್ ಮತ್ತು ನ್ಯೂಜಿಲೆಂಡ್ ದೇಶಗಳು ಈ ಕೂಟವನ್ನು ಬಹಿಷ್ಕರಿಸಿವೆ.

ಬಹುಮಾನ ಮೊತ್ತ




SMART BAZAAR
SMART SUPERSTORE
Reliance
SMART
ಪಬ್ಲಿಕ್ ಹಾಲಿಡೇ ಸೇಲ್
29th April - 3rd May
Powered by
Jio TRUE 5G
ನೆಪ ಹೇಳೊಲ್ಲ ,
ಈಗ ಎಲ್ಲರೂ ಬರ್ತಾರೆ ಶಾಪಿಂಗ್ ಮಾಡಲು.
SMART BAZAAR
Jio
ಗೆಲ್ಲಿರಿ ಚಿನ್ನದ ನಾಣ್ಯಗಳನ್ನು
ಜಿಯೋಪ್ಲಸ್‌ನೊಂದಿಗೆ
₹99 ರಲ್ಲಿ ಒಂದು ಸಿಮ್ ಬುಕ್ ಮಾಡಿರಿ ಮತ್ತು
1 ಗ್ರಾಂ ಚಿನ್ನದ ನಾಣ್ಯವನ್ನು ಗೆಲ್ಲುವ ಅವಕಾಶ ಪಡೆಯಿರಿ
T&C Apply
ಕೋಕಕೋಲಾ / ಸ್ಪ್ರೈಟ್ / ಥಮ್ಸ್ ಅಪ್ 750 ml ರಿಂದ (ಆಯ್ದ ಪ್ರಕಾರಗಳು)
BUY ANY3 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹40 ರಿಂದ
ಮಾಜಾ 1.5 ℓ
ಉಳಿಸಿರಿ ₹21
ಎಮ್‌ಆರ್‌ಪಿ ₹90 ರಿಂದ
ನಮ್ಮ ಬೆಲೆ ₹69 ರಿಂದ
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹65
ಎಮ್‌ಆರ್‌ಪಿ ₹290 ರಿಂದ
ನಮ್ಮ ಬೆಲೆ ₹225 ರಿಂದ
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹140 ರಿಂದ
ಯಿಪ್ಪೀ ಮ್ಯಾಜಿಕ್ ಮಸಾಲಾ / ಟಾಪ್ ರಮೆನ್ ಮಸಾಲಾ / ಚಿಂಗ್ಸ್ ಸೀಕ್ರೆಟ್ ನೂಡಲ್ಸ್ / ಸ್ನ್ಯಾಕ್ ಟ್ಯಾಕ್ ಮಸಾಲಾ ನೂಡಲ್ಸ್ 240 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 33% ಕಡಿತ
ಎಮ್‌ಆರ್‌ಪಿ ₹65 ರಿಂದ
ಕ್ಯಾಡ್ಬರಿಸ್ ಡೈರಿ ಮಿಲ್ಕ್ 126 g / ಫೈವ್ ಸ್ಟಾರ್ 200 g / ಲೊಟ್ಟೆ ಚಾಕೋ ಪೈ / ಓರಿಯನ್ ಚೋಕೋ ಪೈ ಒರಿಜಿನಲ್ 12 ಪ್ಯಾಕ್ 336 g
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹149 ರಿಂದ
ಡವ್ / ಪೀಯರ್ಸ್ / ಫಿಯಾಮಾ 125 g x 4 + 1 / ಲಕ್ಸ್ 150 g x 3 / ಸಿಂಥಾಲ್ ಸೋಪ್ 150 g x 5 / ಗೋದ್ರೇಜ್ ನಂ.1 150 g x 4 (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹189 ರಿಂದ
ಡವ್ / ಹೆಡ್ - ಶೋಲ್ಡರ್ಸ್ / ಲೋರಿಯಲ್ / ಕ್ಲಿನಿಕ್ ಪ್ಲಸ್ / ಟ್ರೆಸೆಮ್ಮೆ / ಇಂದುಲೇಖಾ ಶ್ಯಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
BUY ANY1 GET ANY1 FREE
ಎಮ್‌ಆರ್‌ಪಿ ₹645 ರಿಂದ
ಕೋಲ್ಗೇಟ್ ಡೆಂಟಲ್ ಕ್ರೀಮ್ / ಕ್ಲೋಸ್ ಅಪ್ ರೆಡ್ / ಡಾಬರ್ ಮೆಸ್ವಾಕ್ ಟೂತ್ ಪೇಸ್ಟ್ 300 g ರಿಂದ (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹156 ರಿಂದ
ಪುರುಷರ ಮತ್ತು / ಸ್ತ್ರೀಯರ ಡಿಯೊ 135 ml ರಿಂದ (ಆಯ್ದ ಪ್ರಕಾರಗಳು)
BUY ANY1 GET ANY1 FREE
ಎಮ್‌ಆರ್‌ಪಿ ₹259 ರಿಂದ
ವಿಸ್ಪರ್ ಅಲ್ಟ್ರಾ XL 44s / ಸ್ಟೇಫ್ರೀ ಅಲ್ಟ್ರಾ ಡ್ರೈ ಮ್ಯಾಕ್ಸ್ 42s (ಆಯ್ದ ಪ್ರಕಾರಗಳು)
ಉಳಿಸಿರಿ ₹225 ರಿಂದ
ಎಮ್‌ಆರ್‌ಪಿ ₹500 ರಿಂದ
ನಮ್ಮ ಬೆಲೆ ₹275 ರಿಂದ
ಸರ್ಫ್ ಎಕ್ಸೆಲ್ ಈಸಿ ವಾಶ್ 5 kg / ಮ್ಯಾಟಿಕ್ 6 kg / ಲಿಕ್ವಿಡ್ 2 ℓ / ಟೈಡ್ ಪ್ಲಸ್ 5 kg / ಏರಿಯಲ್ ಲಿಕ್ವಿಡ್ ಮ್ಯಾಟಿಕ್ 4+2 kg / ಲಿಕ್ವಿಡ್ 2 ℓ (ಟಾಪ್ / ಫ್ರಂಟ್ ಲೋಡ್) (ಆಯ್ದ ಪ್ರಕಾರಗಳು)
25% ಕಡಿತ
ಎಮ್‌ಆರ್‌ಪಿ ₹425 ರಿಂದ
ನಮ್ಮ ಬೆಲೆ ₹319 ರಿಂದ
ಫಾರ್ಚೂನ್ ರಿಫೈನ್ಡ್ ರೈಸ್ ಬ್ರಾನ್ ಹೆಲ್ತ್ ಆಯಿಲ್ 5 ℓ + ಕೊಹಿನೂರ್ ಚಾರ್ಮಿನಾರ್ ಸೆಲೆಕ್ಟ್ ಬಾಸ್ಮತಿ ರೈಸ್ 5 kg
ನಮ್ಮ ಬೆಲೆ ₹999
ಒಟ್ಟು ಎಮ್‌ಆರ್‌ಪಿ ₹1549
ಉಳಿಸಿರಿ ₹550
ಲೂಸ್ ತೊಗರಿ ಬೇಳೆ ವ್ಯಾಲ್ಯೂ 1 kg
ನಮ್ಮ ಬೆಲೆ ₹119
ಮಾರುಕಟ್ಟೆ ಬೆಲೆ ₹126
ಲೂಸ್ ಉದ್ದಿನ ಬೇಳೆ 1 kg
ನಮ್ಮ ಬೆಲೆ ₹107
ಮಾರುಕಟ್ಟೆ ಬೆಲೆ ₹114
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ನಮ್ಮ ಬೆಲೆ ₹199 (₹39.80/kg)
ಎಮ್‌ಆರ್‌ಪಿ ₹300
ಉಳಿಸಿರಿ ₹101
ಗುಡ್ ಲೈಫ್ ಡೈಲಿ ರೈಸ್ 30 kg
ನಮ್ಮ ಬೆಲೆ ₹1249 (₹41.63/kg)
ಎಮ್‌ಆರ್‌ಪಿ ₹1650
ಉಳಿಸಿರಿ ₹401
ಚಕ್ಕಿ ಆಟಾ 5 kg
ನಮ್ಮ ಬೆಲೆ ₹154.50
ಎಮ್‌ಆರ್‌ಪಿ ₹270
ಉಳಿಸಿರಿ ₹115.50
ಸನ್ ಪ್ರಿಮಿಯಮ್ ಸನ್ ಫ್ಲವರ್ ಆಯಿಲ್ 1 ℓ
ನಮ್ಮ ಬೆಲೆ ₹109
ಎಮ್‌ಆರ್‌ಪಿ ₹185
ಉಳಿಸಿರಿ ₹76
ಹೆರಿಟೇಜ್ ಹಸುವಿನ ತುಪ್ಪ 1 ℓ
ನಮ್ಮ ಬೆಲೆ ₹609
ಎಮ್‌ಆರ್‌ಪಿ ₹730
ಉಳಿಸಿರಿ ₹121
ಬ್ಲೆಂಡೆಡ್ ಸ್ಪೈಸಸ್ 50 g ರಿಂದ (ಆಯ್ದ ಶ್ರೇಣಿ)
BUY ANY2 GET ANY1 FREE*
*ಎಮ್‌ಆರ್‌ಪಿ ಮೇಲೆ
ಗುಡ್ ಲೈಫ್ ಬಾದಾಮ್ / ಕ್ಯಾಶು (W320) 500 g
ನಮ್ಮ ಬೆಲೆ ₹345/385
ಎಮ್‌ಆರ್‌ಪಿ ₹549 / ₹499
ಉಳಿಸಿರಿ ₹204 / ₹114
ಚೀಸ್ / ಮೊಸರು / ಮಿಲ್ಕ್ ಡ್ರಿಂಕ್ಸ್ / ಪನೀರ್ / ಕೇಕ್ & ರಸ್ಕ್ / ಫ್ರೊಝನ್ ವೆಜ್ / ಫ್ರೋಜನ್ ತಿಂಡಿಗಳು 47 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 25%* ಕಡಿತ
ಎಮ್‌ಆರ್‌ಪಿ ಮೇಲೆ
Surya Flame SINGER
3 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ನಮ್ಮ ಬೆಲೆ ₹1999
ಎಮ್‌ಆರ್‌ಪಿ ₹7560 ರಿಂದ
Pigeon
ಸ್ಟೇನ್‌ಲೆಸ್ ಸ್ಟೀಲ್ ಪ್ರೆಶರ್ ಕುಕ್ಕರ್ - 3 ℓ (ಹೊರ / ಒಳ ಮುಚ್ಚಳ)
ನಮ್ಮ ಬೆಲೆ ₹999/ ₹1199
ಎಮ್‌ಆರ್‌ಪಿ ₹2295 / ₹2595
LA OPALA
ಒಪಲ್ವೇರ್ ಡಿನ್ನರ್ ಸೆಟ್ (18 Pcs)
ನಮ್ಮ ಬೆಲೆ ₹999
ಎಮ್‌ಆರ್‌ಪಿ ₹1995
SOOGO
ಮಲ್ಟಿಪರ್ಪಸ್ ಮಗ್
BUY 1 GET 2 FREE
ಎಮ್‌ಆರ್‌ಪಿ ₹149 ರಿಂದ
HAPPY LIVING Raymond WELSPUN TRIDENT DREAMLINE
ಕಾಟನ್ ಬೆಡ್ಶೀಟ್ -144 TC (ಆಯ್ದ ಶ್ರೇಣಿ)
ನಮ್ಮ ಬೆಲೆ ₹599 ರಿಂದ
ಎಮ್‌ಆರ್‌ಪಿ ₹1799 ರಿಂದ
ಬಾತ್ ಟವೆಲ್ (ಸಂಪೂರ್ಣ ಶ್ರೇಣಿ)
BUY 1 GET 1 FREE
ಎಮ್‌ಆರ್‌ಪಿ ₹199 ರಿಂದ
ಮಧ್ಯಮ ಹಾರ್ಡ್ ಟ್ರಾಲಿ (65 cm) • 8 ಚಕ್ರಗಳು • ಟಿಎಸ್‌ಎ ಲಾಕ್
ನಮ್ಮ ಬೆಲೆ ₹1999
ಎಮ್‌ಆರ್‌ಪಿ ₹11000
ANCHOR by Panasonic
ರಿಮೋಟ್‌ನೊಂದಿಗೆ ಸೀಲಿಂಗ್ ಫ್ಯಾನ್ (ಬಿಎಲ್ ಡಿಸಿ ಮೋಟಾರ್)
ನಮ್ಮ ಬೆಲೆ ₹2499
ಎಮ್‌ಆರ್‌ಪಿ ₹4625
ಮಹಿಳೆಯರ ಉಡುಗೆ ಮತ್ತು ಮಕ್ಕಳ ಉಡುಗೆ | ₹129 ರಿಂದ
BUY 1 GET 1 FREE
*ಆಯ್ದ ಶ್ರೇಣಿ
SMART SUPERSTORE
• ಬೆಂಗಳೂರು • ಬೆಳಗಾವಿ • ಬಳ್ಳಾರಿ • ಬಿಜಾಪುರ
• ಚಿಕ್ಕಮಂಗಳೂರು • ದಾವಣಗೆರೆ • ಗದಗ • ಗಂಗಾವತಿ
• ಗೋಕಾಕ್ • ಗುಲ್ಬರ್ಗ • ಹಾಸನ • ಹುಬ್ಬಳ್ಳಿ • ಜಮಖಂಡಿ
• ಕನಕಪುರ • ಮಂಗಳೂರು • ಮೈಸೂರು • ಪುತ್ತೂರು
• ರಾಯಚೂರು • ತುಮಕೂರು • ಉಡುಪಿ
ನಿಮ್ಮ ಹತ್ತಿರದ ಅಂಗಡಿಗೆ ಭೇಟಿ ನೀಡಿ
SMART POINT
fresh Signature
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
RuPay
Instant discount on RuPay Credit Cards
20% Instant Discount
up to ₹250 on min. purchase of ₹1000
Valid Once Per Customer | Limited Period Offer